Digitization by eGangotri and Sarayu Trust. Funding by MoE-IKS

ಸೋಜಗ

ಭಾಗ-2

ವಿಜಯವಾಣಿ
ನಂ.1
ಕನ್ನಡ ದಿನಪತ್ರಿಕೆಯ

ಪ್ರಕಟಿತ ಲೇಖನಗಳ ಸಂಕಲನ

ಪ್ರಶಾಂತ ರಿಪ್ಪನ್‌ಪೇಟೆ

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೋಜಿಗ ಭಾಗ–2

ವಿಜಯವಾಣಿ
ನಂ.1
ಕನ್ನಡ ದಿನಪತ್ರಿಕೆ
ಪ್ರಕಟಿತ ಲೇಖನಗಳ ಸಂಕಲನ

ಪ್ರಶಾಂತ ರಿಪ್ಪನ್‌ಪೇಟೆ

ಪ್ರಕಾಶಕರು
ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಸಮಾಜೋತ್ಥಾನ ಫೌಂಡೇಶನ್
ಶ್ರೀಶೈಲ ಪೀಠ, ಆತ್ಮಕೂರ ತಾ. ಕರ್ನೂಲು ಜಿ. ಆಂಧ್ರಪ್ರದೇಶ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೋಜಗ, ಭಾಗ–2

Sojaga, Part-2

Written by Prashantha Ripponpete, published By Sri Srishaila Mallikarjuna Samajotthana Foundation, Srishaila Peetha, Atmakura Tq, Karnul Dist, Andra Pradesh.

ಲೇಖಕರು : ಪ್ರಶಾಂತ ರಿಪ್ಪನ್‌ಪೇಟೆ

ಮೊದಲ ಮುದ್ರಣ : 2019

ಹಕ್ಕುಗಳು : ಲೇಖಕರದ್ದು

ಪ್ರತಿಗಳು : 5000

ಪುಟಗಳು : xviii + 190

ಬೆಲೆ : 150/–

ಪ್ರಕಾಶಕರು : ಶ್ರೀ ಶ್ರೀಶೈಲ ಮಲ್ಲಿಕಾರ್ಜುನ
ಸಮಾಜೋತ್ಥಾನ ಫೌಂಡೇಶನ್
ಶ್ರೀಶೈಲ ಪೀಠ, ಆತ್ಮಕೂರ ತಾ.,
ಕರ್ನೂಲು ಜಿ., ಆಂಧ್ರಪ್ರದೇಶ

ಮುದ್ರಣ : ಗೀತಾಂಜಲಿ ಗ್ರಾಫಿಕ್ಸ್
ಬಿ–71, 6ನೇ ಬ್ಲಾಕ್, ರಾಜಾಜಿನಗರ
ಕೆ.ಎಸ್.ಎಸ್.ಐ.ಡಿ. ಕೈಗಾರಿಕ ಎಸ್ಟೇಟ್
ಬೆಂಗಳೂರು–10 ಫೋನ್ : 23404232

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಸಮಾಜೋತ್ಥಾನ ಫೌಂಡೇಶನ್ನಿನ ಚೈತನ್ಯ ಮೂರ್ತಿಗಳು ॥

ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿ

ಶ್ರೀ ಭ್ರಮರಾಂಬ ದೇವಿ

ಶ್ರೀ ಜಗದ್ಗುರು ಪಂಡಿತಾರಾಧ್ಯರು

ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯರು

ಶ್ರೀ ಜಗದ್ಗುರು ಉಮಾಪತಿ ಪಂಡಿತಾರಾಧ್ಯರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ ಶ್ರೀ ಜಗದ್ಗುರು ರೇಣುಕಾಚಾರ್ಯ: ಪ್ರಸೀದತು ॥

ಮಾನವ ಧರ್ಮಕ್ಕೆ ಜಯವಾಗಲಿ ।
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ॥

ಸಾಹಿತ್ಯ–ಸಂಸ್ಕೃತಿ ಸಂವರ್ಧಿಸಲಿ ।
ಶಾಂತಿ–ಸಮೃದ್ಧಿ ಸರ್ವರಿಗಾಗಲಿ ॥

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು

ಡಾ. ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು,

ಬಾಳೆಹೊನ್ನೂರು 577112 ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ ರಾಜ್ಯ

ದಿನಾಂಕ : 21–06–2019

ವಾಸ್ತವ್ಯ : ದಾವಣಗೆರೆ

ಶುಭಾಶೀರ್ವಾದ ಸಂದೇಶ

ಬೆಳಕಿಗೆ ಮಹತ್ವ ಬಂದಿದ್ದೇ ಕತ್ತಲೆಯಿಂದ. ಸುಖಕ್ಕೊಂದು ಅರ್ಥ ಬರುವುದೇ ಕಷ್ಟದಿಂದ. ಕಷ್ಟ ಸುಖಗಳ ಹದವಾದ ಮಿಶ್ರಣದಿಂದಲೇ ಜೀವನಕ್ಕೊಂದು ಮೆರಗು ಬರುತ್ತದೆ. ಕಾಲಿಗೆ ಆದ ಗಾಯ ಹೇಗೆ ನಡೆಯಬೇಕೆಂದು ಕಲಿಸುತ್ತದೆ. ಮನಸ್ಸಿಗೆ ಆದ ಗಾಯ ಹೇಗೆ ಬದುಕಬೇಕೆಂಬುದನ್ನು ಕಲಿಸುತ್ತದೆ. ಸತ್ಯ ಸೂರ್ಯನಂತೆ. ಸ್ವಲ್ಪ ಕಾಲ ಮರೆ ಮಾಚಬಹುದು. ಆದರೆ ಆ ಸೂರ್ಯನ ಪ್ರಖರತೆ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಕೈ ಶುದ್ಧಿ, ವಾಕ್ ಶುದ್ಧಿ ಮತ್ತು ಮನ ಶುದ್ಧಿ ಉಳ್ಳವನು ಯಾವುದರ ಬಗೆಗೂ ಚಿಂತಿಸುವ ಅವಶ್ಯಕತೆಯಿಲ್ಲ.

ದೀಪದಲ್ಲಿ ಬೆಂಕಿ ಬೆಳಕು ಎರಡೂ ಇವೆ. ಆದರೆ ಬೆಳಕು ಕಾಣಬೇಕಲ್ಲದೇ ಬೆಂಕಿ ಕಾಣಬಾರದು. ನಿನ್ನ ನಂಬಿ ಬಂದವರಿಗೆ ಜೀವ ಕೊಡು. ನಿನ್ನ ಬಿಟ್ಟು ಹೋಗೋರಿಗೆ ದಾರಿ ಬಿಡು. ಇದು ನೀತಿ ಮಾತು. ಬೇಕಾದರೆ ಬೆರೆತು ನಡೆ. ಸಾಕಾದರೆ ಸರಿದು ನಡೆ, ಎರಡು ಬೇಡವಾದರೆ ಸುಮ್ಮನೆ ನಡೆ. ಕಟ್ಟುವುದಾದರೆ ಸ್ನೇಹ ವಾತ್ಸಲ್ಯಗಳ ಸೌಧ ಕಟ್ಟು, ಕೆಡವುದಾದರೆ ನಿನ್ನೊಳಗಿನ ದ್ವೇಷ ಅಸೂಯೆಗಳ ಕಟ್ಟಡ ಕೆಡವು. ಆಗ ಮಾತ್ರ ನೀನು ನೆಮ್ಮದಿಯಿಂದ ಬಾಳಲು ಸಾಧ್ಯ. ಮನೆ ಸಣ್ಣದಾದರೂ ಮನಸ್ಸು ದೊಡ್ಡದಿರಲಿ. ಹೃದಯ ಚಿಕ್ಕದಿದ್ದರೂ ಪ್ರೀತಿ ಸ್ನೇಹ ಬೆಟ್ಟದಷ್ಟಿರಲಿ. ಹಣದಲ್ಲಿ ಬಡವನಾದರೂ ಗುಣದಲ್ಲಿ ಶ್ರೀಮಂತನಾಗಿ ಬಾಳಿದರೆ ಬದುಕು ಉಜ್ವಲಗೊಳ್ಳುತ್ತದೆ.

ಓದಿನಿಂದ ಕಲಿತ ಪಾಠ ಮರೆಯಬಹುದು. ಆದರೆ ಅನುಭವದಿಂದ ಕಲಿತ ಪಾಠ ಮರೆಯಲು ಸಾಧ್ಯವಿಲ್ಲ. ಹೂವಿನ ಪರಿಮಳ ಗಾಳಿ ಬೀಸಿದ ದಿಕ್ಕಿನಲ್ಲಷ್ಟೇ ಹರಡುತ್ತದೆ. ಆದರೆ ಮನುಷ್ಯನ ಒಳ್ಳೆಯತನ ಎಲ್ಲೆಡೆ ವ್ಯಾಪಿಸುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೇತುವೆಗಳನ್ನು ಕಟ್ಟುವ ಬದಲು ಗೋಡೆಗಳನ್ನು ಕಟ್ಟುತ್ತಿರುವುದೇ ಜನ ದು:ಖಿತರಾಗಲು ಕಾರಣ. ಒಳ್ಳೆಯತನ ಮೈಗೂಡಿಸಿಕೊಳ್ಳದ ಹೊರತು ಒಳ್ಳೆಯವರನ್ನು ಒಲಿಸಿಕೊಳ್ಳುವುದು ಸುಲಭವಲ್ಲ. ಮನುಷ್ಯ ಎಷ್ಟೇ ಬೆಳೆದು ಬಲವಂತನಾದರೂ ಮೂಲವನ್ನು ಎಂದಿಗೂ ಮರೆಯಬಾರದು.

ಶ್ರೀ ಪ್ರಶಾಂತ ರಿಪ್ಪನ್‌ಪೇಟೆ ಅವರ ಸಾಧನೆಯ ಸಿಂಹಾವಲೋಕನ ಅಪೂರ್ವ. ನಿತ್ಯ ನಿರಂತರ ಪ್ರಯತ್ನವಾದಿ ಮತ್ತು ಶ್ರೇಷ್ಠ ಸಾಧಕ. “ವಿಜಯವಾಣಿ” ದಿನ ಪತ್ರಿಕೆಯ ಸಂಸ್ಕೃತಿ ವಿಶೇಷ ಪುರವಣಿಯಲ್ಲಿ ಈ ನಾಡಿನ ಪೀಠ ಮಠಗಳ ಮತ್ತು ಧಾರ್ಮಿಕ ಕ್ಷೇತ್ರಗಳನ್ನು ಪರಿಚಯಿಸಿದ ಶ್ರೇಯಸ್ಸು ಅವರದು. ದಿಗ್ವಿಜಯ ದೂರದರ್ಶನದಲ್ಲಿ ಊರ–ಉಸಾಬರಿ, ಭಕ್ತಿ ಸುಧೆ ಮತ್ತು ಧರ್ಮ ವಿಜಯದ ಮೂಲಕ ಭಾರತೀಯ ಸಂಸ್ಕೃತಿಗಳ ಆದರ್ಶತೆಯನ್ನು ಪರಿಚಯಿಸಿದ ಪ್ರಶಾಂತ ಮೂರ್ತಿ. ಶ್ರೀಯುತರಿಂದ ಇದೀಗ ಸೋಜಗ ಭಾಗ–2 ಕೃತಿ ಪ್ರಕಟಗೊಳ್ಳುತ್ತಿರುವುದು ಹೆಮ್ಮೆಯ ಸಂಗತಿ. ಭಿಕ್ಷೆ ಬೇಡುವ ಮಧುಕರಿ ಸೇವೆ ಲೇಖನದಿಂದ ಎಲ್ಲೂ ಇಲ್ಲದ ಜೋಡಿ ವೀರಭದ್ರ ವರೆಗೆ 24 ಲೇಖನಗಳು ಹಾಗೂ ಮಾನವ ಧರ್ಮದ ಮಹಾಗುರು ಬರಹದಿಂದ ಗುರು ಮುಟ್ಟಿ ಗುರುವಾದ ಬೃಂಗೀಶ್ವರ ಸ್ವಾಮಿಗಳು ಎಂಬ 36 ಲೇಖನಗಳು ಸೋಜಗ ಭಾಗ–2 ರಲ್ಲಿ ಸಂಗ್ರಹಗೊಂಡು ಬಿಡುಗಡೆಗೊಳ್ಳುತ್ತಿರುವುದು ಅತ್ಯಂತ ಸಂತೋಷದ ಸಂಗತಿ. ಶ್ರೀ ಪ್ರಶಾಂತ ರಿಪ್ಪನ್‌ಪೇಟೆ ಅವರಿಂದ ಸಾಹಿತ್ಯ ಶಾರದೆಯ ಮುಕುಟಕ್ಕೆ ಮತ್ತೊಂದು ಸಾಹಿತ್ಯ ಕುಸುಮ ಸಮರ್ಪಣೆಯಾಗಿದೆ. ಶ್ರೀಯುತರಿಂದ ಇನ್ನೂ ಹಲವಾರು ಅಮೂಲ್ಯ ಕೃತಿಗಳು ಮೈದಾಳಿ ಬರಲಿ.

ಶ್ರೀ ಜಗದ್ಗುರು ರೇಣುಕಾಚಾರ್ಯರು ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಸರ್ವರಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಶುಭಾಶೀರ್ವಾದಗಳೊಂದಿಗೆ

ಶ್ರೀ ರಂಭಾಪುರಿ ಜಗದ್ಗುರುಗಳು

ಬಾಳೆಹೊನ್ನೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ॥

ಶ್ರೀಮದ್ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು

ಡಾ. ಚೆನ್ನಸಿದ್ಧರಾಮ ಪಂಡಿತಾರಾಧ್ಯ
ಶಿವಾಚಾರ್ಯ ಮಹಾಸ್ವಾಮಿಗಳು

ಶ್ರೀಶೈಲ ಪೀಠ, ಆತಂಕೂರು ತಾ.,
ಕರ್ನೂಲು ಜಿ.,ಆಂಧ್ರ ಪ್ರದೇಶ

ಶುಭಾಶೀರ್ವಚನ ಸಂದೇಶ

ಸೋಜಗ ಎಂದರೆ ವಿಸ್ಮಯ, ಆಶ್ಚರ್ಯ ಎಂದರ್ಥ. ಪ್ರಕೃತಿ ಸಹಜವಾದ ಸರ್ವೇಸಾಮಾನ್ಯ ಘಟನೆಗಳನ್ನು ಅವಲೋಕಿಸಿದಾಗ ಮನಸ್ಸಿಗೆ ಯಾವುದೇ ಸೋಜಿಗವೆನಿಸುವುದಿಲ್ಲ ಆದರೆ ಪ್ರಕೃತಿ ಸಹಜವಲ್ಲದ ಘಟನೆಗಳು ಕಣ್ಣಿಗೆ ಬಿದ್ದಾಗ ಮನಸ್ಸು ಸಹಜವಾಗಿಯೇ ಆಶ್ಚರ್ಯ ಪಡುತ್ತದೆ. ಬೇವಿನ ಮರದಲ್ಲಿ ಮಾವಿನಹಣ್ಣುಗಳು ಪ್ರಾಪ್ತವಾದರೆ ಯಾರಿಗೆ ತಾನೇ ಸೋಜಗ ಎನಿಸುವುದಿಲ್ಲ! ಹಿಮದಿಂದ ತುಂಬಿಕೊಂಡಿರುವ ಹಿಮಾಲಯದಲ್ಲಿ ಸುತ್ತೆಲ್ಲಾ ಮೈಕೊರೆಯುವ ಚಳಿ ಇದ್ದರೂ ಗೌರಿಕುಂಡ, ಬದ್ರಿನಾಥ ಮುಂತಾದ ಸ್ಥಳಗಳಲ್ಲಿ ಅಲ್ಲಲ್ಲಿ ಅನೇಕ ಬಿಸಿನೀರಿನ ಬುಗ್ಗೆಗಳು ಈಗಲೂ ಅಸ್ತಿತ್ವದಲ್ಲಿರುವದನ್ನು ಗಮನಿಸಿದಾಗ ಯಾರಿಗೆ ಆಶ್ಚರ್ಯವೆನಿಸುವುದಿಲ್ಲ! ಭೂದೇವಿಯ ತಲೆಯ ಮೇಲೆ ರಾರಾಜಿಸುವ ಇಂತಹ ನೂರಾರು ಸಾವಿರಾರು ಆಶ್ಚರ್ಯಗಳು, ಪ್ರಕೃತಿಗೆ ಮೀರಿದ ಶಕ್ತಿಯೊಂದಿದೆ, ಅದು ಪ್ರಸಂಗಾನುಸಾರ ಪ್ರಕೃತಿಯನ್ನೇ ತನ್ನ ನಿಯಂತ್ರಣದಲ್ಲಿರಿಸಿ ಆ ಪ್ರಕೃತಿಯನ್ನು ಕೂಡ ಮೀರಿ ನಿಲ್ಲುವ ಅಗಾಧವಾದ ಕಾರ್ಯಕ್ಷಮತೆಯನ್ನು ಹೊಂದಿರುತ್ತದೆ ಎಂಬುದಕ್ಕೆ ಸಾಕ್ಷಿಯಾಗಿವೆ. ಈ ಪ್ರಕೃತಿಗೆ ಮೀರಿದ ಅಸಹಜ ಘಟನೆ ಮತ್ತು ವ್ಯಕ್ತಿತ್ವಗಳು ಮನುಷ್ಯನನ್ನು ದೈವ ಶಕ್ತಿಯ ಕಡೆಗೆ ಕರೆದೊಯ್ಯಲು ಸದಾ ಪ್ರೇರಣೆಯನ್ನು ನೀಡುತ್ತ ಬಂದಿವೆ. ಇಂತಹ ಹಲವಾರು ಸೋಜಗ ಸ್ಥಾನಗಳನ್ನು ಮತ್ತು ಘಟನೆಗಳನ್ನು ಪರಿಚಯಿಸುವ ಕಾರ್ಯವನ್ನು ಪ್ರಶಾಂತ್ ರಿಪ್ಪನ್ ಪೇಟೆಯವರು ನಿರಂತರ ವಿಜಯವಾಣಿ ಪತ್ರಿಕೆ ಮೂಲಕ ಮಾಡುತ್ತಾ ಬಂದಿರುವುದು ಶ್ಲಾಘನೀಯ ಸಂಗತಿಯಾಗಿದೆ. ಇವರಿಂದ ದಿನಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳ ಸಂಗ್ರಹವೇ ಈ ಕೃತಿಯ ಸ್ವರೂಪವಾಗಿದೆ. ಈ ಪೂರ್ವದಲ್ಲಿ ಮೊದಲ ಭಾಗವಾಗಿ ಇದೇ ಮಾದರಿಯ ಲೇಖನಗಳನ್ನು ಒಳಗೊಂಡ ಕೃತಿಯು ಪ್ರಕಟವಾಗಿದ್ದು, ಅದರ ಮುಂದುವರೆದ ಭಾಗವಾಗಿ ಈ ಕೃತಿಯು ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ ಈ ಎರಡು ಕೃತಿಗಳನ್ನು ಶ್ರೀಶೈಲ ಪೀಠದ ಶ್ರೀಶೈಲ ಮಲ್ಲಿಕಾರ್ಜುನ ಸಮಾಜೋತ್ಥಾನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಫೌಂಡೇಶನ್ ವತಿಯಿಂದ ನಾವು ಅತ್ಯಂತ ಅಭಿಮಾನದಿಂದ ಪ್ರಕಟ ಪಡಿಸುತ್ತಿದ್ದೇವೆ.

ಲೇಖಕರು ಈ ಕೃತಿಯಲ್ಲಿ ಪ್ರಮುಖವಾಗಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳನ್ನು ಹಾಗೂ ವ್ಯಕ್ತಿಗಳನ್ನು ಆಧಾರವಾಗಿರಿಸಿಕೊಂಡು ಲೇಖನಗಳನ್ನು ಸಿದ್ಧಪಡಿಸಿರುವುದು ಕಂಡುಬರುತ್ತದೆ. ಸೋಜಿಗವನ್ನುಂಟು ಮಾಡುವ ಕ್ಷೇತ್ರ ಸ್ಥಾನ ಮತ್ತು ವ್ಯಕ್ತಿಗಳಲ್ಲಿರುವ ವೈಶಿಷ್ಟತೆಯನ್ನು ಗುರುತಿಸಿ ಅತ್ಯಾಕರ್ಷಕವಾದ ಶೀರ್ಷಿಕೆಯನ್ನು ನೀಡಿ ಅವುಗಳನ್ನು ಪರಿಚಯಿಸಿಕೊಡುವಲ್ಲಿ ಲೇಖಕರು ತೋರಿದ ಜಾಣ್ಮೆ ನಿಜಕ್ಕೂ ಸೋಜಿಗವಾದುದು. ಉದಾಹರಣೆಗಾಗಿ "ಬಾಡದ ಹೂವು ಆರದ ದೀಪ", "ಭಕ್ತರ ಪ್ರಶ್ನೆಗೆ ಭಗವಂತನ ಉತ್ತರ", "ಸಂಕಲ್ಪ ಸಿದ್ಧಿಯ ಸಿದ್ಧಪರ್ವತ", "ನಿಖರ ಉತ್ತರದ ಪ್ರಖರ ಪ್ರಸಾದ", "ಸಜ್ಜನರು ಮಾಡುವ ಅಜ್ಜನ ಜಾತ್ರೆ" ಇಂತಹ ಅನೇಕ ಶೀರ್ಷಿಕೆಗಳು ಲೇಖಕರಿಗೆ ಶಬ್ದಗಳ ಮೇಲೆ ಇರುವ ಪ್ರಭುತ್ವವನ್ನು ತೋರಿಸುತ್ತವೆ. ವ್ಯಕ್ತಿ ಸ್ಥಾನ ಘಟನೆಗಳ ಜೊತೆಗೆ ಹಲವಾರು ಸಾಂದರ್ಭಿಕ ಲೇಖನಗಳು ಈ ಕೃತಿಯಲ್ಲಿ ಸ್ಥಾನ ಪಡೆದುಕೊಂಡಿರುವುದು ಔಚಿತ್ಯಪೂರ್ಣವಾಗಿದೆ.

ಲೇಖಕರು ನಾಡಿನ ಪ್ರಮುಖ ವಾಹಿನಿಗಳಲ್ಲೊಂದಾದ ದಿಗ್ವಿಜಯ ಟಿ ವಿ ಯಲ್ಲಿ ಕಾರ್ಯಕ್ರಮ ನಿರ್ಮಾಪಕರಾಗಿ ಕಾರ್ಯವನ್ನು ನಿರ್ವಹಿಸುತ್ತಿರುವುದರ ಜೊತೆಗೆ ಉತ್ತಮ ಬರಹಗಾರರೂ ವಾಗ್ಮಿಗಳೂ ಕ್ರಿಯಾಶೀಲರೂ ಧರ್ಮನಿಷ್ಠರೂ ಮತ್ತು ಪೀಠಾಭಿಮಾನಿಗಳು ಆಗಿದ್ದಾರೆ ಇವೆಲ್ಲವುಗಳನ್ನು ಗಮನಿಸಿದಾಗ ಇವರೊಬ್ಬ ಬಹುಮುಖ ಪ್ರತಿಭೆಯನ್ನು ಹೊಂದಿರುವ ವ್ಯಕ್ತಿ ಎಂಬುದು ಸ್ಪಷ್ಟ ವಾಗುತ್ತದೆ. ಸ್ವಭಾವತಹ ಧರ್ಮದ ಕಡೆಗೆ ಹೆಚ್ಚು ಒಲವು ಹೊಂದಿರುವ ಇವರು ಪತ್ರಿಕಾ ಮತ್ತು ದೃಶ್ಯ ಮಾಧ್ಯಮಗಳ ಮೂಲಕ ಯಾವ ಯಾವ ಸಂದರ್ಭಗಳಲ್ಲಿ ಧರ್ಮದ ಪ್ರಚಾರ ಪ್ರಸಾರ ಮಾಡಲು ಸಾಧ್ಯವೋ ಆ ಎಲ್ಲಾ ಸಂದರ್ಭಗಳಲ್ಲಿ ಧರ್ಮದ ವಿಕಾಸಕ್ಕೆ ಹೆಚ್ಚು ಒತ್ತುಕೊಟ್ಟು ಕೆಲಸ ಮಾಡುತ್ತಾ ಬಂದವರಾಗಿದ್ದಾರೆ. ಮಾಧ್ಯಮ ಕ್ಷೇತ್ರಗಳಲ್ಲಿ ಧರ್ಮನಿಷ್ಠರಾದ ವ್ಯಕ್ತಿಗಳು ಕೆಲಸಮಾಡುತ್ತಿದ್ದರೆ ಧಾರ್ಮಿಕ ಕ್ಷೇತ್ರಕ್ಕೆ ಎಷ್ಟು ಅನುಕೂಲವಾಗುತ್ತದೆ ಎಂಬುದಕ್ಕೆ ಇವರು ಒಂದು ಉದಾಹರಣೆ ಯಾಗಿದ್ದಾರೆ. ಇವರಿಂದ ಇಂತಹ ಅನೇಕ ಕೃತಿಗಳು ಮೂಡಿಬರಲಿ ಈ ಕೃತಿಯು ಜನಪ್ರಿಯತೆಯನ್ನು ಪಡೆದುಕೊಳ್ಳಲಿ ಅದಕ್ಕಾಗಿ ಶ್ರೀಶೈಲ ಪೀಠದ ಎಲ್ಲ ಜಗದ್ಗುರುಗಳ ಮತ್ತು ಬ್ರಮರಾಂಬ ಸಮೇತ ಮಲ್ಲಿಕಾರ್ಜುನ ಸ್ವಾಮಿಯ ಸನ್ಮಂಗಲಾಶೀರ್ವಾದ ಅವರ ಮೇಲೆ ಸದಾ ಇರಲೆಂದು ಹಾರೈಸುತ್ತೇವೆ.

ಇತ್ಯನಂತ ಶಿವಾಶಿಷ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ಶ್ರೀಮದ್ ಕಾಶಿ ಜ್ಞಾನಸಿಂಹಾಸನ ಪೀಠ, ಜಂಗಮವಾಡಿ ಮಠ, ವಾರಣಾಸಿ

ಆಶೀರ್ವಚನ

ಪ್ರಶಾಂತ ರಿಪ್ಪನ್‌ಪೇಟೆ ಇವರು ಒಬ್ಬ ಚಿಂತಕರು ಉತ್ತಮ ಬರಹಗಾರರು ಮತ್ತು ಸಮಾಜದ ಬಗ್ಗೆ ಕಳಕಳಿ ಮನೋಭಾವದ ಅಪರೂಪದ ವ್ಯಕ್ತಿಯಾಗಿದ್ದಾರೆ. ಸುಪ್ರಸಿದ್ಧವಾದ ದಿಗ್ವಿಜಯ ನ್ಯೂಸ್ ಚಾನೆಲ್ ನಲ್ಲಿ ಊರ ಉಸಾಬರಿ ನಮಗ್ಯಾಕ ಬೇಕ್ರಿ ಎಂಬ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ಇತ್ತೀಚಿನ ರಾಜಕೀಯ ವಿಷಯಗಳನ್ನು ವಿನೋದ ರೂಪಕದಲ್ಲಿ ತಯಾರಿಸಿ ಬಹಳಷ್ಟು ಜನಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ. ಹಾಗೂ ಧರ್ಮ ವಿಜಯ ಇವರ ಮತ್ತೊಂದು ಪ್ರಮುಖ ಕಾರ್ಯಕ್ರಮ.

ತಮಗೆ ಬಿಡುವಿಲ್ಲದ ಸಮಯದಲ್ಲಿಯೂ ಸಹ ತತ್ವ ವ್ಯಕ್ತಿ ಮಠಮಾನ್ಯಗಳು ಹಾಗೂ ಗುರುಪೀಠಗಳ ಬಗ್ಗೆ ಉತ್ತಮೋತ್ತಮ ಲೇಖನಗಳನ್ನು ಬರೆದು ಕರ್ನಾಟಕದ ಮುದ್ರಣ ಮಾಧ್ಯಮದಲ್ಲಿ ಅಗ್ರಸ್ಥಾನವನ್ನು ಗಳಿಸಿರುವ ವಿಜಯವಾಣಿ ದಿನಪತ್ರಿಕೆಯ ಗುರುವಾರದ ಸಂಸ್ಕೃತಿ ಪುರವಣಿಯಲ್ಲಿ ವಿವೇಚನಾ ಪರವಾದ ಲೇಖನಗಳನ್ನು ಬರೆದು ವಾಚಕರ ಪ್ರೀತಿಗೆ ಪಾತ್ರರಾಗಿದ್ದಾರೆ.

ಗುರು ಭಕ್ತಿ ಸಂಪನ್ನರು ಲಿಂಗಪೂಜಾ ನಿಷ್ಠರು ಆದ ಇವರನ್ನು ಗುರು ವಿರಕ್ತ ಪರಂಪರೆಯ ಎಲ್ಲ ಶ್ರೀಗಳಲ್ಲದೆ ಉಳಿದೆಲ್ಲ ಸಂಪ್ರದಾಯಗಳ ಸ್ವಾಮಿಗಳು ಸಹ ಸ್ನೇಹ ಹಾಗೂ ಗೌರವದಿಂದ ಕಾಣುತ್ತಾರೆ. ಪತ್ರಿಕೆಗಳಲ್ಲಿ ಬಂದಿರುವ ಇವರ ಉತ್ಕೃಷ್ಟವಾದ ಲೇಖನಗಳು ಜನರಿಗೆ ಮತ್ತೆ ಮತ್ತೆ ಓದಬೇಕೆನಿಸುತ್ತದೆ. ಆದರೆ ಪತ್ರಿಕೆಗಳನ್ನು ಸಂಗ್ರಹಿಸಿಡುವುದು ಅಸಾಧ್ಯ ಎಂದರಿತ ಪ್ರಶಾಂತ್ ಇವರು ಪತ್ರಿಕೆಗಳಲ್ಲಿ ಪ್ರಕಟವಾದ ಸರ್ವೋತ್ಕೃಷ್ಟ ಲೇಖನಗಳನ್ನು ಒಂದು ಸ್ವತಂತ್ರ ಪುಸ್ತಕರೂಪದಲ್ಲಿ ಪ್ರಕಟ ಮಾಡುವ ಯೋಜನೆಯನ್ನು ಹಮ್ಮಿಕೊಂಡು ಸೋಜಗ ಎಂಬ ಶೀರ್ಷಿಕೆಯಡಿಯಲ್ಲಿ ಈಗಾಗಲೇ ಒಂದು ಪುಸ್ತಕವನ್ನು ಹೊರ ತಂದು ಜನಾನುರಾಗವನ್ನು ಪಡೆದುಕೊಂಡಿದ್ದಾರೆ ಸದ್ಯ ಮತ್ತೆ ಮುದ್ರಣಗೊಂಡಿರುವ ಪತ್ರಿಕೆಯ ಲೇಖನಗಳನ್ನು ಸಂಗ್ರಹಿಸಿ ಸೋಜಗ ಭಾಗ–2 ಗ್ರಂಥವನ್ನು ಅನೇಕರ ಆರ್ಥಿಕ ನೆರವಿನಿಂದ ಮುದ್ರಿಸಲು ಮುಂದಾಗಿರುವುದು ಸಂತೋಷದ ಸಂಗತಿ.

ಸೋಜಗ ಅಂಕಣದಲ್ಲಿ ಪ್ರಕಟವಾದ 24 ವಿವಿಧ ಕ್ಷೇತ್ರಗಳ ಲೇಖನ ಹಾಗೂ 36 ಇತರೆ ಎಲ್ಲ ಮಠ–ಪೀಠಗಳ ಲೇಖನಗಳು ಸಂಗ್ರಹಯೋಗ್ಯವಾಗಿವೆ. ಇವರ ಲೇಖನಗಳ ಸಂಗ್ರಹದ ಈ ಎರಡನೇಯ ಕೃತಿಯೂ ಸಹ ಜನಾನುರಾಗವನ್ನು ಪಡೆಯಲಿ. ಶ್ರೀ ಪ್ರಶಾಂತ ರಿಪ್ಪನ್‌ಪೇಟೆ ಇವರು ಆರೋಗ್ಯವಂತರಾಗಿ ಇನ್ನೂ ಹೆಚ್ಚು ಸಾಹಿತ್ಯ ಕೃಷಿಯನ್ನು ಮಾಡುವ ಮೇಧಾಶಕ್ತಿಯನ್ನು ಕಾಶೀಯ ಜಗದ್ಗುರು ವಿಶ್ವಾರಾಧ್ಯರು, ವಿಶ್ವನಾಥಾನ್ನ ಪೂರ್ಣೆಯರು ಅನುಗ್ರಹಿಸಲಿ.

ಇತ್ಯಾಶಿಷ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜರಗನಹಳ್ಳಿ ಶಿವಶಂಕರ್
"ಅಣ್ಣನ ಮನೆ" ಜರಗನಹಳ್ಳಿ,
ಜೆಪಿ ನಗರ ಅಂಚೆ, ಬೆಂಗಳೂರು-78
ದೂ : 080 26646850

ಮುನ್ನುಡಿ

ಈ ಜಗವೇ ಸೋಜಿಗಮಯ – ಸೋಜಗ

ಮನುಷ್ಯನ ಮನಸ್ಸು ಅತೃಪ್ತವಾದುದು. ಅದು ಸದಾ ಹುಡುಕಾಟದಲ್ಲಿ ಮುಳುಗಿರುತ್ತದೆ. ಅನ್ವೇಷಣೆಯಿಂದ "ಹೊಸತು" ನೆಮ್ಮದಿಯನ್ನು ನೀಡಬಲ್ಲುದೆ ಎಂಬ ತವಕ-ತಲ್ಲಣಗಳು ಕಾಡುತ್ತವೆ.

ಮನಸ್ಸು ನೀರಿನಂತೆ ಚಂಚಲವಾದುದು. ಕಾದು ಆವಿಯಾಗಬೇಕು, ಹಾರಿ ಮುಗಿಲಾಗಬೇಕು, ಗುಡುಗಿ-ಮಿಂಚಿ ಮಳೆಯಾಗಿ ಜಾರಿ ಬೀಳಬೇಕು. ಬಿದ್ದು ಹೊಳೆಯಾಗಿ, ಝರಿಯಾಗಿ ಹರಿಯಬೇಕು. ಸಾಗರಕ್ಕೆ ಸೇರಬೇಕು, ಸೇರಿದ ಮೇಲೆ ಅಲೆಗಳಾಗಿ ಅಲೆಯಬೇಕು. ನೀರಿಗೆ ಒಂದು ಸ್ಥಿರವಾದ ನೆಲೆ-ನೆಮ್ಮದಿ ಇಲ್ಲವೆಂಬುದು ಖಾತ್ರಿಯಾಗುತ್ತದೆ.

ಅಂತೆಯೇ; ಮನಸ್ಸು –

"ಇರುವುದ ಬಿಟ್ಟು ಇಲ್ಲದುದರ ಕಡೆಗೆ ತುಡಿವುದೇ ಜೀವನ" ಎಂಬ ಕವಿ ವಾಣಿಯಂತೆ ತಾವು ಇರುವ "ತಾವನ್ನು" ಮರೆತು ಬೇರೆಲ್ಲೋ ಬೇರೇನೋ ಇದೆ ಎಂಬ ಭ್ರಮೆಯಿಂದ ಹುಡುಕುತ್ತಾನೆ, ತಡಕುತ್ತಾನೆ.

ಮನಸ್ಸು ಒಂದು ಭಯಾನಕವಾದ ನಿಗೂಢಗಳ ಗೂಡು. ಅಲ್ಲಿ ಪ್ರತಿ ಕ್ಷಣ ಪ್ರಶ್ನೆಗಳು ಉದ್ಭವಿಸುತ್ತವೆ. ಪ್ರಶ್ನೆಗಳಿಗೆಲ್ಲ ಉತ್ತರಗಳು ಸಿಗುವುದಿಲ್ಲ. ಉತ್ತರಗಳನ್ನು ಪಡೆದುಕೊಳ್ಳುವ ಸಾಮರ್ಥ್ಯವು ಬಹುತೇಕರ ಮನಸ್ಸುಗಳಿಗಿರುವುದಿಲ್ಲ.

ಪಾಪ-ಪುಣ್ಯಗಳ ನಂಬಿಕೆ, ಸ್ವರ್ಗ-ನರಕಗಳ ಕಲ್ಪನೆ, ಜೀವನ-ಮುಕ್ತಿ ಎಂಬ ತೃಪ್ತಿ ಎಲ್ಲವನ್ನು ಮನಸ್ಸು ತಾನೇ ನಿರ್ಮಿಸಿಕೊಂಡಿರುವ ಗೊಂದಲದ ವಿಷಮ ವಿಸ್ಮಯ ಸ್ಥಿತಿ.

ಇದರ ಪರಿಹಾರಕ್ಕಾಗಿ ಅಲೆದಾಟ-ಹುಡುಕಾಟ ನಿರಂತರವಾಗಿ ನಡೆಯುತ್ತದೆ. ದೇಶ ಸುತ್ತು – ಕೋಶ ಓದು ಎಂಬ ಮಾತಿದೆ. ಜ್ಞಾನಾರ್ಜನೆಗಾಗಿ ಅಥವಾ ಜೀವನಾನುಭವಕ್ಕಾಗಿ ಮನುಷ್ಯ ಓದಲೇಬೇಕು. ಭೂಪ್ರದೇಶಗಳ ಕಂಡು ನಿಸರ್ಗದ ನಿಗೂಢಗಳನ್ನು ಅರಿಯಬೇಕು. ವೈವಿಧ್ಯಮಯವಾದ ಸಂಸ್ಕೃತಿಗಳನ್ನು ಅರಿತು ಅನುಸರಿಸಬೇಕೆಂಬ ಉದ್ದೇಶವು ಇಲ್ಲಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಖ್ಯವಾಗಿ; ನೆಮ್ಮದಿಯನ್ನು ಪಡೆದುಕೊಳ್ಳಬೇಕೆಂದು ಹಂಬಲಿಸುತ್ತದೆ ಮನಸ್ಸು. ಅದಕ್ಕಾಗಿ ಕಾಡು-ಮೇಡು. ಗುಹೆ-ಗುಡಿಗಳನ್ನು ಆಶ್ರಯಿಸುತ್ತದೆ ಮನುಷ್ಯನ ಮನಸ್ಸು. ದೇವಾಲಯಗಳನ್ನು ನಿರ್ಮಿಸಿಕೊಂಡು, ಅಲ್ಲಿ ಪೂಜೆ, ಉತ್ಸವ, ಹಬ್ಬ, ಹರಿದಿನಗಳನ್ನು ಆಚರಿಸುವ ಸಂಪ್ರದಾಯಗಳು ಹೇಗೆ ಪ್ರಾರಂಭಗೊಂಡವು ಎಂಬುದೇ ಒಂದು ಕೌತುಕವಾದ ವಿಚಾರ.

ಹಿಂದೆ ದೇವಾಲಯಗಳು ಮನರಂಜನೆ, ಆರ್ಥಿಕವಾದ ವಾಣಿಜ್ಯ ವ್ಯವಹಾರಗಳ ಕೇಂದ್ರವಾಗಿಯೂ ಸೇವೆ ಸಲ್ಲಿಸುತ್ತಿದ್ದವು. ಹಾಗಾಗಿ ಪ್ರತಿನಿತ್ಯ ಎಲ್ಲರು ದೇವಾಲಯಗಳನ್ನು ಭೇಟಿಮಾಡುವ ಅನಿವಾರ್ಯತೆ ಇದ್ದೇ ಇರುತ್ತಿತ್ತು. ಇಂದು ಅದರ ವಾತಾವರಣವು ಸಂಪೂರ್ಣವಾಗಿ ಬದಲಾಗಿದೆ.

ಇಂದು ಜನ ಮರುಳೋ, ಜಾತ್ರೆ ಮರುಳೋ ಎಂಬಂತೆ ಬಹುತೇಕ ದೇವಾಲಯಗಳು ತಮ್ಮ ಶ್ರೀಮಂತಿಕೆಯ ವೈಭವದಿಂದ ಭಕ್ತರನ್ನು ಆಕರ್ಷಿಸುತ್ತವೆ. ತೀರ್ಥಯಾತ್ರೆಯಾಗಬೇಕಾದುದು, ಪ್ರವಾಸವಾಗಿ ಮಾತ್ರ ಮುಗಿದು ಬಿಡುತ್ತದೆ.

ದೇವಾಲಯದೊಳಗೆ ಮಾಡಬೇಕಾದುದು ಭಕ್ತಿ. ಭಕ್ತಿ ಎಂದರೆ ಹುಡುಕಾಟ. ನಾನು ಯಾರು? ಏನಿದು ಜಗತ್ತು? ಹುಟ್ಟು-ಸಾವು? ಮನುಷ್ಯನ ಮನಸ್ಸಿಗೆ ಜಿಜ್ಞಾಸೆಯಾಗಬೇಕು! ಅಲ್ಲವೇ ?

ಸಹೃದಯಿ ಗೆಳೆಯ ಪ್ರಶಾಂತ ರಿಪ್ಪನ್‌ಪೇಟೆ ಚಲನಶೀಲ ಸಾಹಿತಿಯಾಗಿದ್ದಾರೆ. ನಮ್ಮ ಕರ್ನಾಟಕ ರಾಜ್ಯವಲ್ಲದೆ ಬೇರೆ ಬೇರೆ ಪ್ರದೇಶಗಳ ಪುಣ್ಯಕ್ಷೇತ್ರಗಳ ಪರಿಚಯಾತ್ಮಕವಾದ ಲೇಖನಗಳನ್ನು ನಿಯತವಾಗಿ ಮತ್ತು ನಿರಂತರವಾಗಿ ಬರೆಯುತ್ತಾ ಬರುತ್ತಿದ್ದಾರೆ.

ಇಲ್ಲಿ ಕ್ಷೇತ್ರ ಕಾರ್ಯ ಬಹುಮುಖ್ಯವಾದ ಸಂಗತಿ. ಖುದ್ದಾಗಿ ಪ್ರವಾಸ ಕೈಗೊಂಡು ಅಲ್ಲಿನ ನಿಖರವಾದ ಮಾಹಿತಿಗಳನ್ನು ಸಂಗ್ರಹಿಸಿ, ಲೇಖನವನ್ನು ಸಿದ್ಧಪಡಿಸುವುದು ಸುಲಭದ ಸಂಗತಿಯಲ್ಲ. ಇದು ಸಂಶೋಧನಾ ಕಾರ್ಯದ ರೀತಿಯಲ್ಲಿ ಅಧ್ಯಯನ ಕೈಗೊಂಡು, ಮಾಹಿತಿಗಳನ್ನು ತೌಲನಿಕವಾಗಿ ವಿಮರ್ಶಿಸಿ ಪ್ರಕಟಿಸಬೇಕಾದ ಜಾಣ್ಮೆ ಹಾಗೂ ಜಾಗೃತಿ ಇರಲೇಬೇಕಿದೆ.

ವಾರಕ್ಕೊಂದು ಲೇಖನ, ಅಂದರೆ ವಾರಕ್ಕೊಂದು ಪುಣ್ಯಕ್ಷೇತ್ರದ ವೀಕ್ಷಣೆ. ಪ್ರಶಾಂತರ ಪಾಲಿಗೆ ಅದೆಷ್ಟು ಪುಣ್ಯ ಲಭಿಸಿರಬೇಕೆಂಬ ಸಣ್ಣ ಅಸೂಯೆಯೂ ಇದೆ. ಒಬ್ಬ ಅರ್ಚಕ ಅಥವಾ ಒಬ್ಬ ಪುರೋಹಿತನಿಗೆ ಒಂದೇ ದೇವರ ಕೃಪೆ ಸಿಕ್ಕರೆ, ನಮ್ಮ ಪ್ರಶಾಂತರಿಗೆ ನೂರಾರು ದೇವರುಗಳ ಶ್ರೀರಕ್ಷೆ ಇರಲೇಬೇಕು.

ಇಂತಹ ಆಲೋಚನೆಗಳಿಗೆ ಗುರಿಮಾಡಿದ್ದು, ಅವರು ಹೊರ ತರುತ್ತಿರುವ ಪುಣ್ಯಕ್ಷೇತ್ರಗಳ ಪರಿಚಯಾತ್ಮಕ ಲೇಖನಗಳ ಗುಚ್ಛ "ಸೋಜಗ" ವನ್ನು ಓದುವಾಗ. ಈ ಸಂಕಲನಕ್ಕೆ ನನ್ನ ಅಭಿಪ್ರಾಯದ ಮುನ್ನುಡಿಯನ್ನು ಸಹ ಬಯಸಿರುವುದು ನನ್ನ ಪಾಲಿನ ಹೆಮ್ಮೆಯೆಂದು ಭಾವಿಸಿದ್ದೇನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಕೋಶ ಓದು" ಎಂಬ ಮಾತಿಗೆ ಪೂರಕವಾಗಿ ಅನೇಕ ಧಾರ್ಮಿಕ ಕ್ಷೇತ್ರಗಳ ಪರಿಚಯವು ನನಗೆ ಸುಲಭವಾಗಿ ಸಿಕ್ಕಂತಾಗಿದೆ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಲೇಬೇಕು. ತೀರ್ಥಯಾತ್ರೆ ಕೈಗೊಳ್ಳುವವರಿಗೆ ಇದೊಂದು ಉತ್ತಮ ಕೈಪಿಡಿಯಾಗುವುದರಲ್ಲಿ ಸಂಶಯವಿಲ್ಲ. ಪ್ರತಿಯೊಂದು ಲೇಖನದ ಅಂತಿಮದಲ್ಲಿ ಬೆಂಗಳೂರಿಗೂ ಕ್ಷೇತ್ರಕ್ಕೂ ಇರುವ ಅಂತರ ಮತ್ತು ತಲುಪಬೇಕಾದ ಮಾರ್ಗಸೂಚಿಯು ಉಪಯುಕ್ತವಾಗಿದೆ.

ಗಾಣಗಾಪುರ ಕ್ಷೇತ್ರದಲ್ಲಿ ಭಕ್ತರು ಬಿಕ್ಷೆ ಬೇಡಿ ತಮ್ಮ ಅಹಂಕಾರವನ್ನು ಮಣಿಸುವ ಆಚಾರವು ಆದರ್ಶವಾಗಿದೆ. ಪವಾಡ ಸದೃಶವಾದ ಹಾಸನಾಂಬೆಯ ದೇವಾಲಯದಲ್ಲಿ ಆರದ ದೀಪ, ಬಾಡದ ಹೂ. ವರ್ಷಕ್ಕೆ ಒಮ್ಮೆ ಬಾಗಿಲು ತೆರೆಯುವ ಪರಿ ವಿಶಿಷ್ಟವಾಗಿ ಕಾಣುತ್ತದೆ.

ಕೋಲಾರದ ನಾಗಲಾಪುರದ ಮಹತ್ವ, ಲಿಂಗದಹಳ್ಳಿ ಸ್ಫಟಿಕಲಿಂಗದ ವಿಶೇಷತೆ, ಕೋಣಂದೂರಿನ ಬಸವಣ್ಣನ ಉದ್ಭವ ಮೂರ್ತಿ, ತಿಪಟೂರಿನ ಹೊನ್ನವಳ್ಳಿಯ ನೂರು ದೇವಾಲಯಗಳು, ಬೆಂಗಳೂರಿನ ತಿಂಡ್ಲು ಬಡಾವಣೆಯ ಸಾಯಿಬಾಬರ ನೂರೆಂಟು ಮೂರ್ತಿಗಳು.

ಕರ್ನಾಟಕದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ವೀರಶೈವ-ಲಿಂಗಾಯತ ಮಠಗಳು ಶತಮಾನಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಾ ಬರುತ್ತಿವೆ. ಅಂತಹ ಕೆಲವು ಮಠಗಳ ಸಂಕ್ಷಿಪ್ತ ಪರಿಚಯವೂ ಇಲ್ಲಿದೆ.

ಕಲಬುರ್ಗಿಯ ಶರಣಬಸವೇಶ್ವರರು ತಮ್ಮ ಹೊಲಗದ್ದೆಗಳಿಗೆ ಆಹಾರವನ್ನು ಅರಸಿ ಬಂದ ಪಕ್ಷಿಗಳಿಗೆ ನೀರು ಉಣಿಸುವ ಉದಾರತೆ, ದಯವೇ ಧರ್ಮ ಎಂಬ ಮಾತಿಗೆ ಪೂರಕವಾಗಿದೆ. ಭಗವತ್ಪಾದರಾದ ರೇಣುಕಾಚಾರ್ಯರ ಪರಿಚಯಾತ್ಮಕವಾದ ಲೇಖನ, ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥದ ತಿರುಳು, ರೇವಣಸಿದ್ದೇಶ್ವರರ ಹಾಗೂ ಎಡೆಯೂರು ಸಿದ್ಧಲಿಂಗೇಶ್ವರರ ಕೊಡುಗೆಗಳನ್ನು ಸುಂದರವಾಗಿ ಸ್ಮರಿಸಲಾಗಿದೆ.

ಪ್ರಶಾಂತ ರಿಪ್ಪನ್‌ಪೇಟೆ ಅವರ ಲೇಖನಿ ತುಂಬಾ ಹದವಾಗಿ ಪಳಗಿದೆ. ಧಾರ್ಮಿಕ ಆಚಾರ ವಿಚಾರಗಳ ಬಗ್ಗೆ ವಿಶೇಷವಾಗಿ ಕಾಳಜಿ ವಹಿಸುತ್ತಿರುವುದು ಕಾಣುತ್ತಿದೆ. ಇತಿಹಾಸವನ್ನು ಬಲ್ಲವರು ಮಾತ್ರ ಇತಿಹಾಸವನ್ನು ಸೃಷ್ಟಿಸಬಲ್ಲರು ಎಂಬ ಮಾತಿನಂತೆ ಪ್ರಶಾಂತರು ಇತಿಹಾಸವನ್ನು ತಿಳಿದುಕೊಳ್ಳುವ ಮಾರ್ಗದಲ್ಲಿರುವುದು ಅವರ ಬರಹದ ಉತ್ತಮ ಭವಿಷ್ಯವನ್ನು ಸಾಬೀತು ಪಡಿಸುತ್ತಿದೆ.

ನಾಡಿನಲ್ಲಿ ಅವಗಣನೆಗೆ ಒಳಗಾಗಿರುವ ಅನೇಕ ಸ್ಥಳಗಳನ್ನು ಗುರುತಿಸಿ ಸ್ಥಳಮಹಿಮೆಯನ್ನು ದಾಖಲಿಸುತ್ತಿರುವ ಪ್ರಶಾಂತರಿಗೆ ಹಾಗೂ ಅವರ ಬರಹಗಳಿಗೆ ದೊರಕಬೇಕಾದ ಪ್ರತಿಫಲವು ಸಿಗಲೆಂದು ಹಾರೈಸುತ್ತೇನೆ.

ದಿನಾಂಕ: 24/06/2019

ಜರಗನಹಳ್ಳಿ ಶಿವಶಂಕರ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿವೇದನೆ

ಪ್ರಶಾಂತ ರಿಪ್ಪನ್‌ಪೇಟೆ
ನಂ.22/5, F.No. 202, ಶ್ರೀಗುರು ಕಾರುಣ್ಯ
ಗೋಲ್ಡನ್ ಕೆನೋಪಿ–2, 6ನೇ 'ಎ' ಅಡ್ಡರಸ್ತೆ,
ಬಾಹುಬಲಿ ನಗರ, ಜಾಲಹಳ್ಳಿ,
ಬೆಂಗಳೂರು–13, ದೂ : 94494 05478

ಓಂ ಗುರವೇ ನಮಃ

ವಿಮಲ ವೀರಶೈವ ಸಿದ್ಧಾಂತ ಪ್ರತಿಪಾದಕರಾದ ಜಗದಾದಿ ಜಗದ್ಗುರು ರೇಣುಕಾದಿ ಪಂಚಾಚಾರ್ಯರನ್ನು ಹಾಗೂ ಬಸವಾದಿ ಶಿವಶರಣರನ್ನು ಎನ್ನ ಹೃನ್ಮಂದಿರದಲ್ಲಿ ಸ್ಮರಿಸಿಕೊಂಡು ಎನ್ನಾರಾಧ್ಯ ಗುರುವರ್ಯ ಸುಕ್ಷೇತ್ರ ದಿಂಡದಹಳ್ಳಿ ಲಿಂಗೈಕ್ಯ ಶ್ರೀಗುರು ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳ ಕರ್ತೃ ಗದ್ದುಗೆಗೆ ಎನ್ನ ಭಕ್ತಿಪೂರ್ವಕ ಪ್ರಣಾಮಗಳನ್ನು ಸಮರ್ಪಿಸಿ ಈ ಕೃತಿಯನ್ನು ಅವರ ಪವಿತ್ರ ಸನ್ನಿಧಾನಕ್ಕೆ ಸಮರ್ಪಿಸುತ್ತಿದ್ದೇನೆ.

ವಿಜ್ಞಾನ ಎಷ್ಟೇ ಬೆಳೆದರೂ; ಎನೆಲ್ಲಾ ಹೊಸ ಆವಿಷ್ಕಾರಗಳಾದರೂ ಮಾನವಾತೀತ ಶಕ್ತಿಯೊಂದು ಈ ಜಗತ್ತನ್ನು ನಿಯಂತ್ರಿಸುತ್ತಿದೆ ಎಂಬುದಕ್ಕೆ ಸಾಕಷ್ಟು ಉದಾಹರಣೆಗಳು ಮೇಲಿಂದ ಮೇಲೆ ಸಂಭವಿಸುತ್ತಲೇ ಇರುತ್ತವೆ. ತಾತ್ವಿಕವಾಗಿ ಇದು ಹೀಗೆ ಎಂದು ನಿಖರವಾಗಿ ವಿಶ್ಲೇಷಿಸಲು ಅಸಾಧ್ಯದ ಸಂಗತಿಗಳನ್ನು ಆಸ್ತಿಕರು ದೇವರ ಲೀಲೆ ಎಂದು ಬಣ್ಣಿಸಿದರೆ, ನಾಸ್ತಿಕರು ಅಥವಾ ವೈಚಾರಿಕರು ಪ್ರಕೃತಿಯ ಅದ್ಭುತ ಎಂದು ಕೈತೊಳೆದುಕೊಳ್ಳುತ್ತಾರೆ. ಇಬ್ಬರ ನಂಬಿಕೆಗಳು ಭಿನ್ನವಾಗಿದ್ದರೂ ಉತ್ತರ ಒಂದೇ; ಅದುವೇ ಸೋಜಗ !

ಈ ಜಗತ್ತು ಸೋಜಿಗದ ಸರಮಾಲೆಯನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಮನುಷ್ಯನ ಆಯಸ್ಸು, ಬದುಕುವ ಪ್ರದೇಶ, ಬೇಟಿ ಮಾಡುವ ಸ್ಥಳಗಳು, ನೋಡುವ ಒಳಗಣ್ಣಿನ ವ್ಯಾಪ್ತಿ ಚಿಕ್ಕದಾಗಿರುವುದರಿಂದ ಆ ಸೋಜಿಗದ ಸರಮಾಲೆ ಆತನ ಅನುಭವಕ್ಕೆ ಬಾರದೆ ಹೋಗಬಹುದು; ಬಂದರೂ ವಿಶೇಷ ಅನ್ನಿಸದಿರಬಹುದು. ಆದರೆ ಸಾಮಾನ್ಯ ಅಂಶವನ್ನೂ ಕೂಡಾ "ಪ್ರಶಾಂತ" ಮನಸ್ಸಿನ ಜರಡಿಯಲ್ಲಿ ಸೋಯಿಸಿ, "ಸಂಸ್ಕೃತಿ"ಯ ಪಾತ್ರೆಯಲ್ಲಿ ಬೇಯಿಸಿ, "ವಿಯಜ"ದ ತಟ್ಟೆಯಲ್ಲಿ ಆರಿಸಿ ನಂತರ ಓದುಗರ ಕೈಗೆ ತಲುಪುವ ಹದವಾದ ಪಾಕವೇ "ಸೋಜಗ".

ಮನುಷ್ಯನ ಬಾಳಿಗೆ ಅನ್ನ ಎಷ್ಟು ಮುಖ್ಯವೋ ಜ್ಞಾನವೂ ಅಷ್ಟೇ ಮುಖ್ಯ. ಜ್ಞಾನದ ಮೂಲ ಅನ್ನವೇ ಆಗಿದ್ದು, ಅನ್ನ ಸಂಪಾದನೆಗೆ ಜ್ಞಾನವೇ ಆಧಾರ. ಅಂತಹ ಜ್ಞಾನದ ಪ್ರಸಾರದಲ್ಲಿ ದಿನಪತ್ರಿಕೆಗಳದ್ದು ಕೂಡಾ ಪಾಲಿದೆ. ದಿನಪತ್ರಿಕೆಗಳು ಕೇವಲ ಸುದ್ದಿಗೆ ಸೀಮಿತ ಎಂಬುದು ಇತಿಹಾಸ. ಸಮಾಜದಲ್ಲಿ ಮೌಲ್ಯವನ್ನು ಎತ್ತಿಹಿಡಿಯಲು, ಸಂಸ್ಕಾರಯುತ ಸಮಾಜ ನಿರ್ಮಾಣ ಮಾಡಲು ಪತ್ರಿಕೆಗಳಿಂದಲೂ ಸಾಧ್ಯ ಎಂಬುದನ್ನು ಕರ್ನಾಟಕದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊಟ್ಟ ಮೊದಲಿಗೆ ತೋರಿಸಿದ ಹೆಗ್ಗಳಿಕೆ ವಿಆರ್‌ಎಲ್ ಸಂಸ್ಥೆಗೆ ಸಲ್ಲುತ್ತದೆ. ಆ ಹಿನ್ನಲೆಯಲ್ಲಿ ಸುದ್ದಿಗೆ ಕೊಡುವಷ್ಟೇ ಆದ್ಯತೆಯನ್ನು ದೇಶಭಕ್ತಿ, ರಾಷ್ಟ್ರಪ್ರೇಮ, ಕಲೆ, ಸಾಹಿತ್ಯ, ಧರ್ಮ, ಹೀಗೆ ದೇಶದ ಸಮೃದ್ಧ ಸಂಸ್ಕೃತಿಯನ್ನು ಪ್ರಸಾರ ಮತ್ತು ಪ್ರಚಾರ ಮಾಡಲು ವಿಜಯವಾಣಿ ಪತ್ರಿಕೆ ಸದಾ ಮುಂಚೂಣಿಯಲ್ಲಿ ಕೆಲಸ ಮಾಡುತ್ತಿದೆ. ಆ ಹೊಣೆಗಾರಿಕೆಯಲ್ಲಿ ನನ್ನದೊಂದು ಅಳಿಲು ಸೇವೆ ಇದೆ ಎಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆ ಎನಿಸುತ್ತದೆ.

ಉದ್ಯಮಿಗಳಾದವರು ಕೇವಲ ವ್ಯವಹಾರದ ದೃಷ್ಟಿಯಲ್ಲೇ ಎಲ್ಲವನ್ನೂ ಅಳೆದು ತೂಗುವ ಮನಸ್ಥಿತಿ ಹೊಂದಿರುತ್ತಾರೆ. ಆದರೆ ಲಾಭ–ನಷ್ಟಗಳ ಲೆಕ್ಕಾಚಾರವನ್ನು ಹಾಕದೆ; ಈ ದೇಶ–ಧರ್ಮ, ನಾಡು–ನುಡಿ, ಸಂಸ್ಕೃತಿ–ಸಂಸ್ಕಾರಗಳ ಬಗ್ಗೆ ಬದ್ಧತೆಯನ್ನು ಇಟ್ಟುಕೊಂಡು ಪತ್ರಿಕೋದ್ಯಮದ ನೆಲೆ–ಬೆಲೆಯನ್ನು ಮುಗಿಲೆತ್ತರಕ್ಕೆ ಕೊಂಡೊಯ್ದ ಕೀರ್ತಿ ವಿಆರ್‌ಎಲ್ ಸಮೂಹ ಸಂಸ್ಥೆಯ ಚೇರಮನ್ ಡಾ.ವಿಜಯ ಸಂಕೇಶ್ವರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಆನಂದ ಸಂಕೇಶ್ವರರಿಗೆ ಸಲ್ಲುತ್ತದೆ. ಅವರ ಉದಾತ್ತ ಚಿಂತನೆ ಮತ್ತು ಅನುಮತಿಯ ಫಲವಾಗಿ ಇಂದು ಸೋಜಗ–ಭಾಗ2 ಕೃತಿ ಓದುಗರ ಕೈ ಸೇರಿದೆ.

ಯಾವುದೇ ಉತ್ತಮ ಕಾರ್ಯವಿದ್ದರೂ ಗುರುವಿನ ಆಶೀರ್ವಾದ ಅತ್ಯಗತ್ಯ. ಶ್ರೀಶೈಲ ಮಲ್ಲಿಕಾರ್ಜುನ ಸಮಾಜೋತ್ಥಾನ ಫೌಂಡೇಶನ್ ಮೂಲಕ ಕೃತಿಯನ್ನು ಪ್ರಕಟಿಸಿ ಆಶೀರ್ವದಿಸಿರುವ ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಭಗವತ್ಪಾದರಿಗೆ ಅನಂತಕೋಟಿ ಪ್ರಣಾಮಗಳನ್ನು ಸಮರ್ಪಿಸುತ್ತೇನೆ ಅದೇ ರೀತಿ ತಮ್ಮ ಶುಭಾಶೀರ್ವಾದ ಸಂದೇಶವನ್ನು ನೀಡುವ ಮೂಲಕ ಕೃತಿಯ ಮೌಲ್ಯವನ್ನು ಹೆಚ್ಚಿಸಿರುವ ಶ್ರೀಮದ್ ರಂಭಾಪುರಿ ಮತ್ತು ಶ್ರೀಮದ್ ಕಾಶಿ ಜಗದ್ಗುರುಗಳ ಪಾದ ಕಮಲಗಳಿಗೂ ಭಕ್ತಿಯ ಪ್ರಣಾಮಗಳು. ಅಂತೆಯೇ ಮುನ್ನುಡಿಯ ಮೂಲಕ ಪುಸ್ತಕದ ಅರ್ಥವಂತಿಕೆಯನ್ನು ಹೆಚ್ಚಿಸಿರುವ ಚುಟುಕು ಕವಿ ಜರಗನಹಳ್ಳಿ ಶಿವಶಂಕರ್ ಅವರಿಗೂ ಪ್ರೀತಿಯ ಧನ್ಯವಾದಗಳು. ಗ್ರಂಥಕ್ಕೆ ಗೌರವದ ಬೆನ್ನುಡಿಯನ್ನು ನೀಡಿ ಕೃತಿಯ ಮೌಲ್ಯವನ್ನು ದ್ವಿಗುಣಗೊಳಿಸಿರುವ ವಿಆರ್‌ಎಲ್ ಸಮೂಹ ಸಂಸ್ಥೆಯ ಚೇರಮನ್ ಡಾ.ವಿಜಯ ಸಂಕೇಶ್ವರ ಅವರಿಗೆ ನಾನು ಅಭಾರಿಯಾಗಿದ್ದೇನೆ. ಜೊತೆಗೆ ಪುಸ್ತಕ ಪ್ರಕಟಣೆಗೆ ಸಹಕರಿಸಿದ ವಿಜಯವಾಣಿ ಸಂಪಾದಕರಾದ ಕೆ.ಎನ್.ಚನ್ನೇಗೌಡ ಹಾಗೂ ಪುರವಣಿ ಸಂಪಾದಕರಾದ ಪ್ರಭುಸ್ವಾಮಿ ಶಾಸ್ತ್ರಿಮಠ್‌ರನ್ನು ಮೊದಲ್ಗೊಂಡು ಎಲ್ಲ ಸಿಬ್ಬಂದಿವರ್ಗಕ್ಕೆ ಹಾಗೂ ದಿಗ್ವಿಜಯ ನ್ಯೂಸ್ ಸಂಪಾದಕರಾದ ಸುಭಾಷ್ ಹೂಗಾರ್ ಅವರನ್ನು ಮೊದಲ್ಗೊಂಡು ಎಲ್ಲ ಸಹೋದ್ಯೋಗಿಗಳಿಗೂ ಧನ್ಯವಾದಗಳು.

ಪುಸ್ತಕ ಪ್ರಕಟಣೆಗೆ ಆರ್ಥಿಕ ನೆರವು ನೀಡಿದ ಎಲ್ಲ ಗ್ರಂಥ ದಾಸೋಹಿಗಳಿಗೆ, ಪುಸ್ತಕ ಬಿಡುಗಡೆಗೆ ಸಹಕರಿಸಿದ ಶ್ರೀಶೈಲ ಜಗದ್ಗುರುಗಳ ಪೂಜಾ ಸಮಿತಿಯ ಎಲ್ಲ ಪದಾಧಿಕಾರಿಗಳಿಗೆ ಹಾಗೂ ಕೃತಿಯನ್ನು ಅಂದವಾಗಿ ಮುದ್ರಿಸಿಕೊಟ್ಟ ಗೀತಾಂಜಲಿ ಗ್ರಾಫಿಕ್ಸ್‌ನ ಮಾಲೀಕರಾದ ನಾಗಸುಂದರ್ ಅವರನ್ನು ಮೊದಲ್ಗೊಂಡು ಎಲ್ಲ ಸಿಬ್ಬಂದಿಗಳಿಗೆ ಹಾಗೂ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳನ್ನು ಓದಿ ಪ್ರೋತ್ಸಾಹಿಸಿರುವ ಎಲ್ಲ ಸಹೃದಯಿ ಓದುಗರಿಗೆ ಹೃತ್ಪೂರ್ವಕ ಅಭಿನಂದನೆಗಳು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗ್ರಂಥ ಸೇವೆ

ಶ್ರೀಮತಿ ಪ್ರೇಮ ರೇವಣ್ಣ
ಮತ್ತು ಮಕ್ಕಳು, ಬೆಂಗಳೂರು
ಶ್ರೀಮತಿ ಪ್ರೇಮಾ ಮತ್ತು ಶ್ರೀಖೋವಾ
ರೇವಣ್ಣ ಚಾರಿಟಬಲ್ ಟ್ರಸ್ಟ್ (ರಿ).

ತೀರ್ಥರೂಪ ಲೇಟ್ ಶ್ರೀಚಿಕ್ಕಮೆಹಬೂಬ್ ಸಾಬ್ ಇವರ ಸ್ಮರಣಾರ್ಥ
ಮಾತೋಶ್ರೀ ಶೇಕ್ ಖಾಸೀಂಬಿ ಇವರ ಆಶೀರ್ವಾದದೊಂದಿಗೆ
ಡಾ.ಸಿ.ಕೆ. ಮೌಲಾ ಷರೀಫ್
ಸಾಮಾಜಿಕ ಹೋರಾಟಗಾರರು,
ಜೂಲಪಾಳ್ಯ, ಬಾಗೇಪಲ್ಲಿ ತಾ. ಚಿಕ್ಕಬಳ್ಳಾಪುರ ಜಿ.

ಶ್ರೀ.ಬಿ.ಎಸ್.ಪರಮಶಿವಯ್ಯ
ಅಧ್ಯಕ್ಷರು ಮತ್ತು ಸರ್ವ ಸದಸ್ಯರು,
ಕೆವಿವಿಎಸ್ ಸಂಸ್ಥೆ,
ವೀರಶೈವ ಕೋಆಪ್‌ರೇಟಿವ್ ಬ್ಯಾಂಕ್,
ಬೆಂಗಳೂರು

ಶ್ರೀಮತಿ ವಾಗ್ದೇವಿ ಆರ್ ಗುರುಮಠ್ ಮತ್ತು
ಶ್ರೀರುದ್ರಮುನಿ ಶರ್ಮ ಗುರುಮಠ್ ಚಿಗಟೇರಿ
ಇವರ ಸ್ಮರಣಾರ್ಥ
ಶ್ರೀ ಗಂಗಾಧರ ಗುರುಮಠ್,
ಹೈಕೋರ್ಟ್ ವಕೀಲರು, ಬೆಂಗಳೂರು

ಶ್ರೀಮತಿ ಗಂಗಾಂಬಿಕೆ
ಮಲ್ಲಿಕಾರ್ಜುನ್
ಪೂಜ್ಯ ಮಹಾಪೌರರು,
ಬಿಬಿಎಂಪಿ



ಲಿಂ.ಶ್ರೀಮತಿ ರುದ್ರಮ್ಮ ವೀರಪ್ಪ ಗೊಡಚಿ ಮತ್ತು
ಲಿಂ.ಶ್ರೀವೀರಪ್ಪ ಫ. ಗೊಡಚಿ ಇವರ ಸ್ಮರಣಾರ್ಥ
ಶ್ರೀ ವೀರಭದ್ರಪ್ಪ ವೀ ಗೊಡಚಿ ಮತ್ತು ಸಹೋದರರು
ಚಿಕ್ಕಬಾಸೂರು, ಬ್ಯಾಡಗಿ ತಾ., ಹಾವೇರಿ ಜಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಮತಿ ಪಾರ್ವತಮ್ಮ
ಮತ್ತು ಮಕ್ಕಳು,
ಕೋಣಂದೂರು, ತೀರ್ಥಹಳ್ಳಿ ತಾ.,
ಶಿವಮೊಗ್ಗ ಜಿ.

ಶ್ರೀಮತಿ ರೂಪ ಎಂ.ಎಸ್
ಮತ್ತು ಶ್ರೀ ರುದ್ರೇಶ್ ಎಂ.ಎಸ್.
ಪ್ರಧಾನ ಅರ್ಚಕರು, ಅಧ್ಯಕ್ಷರು ಶ್ರೀಜೋಡಿ
ರುದ್ರೇಶ್ವರ ಸ್ವಾಮಿ ಚಾರಿಟಬಲ್ ಟ್ರಸ್ಟ್, ಮಾಚೋಹಳ್ಳಿ

ಲಿಂ. ಹಣಮಂತ ಸತ್ಯಪ್ಪ ಬಿದನೂರ ಇವರ
ಸ್ಮರಣಾರ್ಥ
ಶ್ರೀ ರಮೇಶ್ ಬಿದನೂರ
ವಿಜಯಪುರ

ಶ್ರೀಮತಿ ಉಮಾ ಮತ್ತು
ಶ್ರೀ ಕೆ.ಎನ್ ಜಯಲಿಂಗಪ್ಪ
ಖಜಾಂಚಿ, ಅಖಿಲ ಭಾರತ ವೀರಶೈವ ಮಹಾಸಭೆ

ಶ್ರೀ ವೇ ಕೆ.ಆರ್. ಷಡಾಕ್ಷರಿ ಶಾಸ್ತ್ರಿಗಳು
ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ವೀರಶೈವ ಅರ್ಚಕರು ಮತ್ತು
ಪುರೋಹಿತರ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು

ಶ್ರೀ ಪ್ರದೀಪ ಕಂಕಣವಾಡಿ
ರಾಷ್ಟ್ರೀಯ ಅಧ್ಯಕ್ಷರು, ವೀರಶೈವ ಲಿಂಗಾಯತ
ಸಂಘಟನಾ ವೇದಿಕೆ

ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸಮಾಜ, ದಾವಣಗೆರೆ
ಶ್ರೀಕೊಟ್ರಯ್ಯ ಎಂ.ಹಿರೇಮಠ, ನಿವೃತ್ತ ಜಿಲ್ಲಾ ನ್ಯಾಯಾಧೀಶರು,
ಹಂಚಿನಾಳ ಗ್ರಾಮ, ಸವದತ್ತಿ ತಾ. ಬೆಳಗಾವಿ ಜಿ.
ಭೃಗೇಂದ್ರ ಪಿ. ಭಟ್ ಮತ್ತು ಎಂ.ಶೇಖರ್ ಶೆಟ್ಟಿ, ಬೆಂಗಳೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಪಣೆ



ಲಿಂ.ಶಿವಾನಂದ ಶಿವಾಚಾರ್ಯ ಸ್ವಾಮಿಗಳು

ಸುಕ್ಷೇತ್ರ ದಿಂಡದಹಳ್ಳಿ, ಶಿಕಾರಿಪುರ ತಾ. ಶಿವಮೊಗ್ಗ ಜಿ.

ಪರಿವಿಡಿ

		ಪು.ಸಂ.
1.	ಭಿಕ್ಷೆ ಬೇಡುವ ಮಧುಕರಿ ಸೇವೆ..!	01
2.	ಉದ್ಭವ ಗಣಪತಿ ಮಹಿಮೆ!	04
3.	ಹನುಮಂತನಿಗೆ ಹತಾರ ಸೇವೆ..!	07
4.	ವರವ ನೀಡುವ ಗೊರವನಹಳ್ಳಿ ಲಕ್ಷ್ಮಿ..!	10
5.	ಬಾಡದ ಹೂವು, ಆರದ ದೀಪ..!	13
6.	ಜಲದೀಪ ಬೆಳಗಿದ ಬಂಡೆಪ್ಪಸ್ವಾಮಿ	16
7.	ನಾಗಲಾಪುರದ ನ್ಯಾಯ ದೇಗುಲ	20
8.	ಮೂರ್ತರೂಪದಲ್ಲಿ ಭಾರತೀಯ ಸಂಸ್ಕೃತಿ	23
9.	ವರ್ಷ ಕಳೆದರೂ ಕೆಡದ ಪ್ರಸಾದ..!	26
10.	ದಕ್ಷಿಣ ಭಾರತದ ಬೃಹತ್ ಸ್ಫಟಿಕಲಿಂಗ	29
11.	ಉದ್ಭವ ಬಸವಣ್ಣನ ಪವಾಡ	32

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

12. ಮಕ್ಕಳ ಕಾಯುವ ಕಲ್ಲುಬಾಳು ಕ್ಷೇತ್ರ 35
13. ದೋಷ ನಿವಾರಕ ಶೀಲವಂತ ಸಿದ್ದೇಶ್ವರ 38
14. ಭಕ್ತರ ಪ್ರಶ್ನೆಗೆ ಭಗವಂತನ ಉತ್ತರ..! 41
15. ಪರಶಿವನ ಪಾದಸಾಕ್ಷಿ ಬುಕ್ಕಾಂಬುದಿ ಬೆಟ್ಟ 45
16. ನೂರು ದೇವರ ಊರು! 48
17. ಸಂಕಲ್ಪ ಸಿದ್ಧಿಯ ಸಿದ್ಧಪರ್ವತ 51
18. ಅರಿವಿನ ಆಗರ ಶ್ರೀಖಾಸ್ಗತೇಶ್ವರ 54
19. ಅವಧೂತಪುರುಷ ಶ್ರೀಸಾಯಿಬಾಬ 57
20. ಭಕ್ತರ ಭವಣೆ ನೀಗುವ ಅಂಗಾರ..! 60
21. ನಿಖರ ಉತ್ತರದ ಪ್ರಖರ ಪ್ರಸಾದ 63
22. ದುಶ್ಚಟ ಬಿಡಿಸಲು ಕಾಣಿಕೆ ಡಬ್ಬಿ! 66
23. ಜಾತ್ರೆಯ ಜತೆಜತೆಗೆ ಉರೂಸ್ ಸಂಭ್ರಮ..! 69
24. ಎಲ್ಲೂ ಇಲ್ಲದ ಜೋಡಿ ವೀರಭದ್ರ..! 72

ವಿಶೇಷ ಕ್ಷೇತ್ರ ಮತ್ತು ಮಹಾತ್ಮರ ಲೇಖನಗಳು

ಪು.ಸಂ.

1. ಮಾನವ ಧರ್ಮದ ಮಹಾಗುರು 76
2. ಲಕ್ಷ್ಮೇಶ್ವರದಲ್ಲಿ ಗುರುಮನೆ ದಸರಾ 80
3. ಶ್ರೀಶೈಲದಲ್ಲಿ ಉಘೇ ಉಘೇ ಮಲ್ಲಯ್ಯ 84
4. ವಿಶಾಲ ಹೃದಯದ ವಿಶ್ವೇಶ್ವರ ಜಗದ್ಗುರು 88
5. ಕಾಶೀ ಪೀಠದ ಸುಜ್ಞಾನನಿಧಿ 91
6. ವಾಗೀಶ ವರಪ್ರಸಾದ ಶ್ರೀಉಮಾಪತಿ ಜಗದ್ಗುರು 95
7. ಜಾಗತಿಕ ಧರ್ಮಗ್ರಂಥ ಶ್ರೀಸಿದ್ಧಾಂತ ಶಿಖಾಮಣಿ 98
8. ಕುಂಭಮೇಳಕ್ಕೆ ಕನ್ನಡದ ನಂಟು 102
9. ದಾಸೋಹ ದೊರೆಯ ಜಾತ್ರೆ 105
10. ಸಹ್ಯಾದ್ರಿ ನಾಡಲ್ಲಿ ಶಿವರಾತ್ರೀಶ್ವರ ಜಯಂತಿ 109
11. ಜಾತಿ ಮೀರಿದ ಜಾತ್ರೆ..! 112
12. ಭದ್ರಕಾಳಿಗೆ ಬಗೆ ಬಗೆಯ ಅಲಂಕಾರ 115

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

13. ವಿರತಿಯ ಸಿರಿ ಶ್ರೀಸರ್ಪಭೂಷಣರ ಜಯಂತಿ 118

14. ಜಗದ್ಗುರು ರೇವಣಸಿದ್ಧರ ಸಿದ್ಧಿಕ್ಷೇತ್ರ ಶಿವಗಂಗೆ 121

15. ಶಿವಾದ್ವೈತ ಘನಲಿಂಗ ಚರ ಚಕ್ರವರ್ತಿ 124

16. ನಿಡಸೋಸಿ ಮಠದ ಹುಗ್ಗಿ ಜಾತ್ರೆ 127

17. ನೊಳಂಬ ನಾಡಲ್ಲಿ ನೂತನ ಶಿಲಾಮಠ 131

18. ತೋಂಟದ ಸಿದ್ಧಲಿಂಗೇಶ್ವರರ ರಥೋತ್ಸವ 134

19. ವಿರಕ್ತ ಪರಂಪರೆಯ ವಿಶಿಷ್ಟ ಮಠ ಚಿಕ್ಕಸೂಗೂರು 138

20. ದೇವತೆಗಳ ತವರು ದೇಗುಲಮಠ 141

21. ದೇವಿ ಮಹಾತ್ಮೆಯ ಅನಾವರಣ 144

22. ಕಲ್ಯಾಣ ಕರ್ನಾಟಕದ ನಡೆದಾಡುವ ದೇವರು 147

23. ಜಾಲಹಳ್ಳಿ ಜಯಶಾಂತಲಿಂಗೇಶ್ವರ ಜಾತ್ರೆ 150

24. ಬಿಲ್ವಾಶ್ರಮದ ಜೋಳದ ನುಚ್ಚಿನ ಜಾತ್ರೆ 153

25. ಉತ್ನಾಳ ಜಾತ್ರೆಯ ಉಡಿ ಸಂಭ್ರಮ..! 156

26. ಮೌನಕ್ರಾಂತಿಗೆ ಮುನ್ನುಡಿ ಮುತ್ತತ್ತಿ ಹಿರೇಮಠ 159

27. ಬಳಗಾನೂರು ಶರಣರ ಪವಾಡ 162

28. ಮೌನತಪಸ್ವಿ ರುದ್ರಮುನಿ ಸ್ವಾಮಿಗಳ ಶತಮಾನೋತ್ಸವ 165

29. ಸಜ್ಜನರು ಮಾಡುವ ಅಜ್ಜನ ಜಾತ್ರೆ 168

30. ತತ್ವಜ್ಞಾನದ ಕಣಜ ಮಡಿವಾಳಪ್ಪ 171

31. ವಿಷಮರ್ಧನ ಸ್ವಾಮಿಗಳ ವಿಶೇಷ ಜಾತ್ರೆ 174

32. ಶರಣ ಪರಂಪರೆಯ ಕೊಂಡಿ ಮುಂಡರಗಿ 177

33. ಜನನಕ್ಕೂ ಮುನ್ನ ಉತ್ತರಾಧಿಕಾರ..! 180

34. ಭಾವೈಕ್ಯತೆಯ ಕೊಂಡಿ ಯಂಕಂಚಿ ಹಿರೇಮಠ 182

35. ಸ್ತ್ರೀಕುಲ ರತ್ನ ಮಹಾಶರಣೆ ಮಲ್ಲಮ್ಮ 185

36. ಗುರುಮುಟ್ಟಿ ಗುರುವಾದ ಬೃಂಗೀಶ್ವರ ಸ್ವಾಮಿಗಳು 188

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಿಕ್ಷೆ ಬೇಡುವ ಮಧುಕರಿ ಸೇವೆ!
ದತ್ತಕ್ಷೇತ್ರ ಗಾಣಗಾಪುರದ ವಿಶಿಷ್ಠ ಆಚರಣೆ

ದಿನಾಂಕ : 6–7–17

ಮನುಷ್ಯ ಕೋಟ್ಯಾಧಿಪತಿಯಾದರೂ ತಿನ್ನುವುದು ನಾಲ್ಕು ತುತ್ತು ಅನ್ನ ಮಾತ್ರ. ಮರಣಾನಂತರ ಸರ್ವರೂ ಮಣ್ಣಲ್ಲಿ ಮಣ್ಣಾಗುತ್ತಾರೆ. ಆದರೂ ಶ್ರೀಮಂತಿಕೆಯ ಅಹಂಕಾರದಲ್ಲಿ ಕೆಲವರು ಇನ್ನಿಲ್ಲದಂತೆ ದರ್ಪವನ್ನು ಮಾಡುತ್ತಿರುತ್ತಾರೆ. ಅಂತಹ ಅಹಂಕಾರವನ್ನು ನಾಶಗೊಳಿಸಿ ಭಗವಂತನ ಮುಂದೆ ಸರ್ವರೂ ಸಮಾನರು; ಶ್ರೀಗುರುವಿನ ಸಾನಿಧ್ಯದಲ್ಲಿ ಸರ್ವರೂ ಪಾಮರರು ಎಂಬ ಸಂದೇಶವನ್ನು ಸಾರುವ ವಿಶಿಷ್ಠ ಪದ್ಧತಿ ಮಧುಕರಿ ಸೇವೆ.

ನಾಡಿನ ಪ್ರಸಿದ್ಧ ದತ್ತಕ್ಷೇತ್ರಗಳಲ್ಲಿ ಕಲ್ಬುರ್ಗಿ ಜಿಲ್ಲೆಯ ಗಾಣಗಾಪುರವು ಒಂದು. ಸುದೀರ್ಘ ಇತಿಹಾಸ ಹೊಂದಿರುವ ಈ ಕ್ಷೇತ್ರದಲ್ಲಿ ಮಧುಕರಿ ಸೇವೆ ಎಂಬ ವಿಶಿಷ್ಠ ಆಚರಣೆಯೊಂದು ನಡೆಯುತ್ತದೆ. ಮಧುಕರಿ ಸೇವೆ ಮಾಡಲು ಬೇಕಾದ ಸಿದ್ಧತೆ ಒಂದೇ ಒಂದು; ನಮ್ಮಲ್ಲಿನ ಅಹಂಕಾರವನ್ನು ತ್ಯಜಿಸಿದರೆ ಮಾತ್ರ ಈ ಸೇವೆ ಮಾಡಲು ಸಾಧ್ಯ. ಮಧುಕರಿ ಸೇವೆ ಎಂದರೆ; ಕನಿಷ್ಠ ಐದು ಮನೆಯ ಮುಂದೆ ಹೋಗಿ "ಜೈ ಗುರುದೇವ ದತ್ತ" ಎಂದು ಕೂಗಬೇಕು. ಆಗ ಆ ಮನೆಯುವರು ಭಿಕ್ಷೆ ತಂದು ನೀಡುತ್ತಾರೆ. ಅದು ಯಾವುದೇ ಆಹಾರ ಪದಾರ್ಥವಾಗಿರಬಹುದು. ಇದನ್ನು ಮಧುಕರಿ ಪ್ರಸಾದವೆಂದು ಕರೆಯಲಾಗುತ್ತದೆ. ಹೀಗೆ ಭಿಕ್ಷೆಬೇಡಿ ತಂದ ಪ್ರಸಾದವನ್ನು ದೇವಾಲಯಕ್ಕೆ ಬಂದ ಇತರ ಭಕ್ತರಿಗೆ ವಿತರಿಸಿ ತಾನೂ ಸೇವಿಸಬೇಕು. ಗಾಣಗಾಪುರದ ವಿವಿಧ ಸೇವೆಗಳಲ್ಲಿ ಮಧುಕರಿ ಸೇವೆ ಅತ್ಯಂತ ಪವಿತ್ರ ಮತ್ತು ಪ್ರಮುಖ ಎಂಬ ನಂಬಿಕೆ ಇದೆ.

ಗಾಣಗಾಪುರದ ದೇವಸ್ಥಾನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಗಾಣಗಾಪುರದ ದತ್ತಾತ್ರೇಯರ ಪಾದುಕೆಗಳು

ಮಧುಕರಿ ಸೇವೆಯಲ್ಲಿ ಎರಡು ವಿಧಗಳಿವೆ. ಒಂದು ಭಿಕ್ಷೆ ಬೇಡುವುದು, ಇನ್ನೊಂದು ಭಿಕ್ಷೆ ನೀಡುವುದು. ಎರಡೂ ಸಹ ಪುಣ್ಯಪ್ರದ ಸೇವೆಗಳೆಂಬುದು ಭಕ್ತರ ನಂಬಿಕೆ. ಎರಡನೇ ವಿಧಾನವೆಂದರೆ; ಕ್ಷೇತ್ರಕ್ಕೆ ಬಂದು ಬೇಡುವ ಭಕ್ತರಿಗೆ ಪ್ರಸಾದವನ್ನು ತಯಾರಿಸಿ ನೀಡುವುದು ಸಹ ಮಧುಕರಿ ಸೇವೆಯ ಒಂದು ಭಾಗ ಎನ್ನುತ್ತಾರೆ ದತ್ತಕ್ಷೇತ್ರದ ಆರಾಧಕರಾದ ಶ್ರೀನಾಗರಾಜ ದೀಕ್ಷಿತ್ ಅವರು.

ಮಧುಕರಿ ಸೇವೆಯ ಹಿನ್ನಲೆ :

ಮಧುಕರಿ ಸೇವೆ ಎಂಬ ವಿಶಿಷ್ಟ ಪದ್ಧತಿ ಅತ್ಯಂತ ಅಪರೂಪದ ಆಚರಣೆಯಾಗಿದೆ. ಗಾಣಗಾಪುರದ ದತ್ತ ಕ್ಷೇತ್ರದಲ್ಲಿ ಈ ಸೇವೆ ಪ್ರಚಲಿತದಲ್ಲಿದೆ. ಈ ಪದ್ಧತಿಯು ದಾಸ ಪರಂಪರೆಯ ಹಿನ್ನೆಲೆಯಲ್ಲಿ ಆಚರಣೆಗೆ ಬಂದಿದೆ ಎನ್ನಲಾಗುತ್ತದೆ. ಪ್ರಾಚೀನ ಕಾಲದಲ್ಲಿದ್ದ ದಾಸ ಪರಂಪರೆಯ ಪ್ರಕಾರ ಭಗವಂತನಿಗೆ ತನ್ನನ್ನು ತಾನು ಅರ್ಪಿಸಿಕೊಂಡು ದಾಸನಾಗು ಎಂಬ ಪರಿಕಲ್ಪನೆ. ಹಾಗೆ ಸರ್ವಸಂಘವನ್ನು ಪರಿತ್ಯಜಿಸಿದ ದಾಸನು ಭಿಕ್ಷೆ ಬೇಡಿ ತಂದು ಸ್ವೀಕರಿಸಬೇಕೆಂಬ ಪದ್ಧತಿ ಇದೆ. ಅಂತಹ ಪದ್ಧತಿಯನ್ನು ಮಧುಕರಿ ಸೇವೆಯಲ್ಲಿ ಕಾಣಬಹುದು.

ಮಧುಕರಿ ಸೇವೆ ಮಾಡುವುದರಿಂದ ನಾನು ಎಂಬ ಅಹಂಕಾರವನ್ನು ತೊರೆದು ಮುಕ್ತಿಯನ್ನು ಪಡೆಯುತ್ತಾನೆಂಬ ಮಾತಿದೆ. ದಾಸರ ಕೀರ್ತನೆಯೊಂದರಲ್ಲಿ “ಮಧುಕರ ವೃತ್ತಿ ನನ್ನದು, ಅದು ಬಲು ಚನ್ನದು” ಎಂಬ ಉಲ್ಲೇಖವಿದೆ.

ಮಧುಕರಿ ಸೇವೆ ಮಾಡುವ ಭಕ್ತರು ದತ್ತಾಲಯದಲ್ಲಿ ದೊರೆಯುವ ಕಮಲದ ಎಲೆಯ ಪತ್ರಾವಳಿಯನ್ನು ತೆಗೆದುಕೊಂಡು ಅದರಲ್ಲೇ ಭಿಕ್ಷೆ ಬೇಡಬೇಕು. ಚಿಕ್ಕಮಗಳೂರಿನ ದತ್ತಪೀಠ ಕೋಮುಸೂಕ್ಷ್ಮ ಕ್ಷೇತ್ರ ಎಂಬ ಕಾರಣಕ್ಕೆ ಪ್ರಸಿದ್ಧಿಯಾಗಿದ್ದರೆ; ಗಾಣಗಾಪುರ ಸಾಮರಸ್ಯದ ಕ್ಷೇತ್ರವಾಗಿದೆ. ಇಲ್ಲಿ ಕಮಲದ ಪತ್ರಾವಳಿಯನ್ನು ನೀಡುವವರು ಮುಸ್ಲಿಂ ಬಂಧುಗಳು!

ಗಾಣಗಾಪುರದ ದತ್ತಾತ್ರೇಯ ಪರಂಪರೆ :

ದತ್ತ ಎಂದರೆ ಕೊಟ್ಟಿದ್ದು ಎಂಬ ಅರ್ಥ. ಪುರಾಣದ ಪ್ರಕಾರ ಸಪ್ತರ್ಷಿಗಳಲ್ಲೊರ್ವರಾದ ಅತ್ರಿ ಮತ್ತು ಅನುಸೂಯ ಮುನಿದಂಪತಿಗಳಿಗೆ ಬ್ರಹ್ಮ, ವಿಷ್ಣು, ಮಹೇಶ್ವರರು ತಮ್ಮನ್ನು ತಾವೇ ಪುತ್ರರಾಗಿ ಅರ್ಪಿಸಿಕೊಳ್ಳುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ರಿಮೂರ್ತಿಗಳ ಅಂಶವಾಗಿ ಜನಿಸಿದವರು ಶ್ರೀಗುರು ದತ್ತಾತ್ರೇಯರು. ಅಂತಹ ದತ್ತಾತ್ರೇಯರ ಪಾದುಕೆಗಳು ಗಾಣಗಾಪುರದಲ್ಲಿವೆ ಎಂಬುದು ಇಲ್ಲಿನ ಇತಿಹಾಸ. ಪಾದುಕೆಗಳು ಗುಂಡಾಕಾರವಾಗಿ ಗರ್ಭಗುಡಿಯಲ್ಲಿದ್ದು ಭಕ್ತರು ಕಿಂಡಿಯ ಮೂಲಕ ದರ್ಶನ ಮಾಡಿ ಸೇವೆ ಸಲ್ಲಿಸುತ್ತಾರೆ.

ಕಮಲದ ಪತ್ರಾವಳಿ

ಭೀಮಾ ಮತ್ತು ಅಮರಜ ನದಿಯ ಸಂಗಮ ಕ್ಷೇತ್ರವಾಗಿರುವ ಈ ಸ್ಥಳದ ಬಗ್ಗೆ ಶ್ರೀಗುರುಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ. ಕಲ್ಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ವಾಡಿಯಿಂದ ಈ ಕ್ಷೇತ್ರಕ್ಕೆ ಬಂದ ದತ್ತಾವತಾರಿ ಎಂದೇ ಪ್ರಸಿದ್ಧರಾಗಿದ್ದ ನರಸಿಂಹ ಸರಸ್ವತಿಗಳು ಇಲ್ಲಿ ತಪಸ್ಸು ಮಾಡಿ ಕ್ಷೇತ್ರವನ್ನು ಪ್ರಸಿದ್ಧಗೊಳಿಸಿದ್ದಾರೆ.

ಶ್ರೀಗುರುಚರಿತ್ರೆಯ ಪ್ರಕಾರ ಶ್ರೀಪಾದ ವಲ್ಲಭರು ಕುಷ್ಠರೋಗದಿಂದ ಬಳಲುತ್ತಿದ್ದವನಿಗೆ ಒಣಗಿದ ಕಡ್ಡಿಯೊಂದನ್ನು ನೀಡಿ ಇದನ್ನು ನೆಟ್ಟು ಪೋಷಿಸು, ಅದು ಚಿಗುರಿದ ನಂತರ ನಿನ್ನ ಕುಷ್ಠರೋಗ ನಿವಾರಣೆಯಾಗುತ್ತದೆ ಎಂದು ಆಶೀರ್ವದಿಸಿದ ಫಲವಾಗಿ ಕುಷ್ಠರೋಗ ನಿವಾರಣೆಯಾಗಿ, ಒಣಗಿದ ಕಡ್ಡಿ ಚಿಗುರುತ್ತದೆ. ಇದಕ್ಕೆ ಪೂರಕವೆಂಬಂತೆ ಸಂಗಮದ ದಂಡೆಯಲ್ಲಿ ಅವದುಂಬರ ವೃಕ್ಷವಿದ್ದು ತೀರ್ಥಸ್ನಾನ ಮಾಡಿ ಆ ವೃಕ್ಷವನ್ನು ಪ್ರದಕ್ಷಿಸಿ ನಂತರ ದತ್ತಾಲಯಕ್ಕೆ ಬಂದು ದತ್ತಚರಿತ್ರೆಯನ್ನು ಪಾರಾಯಣ ಮಾಡುವುದರಿಂದ ಸರ್ವರೋಗಗಳು ನಾಶವಾಗುತ್ತವೆ ಎಂಬ ನಂಬಿಕೆ ಇದೆ. ಮಾನಸಿಕ ಅಸ್ವಸ್ಥರು, ಗಾಳಿಚೇಷ್ಟೆ ಇತ್ಯಾದಿ ರೋಗದಿಂದ ಬಳಲುತ್ತಿರುವವರು ಇಲ್ಲಿಗೆ ಬಂದು ಸೇವೆ ಮಾಡಿ ಒಳಿತು ಕಂಡವರಿದ್ದಾರೆ.

ಹೋಗುವ ಮಾರ್ಗ :

ಬೆಂಗಳೂರಿನಿಂದ 690 ಕಿ.ಮಿ. ದೂರವಿರುವ ಗಾಣಗಾಪುರಕ್ಕೆ ಬೆಂಗಳೂರು – ಹೈದ್ರಾಬಾದ್ ರಾ.ಹೆ. ಮೂಲಕ ಕಲ್ಬುರ್ಗಿಗೆ ಹೋಗಿ ಅಲ್ಲಿಂದ 50 ಕಿ.ಮೀ. ಕ್ರಮಿಸಿ ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದ್ಭವ ಗಣಪತಿ ಮಹಿಮೆ !
ಬೇಡಿದ್ದನ್ನು ನೀಡುವ ಜಯನಗರದ ಶ್ರೀ ಸಿದ್ಧಿವಿನಾಯಕ

ದಿನಾಂಕ : 24–08–2017

33 ಕೋಟಿ ದೇವತೆಗಳ ಪರಿಕಲ್ಪನೆಯನ್ನು ಹೊಂದಿರುವ ಹಿಂದೂ ಧರ್ಮದಲ್ಲಿ ಗಣಪತಿಗೆ ಪ್ರಥಮ ಪೂಜೆಯನ್ನು ಕಲ್ಪಿಸಲಾಗಿದೆ. ದೇವಾನು ದೇವತೆಗಳಲ್ಲೇ ಅತ್ಯಂತ ಭಿನ್ನ ರೂಪ ಹೊಂದಿರುವ ಗಣನಾಯಕನಿಗೆ ಕಲಾವಿಧರು, ಶಿಲ್ಪಿಗಳು ಮತ್ತಾವ ದೇವತೆಗಳಿಗೂ ನೀಡದಷ್ಟು ವಿಭಿನ್ನ ರೂಪಗಳನ್ನು ನೀಡಿದ್ದಾರೆ. ಅಂತೆಯೇ ಇಲ್ಲೊಂದು ಕ್ಷೇತ್ರದಲ್ಲಿ ಪ್ರಕೃತಿಯೂ ಸಹ ನಾನಾರೂಪಿಯಾಗಿರುವ ಗಣೇಶನಿಗೆ ವಿಶಿಷ್ಠ ರೂಪವನ್ನು ನೀಡುವ ಮೂಲಕ ಭಕ್ತರನ್ನು ಭಾವುಕರನ್ನಾಗಿಸಿದೆ.

ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲೊಂದಾದ ಜಯನಗರ 4ನೇ ಹಂತದಲ್ಲಿರುವ ಶ್ರೀ ಸಿದ್ಧಿವಿನಾಯಕ ದೇವಾಲಯವು ನಗರದ ಪ್ರಸಿದ್ಧ ದೇವಾಲಯಗಳಲ್ಲೊಂದು. ಈ ದೇವಾಲಯದ ಗರ್ಭಗುಡಿಗೆ ಹೊಂದಿಕೊಂಡಂತಿರುವ ಅರಳಿ ಮರದಲ್ಲಿ ಪ್ರಕೃತಿದತ್ತವಾಗಿ ಗಣೇಶ ಉದ್ಭವಗೊಳ್ಳುವ ಮೂಲಕ ಸಿದ್ಧಿವಿನಾಯಕನ ಭಕ್ತರಲ್ಲಿ ಭಕ್ತಿ–ಭಾವ ಹೆಚ್ಚಾಗುವಂತಾಗಿದೆ.



ಶ್ರೀ ಸಿದ್ಧಿವಿನಾಯಕ ಸ್ವಾಮಿ

ಗರ್ಭಗುಡಿಯ ಹಿಂದೆ ಇರುವ ಅರಳಿಮರದ ಕೆಳಗೆ ನಾಗರ ಕಟ್ಟೆಯನ್ನು ಸ್ಥಾಪಿಸಲಾಗಿದ್ದು, ದೇವಾಲಯದಲ್ಲಿರುವ ವಿವಿಧ ಪರಿವಾರ ದೇವತೆಗಳ ಪೈಕಿ ಅರಳಿಕಟ್ಟೆಯೂ ಪ್ರಧಾನ ಭಾಗವಾಗಿದೆ. ಇಂತಹ ಅರಳಿಮರದಲ್ಲಿ ಗಣಪತಿಯ ಆಕೃತಿ ಮೂಡಿ ಬಂದಿರುವುದು ಭಕ್ತರಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದ್ಭವ ಗಣೇಶ

ಕುತೂಹಲ ಹಾಗೂ ಭಕ್ತಿಯನ್ನು ಹೆಚ್ಚಿಸಿದೆ. ಮೊಟ್ಟ ಮೊದಲಿಗೆ ಅರಳಿಮರದಲ್ಲಿ ಸರ್ಪದ ಆಕೃತಿ ಮೂಡಿ ಅಚ್ಚರಿಯನ್ನು ಮೂಡಿಸಿತ್ತು. ನಂತರ ಪಕ್ಕದಲ್ಲೇ ಗಣೇಶನ ಆಕೃತಿ ಕಾಣಿಸಿಕೊಂಡಿರುವುದು ಸಿದ್ಧಿ ವಿನಾಯಕನ ಶಕ್ತಿಯ ಪ್ರಕಟರೂಪ ಎಂಬುದು ಭಕ್ತರ ಅಭಿಪ್ರಾಯವಾಗಿದೆ.

ಅರಳಿಕಟ್ಟೆಯನ್ನು 48 ದಿನಗಳ ಕಾಲ ಪ್ರತಿದಿನ 48 ಪ್ರದಕ್ಷಿಣೆ ಹಾಕುವುದರಿಂದ ತಮ್ಮ ಇಷ್ಟಾರ್ಥಗಳು ಈಡೇರಿದ ಉದಾಹರಣೆಗಳು ಇಲ್ಲಿ ಸಾಕಷ್ಟಿವೆ. ಮದುವೆ, ಮಕ್ಕಳು, ವ್ಯವಹಾರ, ವ್ಯಾಪಾರ, ಉದ್ಯೋಗ ಹೀಗೆ ಬೇಡಿಕೊಂಡ ಎಲ್ಲ ಬೇಡಿಕೆಗಳು ಈಡೇರುತ್ತವೆ. ದೇವಾಲಯದ ಶಿಲಾಮಂದಿರ ಕಟ್ಟುವಾಗ; ಬೇಡಿಕೆ ಈಡೇರಿದ ಭಕ್ತನೋರ್ವ 58 ಲಕ್ಷ ರೂಪಾಯಿಗಳನ್ನು ನೀಡಿದ್ದು ಇಲ್ಲಿನ ಶಕ್ತಿ ಎಂತಹುದ್ದು ಎಂಬುದಕ್ಕೆ ಸಾಕ್ಷಿಯಾಗಿದೆ.

ಶ್ರೀಸಿದ್ಧಿವಿನಾಯಕ ದೇವಾಲಯದ ಇತಿಹಾಸ :

ಬೆಂಗಳೂರಿನ ಪ್ರತಿ ಬಡಾವಣೆಗಳಲ್ಲೂ ಗಣೇಶ ದೇವಾಲಯಗಳಿವೆ. ಆದರೆ ಸದ್ಯದ ಮಟ್ಟಿಗೆ ಅತಿ ಹೆಚ್ಚು ಭಕ್ತರನ್ನು ಹೊಂದಿರುವ, ಹೆಚ್ಚಿನ ಆದಾಯವಿರುವುದು ಜಯನಗರದ ಶ್ರೀಸಿದ್ಧಿವಿನಾಯಕ ದೇವಸ್ಥಾನ. 1976ರಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು 40 ವರ್ಷಗಳಲ್ಲಿ ಬೆಳೆದ ಪರಿಯನ್ನು ಅವಲೋಕಿಸಿದರೆ ಇಲ್ಲಿನ ಶಕ್ತಿಯ ಅರಿವಾಗುತ್ತದೆ.

ಈ ಸ್ಥಳದಲ್ಲಿ ಆಗ ಅರಳಿ ಮರವು ಚಿಕ್ಕದಾಗಿತ್ತು. ಅದರ ಬಳಿಯಲ್ಲಿ ಯಾರೋ ತಂದಿಟ್ಟ ಒಂದು ಪುಟ್ಟ ಗಣೇಶನ ವಿಗ್ರಹವಿತ್ತು. ಇಲ್ಲಿಗೆ ವಾಯುವಿಹಾರಕ್ಕೆ ಬರುತ್ತಿದ್ದ ಜನರು ಅರಳಿಮರವನ್ನು ಪ್ರದಕ್ಷಿಣೆ ಹಾಕಲು ಆರಂಭಿಸಿದರು. ನಂತರ ಇಲ್ಲಿನ ನಿವಾಸಿಗಳೆಲ್ಲಾ ಚರ್ಚಿಸಿ ಒಂದು ಪುಟ್ಟ ಗುಡಿಯನ್ನು ಕಟ್ಟಿಸಿದರು. ಹೀಗೆ ಹಂತ ಹಂತವಾಗಿ ಜೀರ್ಣೋದ್ಧಾರ ಗೊಂಡು ಇಂದು ನಗರದಲ್ಲೇ ಅತ್ಯಂತ ಪ್ರಸಿದ್ಧ ದೇವಾಲಯವಾಗಿದೆ.

ಈ ಪ್ರದೇಶದಲ್ಲಿ ಹಿಂದೊಂದು ಕಾಲಕ್ಕೆ ಗಣೇಶನ ದೇವಾಲಯವಿದ್ದು, ಕಾಲನಂತರ ನಶಿಸಿಹೋಗಿತ್ತಂತೆ. ಆದರೆ ಆ ಶಕ್ತಿ ಮತ್ತೆ ಜಾಗೃತಗೊಂಡು, ದೇವಾಲಯ ಮರುಸ್ಥಾಪನೆಯಾಗಲು ಕಾರಣ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರು ಇಲ್ಲಿಗೆ ಭೇಟಿ ನೀಡಿದಾಗ ಹೇಳಿದ್ದಾರೆಂದು ಇಲ್ಲಿನ ಅರ್ಚಕರು ವಿವರಿಸುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಜಯನಗರ ಗಣೇಶ ದೇವಸ್ಥಾನ

ಕಳೆದ 40 ವರ್ಷಗಳಿಂದ ತಮ್ಮ ಜೀವನವನ್ನೇ ದೇವಾಲಯಕ್ಕೆ ಅರ್ಪಿಸಿಕೊಂಡಿರುವ ಪ್ರಧಾನ ಅರ್ಚಕರಾದ ಚನ್ನವೀರ ದೇವರು ಹೇಳುವ ಪ್ರಕಾರ; ದೇವಾಲಯದ ಎಲ್ಲ ಬೆಳವಣಿಗೆಗೆ ಭಕ್ತರೇ ಕಾರಣ. ಭಕ್ತರು ಭಗವಂತನಲ್ಲಿ ಕಂಡುಕೊಂಡ ಶಕ್ತಿಯನ್ನು ಅನುಭವಿಸಿ ಅದರಿಂದ ಫಲ ಪಡೆದುಕೊಂಡಿದ್ದಾರೆ. ಅದು ಒಬ್ಬರಿಂದ ಒಬ್ಬರಿಗೆ ಹರಡುತ್ತ ಇಂದು ಬಹುದೊಡ್ಡದಾಗಿ ದೇವಾಲಯ ಬೆಳೆದು ನಿಲ್ಲಲು ಕಾರಣವಾಗಿದೆ.

ಸಂಕಷ್ಟಹರ ಗಣೇಶನ ಮಹಿಮೆ ಅಪಾರ :

ಗಣಪತಿಯನ್ನು ಮಾಸಿಕವಾಗಿ ಅರ್ಚಿಸುವ ಸಂಕಷ್ಟಹರ ವ್ರತವು ಇಂದು ಎಲ್ಲಡೆ ಕಂಡು ಬರುತ್ತದೆ. ಆದರೆ ಬೆಂಗಳೂರಿನಲ್ಲಿ ಮೊಟ್ಟ ಮೊದಲ ಬಾರಿಗೆ ಸಂಕಷ್ಟಿ ವ್ರತವನ್ನು ಆರಂಭಿಸಿದ್ದು ಜಯನಗರದ ಇದೇ ಸಿದ್ಧಿವಿನಾಯಕ ದೇವಾಲಯದಲ್ಲಿ. ಅಂದು ಸಂಕಷ್ಟಿ ವ್ರತವನ್ನು ಆರಂಭಿಸಿದಾಗ 2–4 ಅಭಿಷೇಕಗಳು ನಡೆಯುತ್ತಿದ್ದವು. ಆದರೆ ಇಂದು ಕನಿಷ್ಠ 500 ರಿಂದ 600 ಅಭಿಷೇಕಗಳು ನಡೆಯುತ್ತವೆ. ಅಂಗಾರಕ ಸಂಕಷ್ಟಿಯಂದು ಕನಿಷ್ಠ 1000 ಅಭಿಷೇಕಗಳು ಇಲ್ಲಿ ನಡೆಯುತ್ತಿವೆ.

ಈ ದೇವಾಲಯದ ಮತ್ತೊಂದು ವಿಶೇಷವೆಂದರೆ ಅಲಂಕಾರ ಪೂಜೆ. ಹಣ್ಣಿನ ಅಲಂಕಾರ, ನಾಣ್ಯದ ಅಲಂಕಾರ, ಹರಿದ್ರಾಲಂಕಾರ, ಕುಂಕುಮ, ಬೆಣ್ಣೆ, ಧಾನ್ಯ, ಒಣಹಣ್ಣು, ತರಕಾರಿ ಹೀಗೆ ಭಕ್ತರ ಇಚ್ಛೆಯಂತೆ ನಾನಾಲಂಕಾರವನ್ನು ಮಾಡಲಾಗುತ್ತದೆ. ದಿನಕ್ಕೆ ಎರಡು ಅಲಂಕಾರವನ್ನು ಮಾಡಲಾಗುತ್ತದೆ. ಹೀಗಿದ್ದರೂ; ಅಲಂಕಾರ ಸೇವೆ ಮಾಡಿಸುವವರು 6 ರಿಂದ 8 ತಿಂಗಳು ಮುಂಚಿತವಾಗಿಯೇ ಹೆಸರು ನೋಂದಾಯಿಸಬೇಕಾಗಿದೆ.

ದೇವಾಲಯದಲ್ಲಿ ಗಣೇಶ ಚತುರ್ಥಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಒಂದು ವಾರಗಳ ಕಾಲ ಧಾರ್ಮಿಕ, ಸಾಂಸ್ಕೃತಿಕವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಹೋಗುವ ಮಾರ್ಗ :

ಬೆಂಗಳೂರು ನಗರದ ಪ್ರತಿಷ್ಠಿತ ಭಾಗವಾಗಿರುವ ಜಯನಗರ 4ನೇ ಹಂತದಲ್ಲಿರುವ ಶ್ರೀಸಿದ್ಧಿವಿನಾಯಕ ದೇವಸ್ಥಾನಕ್ಕೆ ನಗರದ ಯಾವುದೇ ಭಾಗದಿಂದ ಸಿಟಿ ಬಸ್ ಅಥವಾ ಮೆಟ್ರೋ ರೈಲು ಮೂಲಕ ಹೋಗಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹನುಮಂತನಿಗೆ ಹತಾರ ಸೇವೆ !

ತಿಮ್ಮಾಪುರ ಮಾರುತೇಶ್ವರನ ಜಾತ್ರೆಯಲ್ಲಿ ಪವಾಡ

ದಿನಾಂಕ : 07-09-2017

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಹನುಮಂತನ ಇತಿಹಾಸವೇ ಅತ್ಯಂತ ರೋಚಕ. ಆಂಜನೇಯನ ಉಲ್ಲೇಖವಿಲ್ಲದೆ ಯಾವ ಊರಿನ ಇತಿಹಾಸವೂ ಪರಿಪೂರ್ಣವಾಗುವುದಿಲ್ಲ. ಕಾರಣ ಭಜರಂಗಿಯ ಗುಡಿಗಳಿಲ್ಲದ ಊರುಗಳು ಅತ್ಯಂತ ವಿರಳ. ಹೀಗೆ ಪ್ರತಿಗ್ರಾಮದ ಜನಜೀನದಲ್ಲೂ ಹಾಸುಹೊಕ್ಕಾಗಿರುವ ಪವನಸುತನ ಪ್ರಭಾವವಿದ್ದರೆ; ಗಾಳಿಯಲ್ಲಿ ಮುನ್ನುಗ್ಗಬಹುದು, ಬೆಂಕಿಯನ್ನು ಜಿಗಿಯಬಹುದು, ಸಾಗರವನ್ನೇ ಈಜಿ ದಡ ಸೇರಬಹುದು, ಸರ್ವಶತ್ರುಗಳನ್ನು ಜಯಿಸಬಹುದೆಂಬ ಪ್ರತೀತಿ ಇದೆ. ಈ ಅಖಂಡ ಬ್ರಹ್ಮಚಾರಿಯ ಸನ್ನಿಧಾನದಲ್ಲಿ ನಡೆಯುವ ಪವಾಡಗಳಿಗೆ ಪ್ರತ್ಯಕ್ಷ ಉದಾಹರಣೆ ತಿಮ್ಮಾಪುರದ ಶ್ರೀ ಮಾರುತೇಶ್ವರ ಕ್ಷೇತ್ರ.



ತಿಮ್ಮಾಪುರ ಮಾರುತೇಶ್ವರ

ಬಾಗಲಕೋಟೆ ಜಿಲ್ಲೆ ಹುನಗುಂದ ತಾಲೂಕಿನ ತಿಮ್ಮಾಪುರ ಗ್ರಾಮದಲ್ಲಿ ಪುರಾತನ ಮಾರುತೇಶ್ವರ ದೇವಾಲಯವಿದೆ. ಬಾಗಲಕೋಟೆ, ವಿಜಯಪುರ ಸೇರಿದಂತೆ ವಿವಿಧ ಜಿಲ್ಲೆಗಳ ಸಾವಿರಾರು ಭಕ್ತರು ಇಲ್ಲಿಗೆ ನಡೆದುಕೊಳ್ಳುತ್ತಾರೆ. ಈ ಕ್ಷೇತ್ರ ಜಾಗೃತ ಕ್ಷೇತ್ರವೆಂದೇ ಪ್ರಸಿದ್ಧಿ ಹೊಂದಿದೆ. ಭಕ್ತರ ನಂಬಿಕೆಯನ್ನು ಇಮ್ಮಡಿಗೊಳಿಸುವ ಹಲವು ಘಟನೆಗಳು ಇಲ್ಲಿ ನಡೆಯುತ್ತವೆ. ಆದರೆ ಆ ಎಲ್ಲ ಪವಾಡಗಳಿಗಿಂತ ಜಾತ್ರೆಯ ವೇಳೆ ನಡೆಯುವ ಪವಾಡ ಕುತೂಹಲಕಾರಿ ಯಾಗಿದೆ. ವೈಜ್ಞಾನಿಕ ವಿಸ್ಮಯವೆಂಬಂತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಡೆಯುವ ಆ ಪವಾಡವನ್ನು ಹತಾರ ಸೇವೆ ಎಂಬ ಹೆಸರಿನಿಂದ ಕರೆಯುತ್ತಾರೆ.

ತಿಮ್ಮಾಪುರದ ಹತಾರ ಸೇವೆ

ಹತಾರ ಎಂದರೆ ಆಯುಧ ಅಥವಾ ಹರಿತವಾದ ಉಪಕರಣ ಎಂದು ಅರ್ಥ. ಹತಾರ ಸೇವೆ ಎಂದರೆ ಅಯುಧ ಸೇವೆ ಎಂದರ್ಥ. ಪ್ರತಿವರ್ಷ ಮಹಾಲಯ ಅಮವಾಸೆಯ ಪರ್ವಕಾಲದಲ್ಲಿ ಮಾರುತೇಶ್ವರ ಜಾತ್ರಾ ಮಹೋತ್ಸವ ನಡೆಯುತ್ತದೆ. ಮೂರು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ಹಲವಾರು ಧಾರ್ಮಿಕ ವಿಧಿವಿಧಾನಗಳು ನಡೆಯುತ್ತವೆ. ಭಕ್ತರ ನಂಬಿಕೆ ಮತ್ತು ಪರಂಪರೆಯಂತೆ ನಡೆಯುವ ಆಚರಣೆಗಳಲ್ಲೊಂದು ಹತಾರ ಸೇವೆ.

ಜಾತ್ರೆಯ ದಿನ ಮಧ್ಯರಾತ್ರಿಯಿಂದ ಬೆಳಗಿನ ಜಾವದ ವರೆಗೆ ಪೂಜಾರಿಯು ಪ್ರಾಚೀನ ಖಡ್ಗವನ್ನು ಕೈಯಲ್ಲಿ ಹಿಡಿದು ಹತಾರ ಸೇವೆಯನ್ನು ನಡೆಸುತ್ತಾರೆ. ಜಾತ್ರೆಯ ಗದ್ದಲ, ವಾದ್ಯ, ಡೊಳ್ಳಿನ ಸಪ್ಪಳದ ನಡುವೆಯೂ ನೆರೆದವರಿಗೆ ಕೇಳಿಸುವಂತೆ ಕೈಯಲ್ಲಿ ಹಿಡಿದ ಖಡ್ಗದಿಂದ ಜೋರಾಗಿ ಹೊಟ್ಟೆ, ಬೆನ್ನು, ಕೈ-ಕಾಲುಗಳಿಗೆ ಹೊಡೆದುಕೊಳ್ಳುತ್ತಾರೆ. ಹರಿತವಾದ ಖಡ್ಗದಿಂದ ಅಷ್ಟು ಹೊಡೆದರೂ ಒಂದೇ ಒಂದು ಹನಿ ರಕ್ತ ಬೀಳುವುದಿಲ್ಲ. ಸೇರಿದ್ದ ಅಪಾರ ಭಕ್ತ ಸಮೂಹ ಮಾರುತೇಶ್ವರನ ಈ ಪವಾಡವನ್ನು ಕಂಡು ಮೂಕ ವಿಸ್ಮಿತರಾಗುತ್ತಾರೆ.

ಮಾರುತೇಶ್ವರನ ಹಿನ್ನಲೆ :

ಮಾರುತೇಶ್ವರ ದೇವಾಲಯದಲ್ಲಿ ಪೂಜೆ ಮಾಡುವ ಪುರೋಹಿತರು ಮೂಲತಃ ಹರಪನಹಳ್ಳಿಯ ದೇಸಾಯಿ ಮನೆತನದವರೆಂದು ಹೇಳಲಾಗುತ್ತದೆ. ಕಾರಣಾಂತರದಿಂದ ಊರು ಬಿಟ್ಟು ವಲಸೆ ಬರುವಾಗ ಹುನಗುಂದ ತಾಲೂಕಿನ ದಮ್ಮೂರ ಗುಡ್ಡದ ಬಳಿ "ನನ್ನನ್ನು ಕರೆದುಕೊಂಡು ಹೋಗು" ಎಂಬ ವಾಣಿ ಕೇಳಿಸುತ್ತದೆ. ಆಗ ದಿಟ್ಟಿಸಿ ನೋಡಲಾಗಿ ಆಂಜನೇಯನ ವಿಗ್ರಹ ಕಾಣಿಸುತ್ತದೆ. ಇಷ್ಟು ದೊಡ್ಡ ಮೂರ್ತಿಯನ್ನು ಎತ್ತಿಕೊಂಡು ಹೋಗುವುದು ಕಷ್ಟವೆಂದು ಯೋಚಿಸುತ್ತಿದ್ದಾಗ; ಭಕ್ತಿಯಿಂದ ನೀವು ಎತ್ತಿಕೊಂಡರೆ ರೊಟ್ಟಿಯಷ್ಟು ಲಘುವಾಗಿ ಬರುತ್ತೇನೆ, ಎಲ್ಲಿ ನಿಮಗೆ ಭಾರವಾಗುತ್ತದೆಯೋ ಅಲ್ಲಿ ನನ್ನನ್ನು ಪ್ರತಿಷ್ಠಾಪಿಸಿ ಎಂಬ ಮಾತು ಕೇಳಿಸುತ್ತದೆ. ಅದರಂತೆ ವಿಗ್ರಹವನ್ನು ಎತ್ತಿಕೊಂಡು ಮುಂದೆ ಹೋಗುವಾಗ ಇಂದಿನ ತಿಮ್ಮಾಪುರದ ಸಮೀಪದಲ್ಲಿ ವಿಗ್ರಹ ಭಾರವಾದ ಪರಿಣಾಮ ಇಲ್ಲಿಯೇ ಪ್ರತಿಷ್ಠಾಪಿಸಿ ಪೂಜೆ ಆರಂಭಿಸುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಮ್ಮಾಪುರ ದೇವಸ್ಥಾನ

ದೇವಾಲಯವನ್ನು ಹುನಗುಂದ ತಾಲೂಕಿನ ಜನಾದಿ ಮನೆತನದವರು ಕಟ್ಟಿಸಿದ್ದು, ಇತ್ತೀಚೆಗೆ 1977ರಲ್ಲಿ ಈಗಿರುವ ಗೋಪುರವನ್ನು ಗ್ರಾಮದ ವೈವದವರು ಕಟ್ಟಿಸಿದ್ದಾರೆ. ದೇವಾಲಯದ ಮುಂದೆ ದೀಪಸ್ಥಂಭ, ಹಾಗೂ ಎರಡು ಪವಾಡ ಗದ್ದುಗೆಗಳಿವೆ. ಎಡಗಡೆಯಲ್ಲಿ ಬಸವೇಶ್ವರ ದೇವಾಲಯವಿದ್ದು, ಒಂದೇ ದಿನ ಎರಡೂ ದೇವರ ಜಾತ್ರೆಗಳು ನಡೆಯುತ್ತವೆ.

ಕಾರ್ಣಿಕದ ಜಾತ್ರೆ :

ನಮ್ಮ ನಾಡಿನ ಹಲವು ಜಾತ್ರೆಗಳಲ್ಲಿ ಕಾರ್ಣಿಕ ಹೇಳುವ ಪದ್ಧತಿಗಳನ್ನು ಕಾಣುತ್ತೇವೆ. ಪ್ರಾದೇಶಿಕವಾಗಿ ಆಯಾಯ ಪ್ರದೇಶದ ಭವಿಷ್ಯವಾಣಿಯ ಬಗ್ಗೆ ಭಕ್ತರಲ್ಲಿ ಅಪಾರ ನಂಬಿಕೆಯೂ ಇದೆ. ಅಂತೆಯೇ ತಿಮ್ಮಾಪುರ ಮಾರುತೇಶ್ವರನ ಜಾತ್ರೆಯಲ್ಲೂ ಕೂಡಾ ಕೊನೆಯ ದಿನ ಹೇಳುವ ಕಾರ್ಣಿಕ ವಾಣಿಯನ್ನು ಕೇಳುವುದಕ್ಕೇ ಭಕ್ತರು ಕಾತುರದಿಂದ ಕಾಯುತ್ತಾರೆ. ಪೂಜಾರಿಯ ಭವಿಷ್ಯವಾಣಿಯಲ್ಲಿ ಮಳೆ, ಬೆಳೆ, ಮುಂದಿನ ಫಲಾಪಲಗಳ ಕುರಿತು ಸಾಕ್ಷಾತ್ ಮಾರುತೇಶ್ವರನೇ ಒಡಪಿನಂತೆ ನುಡಿಸುತ್ತಾನೆಂದು ಹೇಳಲಾಗುತ್ತದೆ. ನಂತರ ಆ ಒಡಪನ್ನು ಹಿರಿಯರು ವಿಶ್ಲೇಷಿಸುತ್ತಾರೆ.

ಪ್ರತಿ ಶ್ರಾವಣಮಾಸದಲ್ಲಿ ದೇವರ ಫಲ್ಲಕ್ಕಿ ಮಹೋತ್ಸವ, ಕಾರ್ತೀಕ ಮಾಸದಲ್ಲಿ ವಿಜೃಂಭಣೆಯ ದೀಪೋತ್ಸವ ಹಾಗೂ ಮಹಾಲಯ ಅಮವಾಸೆಯ ಪರ್ವಕಾಲದಲ್ಲಿ ಜಾತ್ರೆ ನಡೆಯುತ್ತದೆ. ಈ ವರ್ಷ ಇದೇ ಸೆ.16 ರಿಂದ ಸೆ.18ರ ವರೆಗೆ ಜಾತ್ರೆ ನಡೆಯಲಿದ್ದು, ಸಾವಿರಾರು ಜನ ಪಾಲ್ಗೊಳ್ಳಲಿದ್ದಾರೆ.

ಹೋಗುವ ಮಾರ್ಗ :

ಬೆಂಗಳೂರಿನಿಂದ 430 ಕಿ.ಮೀ. ದೂರವಿರುವ ತಿಮ್ಮಾಪುರಕ್ಕೆ ರಾ.ಹೆ.48ರ ಮೂಲಕ ಹುನಗುಂದ ತಲುಪಿ ಅಲ್ಲಿಂದ 5 ಕಿ.ಮೀ. ಕ್ರಮಿಸಿ ಮಾರುತೇಶ್ವರ ಕ್ಷೇತ್ರ ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ವರ'ವ ನೀಡುವ ಗೊರವನಹಳ್ಳಿ ಲಕ್ಷ್ಮಿ !
ಅಷ್ಟಸಿದ್ಧಿ ಕೈಗೂಡುವ ಮಹಾಲಕ್ಷ್ಮಿ ಕ್ಷೇತ್ರ

ದಿನಾಂಕ : 14-09-2017

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಕೋಟ್ಯಾನು ಕೋಟಿ ದೇವತೆಗಳ ಪ್ರಸ್ತಾಪಗಳಿವೆ. ಆ ಎಲ್ಲ ದೇವತೆಗಳನ್ನು ಒಂದೊಂದು ಕ್ಷೇತ್ರದ ಅಧಿದೇವತೆಗಳೆಂದು ಪೂಜಿಸುವ ಪರಂಪರೆಯಿದೆ. ಒಂದೊಂದು ಪರಂಪರೆಯ ದೇವರನ್ನು ಒಂದೊಂದು ವರ್ಗದವರು ಪೂಜಿಸುತ್ತಾರೆ. ಆದರೆ ಮಹಾಲಕ್ಷ್ಮಿಯನ್ನು ಪೂಜಿಸದೇ ಇರುವವರು ಅತ್ಯಂತ ವಿರಳ. ಮಹಾಲಕ್ಷ್ಮಿ ಎಂದರೆ ಐಶ್ವರ್ಯದಾಯಿನಿ ಎಂಬುದು ಇದಕ್ಕೆ ಕಾರಣ. ಆದರೆ ಐಶ್ವರ್ಯಪ್ರದಾಯಿನಿ ಮಹಾಲಕ್ಷ್ಮಿದೇವಿ ನೆಲೆಸಿರುವ ಗೊರವನಹಳ್ಳಿ ಕ್ಷೇತ್ರದಲ್ಲಿ ಭಕ್ತಿಯಿಂದ ಬೇಡಿದರೆ ಅವಿವಾಹಿತ ಯುವತಿಯರಿಗೆ 'ವರ' ದಯಪಾಲಿಸುತ್ತಾಳೆಂಬುದು ಕುತೂಹಲವೆನಿಸಿದರೂ ಸತ್ಯ.

ಕೋಟ್ಯಾಂತರ ದೇವತೆಗಳನ್ನು ನಂಬುವ ನಮ್ಮ ಪರಂಪರೆಯಲ್ಲಿ ಬ್ರಹ್ಮ ಸೃಷ್ಟಿಕರ್ತನಾದರೆ, ವಿಷ್ಣು ಪಾಲಕನೆಂತಲೂ, ಮಹೇಶ್ವರ ಲಯಕರ್ತನೆಂತಲೂ ನಂಬಲಾಗಿದೆ. ಅಂತೆಯೇ ಶಕ್ತಿದೇವತೆಗಳಲ್ಲಿ; ಸರಸ್ವತಿಯನ್ನು ವಿದ್ಯಾಧಿದೇವತೆ ಎಂತಲೂ, ಪಾರ್ವತಿಯನ್ನು ಸುಮಂಗಲಕಾರಕಿ ಯಂತಲೂ ಪೂಜಿಸಲಾಗುತ್ತದೆ. ಆದರೆ ಲಕ್ಷ್ಮಿಮಾತೆಯನ್ನು ಅಷ್ಟಸಿದ್ಧಿ ಪ್ರದಾಯಿನಿ ಎಂದೂ ಕರೆಯಲಾಗುತ್ತದೆ. ಇದಕ್ಕೆ ಪೂರಕವೆಂಬಂತೆ ಗೊರವನಹಳ್ಳಿ ಮಹಾಲಕ್ಷ್ಮಿ ಯನ್ನು ಭಕ್ತಿಯಿಂದ ಭಜಿಸುವ ಲಕ್ಷಾಂತರ ಅವಿವಾಹಿತರಿಗೆ ಕಂಕಣಬಲ ಕೂಡಿ ಬರುತ್ತದೆ.


ಗೊರವನಹಳ್ಳಿ ಶ್ರೀ ಮಹಾಲಕ್ಷ್ಮಿ

ಈ ಕ್ಷೇತ್ರದಲ್ಲಿ ಮಹಾಲಕ್ಷ್ಮಿಯ ಆಶೀರ್ವಾದ ಮಾಡಿದ ಕರಿಮಣಿಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀಡುವ ವಿಶೇಷ ಪದ್ಧತಿ ಇದೆ. ಹೀಗೆ ನೀಡಿದ ಕರಿಮಣಿಯನ್ನು ಮನೆಗೆ ಕೊಂಡೊಯ್ದು ಅವಿವಾಹಿತ ವಧು ಪೂಜೆ ಮಾಡಿದರೆ ಉತ್ತಮ ವರ ದೊರೆಯುತ್ತಾನೆ. ವರನ ತಾಯಿ ಪೂಜೆ ಮಾಡಿದರೆ ಉತ್ತಮ ಸೊಸೆ ಬರುತ್ತಾಳೆಂಬ ನಂಬಿಕೆ ಇದೆ. ಹೀಗೆ ಪೂಜೆ ಮಾಡಿ ಫಲ ಕಂಡ ಲಕ್ಷಾಂತರ ಉದಾಹರಣೆಗಳು ಇಲ್ಲಿ ಸಿಗುತ್ತವೆ.

ಗೊರವನಹಳ್ಳಿ ಬಳೆಪರಕೆ

ಗೊರವನಹಳ್ಳಿಯ ಇತಿಹಾಸ :

ಕರ್ನಾಟಕದ ಪ್ರತಿಷ್ಠಿತ ಕ್ಷೇತ್ರಗಳಲ್ಲಿ ಪ್ರಸಿದ್ಧವಾಗಿರುವುದು ಗೊರವನಹಳ್ಳಿ ಮಹಾಲಕ್ಷ್ಮಿ ದೇವಾಲಯ. ಲಕ್ಷ್ಮಿದೇವಿಯ ಉಪಾಸಕರಾಗಿದ್ದ ಕಮಲಮ್ಮನವರು ಈ ದೇವಾಲಯವನ್ನು ಸ್ಥಾಪಿಸಿದವರು. ತುಮಕೂರು ಜಿಲ್ಲೆ ಕೊರಟಗೆರೆ ತಾಲೂಕಿನ ಜಯಮಂಗಲಿ ನದಿಯ ದಡದಲ್ಲಿರುವ ಈ ಕ್ಷೇತ್ರ ರೋಚಕ ಇತಿಹಾಸವನ್ನು ಹೊಂದಿದೆ. ಅಬ್ಬಯ್ಯ ಎಂಬ ವ್ಯಕ್ತಿ ಹಸು ಮೇಯಿಸಲು ಕೆರೆಯ ಬಳಿ ಹೋದಾಗ "ನಾನು ನಿನ್ನೊಂದಿಗೆ ಬರುತ್ತೇನೆ ಕರೆದುಕೊಂಡು ಹೋಗು" ಎಂಬ ಹೆಣ್ಣಿನ ಧ್ವನಿ ಕೇಳಿಸುತ್ತಿರುತ್ತದೆ. ಆತ ತನ್ನ ತಾಯಿಯ ಸಲಹೆಯಂತೆ ದೇವತೆಯಾದರೆ ಕರೆದುಕೊಂಡು ಹೋಗುತ್ತೇನೆ, ದುಷ್ಟಶಕ್ತಿಯಾದರೆ ಕರೆದೊಯ್ಯುವುದಿಲ್ಲ ಎಂದು ಹೇಳುತ್ತಾನೆ. ಅದರಂತೆ ತನ್ನ ಶಲ್ಯವನ್ನು ನೆಲದ ಮೇಲೆ ಹಾಸಿ ಪ್ರಾರ್ಥಿಸಿ ನಿಂತಾಗ; ಶಂಕಚಕ್ರ ಗದಾಹಸ್ತೆಯಾದ ಮಹಾಲಕ್ಷ್ಮಿ ಶಿಲಾಮೂರ್ತಿಯ ರೂಪದಲ್ಲಿ ಬರುತ್ತಾಳೆ. ಆ ಮೂರ್ತಿಯನ್ನು ಮನೆಗೆ ತೆಗೆದುಕೊಂಡು ಹೋಗಿ ಪೂಜೆ ಮಾಡಲು ಆರಂಭಿಸುತ್ತಾನೆ. ಆ ನಂತರ ಆತ ಅಷ್ಟೈಶ್ವರ್ಯ ಹೊಂದಿ ದಾನ-ಧರ್ಮಗಳನ್ನು ಮಾಡುತ್ತ ಬಹಳ ಪ್ರಸಿದ್ಧಿ ಹೊಂದುತ್ತಾನೆ.

ದಿನಕಳೆದಂತೆ ವಯೋವೃದ್ಧನಾದ ಅಬ್ಬಯ್ಯ ತನ್ನ ಕಾಲ ನಂತರ ಪೂಜೆ ಮುಂದುವರೆಯಬೇಕೆಂಬ ಕಾರಣಕ್ಕೆ ಮಹಾಲಕ್ಷ್ಮಿ ಮೂರ್ತಿಯನ್ನು ಊರಿನಲ್ಲಿ ಪ್ರತಿಷ್ಠಾಪಿಸುತ್ತಾನೆ. ಆದರೆ ಆತನ ಕಾಲ ನಂತರ ಪೂಜೆ ಪುನಸ್ಕಾರಗಳು ನಿಂತು ದೇವಾಲಯದ ಸುತ್ತ ಗಿಡಮರಗಳು ಬೆಳೆದುಕೊಂಡಿರುತ್ತವೆ. ಇದಾಗಿ ಶತಶತಮಾನಗಳೇ ಕಳೆದ ನಂತರ ಗ್ರಾಮದ ಶಾನುಬೋಗರ ಮನೆಗೆ ಸೊಸೆಯಾಗಿ ಬಂದ ಕಮಲಮ್ಮನವರಿಗೂ; ಅಬ್ಬಯ್ಯನವರಿಗೆ ಕೇಳಿಸಿದಂತೆಯೇ ಲಕ್ಷ್ಮಿವಾಣಿ ಕೇಳಿಸಲು ಆರಂಭವಾಗುತ್ತದೆ. ಅದರಂತೆ ಕಮಲಮ್ಮನವರು ಆ ಪ್ರದೇಶವನ್ನು ಸ್ವಚ್ಛಗೊಳಿಸಿ ನೋಡಿದರೆ ಅಲ್ಲಿ ಮಹಾಲಕ್ಷ್ಮಿ ಮೂರ್ತಿ ಇರುತ್ತದೆ. ಅಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಮಲಮ್ಮನವರು ಪುನಃ ಪೂಜೆಯನ್ನು ಪ್ರಾರಂಭಿಸುತ್ತಾರೆ. ಅದೇ ಈಗ ಕೇವಲ 12 ಮನೆಗಳಿದ್ದ ಪುಟ್ಟ ಗ್ರಾಮ ಇಂದು ನಾಡಿನ ಪ್ರತಿಷ್ಠಿತ ಕ್ಷೇತ್ರವಾಗಿ ಬೆಳೆದಿದೆ.



ಗೊರವನಹಳ್ಳಿ ಶ್ರೀ ಮಹಾಲಕ್ಷ್ಮಿ ದೇವಸ್ಥಾನ

ಅಷ್ಟಸಿದ್ಧಿಯ ಜಾಗೃತ ಕ್ಷೇತ್ರ :

ಮಹಾಲಕ್ಷ್ಮಿಯನ್ನು ಆದಿಲಕ್ಷ್ಮಿ, ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ಧೈರ್ಯಲಕ್ಷ್ಮಿ, ಗಜಲಕ್ಷ್ಮಿ, ಸಂತಾನ ಲಕ್ಷ್ಮಿ, ವಿಜಯಲಕ್ಷ್ಮಿ, ವಿದ್ಯಾಲಕ್ಷ್ಮಿ ಎಂಬುದಾಗಿ ಅಷ್ಟಲಕ್ಷ್ಮಿಯರ ರೂಪದಲ್ಲಿ ಪೂಜಿಸಲಾಗುತ್ತದೆ. ಅಂತೆಯೇ ಗೊರವನಹಳ್ಳಿ ಲಕ್ಷ್ಮಿಯನ್ನು ಭಕ್ತಿಯಿಂದ ಪೂಜಿಸಿದರೆ ಅಷ್ಟಸಿದ್ಧಿಗಳು ಸಿದ್ಧಿಸುತ್ತವೆ ಎಂಬುದು ಕಮಲಮ್ಮನವರ ಮೊಮ್ಮಗಳಾದ ಶ್ರೀಲಕ್ಷ್ಮಿಯವರ ಮಾತು.

ಅವರೇ ವಿವರಿಸುವಂತೆ ಲಕ್ಷ್ಮಿಯ ಸಾಕ್ಷಾತ್ಕಾರ ಪಡೆದಿರುವ ಕಮಲಮ್ಮನವರು ಮಹಾಲಕ್ಷ್ಮಿ ಸೇವೆಯ ವಿವಿಧ ನಿಯಮಗಳನ್ನು ಮಾಡಿದ್ದಾರೆ. ಪ್ರತಿ ಸಿದ್ಧಿಗೂ ಒಂದೊಂದು ಪೂಜಾ ವಿಧಾನವಿದ್ದು, ಕಂಕಣಭಾಗ್ಯಕ್ಕೆ ಕರಿಮಣಿ ಪೂಜೆ, ಮುತ್ತೈದೆ ಭಾಗ್ಯಕ್ಕೆ ಬಳೆ ಪೂಜೆ, ಸಂತಾನ ಭಾಗ್ಯಕ್ಕೆ ಬೆಳ್ಳಿನಾಗಪ್ಪನ ಪೂಜೆಗಳಿವೆ. ಬೇರೆ ಯಾವುದೇ ಸಂಕಲ್ಪಕ್ಕಾದರೂ ಹಿಡಿಯಕ್ಕಿ ಪೂಜೆ ಮಾಡುವ ವಿಧಾನವಿದೆ.

ಮಹಾಲಕ್ಷ್ಮಿ ಕ್ಷೇತ್ರಕ್ಕೆ ಬಂದು ಯಾವುದೇ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಸಂಕಲ್ಪ ಮಾಡುವ ಭಕ್ತರು ಸಂಕಲ್ಪ ಈಡೇರುವವರೆಗೂ ಪ್ರತಿದಿನ ತಮ್ಮ ಮನೆಯಲ್ಲಿ ಲಕ್ಷ್ಮಿಯನ್ನು ನೆನೆದು ಒಂದು ಹಿಡಿ ಅಕ್ಕಿಯನ್ನು ಎತ್ತಿಡಬೇಕು. ತಮ್ಮ ಸಂಕಲ್ಪ ಈಡೇರಿದ ಮೇಲೆ ಆ ಅಕ್ಕಿಯನ್ನು ತಂದು ಗೊರವನಹಳ್ಳಿ ದೇವಾಲಯಕ್ಕೆ ಅರ್ಪಿಸಬೇಕು. ಅದನ್ನು ಇಲ್ಲಿನ ಭಕ್ತರ ದಾಸೋಹಕ್ಕೆ ಬಳಸಲಾಗುತ್ತದೆ. ಇದು ಅತ್ಯಂತ ಪ್ರಸಿದ್ಧ ಸೇವೆಯಾಗಿದ್ದು ಲಕ್ಷಾಂತರ ಜನ ತಮ್ಮ ಸಂಕಲ್ಪ ಈಡೇರಿಸಿಕೊಂಡ ಉದಾಹರಣೆಗಳು ಇಲ್ಲಿವೆ.

ಹೋಗುವ ಮಾರ್ಗ :

ಬೆಂಗಳೂರಿನಿಂದ 82ಕಿ.ಮೀ. ದೂರವಿದ್ದು, ದಾಬಸ್‌ಪೇಟೆಯಿಂದ ಕೊರಟಗೆರೆ ಮಾರ್ಗವಾಗಿ ಗೊರವನಹಳ್ಳಿ ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಾಡದ ಹೂವು, ಆರದ ದೀಪ..!
ಹಾಸನಾಂಬೆಯ ಪ್ರತ್ಯಕ್ಷ ಪವಾಡ

ದಿನಾಂಕ : 05-10-2017

ಭಗವಂತನ ಕೃಪೆಯಿದ್ದರೆ ಅರಳಿದ ಹೂವು ಬಾಡುವುದಿಲ್ಲ. ಹಚ್ಚಿದ ದೀಪ ಆರುವುದಿಲ್ಲ. ಇಂದಿನ ಆಧುನಿಕ ಯುಗದಲ್ಲೂ ಈ ಮಾತು ನಿಜವಾಗಿ ಪವಾಡ ದರ್ಶನ ನೀಡುತ್ತಿರುವ ಕ್ಷೇತ್ರ; ಹಾಸನದ ತಾಯಿ ಹಾಸನಾಂಬೆ ಕ್ಷೇತ್ರ.

ದೇವಾಲಯಗಳೆಂದರೆ ಪ್ರತಿನಿತ್ಯ ಪೂಜೆ, ಪುನಸ್ಕಾರ, ಆರತಿ, ದರ್ಶನ ಹೀಗೆ ನಡೆಯುತ್ತವೆ. ಆದರೆ ಹಾಸನ ನಗರದ ಅಧಿದೇವತೆ, ಭಕ್ತರ ಪಾಲಿನ ಜಗನ್ಮಾತೆ ಹಾಸನಾಂಬೆಯ ದರ್ಶನ ಮಾಡಬೇಕೆಂದರೆ ಭಕ್ತರು ಒಂದು ವರ್ಷ ಕಾಯಬೇಕು. ತಾಯಿ ಹಾಸನಾಂಬೆಯ ದೇವಾಲಯದ ಬಾಗಿಲು ತೆರೆಯುವುದು ವರ್ಷಕ್ಕೆ ಒಮ್ಮೆ ಮಾತ್ರ.

ಪ್ರತಿವರ್ಷ ಆಶ್ವೀಜ ಮಾಸದ ಪೌರ್ಣಿಮೆಯ ನಂತರ ಬರುವ ಗುರುವಾರದಂದು ಶಾಸ್ತ್ರೋಕ್ತವಾಗಿ ಬಾಗಿಲನ್ನು ತೆರೆಯಲಾಗುತ್ತದೆ. ನಂತರ ಬಲಿಪಾಡ್ಯಮಿಯ ಮಾರನೇಯ ದಿನ ಬಾಗಿಲನ್ನು ಮುಚ್ಚಲಾಗುತ್ತದೆ. ಈ ವರ್ಷ ಇದೇ ಅ.12 ಗುರುವಾರದಿಂದ ಆರಂಭವಾಗುವ ಹಾಸನಾಂಭೆಯ ದರ್ಶನ ಅ.21ರ ವರಗೆ ನಡೆಯಲಿದೆ.


ಶ್ರೀ ಹಾಸನಾಂಬೆ

ಪ್ರತಿವರ್ಷ ದೇವಾಲಯದ ಬಾಗಿಲನ್ನು ತೆಗೆದಾಗ ನೆರೆದ ಜನರಿಗೆ ಅಲ್ಲೊಂದು ಅಚ್ಚರಿ ದರ್ಶನವಾಗುತ್ತದೆ. ಕಳೆದ ವರ್ಷ ಬಾಗಿಲು ಹಾಕುವಾಗ ಬೆಳಗಿಸಿದ್ದ ನಂದಾದೀಪವು ತಾಯಿ ಎದುರಿನಲ್ಲಿ ಪ್ರಜ್ವಲಿಸುತ್ತಿರುತ್ತದೆ. ಜೊತೆಗೆ ದೇವಿಗೆ ಅಲಂಕಾರ ಮಾಡಿದ್ದ ಹೂವುಗಳು ಬಾಡದೆ ಹಾಗೆಯೇ ನಳನಳಿಸುತ್ತಿರುತ್ತವೆ. ಇದು ತಾಯಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಸನಾಂಬೆಯ ಪ್ರತ್ಯಕ್ಷ ಪವಾಡ. ಒಂದು ವರ್ಷದ ವರೆಗೆ ಆರದ ದೀಪ ಬಾಡದ ಹೂವು ಭಕ್ತರನ್ನು ಭಕ್ತಿಯ ಪರಾಕಾಷ್ಠೆಗೆ ಕೊಂಡೊಯ್ಯುತ್ತದೆ.

ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ :

ಹಾಸನಾಂಬೆ ದೇಗುಲ ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಕ್ಷೇತ್ರ, ಪೌರಾಣಿಕ ಕತೆಯ ಪ್ರಕಾರ ಕಾಶಿಯಿಂದ ವಾಯು ವಿಹಾರಕ್ಕೆ ಬಂದ ಸಪ್ತಮಾತೃಕೆಯರಾದ ಬ್ರಾಹ್ಮೀದೇವಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ ಮತ್ತು ಚಾಮುಂಡಿ ದೇವಿಯರು ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಕಂಡು ಇಲ್ಲಿಯೇ ನೆಲೆಯಾಗಿದ್ದಾರೆ ಎನ್ನಲಾಗುತ್ತದೆ. 3 ವಿವಿಧ ಸ್ಥಳಗಳಲ್ಲಿ ನೆಲೆಯಾಗಿರುವ ಸಪ್ತ ಮಾತೃಕೆಯರಲ್ಲಿ ವೈಷ್ಣವಿ, ಮಹೇಶ್ವರಿ ಮತ್ತು ಕೌಮಾರಿಯರು ಹುತ್ತದ ರೂಪದಲ್ಲಿ ನೆಲೆಯಾದ ಕ್ಷೇತ್ರವೇ ಹಾಸನಾಂಬೆ ಸನ್ನಿಧಾನ.

ಸಪ್ತಮಾತೃಕೆಯರ ಸಹೋದರನಾಗಿದ್ದ ಸಿದ್ದೇಶ್ವರನು ನಿಯಮ ಮೀರಿ ಅನ್ಯರ ಮನೆಯಲ್ಲಿ ನೀರು ಸೇವನೆ ಮಾಡಿದ್ದರಿಂದ ಕೋಪಗೊಂಡ ಸಪ್ತಮಾತೃಕೆಯರು ನೀನು ಮಾಡಿದ ತಪ್ಪಿಗಾಗಿ ವರ್ಷಕ್ಕೆ ಒಮ್ಮೆ ಮಾತ್ರ ನಿನಗೆ ನಮ್ಮ ದರ್ಶನ ದೊರೆಯಲಿ ಎಂದು ಶಾಪವಿಡುತ್ತಾರೆ. ಅದರಂತೆ ಬಾಗಿಲು ಮುಚ್ಚುವ ಕೊನೆಯ ದಿವಸ ಸಿದ್ದೇಶ್ವರ ಜಾತ್ರೆಯಂದು ಹಾಸನಾಂಬೆ ಮತ್ತು ಸಿದ್ದೇಶ್ವರ ಸ್ವಾಮಿಯ ಮುಖಾಮುಖಿ ಪದ್ದತಿ ನಡೆಯುತ್ತದೆ. ಈ ಹಿನ್ನೆಲೆಯಲ್ಲಿ ವರ್ಷಕ್ಕೆ ಒಮ್ಮೆ ದೇವಾಲಯದ ಬಾಗಿಲು ತೆರೆಯುವ ಪದ್ಧತಿ ರೂಢಿಯಲ್ಲಿದೆ.

ಚೋಳರ ಕಾಲದ ಪಾಳೇಯಗಾರ ಸಂಜೀವನಾಯಕನಿಗೆ ದೇವಿ ಪ್ರತ್ಯಕ್ಷಳಾಗಿ ನಾನು ಇಲ್ಲಿ ನೆಲೆಯಾಗುವುದಾಗಿ, ತನಗೆ ದೇವಾಲಯವನ್ನು ಕಟ್ಟಿಸುವಂತೆ ಹೇಳುತ್ತಾಳೆ. ಅದರಂತೆ 12ನೇ ಶತಮಾನದಲ್ಲಿ ಈಗಿರುವ ದೇವಾಲಯವು ನಿರ್ಮಾಣವಾಗಿದೆ. ಮೊದಲು ಸಿಂಹಾಸನಪುರಿ ಎಂದು ಕರೆಯಲಾಗುತ್ತಿದ್ದ ಊರಿಗೆ ಹಸನ್ಮುಖಿಯಾಗಿ ಹಾಸನಾಂಬೆ ನೆಲೆಯಾಗಿದ್ದರಿಂದ ಹಾಸನ ಎಂಬ ಹೆಸರು ಬಂದಿದೆ.

ಉಗ್ರರೂಪಿ ದೇವಿ ದೃಷ್ಠಿ:

ವರ್ಷದವರೆಗೂ ಬಾಗಿಲು ಮುಚ್ಚಿರುವ ದೇವಾಲಯದ ಬಾಗಿಲು ತೆರೆದಾಗ ದೇವಿಯ ದೃಷ್ಠಿ ಉಗ್ರವಾಗಿರುತ್ತದೆ ಎಂಬ ಕಾರಣದಿಂದ ಬಾಗಿಲು ತೆರೆಯುವ ಮುನ್ನ ಬಾಗಿಲಿಗೆ ನೇರವಾಗಿ ಬಾಳೆ ಕಂದನ್ನು ನೆಡಲಾಗಿರುತ್ತದೆ. ಬಾಗಿಲು ತೆಗೆದ ಕೂಡಲೇ ದೇವಿಯ ಉಗ್ರ ದೃಷ್ಠಿ ಬಾಳೆಕಂದಿನ ಮೇಲೆ ಬೀಳುತ್ತದೆ. ನಂತರ ತಳವಾರ ಸಮುದಾಯದವರು ಬಾಳೆಕಂದನ್ನು ಪೂಜಿಸಿ ಅದನ್ನು ಕತ್ತರಿಸುತ್ತಾರೆ. ಈ ಪ್ರಕ್ರಿಯೆಯ ನಂತರ ದೇವಿ ದರ್ಶನ ಆರಂಭವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ ಹಾಸನಾಂಬ ದೇವಸ್ಥಾನ

ದೇವಾಲಯದ ಬಾಗಿಲು ತೆರೆದು ಮತ್ತೆ ಮುಚ್ಚುವವರೆಗೂ ಈ ಭಾಗದ ಯಾರ ಮನೆಯಲ್ಲೂ ಎಣ್ಣೆಯ ಒಗ್ಗರಣೆ, ಕರಿಯುವ ತಿಂಡಿ ಪದಾರ್ಥವನ್ನು ಮಾಡುವುದಿಲ್ಲ. ಕಾರಣ ಅದರ ಹೊಗೆಯಿಂದ ದೇವಿಗೆ ಕಣ್ಣು ಬಿಟ್ಟು ಭಕ್ತರಿಗೆ ದರ್ಶನ ನೀಡುವುದಕ್ಕಾಗುವುದಿಲ್ಲ ಎಂಬ ನಂಬಿಕೆ ಇದೆ.

ಕಲಿಗಾಲದ ಅಂತ್ಯದ ಕುರುಹು :

ಹಿಂದೊಮ್ಮೆ ಪರಮ ಭಕ್ತೆಯಾಗಿದ್ದ ಗೃಹಿಣಿಯೋರ್ವಳಿಗೆ ಆಕೆಯ ಅತ್ತೆ ಇನ್ನಿಲ್ಲದ ಹಿಂಸೆ ನೀಡಿದಾಗ, ಅದರಿಂದ ನೊಂದು ಹಾಸನಾಂಬೆಯನ್ನು ಪ್ರಾರ್ಥಿಸುತ್ತಾಳೆ. ಆಗ ದೇವಿಯು ಪ್ರತ್ಯಕ್ಷಳಾಗಿ ತನ್ನ ಸಾನಿಧ್ಯದಲ್ಲೇ ನೆಲೆಯಾಗುವಂತೆ ಆಶೀರ್ವದಿಸುತ್ತಾಳೆ. ಆ ಪ್ರಕಾರ ಸೊಸೆಕಲ್ಲು ಎಂದು ದೇವಾಲಯದಲ್ಲಿದೆ.

ಸೊಸೆ ಕಲ್ಲು ಪ್ರತಿ ವರ್ಷವೂ ಹಾಸನಾಂಬೆಯ ಕಡೆಗೆ ಚಲಿಸುತ್ತಿದ್ದು, ಅದು ಮುಂದೊಂದು ದಿನ ದೇವಿಯ ಪಾದದಲ್ಲಿ ಲೀನವಾಗುತ್ತದೆ. ಅಲ್ಲಿಗೆ ಕಲಿಗಾಲವು ಅಂತ್ಯ ಕಾಣುತ್ತದೆ ಎಂದು ಇಲ್ಲಿನ ಹಿರಿಯರು ವಿಶ್ಲೇಷಿಸುತ್ತಾರೆ.

ಹೋಗುವ ಮಾರ್ಗ :

ಬೆಂಗಳೂರು ಹಾಸನ ರಾಷ್ಟ್ರೀಯ ಹೆದ್ದಾರಿ ಮೂಲಕ 180ಕಿ.ಮೀ. ದೂರವಿದ್ದು, ಬಸ್ಸು ಮತ್ತು ರೈಲಿನ ಮೂಲಕ ಹೋಗಬಹುದು. ವರ್ಷಕ್ಕೆ ಒಂದು ಬಾರಿ ಮಾತ್ರ ಇಲ್ಲಿ ದರ್ಶನಕ್ಕೆ ಅವಕಾಶವಿರುತ್ತದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಲದೀಪ ಬೆಳಗಿದ ಬಂಡೆಪ್ಪಸ್ವಾಮಿ
ಜ್ಯೋತಿಯನ್ನು ಪೂಜಿಸುವ ಜಾಗೃತ ಕ್ಷೇತ್ರ ಸಾಲವಡಗಿ

ದಿನಾಂಕ : 26–10–2017

ಬೆಳಕು ಅರಿವಿನ ಸಂಕೇತ, ಜ್ಞಾನದ ಪ್ರತಿರೂಪ, ಆತ್ಮ ಸಾಕ್ಷಾತ್ಕಾರಕ್ಕೆ ಪರ್ಯಾಯ, ಅಲೌಕಿಕ ಬದುಕಿನ ಅಂತಿಮ ಗುರಿಯನ್ನು ತೋರುವ ಕುರುಹು. ಇಂತಹ ಬೆಳಕಿಗೆ ಎಲ್ಲ ಧರ್ಮ ಮತ್ತು ಸಂಪ್ರದಾಯಗಳಲ್ಲೂ ಮಾನ್ಯತೆ ಇದೆ. ಯಾವುದೇ ಕಾರ್ಯಗಳಿರಲಿ, ಸಮಾರಂಭಗಳಿರಲಿ, ಜ್ಯೋತಿ ಬೆಳಗಿಸುವುದು ಶುಭಕಾರಕ ಎಂಬುದು ಪದ್ಧತಿ. ಇಂತಹ ಜ್ಯೋತಿಯನ್ನು ಪ್ರಮುಖ ದೈವದಂತೆ ಪೂಜಿಸುವ ಅಪರೂಪದ ಕ್ಷೇತ್ರ ಬಂಡಿಗಣಿ ಸಾಲವಡಗಿ.

ವಿಜಯಪುರ ಜಿಲ್ಲೆ ಮುದ್ದೆಬಿಹಾಳ ತಾಲೂಕಿನಲ್ಲಿರುವ ಬಂಡಿಗಣಿ ಸಾಲವಡಗಿ ಒಂದು ಪುಟ್ಟ ಗ್ರಾಮ. ಮಹಾತಪಸ್ವಿ ಶಿರಹಟ್ಟಿಯ ಪಕೀರೇಶ್ವರ ಸ್ವಾಮಿಗಳ ಶಿಷ್ಯರಾಗಿದ್ದ ಶಿವಯೋಗಿ ಬಂಡೆಪ್ಪಯ್ಯ ಸ್ವಾಮಿಗಳು ಹೊತ್ತಿಸಿದ ಜ್ಯೋತಿ ಕಳೆದ 6 ಶತಮಾನಗಳಿಂದ ಇಲ್ಲಿ ನಿರಂತರವಾಗಿ ಬೆಳಗುತ್ತಿದೆ.


ಸಾಲವಡಗಿ ನಂದಾದೀಪ

ಬಂಡೆಪ್ಪಯ್ಯ ಸ್ವಾಮಿಯ ಮಠದಲ್ಲಿ ಯಾವುದೇ ದೇವರ ಮೂರ್ತಿಗಳಿಲ್ಲ, ಗವಿ–ಗದ್ದುಗೆಗಳಿಲ್ಲ. ಗರ್ಭಗುಡಿಯೊಳಗಿರುವುದು 6 ಶತಮಾನಗಳಿಂದ ನಿರಂತರವಾಗಿ ಉರಿಯುತ್ತಿರುವ ನಂದಾದೀಪಗಳು. ದೀಪವು ಎಲ್ಲರಿಗೂ, ಎಲ್ಲೆಡೆಗೂ ಸಮನಾಗಿ ತನ್ನ ಬೆಳಕನ್ನು ನೀಡುತ್ತದೆ. ಇಲ್ಲಿಗೆ ನಡೆದುಕೊಳ್ಳುವ ಗ್ರಾಮಸ್ಥರು ಹಾಗೂ ಸಾವಿರಾರು ಭಕ್ತರು ಜ್ಯೋತಿಯನ್ನೇ ಆರಾಧ್ಯ ದೈವದಂತೆ ಪೂಜಿಸುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿರುವ ಜ್ಯೋತಿಗಳು ಸಾಮಾನ್ಯವಾದವಲ್ಲ; ಶ್ರೀಬಂಡೆಪ್ಪಯ್ಯ ಸ್ವಾಮಿಗಳು ನೀರನ್ನು ಹಾಕಿ ಹೊತ್ತಿಸಿದ್ದ ಜ್ಯೋತಿಗಳಿವು. ಇಲ್ಲಿ ನಾಲ್ಕು ಎಕರೆ ವಿಸ್ತೀರ್ಣದ ಮಠವನ್ನು ಕಟ್ಟಿ ಮುಗಿಸುವವರೆಗೂ ಇಲ್ಲಿ ಜಲದೀಪ ಹಾಗೆಂಯೇ ಉರಿಯುತ್ತಿದ್ದವಂತೆ. ನಂತರ ಭಕ್ತರು ಎಣ್ಣೆಯುನ್ನು ಹಾಕಿ ದೀಪವನ್ನು ಬೆಳಗಿಸುತ್ತಿದ್ದು, ಇಂದಿಗೂ ಹಾಗೇ ಪ್ರಜ್ವಲಿಸುತ್ತಿವೆ.

ಸಾಲವಡಗಿ ವಿಶೇಷ ತೀರ್ಥ

ಕಾಣಿಕೆ ಡಬ್ಬಿ ಇಲ್ಲದ ಧಾರ್ಮಿಕ ಕ್ಷೇತ್ರ!

ಧಾರ್ಮಿಕ ಕ್ಷೇತ್ರಗಳೆಂದರೆ ಅಲ್ಲಿ ಕಾಣಿಕೆ ಡಬ್ಬಿ, ಸೇವಾ ಪಟ್ಟಿ, ವಂತಿಗೆ, ಚಂದಾ ವಸೂಲಿ ಇತ್ಯಾದಿ ಭಕ್ತರ ಸೇವೆಗಳು ಸಹಜ. ಆದರೆ ಈ ಕ್ಷೇತ್ರದಲ್ಲಿ ಯಾವುದೇ ಕಾಣಿಕೆ ಡಬ್ಬಿಗಳಿಲ್ಲ. ಹಣಸಂಗ್ರಹಕ್ಕಾಗಿ ಚಂದಾವಸೂಲಿ, ಸೇವಾ ರಶೀದಿ ಇತ್ಯಾದಿ ಮಾಡುವ ಪದ್ದತಿ ಇಲ್ಲ. ಇದೊಂದು ಪವಿತ್ರ ದಾಸೋಹ ಕ್ಷೇತ್ರವಾಗಿದ್ದು ಮಠದ ಪರಂಪರೆಯವರೇ ಭಕ್ತರಿಗೆ ದಾಸೋಹಾದಿಗಳನ್ನು ಮಾಡುತ್ತಾರೆ.

ವರ್ಷಕ್ಕೆ ಎರಡು ಬಾರಿ ದೊಡ್ಡ ಜಾತ್ರೆಗಳು ನಡೆಯುತ್ತವೆ. ಮೇ ತಿಂಗಳಿನಲ್ಲಿ ಬರುವ ಆಗಿಹುಣ್ಣಿಮೆಯಂದು ರಥೋತ್ಸವ ಮತ್ತು ಷಷ್ಠಿಯಂದು ಕಾರ್ತೀಕ ದೀಪೋತ್ಸವ ಕಾರ್ಯಕ್ರಮವು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಅಂತಹ ಬೃಹತ್ ಜಾತ್ರೆಯಲ್ಲೂ ಕೂಡಾ ಯಾರಿಂದಲೂ ಹಣ ವಂತಿಗೆ ಎತ್ತುವುದಿಲ್ಲ. ಬದಲಿಗೆ ಶ್ರೀಮಠದಿಂದಲೇ ಸಾವಿರಾರು ಜನರಿಗೆ ದಾಸೋಹ ಮಾಡಲಾಗುತ್ತದೆ. ಜೊತೆಗೆ ಇದೊಂದು ಭಾವೈಕ್ಯತೆಯ ಕೇಂದ್ರವೂ ಆಗಿದ್ದು, ಇಲ್ಲಿನ ಬಂಡೆಪ್ಪಯ ಸ್ವಾಮಿಗಳ ಗುರುಗಳು ಪಕೀರೇಶ್ವರ ಪರಂಪರೆಯವರಾದ್ದರಿಂದ; ಜಾತ್ರೆಯ ನಂತರ ಮುಸ್ಲಿಂ ಬಾಂಧವರಿಗೆ ಪ್ರತ್ಯೇಕವಾಗಿ ದಾಸೋಹ ಮಾಡಿಸುವ ಪದ್ಧತಿಯೂ ಇದೆ.

ರಾಜರ ಕಾಲದಿಂದಲೂ ಸಾವಿರಾರು ಎಕರೆ ಭೂಮಿ ಈ ಮಠದ ಅಧೀನದಲ್ಲಿತ್ತು. ಆ ಜಮೀನಿನಲ್ಲಿ ಮಠದ ಸೇವೆ ಮಾಡುವ ಪಾರಂಪರಿಕ ಕುಟುಂಬಗಳಿಗೆ ಜಮೀನು ನೀಡಲಾಗಿದ್ದು, ಇಂದಿಗೂ ಸರ್ಕಾರಿ ದಾಖಲೆಗಳಲ್ಲಿ ಕೂಡಾ ಆಯಾಯ ಜಮೀನುಗಳು ಮಠದ ಹೆಸರಿನಲ್ಲೇ ಇನಾಮು ಭೂಮಿ ಎಂದು ನಮೂದಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಂಡೆಪ್ಪಯ್ಯನ ಮಠದ ಇತಿಹಾಸ:

ಸಾಲವಡಗಿ ಮಠ

ಕಲಬುರಗಿ ಜಿಲ್ಲೆ ಜೇವರ್ಗಿ ತಾಲೂಕಿನ ಮಾಸಣಗೆರೆ ಎಂಬ ಗ್ರಾಮ ಬಂಡೆಪ್ಪಸ್ವಾಮಿಗಳ ಹುಟ್ಟೂರು. ಗದಗ ಜಿಲ್ಲೆಯ ಶಿರಹಟ್ಟಿ ಪಕೀರೇಶ್ವರ ಸ್ವಾಮಿಗಳ ಕೃಪೆಯಿಂದ ಜನಿಸಿದ ಇವರ ಪೂರ್ವಾಶ್ರಮದ ಹೆಸರು ಸಿದ್ದಯ್ಯ. ಗುರುಗಳ ಅಣತಿಯಂತೆ ಪೋಷಕರು ಸಿದ್ಧಯನನ್ನು ಫಕೀರೇಶ್ವರ ಮಠಕ್ಕೆ ನೀಡಿರುತ್ತಾರೆ. ಮಠದಲ್ಲಿಯೇ ಬೆಳೆದು ದೊಡ್ಡವನಾದ ಸಿದ್ದಯ್ಯನಿಗೆ ಫಕೀರಸ್ವಾಮಿಗಳು ಮುಂದೆನಿಂತು ಮದುವೆ ಮಾಡಿ ತಮ್ಮಲ್ಲಿದ್ದ ಕುಡಗೋಲನ್ನೇ ಉಡುಗೊರೆಯಾಗಿ ನೀಡುತ್ತಾರೆ. ಅಧ್ಯಾತ್ಮ ಆಸಕ್ತಿಯ ಕಾರಣದಿಂದ ಸಿದ್ದಯ್ಯ ಲೋಕಸಂಚಾರ ಹೊರಡುತ್ತಾರೆ.

ಹೀಗೆ ಬರುವಾಗ ಮಠಕಲ್ ದೇವನಹಳ್ಳಿ ಎಂದು ಕರೆಯುತ್ತಿದ್ದ ಈ ಸ್ಥಳದಲ್ಲಿ ಯಥೇಚ್ಛವಾಗಿದ್ದ ಕಲ್ಲುಬಂಡೆಯನ್ನು ಕಂಡು ಇಲ್ಲಿ ಮಠವನ್ನು ಕಟ್ಟಬೇಕೆಂದು ಸಂಕಲ್ಪ ಮಾಡಿ, ಮಠ ಕಟ್ಟಲು ಪ್ರಶಸ್ತ ಸ್ಥಳವಾದರೆ ಇಲ್ಲಿ ಗಂಗಾಮಾತೆಯು ಉದಯಿಸಲೆಂದು ಗುರುಗಳು ನೀಡಿದ್ದ ಕುಡಗೋಲಿನಿಂದ ಬಂಡೆಯ ಮೇಲೆ ಬಡಿಯುತ್ತಾರೆ. ಗುಪ್ತಗಾಮಿನಿಯಾಗಿ ಬಂದಿದ್ದ ಕೃಷ್ಣೆಯು ಧಾರಕಾರವಾಗಿ ಹರಿಯಲು ಆರಂಭಿಸುತ್ತಾಳೆ. ಕೇವಲ ಒಂದೂವರೆ ಅಡಿ ಆಳದ, ಒಂದು ಅಡಿ ಚಚೌಕದ ಸಣ್ಣ ಹೊಂಡದಿಂದ 10ಹೆಚ್ಪಿ ಮೋಟಾರ್ ನಿಂದಲೂ ಖಾಲಿ ಮಾಡಲಾಗದಷ್ಟು ಶುದ್ಧ ಕುಡಿಯುವ ನೀರು ಇಂದಿಗೂ ಇಲ್ಲಿ ನಿಂತರವಾಗಿ ಹರಿಯುತ್ತಿದೆ. ಇದೇ ನೀರಿನಿಂದ ದೀಪ ಪ್ರಜ್ವಲಿಸಿದ್ದಾರೆಂದು ಹೇಳಲಾಗುತ್ತದೆ.

ತನ್ನ ಅಪ್ಪಣೆ ಇಲ್ಲದೆ ಮಠವನ್ನು ಕಟ್ಟುತ್ತಿದ್ದಾರೆಂಬ ಕಾರಣಕ್ಕೆ ಇಲ್ಲಿನ ರಾಜನಾಗಿದ್ದ ಮೊದಲನೇ ಆದಿಲ್ ಶಾಹಿಯು ಸ್ವಾಮಿಗಳನ್ನು ಬಂಧಿಸಿಡುತ್ತಾನೆ. ಆದರೆ ಆದಿಲ್ ಶಾಹಿಯ ರಾಜಗುರುಗಳಾಗಿದ್ದ ಫಕೀರೇಶ್ವರ ಸ್ವಾಮಿಗಳು ಕನಸಿನಲ್ಲಿ ಬಂದು ನೀನು ಬಂಧಿಸಿರುವುದು ನನ್ನ ಶಿಷ್ಯನೆಂದು ಹೇಳುತ್ತಾರೆ. ಆಗ ತನ್ನ ತಪ್ಪಿನ ಅರಿವಾಗಿ ಸ್ವಾಮಿಗಳನ್ನು ಬಿಟ್ಟು ಮಠಕ್ಕೆ 24 ಹಳ್ಳಿಗಳ ಜಾಹಗೀರ್ ಹಾಕಿಸಿ 1400 ಎಕರೆ ಭೂಮಿಯನ್ನು ಉಂಬಳಿ ನೀಡುತ್ತಾನೆ. ಆ ಪೈಕಿ ಅರ್ಧಕರ್ದ ಭೂಮಿ ಇನಾಮು ಹೋಗಿದ್ದು ಉಳಿದ ಭೂಮಿಯನ್ನು ಮುನ್ನಡೆಸುತ್ತಿರುವುದಾಗಿ ಮಠದ ವಂಶಸ್ಥರು ವಿವರಿಸುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಠವನ್ನು ಕಟ್ಟಿ ಇಲ್ಲೇ ಇದ್ದ ಶಿಷ್ಯನನ್ನು ವಾಪಸ್ಸು ಕರೆದೊಯ್ಯಬೇಕೆಂದು ಶಿರಹಟ್ಟಿಯಿಂದ ಫಕೀರಸ್ವಾಮಿಗಳು ಬಂದಾಗ; ಮರಳಿ ಹೋಗಲು ಮನಸ್ಸಿಲ್ಲದೆ ಬಂಡೆಯ ಕೆಳಗೆ ಅವಿತು ಕುಳಿತುಕೊಳ್ಳುತ್ತಾರೆ. ಅದನ್ನು ಕಂಡು "ಎದ್ದು ಬಾರಪ್ಪ ಬಂಡೆಪ್ಪಸ್ವಾಮಿ" ಎಂದು ಕರೆಯುತ್ತಾರೆ. ಅಂದಿನಿಂದ ಬಂಡೆಪ್ಪಸ್ವಾಮಿಗಳೆಂದೇ ಪ್ರಸಿದ್ಧರಾಗಿ ಕೊನೆಗೆ ಇಲ್ಲಿಯೇ ಐಕ್ಯರಾಗುತ್ತಾರೆ.

ಹೋಗುವ ಮಾರ್ಗ :

ಬೆಂಗಳೂರಿನಿಂದ 495 ಕಿ.ಮೀ. ದೂರವಿದ್ದು, ರಾ.ಹೆ.48ರ ಮೂಲಕ ಕೂಡಲಸಂಗಮ, ಮುದ್ದೇಬಿಹಾಳ ಮಾರ್ಗವಾಗಿ ತಾಳಿಕೋಟೆಗೆ ಹೋಗಿ ಅಲ್ಲಿಂದ ಬಂಡಿಗಣಿ ಸಾಲವಡಗಿ ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಗಲಾಪುರದ ನ್ಯಾಯ ದೇಗುಲ

ಗಡಿನಾಡಿನಲ್ಲಿ ಗುಡುಗಿದ ಶ್ರೀಲಿಂಗರಾಜ ಯೋಗಿಗಳು

ದಿನಾಂಕ : 09-11-2017

ಆಧುನಿಕ ಜೀವನಶೈಲಿ ಬದಲಾದಂತೆ ಮನುಷ್ಯನ ಬದುಕಿನ ರೀತಿ-ನೀತಿಗಳು ಬದಲಾಗುತ್ತಿವೆ. ನಿತ್ಯ ಜೀವನದ ನೋವು ನಲಿವುಗಳನ್ನು ನಿರ್ವಹಿಸಲು ವಿವಿಧ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಗ್ರಾಮೀಣರಲ್ಲಿ ಮೂಲ ನಂಬಿಕೆಯ ಆಚರಣೆಗಳನ್ನು ಇಂದಿಗೂ ನಡೆಸಿಕೊಂಡು ಹೋಗುತ್ತಿದ್ದಾರೆ. ಅಂತಹವರ ನಂಬಿಕೆಯನ್ನು ಬಲಪಡಿಸುವ ಹಲವು ಕ್ಷೇತ್ರಗಳಿವೆ. ಅವುಗಳಲ್ಲಿ ಗಡಿನಾಡಿನಲ್ಲಿರುವ ನಾಗಲಾಪುರವೂ ಒಂದು.

ಮಹಾತಪಸ್ವಿ ಶ್ರೀಲಿಂಗರಾಜ ಮಹಾಸ್ವಾಮಿಗಳು ಜೀವಂತ ಸಮಾಧಿಯಾದ ದಿವ್ಯಕ್ಷೇತ್ರವೇ ನಾಗಲಾಪುರ. ಭಕ್ತರ ಪಾಲಿಗೆ ಇದು ನ್ಯಾಯ ದೇಗುಲ ಎಂದೇ ಪ್ರಸಿದ್ಧಿ. ಪ್ರಾಚೀನ ಕಾಲದಲ್ಲಿ ಯಾವುದೇ ವ್ಯಾಜ್ಯ, ಪಂಚಾಯಿತಿಗಳಿದ್ದರೂ ಗ್ರಾಮದ ಹಿರಿಯರ ಮುಂದಾಳತ್ವದಲ್ಲಿ ಚರ್ಚೆಗಳಾಗಿ ತೀರ್ಮಾನಗಳಾಗುತ್ತಿದ್ದವು. ಬದಲಾದ ಪರಿಸ್ಥಿತಿಯಲ್ಲಿ ಒಂದು ಚಿಕ್ಕ ಸಮಸ್ಯೆ ಇದ್ದರೂ ಪೊಲೀಸು, ಕೋರ್ಟು ಅಂತ ವರ್ಷಾನುಗಟ್ಟಲೆ ಅಲೆದಾಡುತ್ತಾರೆ. ಆದರೆ ನಾಗಲಾಪುರ ಸುತ್ತಮುತ್ತಲೂ ಇಂದಿಗೂ ಜನ ಲಿಂಗರಾಜ ಸ್ವಾಮಿಗಳ ಗದ್ದುಗೆ ಮುಂದೆ ನಿಂತು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದಾರೆ.



ನಾಗಲಾಪುರದ ಗದ್ದುಗೆ

ಈ ಪ್ರದೇಶದ ಸುತ್ತಮತ್ತಲೂ ಎಲ್ಲಿಯೇ ಯಾವುದೇ ಕಳ್ಳತನಗಳಾದರೂ, ಲಿಂಗರಾಜಸ್ವಾಮಿಗಳ ಗದ್ದುಗೆಗೆ ಬಂದು ಕೇಳಿಕೊಂಡರೆ ಕಳ್ಳತನವಾದ ವಸ್ತುಗಳು ಮರಳಿ ಸಿಗುತ್ತವೆ ಎಂಬುದು ಪ್ರತೀತಿ. ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾತಿಗೆ ಸಾಕ್ಷಿಯಾಗಿ ಹಲವಾರು ಉದಾಹರಣೆಗಳನ್ನು ಇಲ್ಲಿ ನೋಡಬಹುದು. ಹೊಲಗದ್ದೆಯಲ್ಲಿನ ಬೆಳೆ ಕಳ್ಳತನ, ನೀರಿನ ಪೈಪ್ಗಳು, ಮೋಟಾರು ಇತ್ಯಾದಿ ಯಾವುದೇ ವಸ್ತುಗಳು ಕಳ್ಳತನವಾಗದಂತೆ ಗದ್ದುಗೆಯಲ್ಲಿ ಹರಕೆ ಕೈಗೊಳ್ಳುವುದನ್ನು ಕಾಣಬಹುದು. ಒಂದು ವೇಳೆ ಹರಕೆಯನ್ನು ಮೀರಿ ಯಾರೇ ಯಾವ ವಸ್ತುಗಳನ್ನು ಕಳ್ಳತನ ಮಾಡಿದರೆ ಸ್ವತಃ ಅವರೇ ಬಂದು ಆ ವಸ್ತುಗಳನ್ನು ಹಿಂದಿರುಗಿಸುವ ಘಟನೆಗಳು ಇಂದಿಗೂ ಇಲ್ಲಿ ನಡೆಯುತ್ತಿವೆ ಎಂಬುದು ಇಲ್ಲಿನ ಹಿರಿಯರ ಮಾತು.



ನಾಗಲಾಪುರದ ಸ್ವಾಮೀಜಿ

ಇದೊಂದು ಜಾಗೃತ ಕ್ಷೇತ್ರವಾಗಿದ್ದು, ಕೇವಲ ಕಳ್ಳತನ, ವ್ಯಾಜ್ಯಗಳಷ್ಟೇ ಅಲ್ಲದೆ ಮದುವೆ, ಮಕ್ಕಳು, ಆರೋಗ್ಯ, ಉದ್ಯೋಗ ಹೀಗೆ ಹಲವು ಬೇಡಿಕೆಗಳನ್ನು ಇಟ್ಟುಕೊಂಡು ಭಕ್ತರು ಇಲ್ಲಿಗೆ ಬರುತ್ತಾರೆ. ಭಕ್ತರ ಭಕ್ತಿಯ ಅಹವಾಲುಗಳಿಗೆ ನ್ಯಾಯ ದೊರೆಯುವುದರಿಂದ ನ್ಯಾಯದೇಗುಲವೆಂಬ ಭಾವನೆ ಭಕ್ತರಲ್ಲಿದೆ.

ನಾಗಲಾಪುರದ ಇತಿಹಾಸ ಮತ್ತು ಹಿನ್ನೆಲೆ:

ಕೋಲಾರ ಜಿಲ್ಲೆಯ ನಾಗಲಾಪುರವು ಸುದೀರ್ಘ ಇತಿಹಾಸವನ್ನು ಹೊಂದಿರುವ ಪುಟ್ಟ ಗ್ರಾಮ. ಮೂಲತಃ ಉತ್ತರ ದೇಶದಲ್ಲಿದ್ದ ಇಲ್ಲಿನ ಶ್ರೀವೀರಸಿಂಹಾಸನ ಸಂಸ್ಥಾನ ಮಠವು ಸಾವಿರ ವರ್ಷದ ಪರಂಪರೆಯನ್ನು ಹೊಂದಿದೆ. ಅಲ್ಲಿ ಕಾಣಿಸಿಕೊಂಡ ಕ್ಷಾಮ ಡಾಮರದಿಂದ ಶ್ರೀಲಿಂಗರಾಜ ಯೋಗೀಂದ್ರರು ತಮ್ಮ ಶಿಷ್ಯರೊಂದಿಗೆ ದಕ್ಷಿಣಕ್ಕೆ ಬರುತ್ತಾರೆ. ಕೋಲಾರ ಸಮೀಪದ ಶತಶೃಂಗ ಪರ್ವತದ ತಪ್ಪಲಿಗೆ ಬಂದ ಪೂಜ್ಯರನ್ನು ಪರೀಕ್ಷೆ ಮಾಡುವುದಕ್ಕಾಗಿ ಗ್ರಾಮಸ್ಥರು ಬೆಟ್ಟದ ಮೇಲೆ ವಾಸವಾಗಿದ್ದ ರಾಕ್ಷಸಿಯ ಬಳಿಗೆ ಕಳುಹಿಸುತ್ತಾರೆ. ರಾತ್ರಿ ಸಮಯದಲ್ಲಿ ಆ ರಾಕ್ಷಸಿಯು ಇವರನ್ನು ಭಕ್ಷಿಸುವುದಕ್ಕಾಗಿ ಪಾಳು ಮಂಟಪಕ್ಕೆ ಬಂದು ಯೋಗ ಸಮಾಧಿ ಸ್ಥಿತಿಯಲ್ಲಿದ್ದ ಗುರುಗಳನ್ನು ಕಂಡು ರಾಕ್ಷಸೀಯ ಗುಣವನ್ನು ಕಳೆದಕೊಂಡು ಗುರುಗಳಿಗೆ ಶರಣಾಗುತ್ತದೆ. ಜಮದಗ್ನಿ ಮುನಿಯೇ ಶಾಪದಿಂದ ಹೀಗೆ ಹೆಣ್ಣು ರಾಕ್ಷಸಿಯಾಗಿ ಇಲ್ಲಿ ನೆಲೆಯಾಗಿರುತ್ತದೆ. ಲಿಂಗರಾಜರು ಆಕೆಗೆ ಆಶೀರ್ವದಿಸಿ ಅಂತರಗಂಗೆಯ ಬಳಿ ನೆಲೆಯಾಗುವಂತೆ ಆಶೀರ್ವದಿಸುತ್ತಾರೆ.

ಈ ವಿಷಯ ಕೋಲಾರ ಪಾಳೆಯವನ್ನು ಆಳುತ್ತಿದ್ದ ಅಂಬಾಜಮ್ಮ ಎಂಬ ರಾಣಿಯವರೆಗೂ ತಲುಪುತ್ತದೆ. ಸ್ವತಃ ರಾಣಿಯೂ ಬಗೆ ಬಗೆಯ ಪರೀಕ್ಷೆಗಳನ್ನು ನಡೆಸಿ ಕೊನೆಗೆ ಗುರುಗಳಿಗೆ ಶರಣಾಗುತ್ತಾಳೆ. ಗುರುಗಳಿಗೆ ತಾವು ಇಲ್ಲಿಯೇ ನೆಲೆಯಾಗಬೇಕೆಂದು ಕೋರಿಕೊಂಡು ಭೂಮಿ ನೀಡುತ್ತಾಳೆ. ಆಕೆಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೋರಿಕೆಯಂತೆ ಶ್ರೀಲಿಂಗರಾಜ ಂಯೋಗಿಗಳು ಇಲ್ಲಿಂಯೇ ಮಠವನ್ನು ಸ್ಥಾಪಿಸಿ ತಮ್ಮ ಶಿಷ್ಯನಿಗೆ ಪಟ್ಟಕಟ್ಟಿ ತಾವು ಜೀವಂತ ಸಮಾಧಿಸ್ಥರಾಗುತ್ತಾರೆ.



ನಾಗಲಾಪುರ ಮಠ

ಗಡಿನಾಡ ಗುರುತಾಣ:

ಗಡಿನಾಡು ಕೋಲಾರ ಬರದನಾಡು ಎಂದೇ ಪ್ರಸಿದ್ಧಿ. ಈ ವರ್ಷ ವರುಣನ ಕೃಪೆಯಿಂದ ಸಮೃದ್ಧವಾದ ಮಳೆಯಾಗಿ ಎಲ್ಲೆಡೆ ಹಸಿರು ತಾಂಡವವಾಡುತ್ತಿದೆ. ಆಂಧ್ರಪ್ರದೇಶ, ತಮಿಳುನಾಡು ಮತ್ತು ಕರ್ನಾಟಕ ಮೂರು ರಾಜ್ಯಗಳ ಸಂಧಿಸುವ ಗಡಿಭಾಗವಿದು. ಈ ಗಡಿಯಲ್ಲಿರುವ ನಾಗಲಾಪುರ ಸಂಸ್ಥಾನವು ಭಾಷೆ, ಸಂಸ್ಕೃತಿ ಮತ್ತು ಧರ್ಮ ಸಂಸ್ಕಾರಗಳನ್ನು ಬೆಳೆಸುತ್ತ ಶತ ಶತಮಾನಗಳಿಂದ ಸೇವೆ ಮಾಡುತ್ತಿದೆ.

ಈಗಾಗಲೇ 15 ಮಠಾಧಿಪತಿಗಳನ್ನು ಕಂಡಿರುವ ನಾಗಲಾಪುರ ಕ್ಷೇತ್ರಕ್ಕೆ ಆಂಧ್ರ, ತಮಿಳುನಾಡಿನಿಂದಲೂ ಭಕ್ತರು ಆಗಮಿಸುತ್ತಾರೆ. ಗಡಿನಾಡಿನಲ್ಲಿರುವ ಏಕೈಕ ಗುರುಸ್ಥಾನವಾಗಿ ಶಿವಾದ್ವೈತ ಸಿದ್ಧಾಂತವನ್ನು ಪ್ರಸಾರ ಮಾಡಲು ನಿರಂತರವಾಗಿ ಶ್ರಮಿಸುತ್ತಿದೆ. ಕೋಲಾರ ಪಾಳಯಗಾರರ ಜೊತೆಗೆ ಆಂಧ್ರಪ್ರದೇಶದ ಪುಂಗನೂರು ಪಾಳಯಗಾರರಿಗೂ ಕೂಡಾ ನಾಗಲಾಪುರದ ಸ್ವಾಮಿಗಳು ರಾಜಗುರುಗಳಾಗಿ ಆಶೀರ್ವದಿಸಿದ ಇತಿಹಾಸವಿದೆ. ಈಗ ಮೂರು ತಲೆಮಾರುಗಳ ಹಿಂದಿದ್ದ ಪಟ್ಟದ ಶ್ರೀಗುರುಲಿಂಗ ದೇಶೀಕೇಂದ್ರ ಸ್ವಾಮಿಗಳು ತಮ್ಮ ತಪಶಕ್ತಿಯಿಂದ ಹುಲಿಯ ಮೇಲೆ ಸವಾರಿ ಮಾಡುತ್ತಿದ್ದರೆಂಬ ಉಲ್ಲೇಖವಿದೆ.

ಸದ್ಯ ಇರುವ ಶ್ರೀಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ಕರಕಮಲ ಸಂಜಾತರಾದ ಶ್ರೀತೇಜೇಶಲಿಂಗ ಶಿವಾಚಾರ್ಯ ಸ್ವಾಮಿಗಳು ಚಿಕ್ಕ ವಯಸ್ಸಿನಲ್ಲೇ ಶ್ರೀಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಗಡಿನಾಡಿನಲ್ಲಿ ಮಿಂಚಿನಂತೆ ಸಂಚರಿಸುತ್ತ ಧರ್ಮ ಸಂಘಟನೆ, ಸಂಸ್ಕೃತಿಯ ಪ್ರಸಾರ, ಸಮನ್ವಯ ಸಂದೇಶಗಳನ್ನು ನೀಡುತ್ತಿದ್ದಾರೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 60ಕಿ.ಮೀ. ದೂರವಿರುವ ನಾಗಲಾಪುರಕ್ಕೆ ರಾ.ಹೆ.75ರ ಕೋಲಾರ ಮಾರ್ಗದಲ್ಲಿ ಕೋಲಾರಕ್ಕೆ 8ಕಿ.ಮೀ. ಹಿಂದೆಯೇ ಹೆದ್ದಾರಿಯಿಂದ ಎಡಕ್ಕೆ 2ಕಿ.ಮೀ. ಅಂತರದಲ್ಲಿದೆ ನಾಗಲಾಪುರ ಕ್ಷೇತ್ರ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂರ್ತರೂಪದಲ್ಲಿ ಭಾರತೀಯ ಸಂಸ್ಕೃತಿ !

ಅಂತರಾಷ್ಟ್ರ ಖ್ಯಾತಿಯ ಕನೇರಿ ಮಠದ ಸಿದ್ಧಗಿರಿ ಮ್ಯೂಸಿಯಂ

ದಿನಾಂಕ : 23–11–2017

ಭಾರತ ಇಡೀ ಜಗತ್ತಿನಲ್ಲೇ ಅತ್ಯಂತ ಸುಸಂಸ್ಕೃತ ರಾಷ್ಟ್ರ. ಬ್ರಿಟೀಷರು ನಮ್ಮ ದೇಶದ ಮೇಲೆ ದಾಳಿ ಮಾಡುವವರೆಗೂ ಇಲ್ಲಿನ ಜನಜೀವನ, ಧಾರ್ಮಿಕ ಪರಂಪರೆ, ಶಿಕ್ಷಣಕ್ರಮ ಎಲ್ಲವೂ ಜಗತ್ತಿಗೆ ಮಾದರಿಯಾಗಿತ್ತು. ಬುಡಮೇಲಾಗಿರುವ ಭಾರತೀಯ ವ್ಯವಸ್ಥೆ ಸರಿಯಾಗಬೇಕೆಂದರೆ; ಪುರಾತನ ಶಿಕ್ಷಣ ಪದ್ಧತಿ ಮರುಸ್ಥಾಪನೆಯಾಗಬೇಕು, ನಮ್ಮ ಸಂಸ್ಕೃತಿಯನ್ನು ನವ ಸಮುದಾಯಕ್ಕೆ ಪರಿಚಯಿಸಬೇಕೆಂದು ಕನೇರಿ ಮಠ ಕೈಗೊಂಡ ವಿಶಿಷ್ಟ ಪ್ರಯತ್ನವೇ ಶ್ರೀಸಿದ್ಧಗಿರಿ ಮ್ಯೂಸಿಯಂ.

ಕನೇರಿ ಮಠದ ಈ ಮ್ಯೂಸಿಯಂ ಇಡೀ ದೇಶದಲ್ಲೇ ಪ್ರಸಿದ್ಧವಾಗಿದೆ. ಲಂಡನ್ನಲ್ಲಿರುವ ತುಸಾಡ್ ಮ್ಯೂಸಿಯಂ ನಂತರ ಜಗತ್ತಿನಲ್ಲೇ ಅತ್ಯಂತ ಪ್ರಸಿದ್ಧ ಮ್ಯೂಸಿಯಂ ಎಂಬ ಖ್ಯಾತಿ ಈ ಮ್ಯೂಸಿಯಂ ಪಡೆದುಕೊಂಡಿದೆ. ಸುಮಾರು 13 ಎಕರೆ ಜಾಗದಲ್ಲಿರುವ ಮ್ಯೂಸಿಯಂನಲ್ಲಿ ಪ್ರಮುಖವಾಗಿ ಮೂರು ವಿಭಾಗಗಳಿದ್ದು, ಪ್ರಾಚೀನ ಪ್ರತಿಭಾವಂತರು, ಗ್ರಾಮಜೀವನ ದರ್ಶನ, ಉತ್ಸವ ದರ್ಶನ ಹಾಗೂ ಪ್ರೇರಣಾ ಪಾರ್ಕ್ ನಿರ್ಮಿಸಲಾಗಿದೆ. ಮ್ಯೂಸಿಯಂ ಒಳಹೊಕ್ಕು ನೋಡಿದರೆ ಅಲ್ಲೊಂದು ಹೊಸ ಜಗತ್ತು ತೆರೆದುಕೊಳ್ಳುತ್ತದೆ.

ಪ್ರಾಚೀನ ಪ್ರತಿಭಾವಂತರು

ಮ್ಯೂಸಿಯಂ ಆರಂಭದಲ್ಲೇ ಸುಮಾರು 800 ಅಡಿಯ ಗುಹೆಯನ್ನು ನಿರ್ಮಾಣ ಮಾಡಲಾಗಿದೆ. ಆ ಗುಹೆಯಲ್ಲಿ ಜಗತ್ತಿಗೆ ಭಾರತೀಯ ಋಷಿ ಮುನಿಗಳು ನೀಡಿದ ಅದ್ವಿತೀಯ ಜ್ಞಾನ, ಸಂಶೋಧನೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಗ್ರಾಮ ದರ್ಶನ

ಅನಾವರಣಗೊಳಿಸಲಾಗಿದೆ. 30ಕ್ಕೂ ಹೆಚ್ಚು ಋಷಿಗಳ ಜೀವನ, ಅವರು ಮಾಡಿದ ಪ್ರಯೋಗಗಳು, ವೈಜ್ಞಾನಿಕ ಸಂಶೋಧನೆಯನ್ನು ಮೂರ್ತರೂಪದಲ್ಲಿ ತೆರೆದಿಡಲಾಗಿದೆ. ಗುಹೆಯ ಒಳಗಿನ ವಾತಾವರಣ ಹಾಗೂ ಮೂರ್ತಿಗಳಲ್ಲಿರುವ ಸ್ಪಷ್ಟತೆ ಜನರನ್ನು ಮತ್ತೊಂದು ಲೋಕದತ್ತ ಕೊಂಡೊಯ್ಯುತ್ತದೆ.

ಜ್ಯೋತಿಷ್ಯಶಾಸ್ತ್ರ, ಸಂಗೀತ, ವಿಜ್ಞಾನ, ವೈದ್ಯಶಾಸ್ತ್ರ, ತಂತ್ರಜ್ಞಾನ, ಕಲೆ, ವ್ಯಾಕರಣ, ಕೃಷಿ, ರಾಜನೀತಿ, ಧಾರ್ಮಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ತಮ್ಮದೇ ಕೊಡುಗೆ ನೀಡಿದ ಋಷಿ ಮುನಿಗಳ ಮೂರ್ತಿಗಳು ಇಲ್ಲಿವೆ. ಆ ಕಾಲದ ವೈದ್ಯ ವಿಧಾನ, ಶಸ್ತ್ರಚಿಕಿತ್ಸೆ, ಖಗೋಳ ಶಾಸ್ತ್ರ, ವೈಜ್ಞಾನಿಕ ಪ್ರಯೋಗ, ಆವಿಷ್ಕಾರಗಳು, ಭಾರತೀಯ ಪುರಾತನರ ಅಪಾರ ಜ್ಞಾನ ಮತ್ತು ಸಾಧನೆಯನ್ನು ಕಣ್ಣಿಗೆ ಕಟ್ಟುವಂತೆ ರೂಪಿಸಲಾಗಿದೆ. ಇದನ್ನು ನೋಡಿದ ಪ್ರತಿಯೊಬ್ಬ ದೇಶವಾಸಿಗೂ ಅಭಿಮಾನ ತುಂಬಿ ಬಾರದಿರದು.

ಆರ್ಯಭಟ, ವರಾಹಮಿಹಿರ, ಭಾಸ್ಕರಾಚಾರ್ಯ, ಸುಶ್ರುತ, ಶೂರಪಾಲ, ಪರಾಶರ, ಕಶ್ಯಪ, ಕಣಾದ, ಪತಂಜಲಿ ಇತ್ಯಾದಿ ಋಷಿಮುನಿಗಳ ಬಗ್ಗೆ ಜಗತ್ತು ಕುತೂಹಲದಿಂದ ನೋಡುತ್ತಿದೆ. ಆದರೆ ಭಾರತೀಯರಿಗೆ ಅದರ ಅರಿವಿಲ್ಲದ್ದನ್ನು ಮನಗಂಡು ಕನೇರಿಮಠ ಇಂತಹದ್ದೊಂದು ವಿಭಿನ್ನ ಪ್ರಯತ್ನ ಮಾಡಿದೆ. ನಿತ್ಯ ದೇಶದ ನಾನಾ ಕಡೆಗಳಿಂದ ಸಾವಿರಾರು ನಾಗರೀಕರು, ಶಾಲಾ ಮಕ್ಕಳು ಈ ಮ್ಯೂಸಿಯಂ ವೀಕ್ಷಿಸಲು ಆಗಮಿಸುತ್ತಾರೆ.

ಗ್ರಾಮೀಣ ಜನಜೀವನದ ಚಿತ್ರಣ:

ಕೇವಲ 100 ವರ್ಷಗಳ ಹಿಂದೆ ನಮ್ಮ ದೇಶದಲ್ಲಿದ್ದ ಗ್ರಾಮಗಳು ಹೇಗಿದ್ದವು, ಒಬ್ಬರನ್ನೊಬ್ಬರು ಆಶ್ರಯಿಸಿ ಹೇಗೆ ಸಹಕಾರ ಜೀವನ ನಡೆಸುತ್ತಿದ್ದರು ಎಂಬುದನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದಕ್ಕಾಗಿ ಈ ಮ್ಯೂಸಿಯಂನಲ್ಲಿ ಗ್ರಾಮದರ್ಶನ ಎಂಬ ವಿಭಾಗವನ್ನು ನಿರ್ಮಿಸಲಾಗಿದೆ. ಕಂಚುಗಾರ, ಹಾವಾಡಿಗ, ಲಂಬಾಣಿ, ಕಮ್ಮಾರ, ಕುಂಬಾರ, ಚಮ್ಮಾರ, ಬಡಗಿ, ಹಡಪದ, ದೊಂಬರಾಟ, ಜ್ಯೋತಿಷ್ಯದವರು, ಕಲ್ಲುಒಡ್ಡ, ಬಳೇಗಾರ, ಒಕ್ಕಲಿಗ, ಮಡಿವಾಳ ಹೀಗೆ ಪ್ರತೀ ವೃತ್ತಿಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಗ್ರಾಮೀಣ ಕ್ರೀಡೆಗಳು, ಪಂಚಾಯಿತಿ ಕಟ್ಟೆ, ಊರಭಾವಿ, ಬೇಸಾಯ, ವ್ಯಾಪಾರ ಹೀಗೆ ಒಂದು ಗ್ರಾಮದಲ್ಲಿ ಏನೆಲ್ಲಾ ಇರುತ್ತೆ ಎಂಬುದನ್ನು ನಿರ್ಮಿಸಲಾಗಿದೆ.

ಅದರಂತೆ ಜಾತ್ರೆ ಉತ್ಸವಗಳು ಮರೆಯಾಗುತ್ತಿರುವ ಇಂದಿನ ದಿನಮಾನದಲ್ಲಿ ಇಲ್ಲಿನ ಉತ್ಸವ ದರ್ಶನ ವಿಶಿಷ್ಟವಾಗಿದೆ. ಬೃಹತ್ ರಥ, ರಥವನ್ನು ಎಳೆಯುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೂರಾರು ಭಕ್ತರು, ಜಾತ್ರೆಯ ಅಂಗಡಿ ಮುಂಗಟ್ಟುಗಳು, ಜನಪದ ಕಲಾ ತಂಡಗಳು, ನಿಂತು ನೋಡುವ ಪ್ರವಾಸಿಗರು, ವ್ಯಾಪಾರ ನಡೆಸುವ ಗ್ರಾಮಸ್ಥರು, ಅಳುವ ಮಕ್ಕಳು, ನಗುವ ಯುವಕರು ಹೀಗೆ ಒಂದು ಊರಿನಲ್ಲಿ ನಡೆಯುವ ಜಾತ್ರೆಯ ಸಂಪೂರ್ಣ ಚಿತ್ರಣ ಇಲ್ಲಿದೆ.

ಗ್ರಾಮ ದರ್ಶನ

ದೇಶ ಭಕ್ತಿಯ ಪ್ರತೀಕ ಪ್ರೇರಣಾ ಪಾರ್ಕ್:

ನಾವಿಂದು ಅನುಭವಿಸುತ್ತಿರುವ ಅಮೂಲ್ಯ ಸ್ವಾತಂತ್ರ್ಯದ ಹಿಂದೆ ನಮ್ಮ ಪೂರ್ವಿಕರನೇಕರ ಬಲಿದಾನವಿದೆ. ನಟನೆ ಮಾಡುವ ನಟರನ್ನು ಆದರ್ಶವಾಗಿಟ್ಟುಕೊಳ್ಳುವ ಯುವಕರು ನಮ್ಮ ಸ್ವಾತಂತ್ರ್ಯ ಸೇನಾನಿಗಳ ಬಗ್ಗೆ ತಿಳಿದುಕೊಳ್ಳುವ ಅಗತ್ಯವಿದೆ. ಆ ಕಾರಣಕ್ಕಾಗಿ ಸಿದ್ಧಗಿರಿ ಮ್ಯೂಸಿಯಂ ಪಕ್ಕದಲ್ಲಿ ಪ್ರೇರಣಾ ಪಾರ್ಕ್ ಸ್ಥಾಪಿಸಲಾಗಿದೆ.

ಭಗತ್‌ಸಿಂಗ್, ಚಂದ್ರಶೇಖರ ಆಝಾದ್, ಮದನಲಾಲ ಧಿಂಗ್ರಾರಂತಹ ಅನೇಕ ಹೋರಾಟಗಾರರ ತ್ಯಾಗದ ಚಿತ್ರಣವನ್ನು ಇಲ್ಲಿ ರೂಪಿಸಲಾಗಿದೆ. ಈ ಪಾರ್ಕಿನಲ್ಲಿ ಮೂರು ಬೃಹತ್ ಪರದೆಗಳನ್ನು ಅಳವಡಿಸಲಾಗಿದ್ದು, ನಿತ್ಯ ರಾಷ್ಟ್ರಭಕ್ತಿಗೀತೆಗಳೊಂದಿಗೆ ವೀರಪುರುಷರ ಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಇದಕ್ಕೆ ಸಮಾನವಾಗಿ ಚಿಮ್ಮುವ ಬಣ್ಣ ಬಣ್ಣದ ಕಾರಂಜಿ ಅದ್ಭುತ ದೃಶ್ಯಜಗತ್ತನ್ನು ಸೃಷ್ಟಿಸುತ್ತದೆ.

ಮಹಾರಾಷ್ಟ್ರದ ಕೊಲ್ಲಾಪುರ ಸಮೀಪವಿರುವ ಕನೇರಿ ಶ್ರೀಸಿದ್ಧಗಿರಿ ಕಾಡಸಿದ್ದೇಶ್ವರ ಸಂಸ್ಥಾನ ಮಠಕ್ಕೆ1300 ವರ್ಷಗಳ ಸುದೀರ್ಘ ಇತಿಹಾಸವಿದೆ. ಸದ್ಯ ಪೀಠವನ್ನಲಂಕರಿಸಿರುವ 49ನೇ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮಿಗಳು ಜಾತ್ಯಾತೀತ ನೆಲೆಗಟ್ಟಿನಲ್ಲಿ ಶ್ರೀಮಠವನ್ನು ಅಭಿವೃದ್ಧಿಗೊಳಿಸುತ್ತಿದ್ದು, ಅವರ ದೂರದೃಷ್ಟಿ, ಚಿಂತನೆಯ ಭಾಗವಾಗಿ ಈ ಮ್ಯೂಸಿಯಂ ಸಿದ್ಧಗೊಂಡಿದೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 600ಕಿ.ಮೀ. ದೂರವಿರುವ ಕನೇರಿಗೆ ರಾ.ಹೆ.48ರ ಮೂಲಕ ಹುಬ್ಬಳ್ಳಿ, ಬೆಳಗಾವಿ ಮಾರ್ಗವಾಗಿ ಹೋಗಬೇಕು. ಅಂತರ್ಜಾಲದಲ್ಲಿ ಸಂಪೂರ್ಣ ವಿವರವಿದ್ದು, ಹೆಚ್ಚಿನ ಮಾಹಿತಿಗೆ ದೂ: 9960405522 ಸಂಪರ್ಕಿಸಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರ್ಷ ಕಳೆದರೂ ಕೆಡದ ಪ್ರಸಾದ..!
ತಾವರೆಕೆರೆ ಉಮಾಮಹೇಶ್ವರ ಜಾತ್ರೆಯಲ್ಲಿ ಪವಾಡ

ದಿನಾಂಕ : 07-12-2017

ವಿಜ್ಞಾನ ಮತ್ತು ಪ್ರಕೃತಿಯನ್ನು ಮೀರಿದ ಕೆಲ ಸನ್ನಿವೇಶಗಳು ಆಗಾಗ ಅಘೋಚರ ಶಕ್ತಿಯ ಬಗ್ಗೆ ನಂಬಿಕೆ ಮೂಡಿಸುತ್ತವೆ. ಅದನ್ನು ಆಸ್ತಿಕರು ದೈವಕೃಪೆ ಎಂದು ಕರೆದರೆ ನಾಸ್ತಿಕರು ಮೌನಕ್ಕೆ ಮೊರೆಹೋಗದೆ ಬೇರೆ ದಾರಿ ಇಲ್ಲ. ಅಂತಹದೊಂದು ದೈವಕೃಪೆಯ ವಿಶಿಷ್ಟ ಕ್ಷೇತ್ರ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ತಾವರೆಕೆರೆ.

ಮನುಷ್ಯ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಹಲವಾರು ಯಂತ್ರಗಳನ್ನು ಕಂಡು ಹಿಡಿದಿದ್ದಾನೆ. ಅಂತಹವುಗಳಲ್ಲಿ ಬಹುತೇಕ ಎಲ್ಲರ ಮನೆಗಳಲ್ಲಿ ಇರುವ ಯಂತ್ರ ಫ್ರಿಜ್. ತರಕಾರಿ, ಹಣ್ಣು, ಕೆಲ ಆಹಾರ ಪದಾರ್ಥಗಳನ್ನು ಫ್ರಿಜ್ನಲ್ಲಿ ಮೂರು-ನಾಲ್ಕು ದಿನ ಅಥವಾ ಹೆಚ್ಚೆಂದರೆ ಒಂದು ವಾರ ಕಾಲ ರಕ್ಷಿಸಿಡಬಹುದು. ಆದರೆ ತಾವರೆಕೆರೆ ಶಿಲಾಮಠದಲ್ಲಿ ಒಂದು ವರ್ಷವಾದರೂ ಆಹಾರ ಪದಾರ್ಥ ಕೆಡದೆ ಇರುವುದು ಮಾತ್ರ ಅಚ್ಚರಿಯ ಸಂಗತಿ.

ತಾವರೆಕೆರೆ ಶಿಲಾಮಠದ ಮೂಲ ದೈವವಾದ ಬಸವಾರೂಢ ಉಮಾಮಹೇಶ್ವರನಿಗೆ ನಿತ್ಯ ವಿಶೇಷ ಪೂಜೆ ನಡೆಯುತ್ತದೆ. ವರ್ಷಕ್ಕೆ ಒಮ್ಮೆ ಮಾರ್ಗಶಿರ ಮಾಸದಲ್ಲಿ ಮಹೇಶ್ವರ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ. ಜಾತ್ರೆಯಲ್ಲಿ ಬೇರೆಲ್ಲ ಉತ್ಸವ, ಆಚರಣೆಗಳಿಗಿಂತ ಹೆಚ್ಚು ಗಮನ ಸೆಳೆಯುವುದು; ವರ್ಷ ಕಳೆದರೂ ಕೆಡದೆ ಹಾಗೆ ಇರುವ ಪ್ರಸಾದ.

ಮಹೇಶ್ವರ ಜಾತ್ರೆ ಧಾರ್ಮಿಕ ಪರಂಪರೆಯ ಜೊತೆಗೆ ವೈಜ್ಞಾನಿಕ ಹಿನ್ನೆಲೆ ಹೊಂದಿದೆ. ಸಾತ್ವಿಕ ಆಹಾರದ ಮೂಲಕ ದೈಹಿಕ ಆರೋಗ್ಯವನ್ನು ಪಡೆಯುವ ವಿಧಾನ. ಬಾಳೇಹಣ್ಣು, ಹೆಸರುಕಾಳು ಪುಡಿ, ಬೆಲ್ಲ, ಹಾಲನ್ನು



ತಾವರೆಕೆರೆ ಜಾತ್ರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆರೆಸಿ ಜಾತ್ರೆಗೆ ಬರುವ ಪುರುಷರಿಗೆ ಪ್ರಸಾದವಾಗಿ ನೀಡಲಾಗುತ್ತದೆ. ನಂತರ ಉಳಿದ ಪ್ರಸಾದವನ್ನು ಪದ್ಧತಿಯಂತೆ ನಿಗದಿತ ಗುಂಡಿಯೊಂದರಲ್ಲಿ ಹಾಕಿ ಮುಚ್ಚಲಾಗುತ್ತದೆ. ಮುಂದಿನ ವರ್ಷದ ಜಾತ್ರೆಯಂದು ಆ ಗುಂಡಿಯನ್ನು ತೆರೆದು ನೋಡಿದರೆ ಕಳೆದ ವರ್ಷದ ಆಹಾರ ಪದಾರ್ಥ ಕೆಡದೆ ಹಾಗೆ ಇರುತ್ತದೆ. ಊಟಕ್ಕೆ ಬಳಸಿದ ಬಾಳೆಎಲೆ ಕೂಡಾ ಹಸಿರಾಗಿರುತ್ತದೆ. ಜಾತ್ರೆಯಲ್ಲಿ ಪಾಲ್ಗೊಂಡ ಸಾವಿರಾರು ಜನರು ಇದನ್ನು ಕಣ್ಣಾರೆ ಕಂಡು ದಿಗ್ಭ್ರಮೆಗೊಳ್ಳುತ್ತಾರೆ.


ಶ್ರೀ ರೇಣುಕ ಶಿವಾಚಾರ್ಯ ಸ್ವಾಮೀಜಿ

ಇದೇ ಡಿ.11 ರಿಂದ 13 ರವರೆಗೆ ಜಾತ್ರೆ ನಡೆಯಲಿದ್ದು, ಜಗದ್ಗುರು ರೇಣುಕಾಚಾರ್ಯರಿಗೆ ರುದ್ರಾಭಿಷೇಕ, ಉಮಾ ಮಹೇಶ್ವರಸ್ವಾಮಿ ಪಲ್ಲಕ್ಕಿ ಉತ್ಸವ, ವೀರಭದ್ರಸ್ವಾಮಿಗೆ ಗುಗ್ಗುಳಸೇವೆ ಸೇರಿದಂತೆ ಹಲವು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಡೆಯಲಿವೆ. ವಿವಿಧ ಬೇಡಿಕೆಗಳಿಗಾಗಿ ಹರಕೆ ಹೊತ್ತ ಸಾವಿರಾರು ಭಕ್ತರು ಜಾತ್ರೆ ವೇಳೆಯಲ್ಲಿ ಹರಕೆ ತೀರಿಸುತ್ತಾರೆ.

16 ಕೆರೆಯ ನಡುವಿನ ಗ್ರಾಮ:

ಇಂದಿನ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ತಾವರೆಕೆರೆಯ ಹಿಂದಿನ ಹೆಸರು ಕಮಲಾವತಿ ಪಟ್ಟಣ. ಈ ಗ್ರಾಮದ ಸುತ್ತಲೂ ಸುಮಾರು 16 ಕೆರೆಗಳಿರುವ ಬಗ್ಗೆ ಉಲ್ಲೇಖವಿದೆ. ಬೃಹತ್ ಕೆರೆಗಳಲ್ಲಿ ಹೇರಳವಾಗಿ ಕಮಲದ ಹೂವುಗಳು ಇದ್ದುದ್ದರಿಂದ ಈ ಗ್ರಾಮಕ್ಕೆ ಕಮಲಾವತಿ ಪಟ್ಟಣ ಎಂತಲೂ ಅದೇ ಹೆಸರು ಆಡು ಮಾತಿನಲ್ಲಿ ತಾವರೆಕೆರೆ ಎಂತಲೂ ಪ್ರಸಿದ್ಧವಾಗಿದೆ.

ಕೆಳದಿ ಅರಸರ ಆಳ್ವಿಕೆಗೊಳಪಟ್ಟಿದ್ದ ಈ ಪ್ರದೇಶದಲ್ಲಿ ಉಂಬ್ರಾಣಿ ಕೋಟೆ ಇದೆ. ಹಿಂದೆ ವೀರಬಲ್ಲಾಳನೆಂಬ ಸಾಮಂತ ರಾಜ ಆಳ್ವಿಕೆ ನಡೆಸಿದ್ದು, ಆತನ ಕಾಲದಲ್ಲಿಯೇ ಇಲ್ಲಿ ಶಿಲಾಮಠವನ್ನು ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತೆ. ಬೃಹತ್ ಕಲ್ಲಿನ ಹಾಸುಗಳು, ಕಲ್ಲಿನ ಕಂಬ ಮತ್ತು ಕಲ್ಲಿನ ಗೋಡೆಗಳಿಂದ ಮಠವನ್ನು ನಿರ್ಮಿಸಿರುವುದರಿಂದ ಶಿಲಾಮಠವೆಂದೇ ನಾಡಿನಲ್ಲಿ ಪ್ರಸಿದ್ಧಿಯಾಗಿದೆ. ಶ್ರೀಮಠವು ಸುಮಾರು 12-13ನೇ ಶತಮಾನದಿಂದಲೂ ಇಲ್ಲಿ ಧಾರ್ಮಿಕ ಚಟುವಟಿಕೆ ನಡೆಸಿಕೊಂಡು ಹೋಗುತ್ತಿದೆ.

ತಪಸ್ವಿ ಕ್ಷೇತ್ರದ ಇತಿಹಾಸ :

ತಾವರೆಕೆರೆ ಶಿಲಾಮಠವು ಧಾರ್ಮಿಕವಾಗಿ, ಸಾಮಾಜಿಕವಾಗಿ ಸುದೀರ್ಘ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇತಿಹಾಸವನ್ನು ಹೊಂದಿದೆ. ಇಲ್ಲಿ ಆಗಿ ಹೋಗಿರುವ ಸ್ವಾಮಿಗಳು ಮಹಾ ತಪಸ್ವಿಗಳಾಗಿ, ಅಧ್ಯಾತ್ಮ ಸಾಧಕರಾಗಿ ಸಮಾಜಕ್ಕೆ ಮಾರ್ಗದರ್ಶನ ಮಾಡಿದ್ದಾರೆ. 8ಜನ ಸ್ವಾಮಿಗಳ ಜೀವಂತ ಸಮಾಧಿ ಮಠದಲ್ಲಿದೆ.

ತಾವರೆಕೆರೆ ಶಿಲಾಮಠ

ಶಿಲಾಮಠದ ಗುರುಪರಂಪರೆಯಲ್ಲಿ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಅದ್ವಿತೀಯರು. 1918ರಿಂದ 1971 ರವರೆಗೆ ಸುದೀರ್ಘ 53 ವರ್ಷ ಮಠವನ್ನು ಮುನ್ನಡೆಸಿದ ಪೂಜ್ಯರು ಮಹಾ ತಪಸ್ವಿಗಳಾಗಿದ್ದರು. ವಿಶೇಷವಾಗಿ ಅಥರ್ವಣವೇದ ಪಾರಂಗತರಾಗಿದ್ದ ಪೂಜ್ಯರು ಆ ಕಾಲದಲ್ಲಿದ್ದ ಮಾಟ-ಮಂತ್ರಗಳನ್ನು ಬಯಲಿಗೆಳೆದು ಮುಗ್ಧ ಜನರಿಗೆ ಧರ್ಮ ಮಾರ್ಗವನ್ನು ಬೋಧಿಸುವುದರ ಜೊತೆಗೆ ಹಲವು ಸಾಂಕ್ರಮಿಕ ರೋಗಗಳಿಗೆ ಚಿಕಿತ್ಸೆ ನೀಡುವ ಆಯುರ್ವೇದ ಪಂಡಿತರಾಗಿದ್ದರು.

ಇವರ ಉತ್ತರಾಧಿಕಾರಿಯಾಗಿ ಶ್ರೀಮಠಕ್ಕೆ ಆಯ್ಕೆಯಾದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ನಾಡಿನ ಸಾವಿರಾರು ಶಿವಾಚಾರ್ಯರಿಗೆ ಮಾದರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅಡಿಕೆ, ತೆಂಗು, ಬಾಳೆ ತೋಟಗಳನ್ನು ಬೆಳೆಸಿ ಶಿಲಾಮಠವನ್ನು ಕೃಷಿಯತ್ತ ಕೊಂಡೊಯ್ದ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಅಖಿಲ ಭಾರತ ಶಿವಾಚಾರ್ಯ ಸಂಸ್ಥೆಯ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಇವರ ಸೇವೆ ಅಪಾರ. ಇವರು ಯಡಿಯೂರು ಮಠಕ್ಕೆ ಅಧ್ಯಕ್ಷರಾಗಿ ಹೋದ ನಂತರ ಕಿರಿಯ ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಮುನ್ನಡೆಸುತ್ತಿದ್ದಾರೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 260ಕಿ.ಮೀ. ದೂರವಿದ್ದು, ಬಿಎಚ್ ರಸ್ತೆಯಮೂಲಕ ಬೀರೂರು ಮಾರ್ಗವಾಗಿ ಅಜ್ಜಂಪುರ ಹೋಗಿ ಅಲ್ಲಿಂದ 18 ಕಿ.ಮೀ.ಕ್ರಮಿಸಿ ತಾವರೆಕೆರೆ ತಲುಪಬಹುದು. ಹೆಚ್ಚಿನ ಮಾಹಿತಿಗೆ ಮೊ: 9902506757.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಕ್ಷಿಣ ಭಾರತದ ಬೃಹತ್ ಸ್ಫಟಿಕಲಿಂಗ
ಶೀಘ್ರ ಫಲಪ್ರದ ಲಿಂಗದಹಳ್ಳಿ ಕ್ಷೇತ್ರ

ದಿನಾಂಕ : 14-12-2017

ಜಗತ್ತಿನಲ್ಲಿ ಸಾಕಷ್ಟು ರೀತಿಯ ಶಿವಲಿಂಗಗಳನ್ನು ಕಾಣುತ್ತೇವೆ. ಕಟ್ಟಿಗೆ, ಕಲ್ಲು, ಲೋಹ ಇತ್ಯಾದಿ ಲಿಂಗಗಳು ಸಾಮಾನ್ಯ. ಆದರೆ ಪಚ್ಚೆಲಿಂಗ, ಸಾಲಿಗ್ರಾಮ, ಸ್ಫಟಿಕದ ಅಪರೂಪದ ಲಿಂಗಗಳು ಕೆಲವೇ ಕೆಲವು ಕಡೆಗಳಲ್ಲಿ ಇರುತ್ತವೆ. ಆದರೆ ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡ ಸ್ಫಟಿಕಲಿಂಗ ಕರ್ನಾಟಕದಲ್ಲಿರುವುದು ಹಲವರಿಗೆ ತಿಳಿದಿಲ್ಲ. ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲೂಕಿನಲ್ಲಿ ಲಿಂಗದಹಳ್ಳಿ ಎಂಬ ಪುಟ್ಟ ಗ್ರಾಮದಲ್ಲಿ ಬೃಹತ್ ಸ್ಫಟಿಕಲಿಂಗವಿದೆ.

ದಕ್ಷಿಣ ಭಾರತದಲ್ಲಿ ಸ್ಫಟಿಕಲಿಂಗಗಳು ವಿರಳ. ಪುರಾತನ ರಾಮೇಶ್ವರದಲ್ಲಿ ಸ್ಫಟಿಕಲಿಂಗವಿದ್ದು ಗಾತ್ರದಲ್ಲಿ ಅತ್ಯಂತ ಚಿಕ್ಕದು. ಆದರೆ ಲಿಂಗದಹಳ್ಳಿಯ ಸ್ಫಟಿಕಲಿಂಗ ಒಂದು ಅಡಿಗಿಂತ (13X13 ಇಂಚು) ದೊಡ್ಡದಾಗಿದೆ. ಇದು ದಕ್ಷಿಣ ಭಾರತದಲ್ಲೇ ಬೃಹತ್ ಸ್ಫಟಿಕಲಿಂಗ ಎಂಬ ಹೆಗ್ಗಳಿಕೆ ಹೊಂದಿದೆ. ಜಗತ್ತಿನ 10 ಬೃಹತ್ ಸ್ಫಟಿಕಲಿಂಗಗಳಲ್ಲಿ ಲಿಂಗದಹಳ್ಳಿಯು ಸ್ಫಟಿಕಲಿಂಗವನ್ನು ಗುರುತಿಸಲಾಗಿದೆ. ಈ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿದ್ದು, ಇಲ್ಲಿನ ಸ್ಫಟಿಕ ಲಿಂಗದ ಕುರಿತು ಅಂತರ್ಜಾಲದಲ್ಲಿ (spatikashivalingaminindia.com) ಸಂಪೂರ್ಣ ವಿವರಗಳಿವೆ.

ಸ್ಫಟಿಕಲಿಂಗ

ಲಿಂಗದಹಳ್ಳಿ ಹಿರೇಮಠದಲ್ಲಿ ಅಪರೂಪದ ನರ್ಮದೇಶ್ವರ ಲಿಂಗವೂ ಕೂಡಾ ಇದೆ. ಮಧ್ಯಪ್ರದೇಶದ ಓಂಕಾರೇಶ್ವರಕ್ಷೇತ್ರದ ನರ್ಮದಾ ನದಿಯಲ್ಲಿ ದೊರೆಯುವ ಈ ನರ್ಮದಾ ಲಿಂಗಗಳಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ

ಸ್ವಯಂ ಶಿವಕಳೆ ಇರುತ್ತದೆ ಎಂಬುದು ನಂಬಿಕೆ. ಪುರಾಣದ ಪ್ರಕಾರ ಶಿವ ಶಿಲೆಯ ರೂಪವನ್ನು ತಾಳಿ, ಪಾರ್ವತಿ ನದಿಯು ರೂಪವನ್ನು ತಾಳುತ್ತಾಳೆ. ಹಾಗೆ ಶಿವ-ಶಕ್ತಿಯ ಸಮ್ಮಿಲನವಾಗಿ ವಿಶೇಷ ಸಾಲಿಗ್ರಾಮ ನೈಸರ್ಗಿಕ ಲಿಂಗಗಳು ಉತ್ಪತ್ತಿಯಾಗುತ್ತವೆ.

ಸ್ಪಟಿಕ ಲಿಂಗದ ಮಹತ್ವ :

ಸ್ಪಟಿಕ ಶಕ್ತಿಯುತ ವಸ್ತು. ಹಿಮಗಡ್ಡೆಯೇ ಲಕ್ಷಾಂತರ ವರ್ಷದಿಂದ ಗಟ್ಟಿಯಾಗಿ ಸ್ಪಟಿಕವಾಗುತ್ತದೆ ಎನ್ನಲಾಗುತ್ತೆ. ಸ್ಪಟಿಕದಲ್ಲಿ ನಕಾರಾತ್ಮಕ ಶಕ್ತಿಯನ್ನು ನಾಶಪಡಿಸಿ ಸಕಾರಾತ್ಮಕ ಶಕ್ತಿ ಹೆಚ್ಚಿಸುವ ಅಧ್ಯಾತ್ಮಿಕ ಶಕ್ತಿ ಇದೆ. ವೈಜ್ಞಾನಿಕವಾಗಿಯೂ ಸ್ಪಟಿಕದಲ್ಲಿ; ಮಾನಸಿಕ ಮತ್ತು ದೈಹಿಕ ಆರೋಗ್ಯ ವೃದ್ಧಿಸುವ, ದೇಹದ ಉಷ್ಣತೆಯನ್ನು ತಗ್ಗಿಸಿ ಸಮತೋಲನ ಕಾಪಾಡುವ ಸಾಮರ್ಥ್ಯವಿದೆ. ಈ ಕಾರಣದಿಂದಲೇ ಯೋಗಿಗಳು, ಸಾಧು-ಸಂತರು, ಸ್ವಾಮೀಜಿಗಳು ಸ್ಪಟಿಕದ ಮಾಲೆಯನ್ನು ಧರಿಸಿ ಧ್ಯಾನ, ಜಪವನ್ನು ಮಾಡುತ್ತಾರೆ.

ಸ್ಪಟಿಕ ಲಿಂಗದಲ್ಲಿ ಅಪಾರ ಶಕ್ತಿ ಇದೆ ಎಂಬ ಉಲ್ಲೇಖವಿದೆ. ಯುಜುರ್ವೇದದಲ್ಲಿ "ಜ್ಯೋತಿ ಸ್ಪಾಟಿಕ ಲಿಂಗ" ಎಂಬ ಪ್ರಸ್ತಾಪವಿದೆ. ಅಂದರೆ ಶಿವನು ಜ್ಯೋತಿ, ಲಿಂಗ ಮತ್ತು ಸ್ಪಾಟಿಕ ರೂಪದಲ್ಲಿ ಇದ್ದಾನೆ. ಆದ್ದರಿಂದ ಸ್ಪಟಿಕಲಿಂಗಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. "ಶುದ್ಧಸ್ಪಟಿಕ ಸಂಕಾಶಂ ವಿದ್ಯಾ ಪ್ರದಾಯಕಂ, ಶುದ್ಧಂ ಪೂರ್ಣ ಚಿದಾನಂದಂ/ ಸದಾಶಿವಮಹಂಭಜೆ" ಎಂದು ರುದ್ರಾಧ್ಯಾಯದ ಧ್ಯಾನದಲ್ಲಿ ಹೇಳಲಾಗಿದೆ. ಅಂದರೆ ಸ್ಪಟಿಕ ಲಿಂಗದ ದರ್ಶನ, ಸ್ಪರ್ಶನದಿಂದ ನಿಸ್ಸಂಶಯವಾಗಿ ಶೀಘ್ರ ಫಲಗಳು ದೊರೆಯುತ್ತವೆ. ಅದರಲ್ಲೂ ಶುದ್ಧವಿದ್ಯೆ, ಪೂರ್ಣತ್ವ, ಚಿದಾನಂದತ್ವವು ಲಭಿಸುತ್ತದೆ. ಶಾಸ್ತ್ರದ ಪ್ರಕಾರ ಸುರ್ಯೋದಯ ಮತ್ತು ಸೂರ್ಯಾಸ್ಥದ ಸಮಯದಲ್ಲಿ ಸ್ಪಟಿಕಲಿಂಗವನ್ನು ದರ್ಶನ ಮಾಡಿ ಪೂಜಿಸುವುದರಿಂದ ಸರ್ವ ಬೇಡಿಕೆಗಳು ಈಡೇರುತ್ತವೆ. ಅಂತೆಯೇ ಲಿಂಗದಹಳ್ಳಿ ಹಿರೇಮಠದಲ್ಲಿ ಸರ್ವ ಧರ್ಮೀಯರಿಗೂ ಸ್ಪಟಿಕಲಿಂಗವನ್ನು ಪೂಜಿಸಲು ಅವಕಾಶ ಮಾಡಿಕೊಡಲಾಗಿದೆ.

ಲಿಂಗದಹಳ್ಳಿ ಮಠದ ಇತಿಹಾಸ:

ಲಿಂಗದಹಳ್ಳಿ ಹಿರೇಮಠದ ಮೂಲ ಬಿಜಾಪುರ ಜಿಲ್ಲೆ ಇಂಡಿ ತಾಲೂಕಿನ ಎಳಮಲ್ಲಿ ಎಂಬ ಗ್ರಾಮ. ಸುಮಾರು 8ನೇ ಶತಮಾನದಿಂದಲೂ ಶ್ರೀಮಠ ತನ್ನ ಕಾರ್ಯ ನಡೆಸಿಕೊಂಡು ಬಂದಿದೆ ಎನ್ನಲಾಗುತ್ತದೆ. ನಂತರ ಹಗರಿಬೊಮ್ಮನಹಳ್ಳಿ ತಾಲೂಕಿನ ತಂಬರಹಳ್ಳಿಗೆ ಸ್ಥಳಾಂತರಗೊಂಡಿದ್ದ ಶ್ರೀಮಠವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

15ನೇ ಶತಮಾನದಲ್ಲಿ ಈಗಿನ ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲೂಕಿನ ಲಿಂಗದಹಳ್ಳಿಗೆ ಬಂದು ನೆಲೆಸಿದ ಬಗ್ಗೆ ಇತಿಹಾಸವಿದೆ. ಕೈಬರಹದ ಹಲವು ಹಳೇಯ ಗ್ರಂಥಗಳು, ತಾಡೋಲೆ ಕಟ್ಟುಗಳು ಶ್ರೀಮಠದ ಪರಂಪರೆ ಹೇಳುತ್ತವೆ.

ವಲಸೆ ಬರುವಾಗ ತಮ್ಮ ಪೂರ್ವಿಕರಿಂದ ಲಭ್ಯವಾಗಿದ್ದ ಸ್ಪಟಿಕ ಲಿಂಗವನ್ನು ತೆಗೆದುಕೊಂಡು ಬರುತ್ತಾರೆ. ಲಿಂಗದಹಳ್ಳಿ ಹೆಸರಿನಂತೆ ಲಿಂಗತತ್ವ ಪ್ರಸಾರಕ್ಕೆ ಸೂಕ್ತ ಸ್ಥಳವೆಂದು ಸ್ಪಟಿಕ ಲಿಂಗವನ್ನು ಇಲ್ಲಿ ಸ್ಥಾಪಿಸಿದ್ದಾರೆ. ಅಂದಿನಿಂದ ವಂಶಾವಳಿ ಮಠದ ಪರಂಪರೆ ಇಂದಿಗೂ ಹಾಗೆಯೇ ಮುಂದುವರೆದಿದೆ.

ಲಿಂಗದಹಳ್ಳಿ ಹಿರೇಮಠ

ವೇ.ಮೂ.ಚನ್ನಮಲ್ಲಪ್ಪ ಮತ್ತು ಶರಣೆ ಚನ್ನಮ್ಮನವರ ಪುತ್ರರಾದ ಶ್ರೀವೀರಭದ್ರ ಶಿವಾಚಾರ್ಯ ಸ್ವಾಮಿಗಳು ಸದ್ಯದ ಪೀಠಾಧಿಪತಿಗಳಾಗಿದ್ದು, ಸ್ವತಃ ವಿದ್ವಾಂಸರು, ತಪೋನಿಷ್ಠರು ಆಗಿದ್ದಾರೆ. ಪೂಜ್ಯರು ಅಷ್ಟಾಕೃತಿಯ ಬೃಹತ್ ಶಿಲಾಮಠವನ್ನು ನಿರ್ಮಿಸಿದ್ದಾರೆ. ಆದಿಜಗದ್ಗುರು ರೇಣುಕಾಚಾರ್ಯರನ್ನು ಸ್ಥಾಪಿಸಿ ಮುಂದೆ ಸ್ಪಟಿಕ ಲಿಂಗವನ್ನು ಪುನರ್ ಸ್ಥಾಪಿಸಿದ್ದಾರೆ. ಮಠದ ಆವರಣದಲ್ಲಿ ದ್ವಾದಶ ಜ್ಯೋತಿಲಿಂಗದ ಪ್ರತೀಕವಾಗಿ 12 ಲಿಂಗಗಳು, 18 ಶಕ್ತಿಪೀಠಗಳ ಪ್ರತೀಕವಾಗಿ ಶಕ್ತಿದೇವತೆಯರನ್ನು ಸ್ಥಾಪಿಸಿದ್ದಾರೆ. ಗೋತ್ರಪುರುಷ ವೀರಭದ್ರಸ್ವಾಮಿ, ಗವಿಸಿದ್ದೇಶ್ವರ ಸ್ವಾಮಿ ಮತ್ತು ಶಿಲಾಮಠದ ಮೇಲೆ 101 ಸ್ಥಲಗಳ ಪ್ರತೀಕವಾಗಿ 101 ಲಿಂಗಗಳನ್ನು ಸ್ಥಾಪಿಸುವ ಮೂಲಕ ಲಿಂಗದಹಳ್ಳಿ ಎಂಬ ಹೆಸರಿಗೆ ಸೂಕ್ತವಾಗಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಿದ್ದಾರೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 320ಕಿ.ಮೀ. ದೂರವಿರುವ ಲಿಂಗದಹಳ್ಳಿಗೆ ರಾ.ಹೆ.48ರ ಮೂಲಕ ರಾಣಿಬೆನ್ನೂರಿಗೆ ಹೋಗಿ ಅಲ್ಲಿಂದ 20ಕಿ.ಮೀ. ಕ್ರಮಿಸಿ ತಲುಪಬಹುದು. ಹೆಚ್ಚಿನ ಮಾಹಿತಿಗೆ ಮೊ: 9902409238.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದ್ಭವ ಬಸವಣ್ಣನ ಪವಾಡ
ಅನುಷ್ಠಾನ ಕ್ಷೇತ್ರ ಕೋಣಂದೂರು ಉಡೇವು ಮಠ

ದಿನಾಂಕ : 11-01-2018

ಸಕಲ ಚರಾಚರ ವಸ್ತುಗಳಲ್ಲೂ ಭಗವಂತನಿದ್ದಾನೆಂಬ ನಂಬಿಕೆ ಆಸ್ತಿಕ ಬಂಧುಗಳದ್ದು. ಕಲ್ಲು, ಮಣ್ಣು, ಮರ ಎಲ್ಲದರಲ್ಲೂ ಭಗವಂತನ ಕಂಡ ಭಕ್ತರ ನಂಬಿಕೆಯನ್ನು ಹೆಚ್ಚಿಸುವ ತಾಣಗಳು ಸಾಕಷ್ಟಿವೆ. ಅಂತಹದ್ದೊಂದು ತಾಣ ಕೋಣಂದೂರಿನ ಬೃಹನ್ಮಠದ ಆವರಣದಲ್ಲಿರುವ ಉದ್ಭವ ಬಸವಣ್ಣನ ದೇವಾಲಯ.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕೋಣಂದೂರು ಸದಾ ಹಸಿರು ಪರಿಸರದಿಂದ ಕಂಗೊಳಿಸುವ ಸಹ್ಯಾದ್ರಿಯ ಸಿರಿಮುಕುಟ. ಇಲ್ಲಿ ಒಂದು ಪುರಾತನ ಬಸವಣ್ಣನ ದೇವಾಲಯವಿದೆ. ಈ ದೇವಾಲಯದಲ್ಲಿ ಪೂಜೆಗೊಳ್ಳುವ ಬಸವಣ್ಣನ ಮೂರ್ತಿ ಸಾಮಾನ್ಯ ಮನುಷ್ಯರು ಸ್ಥಾಪಿಸಿದ ವಿಗ್ರಹವಲ್ಲ. ಇದು ಉದ್ಭವ ಮೂರ್ತಿ.

ಇಲ್ಲಿರುವ ಉದ್ಭವ ಬಸವಣ್ಣನನ್ನು ಪತ್ತೆ ಹಚ್ಚಿದ್ದು ಭೂಲೋಕದ ಕಾಮಧೇನು ಗೋಮಾತೆ!. ಕೋಣಂದೂರಿಗೆ ಹೊಂದಿಕೊಂಡಿರುವಂತೆ ಮಳಲಿಮಕ್ಕಿ ಎಂಬ ಗ್ರಾಮವಿದೆ. ಈ ಊರಿನ ಗೌಡರ ಮನೆಯ ಹಸುವೊಂದು ಮೇವಿಗೆ ಬಿಟ್ಟಾಗ; ಇಲ್ಲಿ ಬಂದು ಹಾಲು ಸುರಿಸುತ್ತಾ ನಿಲ್ಲುತ್ತಿತ್ತು. ಪ್ರತಿನಿತ್ಯ ಹೀಗೆ ಮಾಡುವುದನ್ನು ಕಂಡ ಧನಗಾಹಿ ಹುಡಗರು ಗೌಡರಿಗೆ ಸುದ್ದಿ ಮುಟ್ಟಿಸುತ್ತಾರೆ. ಆಗ ಸ್ವತಃ ಊರ ಗೌಡರು ಬಂದು ಪರಿಶೀಲಿಸಿದಾಗ ಹಸು ಹಾಲು ಸುರಿಸುತ್ತಿದ್ದ ಜಾಗದಲ್ಲಿ ಬಸವಣ್ಣನ ಮೂರ್ತಿ ಇರುವುದು ಬೆಳಕಿಗೆ ಬರುತ್ತದೆ. ನಂತರ ಗ್ರಾಮದ ಹಿರಿಯರೆಲ್ಲಾ ಸೇರಿ ಇಲ್ಲಿ ದೇವಾಲಯವನ್ನು ಕಟ್ಟಿಸಿದ್ದಾರೆ.



ಕೋಣಂದೂರು ಉದ್ಭವ ಬಸವಣ್ಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೋಣಂದೂರು ಸ್ವಾಮೀಜಿ ಅನುಷ್ಠಾನ

ಉದ್ಭವ ಬಸವಣ್ಣ ಪ್ರಕಟಗೊಂಡು, ದೇವಾಲಯ ನಿರ್ಮಾಣವಾದ ನಂತರ ಇದು ಮತ್ತಷ್ಟು ಪವಾಡಗಳಿಗೆ ಸಾಕ್ಷಿಯಾಯಿತು. ಭಕ್ತರ ಬೇಡಿಕೆಗೆ ಇಲ್ಲಿ ಹೂವಿನ ಪ್ರಸಾದ ನೀಡುವ ಬಸವಣ್ಣ ನಿಖರವಾದ ಉತ್ತರ ನೀಡುತ್ತಾನೆಂಬುದು ಸ್ಥಳೀಯರು ಮಾತು. ಸಾಮಾನ್ಯವಾಗಿ ದೇವರಲ್ಲಿ ಹೂವಿನ ಪ್ರಸಾದ ಕೇಳುವ ಪದ್ಧತಿ ಇರುತ್ತದೆ. ಕೇವಲ ಎಡಕ್ಕೆ ಬಲಕ್ಕೆ ಎಂಬ ಪ್ರಸಾದ ಬೇರೆಡೆಗಳಲ್ಲಿದ್ದರೆ ಕೋಣಂದೂರಿನ ಉದ್ಭವ ಬಸವಣ್ಣನ ದೇವಾಲಯದಲ್ಲಿ ನಿಖರವಾದ ಹೂವನ್ನೇ ಅಪ್ಪಣೆಯ ಪ್ರಸಾದವಾಗಿ ಕೇಳಿದರೂ; ಕೊಡುವ ಪವಾಡ ಇಲ್ಲಿ ನಡೆಯುತ್ತದೆ.

ತಪಸ್ವಿ ಕ್ಷೇತ್ರದ ಮಹತ್ವ:

ಕೋಣಂದೂರಿನ ಪವಾಡ ಬಸವಣ್ಣನ ದೇವಾಲಯ ಇರುವ ಜಾಗವು ತಪಸ್ವಿ ಕ್ಷೇತ್ರವಾಗಿದೆ. ಶ್ರೀಶೈಲ ಪೀಠದ ಶಾಖಾನುವರ್ತಿಗಳಾಗಿದ್ದ ಉಡೇವು ಶ್ರೀಶಿವಲಿಂಗೇಶ್ವರ ಸ್ವಾಮಿಗಳು ಇಲ್ಲಿ ಅನಷ್ಠಾನಗೈದು ಐಕ್ಯರಾಗಿದ್ದಾರೆ. ಶಿವಲಿಂಗೇಶ್ವರ ಸ್ವಾಮಿಗಳ ನಂತರ ಪಟ್ಟಾಧ್ಯಕ್ಷರಾಗಿ ಬಂದ ಷ.ಬ್ರ.ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಶಿವಪೂಜಾ ನಿಷ್ಠರೂ ಮಹಾ ತಪಸ್ವಿಗಳು ಹಾಗೂ ಅನುಷ್ಠಾನ ಮೂರ್ತಿಗಳಾಗಿ ಈ ಕ್ಷೇತ್ರವನ್ನು ಪಾವನರಾಗಿಸಿದ್ದಾರೆ. ವಿಶೇಷವಾಗಿ ವಿಜೃಂಭಣೆಯ ಶಿವಪೂಜೆಯಿಂದ ಮಲೆನಾಡಿನ ಮತೆಮಾತಾಗಿದ್ದ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳ ಕೃಪಾಶೀರ್ವಾದ ಪಡೆದ ಹಲವು ಭಕ್ತರು ಇಂದಿಗೂ ಶ್ರೀಗಳನ್ನು ನೆನೆಯುತ್ತಾರೆ.

ಶ್ರೀಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ಧನುರ್ಮಾಸದ ಅನುಷ್ಠಾನಕ್ಕೆ ವಿಶೇಷ ಆದ್ಯತೆಯನ್ನು ಕೊಟ್ಟಿದ್ದರು. ಮೊಟ್ಟ ಮೊದಲ ಬಾರಿಗೆ ಮಲೆನಾಡ ಭಾಗದಲ್ಲಿ ಧನುರ್ಮಾಸಾಚರಣೆಯನ್ನು ಆರಂಭಿಸಿದ ಪೂಜ್ಯರು ಪ್ರತಿವರ್ಷ ಧನುರ್ಮಾಸದಲ್ಲಿ ಒಂದು ತಿಂಗಳ ಕಾಲ ಕಟ್ಟುನಿಟ್ಟಾದ ಅನುಷ್ಠಾನ ವ್ರತವನ್ನು ಆಚರಿಸುತ್ತಿದ್ದರು. ಅದೇ ಅನುಷ್ಠಾನ ಬಲದಿಂದ ಭಕ್ತರ ಕಷ್ಟ-ನಷ್ಟಗಳನ್ನು ಪರಿಹರಿಸುವ ಶಕ್ತಿ ಸಂಪಾದಿಸಿಕೊಂಡಿದ್ದರು.

ಶ್ರೀಶಿವಲಿಂಗ ಸ್ವಾಮಿಗಳ ಕರಕಮಲ ಸಂಜಾತರಾದ ಪ್ರಸ್ತುತ ಪಟ್ಟಾಧ್ಯಕ್ಷರಾದ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ತಮ್ಮ ಗುರುಗಳ ಹಾದಿಯಲ್ಲೇ ಮುನ್ನಡೆಯುತ್ತಿದ್ದಾರೆ. ಕಠಿಣ ವ್ರತಾಚರಣೆಗಳನ್ನು ಅಳವಡಿಸಿಕೊಂಡು ಮಲೆನಾಡಿನ ಭಕ್ತ ಸಮೂಹಕ್ಕೆ ಸಂಸ್ಕಾರವನ್ನು ನೀಡುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. ಜೊತೆಗೆ ಭಕ್ತರ ಅನುಕೂಲಕ್ಕಾಗಿ ಹಲವು ಕಾರ್ಯ ಯೋಜನೆಗಳನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೈಗೆತ್ತಿಕೊಂಡಿರುವ ಪೂಜ್ಯರು ಶ್ರೀಮಠದಲ್ಲಿ ಕರ್ತೃ ಗದ್ದುಗೆಯ ಶಿಲಾ ಮಂದಿರವನ್ನು ನಿರ್ಮಾಣ ಮಾಡಿ ಅಭಿವೃದ್ಧಿ ಕಾರ್ಯಕ್ಕೆ ನಾಂದಿ ಹಾಡಿದ್ದಾರೆ.



ಕೋಣಂದೂರು ಮಠ

ಧನುರ್ಮಾಸ ಅನುಷ್ಠಾನದ ಮಹತ್ವ:

ಸೂರ್ಯನು ಧನುರಾಶಿಯನ್ನು ಪ್ರವೇಶಿಸುವ ದಿನದಿಂದ ಆರಂಭಿಸಿ ಮಕರ ರಾಶಿಯವರೆಗೆ ಬರುವ ಒಂದು ತಿಂಗಳ ಕಾಲವೇ ಧನುರ್ಮಾಸ. ಹಿಂದು ಪರಂಪರೆಯಲ್ಲಿ ಧನುರ್ಮಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಧನುರ್ಮಾಸದಲ್ಲಿ ಒಂದು ದಿನ ಪೂಜೆ ಮಾಡಿದರೆ; ಸಾವಿರ ದಿನಗಳು ಪೂಜೆ ಮಾಡಿದ ಪುಣ್ಯ ಲಭಿಸುತ್ತದೆ ಎನ್ನುತ್ತವೆ ಪುರಾಣಗಳು. ಶಾಸ್ತ್ರಗಳಲ್ಲಿ ಉಲ್ಲೇಖಗೊಂಡಿರುವಂತೆ ಈ ಮಾಸದ ಬ್ರಾಹ್ಮಿ ಮುಹೂರ್ತದಲ್ಲಿ ದೇವತೆಗಳು, ಭೂಲೋಕದಲ್ಲಿ ಸಂಚಾರ ಮಾಡುತ್ತಾರೆಂಬ ನಂಬಿಕೆ ಇದೆ. ಈಗಾಗಲೇ ಧನುರ್ಮಾಸ ಆರಂಭವಾಗಿದ್ದು, ಮಕರ ಸಂಕ್ರಮಣದ ಉತ್ತರಾಯಣ ಪುಣ್ಯಕಾಲದವರೆಗೆ ಧನುರ್ಮಾಸವಿರುತ್ತದೆ.

ಕೋಣಂದೂರು ಬೃಹನ್ಮಠದಲ್ಲಿ ಧನುರ್ಮಾಸಕ್ಕೆ ಎಲ್ಲಿಲ್ಲದ ಪ್ರಾಶಸ್ತ್ಯವನ್ನು ನೀಡಲಾಗಿದೆ. ಪರಂಪರೆಯಂತೆ ಪ್ರಸ್ತುತ ಶ್ರೀಗಳು ಧನುರ್ಮಾಸದ ಅನುಷ್ಠಾನ ಕೈಗೊಂಡಿದ್ದು, ಅನುಷ್ಠಾನದ ಮಹಾಮಂಗಲವು ಸಂಕ್ರಾಂತಿಯಂದು ಸಂಪೂರ್ಣಗೊಳ್ಳುತ್ತದೆ.

ಪ್ರತಿ ಜ.14ರಂದು ಕರ್ತೃ ಶಿವಲಿಂಗೇಶ್ವರ ಸ್ವಾಮಿಗಳ ಪಲ್ಲಕ್ಕಿ ಮಹೋತ್ಸವ, ಶಾಶ್ವತ ಮುತ್ತೈದೆ ಭಾಗ್ಯಕ್ಕಾಗಿ ದಂಪತಿಗಳಿಂದ ಮಾಂಗಲ್ಯ ಪೂಜೆ, ಹೋಮ-ಹವನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ನಂತರ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಧರ್ಮಸಭೆ ನಡೆಯಲಿದೆ. ಸಮಾರಂಭದಲ್ಲಿ ಶಿವಲಿಂಗಶ್ರೀ ಪ್ರಶಸ್ತಿಯನ್ನು ವಿವಿಧ ಕ್ಷೇತ್ರದ ಸಾಧಕರಿಗೆ ನೀಡಲಾಗುತ್ತಿದ್ದು, ನಾಡಿನ ಹಲವು ಮಠಾಧೀಶರು, ಸಾಹಿತಿಗಳು, ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 330 ಕಿ.ಮೀ. ದೂರವಿದ್ದು, ಬಿ.ಎಚ್.ರಸ್ತೆ ಮೂಲಕ ಶಿವಮೊಗ್ಗ ಹೋಗಿ ಅಲ್ಲಿಂದ ಹುಂಚ ಮಾರ್ಗವಾಗಿ ಕೋಣಂದೂರು ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಕ್ಕಳ ಕಾಯುವ ಕಲ್ಲುಬಾಳು ಕ್ಷೇತ್ರ ಶ್ರೀರುದ್ರಮುನೀಶ್ವರ ಸ್ವಾಮಿಗಳ ಜೀವಂತ ಸಮಾಧಿ

ದಿನಾಂಕ : 18-01-2018

ಮಕ್ಕಳ ಮೇಲೆ ಭಗವಂತನಿಗೆ ಪ್ರೀತಿ ಜಾಸ್ತಿ. ಮಕ್ಕಳ ಭಕ್ತಿಗೆ ಭಗವಂತ ಬೇಗ ಒಲಿದು ವರ ಕೊಡುತ್ತಾನೆಂಬುದನ್ನು ಪುರಾಣ, ಪುಣ್ಯಕತೆಗಳು ಹೇಳುತ್ತವೆ. ಮಕ್ಕಳನ್ನು ಕಾಪಾಡುವ ಪುಣ್ಯಕ್ಷೇತ್ರಗಳು ಸಾಕಷ್ಟಿವೆ. ಅಂತಹವುಗಳಲ್ಲಿ ಒಂದು ಚಿಕ್ಕಕಲ್ಲುಬಾಳು ಕ್ಷೇತ್ರ.

ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಚಿಕ್ಕಕಲ್ಲುಬಾಳು ಮಠದಲ್ಲಿ ಶ್ರೀರುದ್ರಮುನಿ ಸ್ವಾಮಿಗಳ ಜೀವಂತ ಸಮಾಧಿ ಇದೆ. ಶತಮಾನಗಳಿಂದ ಪೂಜೆಗೊಳ್ಳುತ್ತಿರುವ ಕರ್ತೃ ಗದ್ದುಗೆಯಲ್ಲಿ ಒಂದು ವಿಶೇಷ ಶಕ್ತಿ ಇದೆ. ಈ ಭಾಗದಲ್ಲಿ ಯಾವುದೇ ಸಮುದಾಯದ, ಯಾವುದೇ ಮನೆಯ ಮಕ್ಕಳಿಗೆ ಆರೋಗ್ಯದಲ್ಲಿ ಏರು ಪೇರಾದರೂ ಭವರೋಗ ವೈದ್ಯನಂತೆ ಕಾಪಾಡುತ್ತಿರುವ ಮಹಾ ಶಿವಯೋಗಿ ಶ್ರೀರುದ್ರಮುನೀಶ್ವರ ಸ್ವಾಮಿಗಳು.

ಕಲ್ಲುಬಾಳು ರುದ್ರಮುನಿಸ್ವಾಮಿ ಗದ್ದುಗೆ

ಇಂದಿನ ಆಧುನಿಕ ಯುಗದಲ್ಲೂ ಭಕ್ತರ ನಂಬಿಕೆಗೆ ಇಲ್ಲಿ ಮೋಸವಿಲ್ಲ. ಇಂದಿಗೂ ಕನಕಪುರ ಪ್ರಾಂತದಲ್ಲಿ ಯಾವುದೇ ಮಕ್ಕಳ ಆರೋಗ್ಯದಲ್ಲಿ ವ್ಯತ್ಯಯವಾದರೂ; ಪೋಷಕರು ಮಕ್ಕಳನ್ನು ಹೊತ್ತು ಮೊದಲು ಬರುವುದು ಚಿಕ್ಕಕಲ್ಲುಬಾಳು ಮಠಕ್ಕೆ. ಮೂಢನಂಬಿಕೆ ಎಂದು ಜರಿದವರು ಕೂಡಾ; ಸ್ವಂತ ಅನುಭವಕ್ಕೆ ಬಂದ ಮೇಲೆ ಭಕ್ತಿಯಿಂದ ಶರಣಾದ ಉದಾಹರಣೆಗಳು ಇಲ್ಲಿವೆ.

ಗ್ರಾಮೀಣ ಪ್ರದೇಶದಲ್ಲಿ; ಮಕ್ಕಳಿಗೆ ದೃಷ್ಟಿ ತಾಗುವುದು, ಗಾಳಿ ಸೋಂಕು, ಬಾಲಗ್ರಹ ಪೀಡೆ ಇತ್ಯಾದಿ ನಂಬಿಕೆಗಳು ಇಂದಿಗೂ ಜೀವಂತ. ಹಾಗೆ ಗಾಳಿಸೋಂಕಿಗೆ ಒಳಗಾಗಿ ರಚ್ಚೆ ಹಿಡಿದ ಮಕ್ಕಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲ್ಲುಬಾಳು ಶಿವಕುಮಾರಸ್ವಾಮಿ ಗದ್ದುಗೆ

ಪೋಷಕರು ಆತಂಕಕ್ಕೊಳಗಾಗುತ್ತಾರೆ. ಇಂತಹ ಸಂದರ್ಭದಲ್ಲಿ ಮಕ್ಕಳನ್ನು ಚಿಕ್ಕಕಲ್ಲುಬಾಳು ಮಠಕ್ಕೆ ಕರೆತಂದು ಕರ್ತೃ ಗದ್ದುಗೆಗೆ ಪೂಜೆ ಮಾಡಿಸಿ, ಭಸ್ಮವನ್ನು ಧರಿಸಿಕೊಂಡು ಕರೆದೊಯ್ದರೆ ಮಕ್ಕಳು ಗುಣಮುಖರಾಗುತ್ತಾರೆಂಬ ನಂಬಿಕೆ ಹಿಂದಿನಿಂದಲೂ ಇಲ್ಲಿದೆ. ಜನರ ನಂಬಿಕೆಗೆ ಸಾಕ್ಷಿಯಾಗಿ ಮಕ್ಕಳನ್ನು ಕರೆತಂದು ಆರೋಗ್ಯಕ್ಕಾಗಿ ಗದ್ದುಗೆ ಮುಂದೆ ಪ್ರಾರ್ಥಿಸುವವರ ಸಂಖ್ಯೆ ಹೆಚ್ಚಾಗಿದೆ.

ಚಿಕ್ಕಕಲ್ಲುಬಾಳು ಕ್ಷೇತ್ರದ ಇತಿಹಾಸ:

ಕರ್ನಾಟಕದಲ್ಲಿ ಜಗದ್ಗುರು ರೇವಣಸಿದ್ದೇಶ್ವರರ ಪರಂಪರೆಗೆ ಸಾಕಷ್ಟು ಕುರುಹುಗಳು ಲಭ್ಯವಾಗುತ್ತವೆ. 11ನೇ ಶತಮಾನದಲ್ಲಿದ್ದ ರೇವಣಸಿದ್ದೇಶ್ವರರು ಮಹಾನ್ ಸಾಧಕರು. ಜಗದ್ಗುರು ರೇಣುಕಾಚಾರ್ಯರ ಕಲಿಯುಗಾವತಾರಿಗಳು ಎಂಬ ಮಾತಿದೆ. ಜಗದ್ಗುರು ರೇವಣಸಿದ್ದೇಶ್ವರರು ಧರ್ಮ ಬೋದನೆಗಾಗಿ ಲೋಕಸಂಚಾರ ಗೈಯುತ್ತ ಇಲ್ಲಿಗೆ ಬಂದಾಗ ಶ್ರೀರುದ್ರಮುನಿ ಶಿವಾಚಾರ್ಯರೆಂಬ ಶಿವಯೋಗಿಗಳಿಗೆ ಆಶೀರ್ವಾದ ಮಾಡುತ್ತಾರೆ. ಜಗದ್ಗುರು ರೇವಣಸಿದ್ದೇಶ್ವರರು ಇಲ್ಲಿ ಸಂಚರಿಸಿದ್ದಕ್ಕೆ ಪೂರಕವಾಗಿ 8ಕಿ.ಮೀ. ದೂರದಲ್ಲಿ ರಾಮನಗರದ ಶ್ರೀರೇವಣಸಿದ್ದೇಶ್ವರ ಬೆಟ್ಟವಿದೆ.

ಸುವರ್ಣಮುಖಿ ನದಿಯ ದಂಡೆಯ ಮೇಲೆ ಶ್ರೀರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಚಿಕ್ಕಕಲ್ಲುಬಾಳು ಮಠದಲ್ಲಿ; 12ಕ್ಕೂ ಹೆಚ್ಚಿನ ಸ್ವಾಮಿಗಳು ಗುರುಪರಂಪರೆಯನ್ನು ಮುನ್ನಡೆಸಿದ್ದಾರೆ. 1931 ರಲ್ಲಿ ಗ್ರಾಮದಲ್ಲಿ ತಲೆದೋರಿದ ಪ್ಲೇಗ್‌ನಿಂದ ಗ್ರಾಮದಲ್ಲಿ ಸಾಕಷ್ಟು ಸಾವು ನೋವುಗಳಾಗುತ್ತವೆ. ಅಂದಿನ ಸ್ವಾಮೀಜಿಗಳು ಸಹ ಲಿಂಗೈಕ್ಯರಾಗುತ್ತಾರೆ. ತರುವಾಯ 13 ವರ್ಷಗಳ ಕಾಲ ಶ್ರೀಮಠಕ್ಕೆ ಯಾವುದೇ ವಾರಸುದಾರರಿಲ್ಲದೆ ಸಂಪೂರ್ಣ ಮಠದ ಆಸ್ತಿ-ಪಾಸ್ತಿಗಳು ನಾಶವಾಗುತ್ತವೆ. ನಂತರ1944ರಲ್ಲಿ ಪೂಜ್ಯರ ವಂಶಸ್ಥರೇ ಆದ ಪರ್ವತಯ್ಯನೆಂಬ ಬಾಲಕನನ್ನು ಶ್ರೀಶಿವಕುಮಾರ ಶಿವಾಚಾರ್ಯರೆಂಬ ಅಭಿನಾಮದಿಂದ ಪಟ್ಟಾಭಿಷೇಕ ಮಾಡಲಾಯಿತು. ಇವರು ಸುದೀರ್ಘ 70 ವರ್ಷಗಳ ಕಾಲ ಮಠವನ್ನು ಮುನ್ನಡೆಸಿದ್ದು ಮಾತ್ರವಲ್ಲ, ಈ ಭಾಗದ ಸರ್ವಜನಾಂಗದ ಭಕ್ತರ ಆರಾಧ್ಯ ದೈವವಾಗಿದ್ದರು.

1932ರಲ್ಲಿ ಶ್ರೀಮತಿ ಸಿದ್ಧಮ್ಮ ಮತ್ತು ಶ್ರೀ ಮಲ್ಲಪ್ಪನವರ ಪುಣ್ಯಸಂಜಾತರಾಗಿ ಜನಿಸಿದ ಪೂಜ್ಯರು ಕೇವಲ 12ನೇ ವಯಸ್ಸಿನಲ್ಲೇ ಮಠದ ಜವಾಬ್ದಾರಿಯನ್ನು ವಹಿಸಿಕೊಂಡು, ಸ್ವತಃ ಕಾಯಕ ಯೋಗಿಗಳಾಗಿ, ನಶಿಸಿ ಹೋಗಿದ್ದ ಶ್ರೀಮಠದ ಆಸ್ತಿಯನ್ನು ಕ್ರೂಢೀಕರಿಸುವುದರ ಜೊತೆಗೆ ಗ್ರಾಮೀಣ ಸಂಸ್ಕೃತಿಯನ್ನು ಬೆಳೆಸುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂಲಕ ಭಕ್ತರಿಗೆ ಧಾರ್ಮಿಕ, ಸಾಮಾಜಿಕ ಮಾರ್ಗದರ್ಶನ ಮಾಡುತ್ತಾರೆ. ತಮ್ಮ ಇಳಿ ವಯಸ್ಸಿನಲ್ಲಿ ಕ್ರಿಯಾಶೀಲ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿ ಶ್ರೀಶಿವಾನಂದ ಶಿವಾಚಾರ್ಯ ಸ್ವಾಮಿಗಳಿಗೆ ಮಠದ ಅಧಿಕಾರವನ್ನು ವಹಿಸಿ 2012ರಲ್ಲಿ ಲಿಂಗೈಕ್ಯರಾದರು. ಅಂದಿನಿಂದ ಭಕ್ತರು ಪೂಜ್ಯರ ಪುಣ್ಯಾರಾಧನೆಯನ್ನು ಅತ್ಯಂತ ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೆ.

ಕಲ್ಲುಬಾಳು ಶಿವಾನಂದ ಸ್ವಾಮೀಜಿ

ಸಾಮರಸ್ಯ ಸಾರುವ ಪುಣ್ಯಾರಾಧನೆ:

ಇಂದು ನಾಡಿನಾದ್ಯಂತ ಎದ್ದಿರುವ ವೀರಶೈವ ಲಿಂಗಾಯತ ಪ್ರತ್ಯೇಕ ಧರ್ಮದ ವಿವಾದಕ್ಕೆ ಸಂಬಂಧ ಪಟ್ಟಂತೆ ಗುರು-ವಿರಕ್ತರಲ್ಲಿ ಸಾಕಷ್ಟು ಅಭಿಪ್ರಾಯ ಭೇದಗಳನ್ನು ಕಾಣುತ್ತೇವೆ. ಆದರೆ ಚಿಕ್ಕಕಲ್ಲುಬಾಳು ಮಠ ಅದಕ್ಕೆ ಅಪವಾದವೆಂಬಂತೆ ಸಾಮರಸ್ಯವನ್ನು ಸಾರುತ್ತಿದೆ. ಶ್ರೀರಂಭಾಪುರಿ ವೀರಸಿಂಹಾಸನ ಪೀಠದ ಶಾಖಾಮಠವಾಗಿದ್ದರೂ ಬೆಂಗಳೂರು ನಗರದ ಕೆಂಗೇರಿಯಲ್ಲಿರುವ ವಿರಕ್ತ ಪರಂಪರೆಯ ಬಂಡೇಮಠದ ಪೂಜ್ಯರ ಮಾರ್ಗದರ್ಶನದಂತೆ ಕಾರ್ಯಕ್ರಮಗಳು ಜರುಗುತ್ತಿವೆ. ಉಭಯ ಮಠಗಳಿಗೂ ಓರ್ವರನ್ನೇ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ್ದು ರಾಜ್ಯದಲ್ಲೇ ಅತ್ಯಂತ ಅಪರೂಪದ ಸಾಮರಸ್ಯಕ್ಕೆ ಇದು ಸಾಕ್ಷಿಯಾಗಿದೆ.

ಪ್ರತಿವರ್ಷ ಶ್ರೀಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ಹಮ್ಮಿಕೊಳ್ಳಲಾಗುವುದು. ಈ ವರ್ಷ ಸಾಮರಸ್ಯಕ್ಕೆ ಸಾಕರರೂಪವೆಂಬಂತೆ ಶ್ರೀರಂಭಾಪುರಿ ಜಗದ್ಗುರುಗಳು ಹಾಗೂ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರುಗಳು ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದಾರೆ. ಬಂಡೇಮಠದ ಶ್ರೀಸಚ್ಚಿದಾನಂದ ಸ್ವಾಮಿಗಳ ನೇತೃತ್ವದಲ್ಲಿ ನಾಡಿನ ಹಲವು ಗುರು ವಿರಕ್ತ ಮಠಾಧೀಶರು, ರಾಜಕೀಯ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಮುಡುಕುತೊರೆ ತೋಪಿನ ಮಠ ಶ್ರೀಮಹಾಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ "ಶಿವಚೇತನ ಪ್ರಶಸ್ತಿ" ನೀಡಿ ಗೌರವಿಸಲಾಗುವುದು.

ಹೋಗುವ ಮಾರ್ಗ:

ಬೆಂಗಳೂರಿನಿಂದ 45ಕಿ.ಮೀ ದೂರವಿದ್ದು, ಕನಕಪುರ ಮಾರ್ಗದಲ್ಲಿ ಹಾರೋಹಳ್ಳಿಗೆ ಹೋಗಿ ಅಲ್ಲಿಂದ 5ಕಿ.ಮೀ ಕ್ರಮಿಸಿ ಚಿಕ್ಕಕಲ್ಲುಬಾಲು ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೋಷ ನಿವಾರಕ ಶೀಲವಂತ ಸಿದ್ದೇಶ್ವರ
ಸಾಲೂರು ಮಠದಲ್ಲಿ ಪಟ್ಟಾಧಿಕಾರದ ರಜತ ಮಹೋತ್ಸವ

ದಿನಾಂಕ : 01–02–2018

ಮನುಷ್ಯನನ್ನು ದೈಹಿಕವಾಗಿ ಹಲವು ರೋಗಗಳು ದುರ್ಬಲಗೊಳಿಸುತ್ತವೆ. ಮಾನಸಿಕವಾಗಿಯೂ ಕೆಲವು ರೋಗಗಳು ತೊಂದರೆ ನೀಡುತ್ತವೆ. ಆದರೆ ರೋಗವಿಲ್ಲದೆ ದೈಹಿಕ ಮತ್ತು ಮಾನಸಿಕವಾಗಿ ಜೀವನ ಪರ್ಯಂತ ಕಾಡುವ ದೊಡ್ಡ ಸಮಸ್ಯೆ ಬಂಜೆತನ. ಬಂಜೆತನಕ್ಕೆ ಪೂರ್ವ ಕರ್ಮಗಳು ಕಾರಣ ಎನ್ನುವುದು ಜ್ಯೋತಿಷ್ಯ ಶಾಸ್ತ್ರ. ಅಂತಹ ಸಂತಾನ ದೋಷವನ್ನು ನಿವಾರಿಸಿ ಸಂತಸವನ್ನು ನೀಡುವ ಪ್ರಸಿದ್ಧ ಕ್ಷೇತ್ರ ಸಾಲೂರು ಶ್ರೀಶೀಲವಂತ ಸಿದ್ದೇಶ್ವರರ ಸನ್ನಿಧಿ.

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಸಾಲೂರು ಗ್ರಾಮದಲ್ಲಿರುವ ಕಾಶೀಪೀಠದ ಹಿರೇಮಠಕ್ಕೆ ಸುಮಾರು 9 ಶತಮಾನಗಳ ಇತಿಹಾಸವಿದೆ. ಕೆಳದಿ ಅರಸ ಚೌಡಪ್ಪ ನಾಯಕನು ಭೂದಾನ ಮತ್ತು ಗೋದಾನ ನೀಡಿದ ಶಿಲಾ ಶಾಸನವು ಶ್ರೀಮಠದಲ್ಲಿದೆ. ಇಲ್ಲಿರುವ ವಿಶಾಲಾಕ್ಷಿ ಸಮೇತ ವಿಶ್ವನಾಥ ಸ್ವಾಮಿ ಹಾಗೂ ಚೌಡೇಶ್ವರಿ ದೇವಿಯ ಸನ್ನಿಧಿಯು ಈ ಭಾಗದ ಭಕ್ತರ ಆರಾಧ್ಯ ಕೇಂದ್ರ. ಕರ್ತೃ ಶ್ರೀಶೀಲವಂತ ಸಿದ್ದೇಶ್ವರ ಶಿವಯೋಗಿಗಳು ದೋಷ ನಿವಾರಕ ಸ್ವಾಮಿ ಎಂದೇ ಪ್ರಸಿದ್ಧಿ. ಯಾವುದೇ ಸಮಸ್ಯೆಯಿಂದ ಬಳಲುವವರು ಇಲ್ಲಿ ಬಂದು ತಮ್ಮ ಜಾತಕ ದೋಷಗಳನ್ನು ಪರಿಹರಿಸಿ ಕೊಳ್ಳುತ್ತಾರೆ.

ಸಾಲೂರು ಶ್ರೀ ಸಿದ್ಧೇಶ್ವರ

ಸಾಲೂರು ಮಠದ ಗುರು ಪರಂಪರೆಯಲ್ಲಿ ಬಂದ ಬಹುತೇಕ ಗುರುಗಳು ಜ್ಯೋತಿಷ್ಯ ಮತ್ತು ಸಂಸ್ಕೃತ ಪಂಡಿತರಾಗಿದ್ದರು. ಈ ಕಾರಣದಿಂದಲೇ ಇಲ್ಲಿ ಹಿಂದಿನಿಂದಲೂ ಜಾತಕವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಸಾಲೂರು ಶ್ರೀ ಗುರುಲಿಂಗ ಜಂಗಮ ಶಿವಾಚಾರ್ಯ ಸ್ವಾಮೀಜಿ

ಶಾಸ್ತ್ರಬದ್ಧವಾಗಿ ವಿಮರ್ಶಿಸಿ ಸೂಕ್ತ ಪರಿಹಾರವನ್ನು ನೀಡಲಾಗುತ್ತಿತ್ತು. ಜೊತೆಗೆ ಇಲ್ಲಿ ಜ್ಯೋತಿಷ್ಯ, ವೇದ, ಆಗಮವವನ್ನು ಶಾಸ್ತ್ರಬದ್ಧವಾಗಿ ಹೇಳಿಕೊಡುವ ಪಾಠಶಾಲೆಯನ್ನು ತೆರೆದು ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಿದ್ದಾರೆ.

ಲಿಂಗೈಕ್ಯ ಶ್ರೀಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳ ಕಾಲದಿಂದ ಶ್ರೀಮಠದ ಪರಿಸರದಲ್ಲಿ ಗುರುಕುಲ ನಡೆಯುತ್ತಿದೆ. ಈ ಗುರುಕುಲದಲ್ಲಿ ಅಭ್ಯಾಸ ಮಾಡಿದ ವೈಧಿಕರು ಜ್ಯೋತಿರ್ಲಿಂಗ ಕ್ಷೇತ್ರಗಳಾದ ಕೇದಾರ, ಶ್ರೀಶೈಲ ಸೇರಿದಂತೆ ದೇಶದ ಪ್ರತಿಷ್ಠಿತ ದೇವಾಲಯಗಳು ಮತ್ತು ಪುರಾತನ ಪೀಠಗಳಲ್ಲಿ ಪುರೋಹಿತರಾಗಿದ್ದಾರೆ. ನಾಡಿನ ಎಲ್ಲಿಯೇ ಮಹಾ ಯಾಗ ಮತ್ತು ಹೋಮಗಳು ನಡೆದರೂ ಅಲ್ಲಿನ ವೈಧಿಕತ್ವದ ಹೊಣೆ ಸಾಲೂರು ಮಠದಲ್ಲಿ ಅಭ್ಯಾಸ ಮಾಡಿದವರದ್ದೆ ಇರುತ್ತದೆ. ನಾಡಿನಾದ್ಯಂತ ಸಾವಿರಾರು ದೇವಸ್ಥಾನಗಳ ಪ್ರತಿಷ್ಠಾಪನೆ, ನೂರಾರು ಕಳಶ ಸ್ಥಾಪನೆಯಲ್ಲಿ ಸಾಲೂರು ಮಠದ ಸ್ವಾಮಿಗಳದ್ದು ಪ್ರಮುಖ ಪಾತ್ರ. ವರ್ಷಕ್ಕೊಮ್ಮೆ ನಡೆಯುವ ಶ್ರೀಸಿದ್ದೇಶ್ವರ ಸ್ವಾಮಿಗಳ ವಾರ್ಷಿಕ ಜಾತ್ರೆಯು ಇದೇ ಫೆ.2 ರಿಂದ ಮೂರು ದಿನಗಳ ಕಾಲ ನಡೆಯಲಿದೆ.

ಮಲೆಮಹದೇಶ್ವರ ಸ್ವಾಮಿಗೆ ಸಾಲೂರಿನ ನಂಟು:

ನಾಡಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿರುವ ಮಲೆಮಹದೇಶ್ವರ ಸ್ವಾಮಿಗೂ ಸಾಲೂರು ಹಿರೇಮಠಕ್ಕೂ ಒಂದು ಧಾರ್ಮಿಕ ನಂಟಿದೆ. 15–16ನೇ ಶತಮಾನದ ನಡುವೆ ಒಮ್ಮೆ ಸಾಲೂರು ಹಿರೇಮಠವು ಅಗ್ನಿ ದುರಂತದಿಂದ ಸಂಪೂರ್ಣ ಸುಟ್ಟು ಹೋಗುತ್ತದೆ. ಈ ಘಟನೆಯಿಂದ ಮನನೊಂದ ಅಂದಿನ ಶ್ರೀಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು ಶಿಷ್ಯನಿಗೆ ಉಸ್ತುವಾರಿ ವಹಿಸಿ ದೇಶ ಸಂಚಾರ ಹೋಗುತ್ತಾರೆ.

ಹೀಗೆ ವಿಶ್ವಪರ್ಯಟನೆ ಮಾಡುತ್ತ ಮಲೆಮಹದೇಶ್ವರ ಬೆಟ್ಟಕ್ಕೆ ಹೋಗಿ ಅಲ್ಲಿ ಅನುಷ್ಠಾನ ಕೈಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮಲೆಮಹದೇಶ್ವರ ಸ್ವಾಮಿಯನ್ನು ಪೂಜೆ ಮಾಡುತ್ತಿದ್ದ ಬುಡಕಟ್ಟು ವರ್ಗದ ತಮ್ಮಡಿ ಜನಾಂಗದವರಿಗೆ ಲಿಂಗಧೀಕ್ಷೆ ನೀಡಿ ಸಂಸ್ಕಾರ ಕೊಟ್ಟು ಪೂಜಾ ವಿಧಿ–ವಿಧಾನಗಳನ್ನು ಹೇಳಿ ಕೊಡುತ್ತಾರೆ. ಅಂದು ಸಾಲೂರು ಸ್ವಾಮೀಜಿಯಿಂದ ಸಂಸ್ಕಾರ ಪಡೆದ ಪರಂಪರೆಯವರೇ ಇಂದಿಗೂ ಮಲೆಮಹದೇಶ್ವರನ ಪೂಜೆ ಮತ್ತು ಧಾರ್ಮಿಕ ಚಟುವಟಿಕೆಯನ್ನು ನಡೆಸುತ್ತಿದ್ದಾರೆ.

ಸಾಲೂರು ಸ್ವಾಮಿಗಳಿಂದ ಮಲೆಮಹದೇಶ್ವರ ಬೆಟ್ಟದಲ್ಲಿ ನಡೆದ ಅನುಷ್ಠಾನ ಮತ್ತು ಧರ್ಮ ಪ್ರಚಾರದ ಬಗ್ಗೆ ಶಂಕ್ರಪ್ಪ ಎಂಬುವವರು ಮಾಡಿರುವ ಪಿ.ಎಚ್.ಡಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಶೋಧನೆಯಲ್ಲಿ 'ಸಾಲೂರು ಜ್ಯೋತಿರ್ಮಾಲೆ' ಎಂಬ ಉಲ್ಲೇಖವನ್ನು ಪ್ರಸ್ತಾಪಿಸಿದ್ದಾರೆ.

ವೈಧಿಕರತ್ನ ಶ್ರೀಗುರುಲಿಂಗಜಂಗಮ ಸ್ವಾಮಿಗಳು:

ಸಾಲೂರು ಹಿರೇಮಠದ ಪ್ರಸ್ತುತ ಪಟ್ಟಾಧ್ಯಕ್ಷರಾದ ಶ್ರೀಷ.ಬ್ರ.ಗುರುಲಿಂಗಜಂಗಮ ಶಿವಾಚಾರ್ಯ ಸ್ವಾಮಿಗಳು ಜ್ಯೋತಿಷ್ಯ ಮತ್ತು ವೇದಾಗಮದಲ್ಲಿ ಅಪಾರ ಪಾಂಡಿತ್ಯವನ್ನು ಪಡೆದಿದ್ದಾರೆ. ಪಂಡಿತರಾಗಿದ್ದ ಲಿಂಗೈಕ್ಯ ಪಂಚಾಕ್ಷರ ಸ್ವಾಮಿಗಳಲ್ಲಿ ಮತ್ತು ಕಾಶೀಯ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ಅಧ್ಯಯನ ಮಾಡಿದ ಶ್ರೀಗಳಿಗೆ ವೈಧಿಕರತ್ನ ಎಂಬ ಬಿರುದು ಸಹ ಇದೆ. ರಾಣಿಬೆನ್ನೂರು ತಾಲೂಕಿನ ಅಸುಂಡಿ ಗ್ರಾಮದ ವೇ.ಮೂ.ಜಯದೇವಯ್ಯ ಮತ್ತು ಶರಣೆ ಗಂಗಮ್ಮ ದಂಪತಿಗಳ ಪುತ್ರರಾಗಿ 1971ರಲ್ಲಿ ಜನಿಸಿದ ಪೂಜ್ಯರು ಬಾಲ್ಯದಿಂದಲೂ ಧರ್ಮ ಸಂಸ್ಕಾರದಲ್ಲಿ ಆಸಕ್ತಿ ಹೊಂದಿದ್ದರು.

1992ರಲ್ಲಿ ಸಾಲೂರು ಹಿರೇಮಠಕ್ಕೆ ಪಟ್ಟಾಭಿಷೇಕಗೊಂಡ ನಂತರ ಶ್ರೀಮಠದಲ್ಲಿ ಕೃಷಿಗೆ ಹೆಚ್ಚಿನ ಒತ್ತು ನೀಡಿದ್ದಾರೆ. ಸಂಸ್ಕೃತ ಪಾಠಶಾಲೆಗೆ ನೂತನ ಕಟ್ಟಡ, ಶತಮಾನಗಳ ಹಿಂದಿನ ಮಠದ ಕಟ್ಟಡವನ್ನು ಬದಲಿಸಿ ಮಹಾದ್ವಾರವನ್ನು ನಿರ್ಮಿಸಿದ್ದಾರೆ. ಜೊತೆಗೆ ಹೈಸ್ಕೂಲು, ಕಾಲೇಜು, ಸಾರ್ವಜನಿಕ ಆಸ್ಪತ್ರೆ, ಬ್ಯಾಂಕ್ ಸ್ಥಾಪನೆ, ದೇವಾಲಯ ಹೀಗೆ ಗ್ರಾಮದ ಅಭಿವೃದ್ಧಿಯಲ್ಲೂ ಶ್ರೀಗಳ ಪಾತ್ರ ಹಿರಿದಾಗಿದೆ.

ಫೆ.2ರಿಂದ ಮೂರು ದಿನಗಳ ಕಾಲ ಶ್ರೀಗಳ ಗುರು ಪಟ್ಟಾಧಿಕಾರ ರಜತ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. 25 ರೈತರಿಗೆ, 25ಯೋಧರಿಗೆ ವಿಶೇಷ ಪುರಸ್ಕಾರ ಸೇರಿದಂತೆ ವಿವಿಧ ಸಾಮಾಜಿಕ ಕಾರ್ಯಕ್ರಮಗಳು ನಡೆಯಲಿವೆ. ಕಾರ್ಯಕ್ರಮದಲ್ಲಿ ಶ್ರೀಶೈಲ ಮತ್ತು ಶ್ರೀಕಾಶೀ ಜಗದ್ಗುರುಗಳು ಸೇರಿದಂತೆ ನಾಡಿನ ವಿವಿಧ ಮಠಾಧೀಶರು, ರಾಜಕೀಯ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಹೋಗುವ ಮಾರ್ಗ :

ಬೆಂಗಳೂರಿನಿಂದ 330 ಕಿ.ಮೀ ದೂರವಿದ್ದು ಬಿ.ಎಚ್.ರಸ್ತೆ ಮೂಲಕ ಶಿವಮೊಗ್ಗ ಹೋಗಿ ಅಲ್ಲಿಂದ ಶಿಕಾರಿಪುರ ಮಾರ್ಗವಾಗಿ ಸಾಲೂರು ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತರ ಪ್ರಶ್ನೆಗೆ ಭಗವಂತನ ಉತ್ತರ
ಹಂದನಕೆರೆ ಶ್ರೀಗಿರಿಸಿದ್ದೇಶ್ವರರ ಪವಾಡ

ದಿನಾಂಕ : 08-02-2018

ಭೂತಕಾಲ ಎಷ್ಟು ಸತ್ಯವೋ; ಭವಿಷ್ಯತ್ತಿನ ಮೇಲೆ ಅಷ್ಟೇ ನಿರೀಕ್ಷೆಗಳಿರುತ್ತವೆ. ಆ ಕಾರಣದಿಂದಲೇ ಭವಿಷ್ಯವನ್ನು ತಿಳಿದುಕೊಳ್ಳುವುದಕ್ಕೆ ಜನ ನಾನಾ ರೀತಿಯಲ್ಲಿ ಪ್ರಯತ್ನಿಸುತ್ತಾರೆ. ಆ ಹಿನ್ನಲೆಯಲ್ಲಿ ದೇವರಲ್ಲಿ ಅಪ್ಪಣೆ ಕೇಳುವ ಪದ್ಧತಿ ಇದೆ. ಅಪ್ಪಣೆ ಕೇಳುವುದರಲ್ಲಿ ಸಾಕಷ್ಟು ವಿಧಾನಗಳನ್ನು ಕಾಣುತ್ತೇವೆ. ಆ ವಿಧಾನಗಳಲ್ಲಿ ಅತ್ಯಂತ ಪುರಾತನ ಕಾಲದಿಂದ ನಿಖರವಾದ ಭವಿಷ್ಯವನ್ನು ಬರೆದು ತೋರಿಸುವ ಹಂದನಕೆರೆಯ ಶ್ರೀಗಿರಿಸಿದ್ದೇಶ್ವರ ಕ್ಷೇತ್ರ ಅತ್ಯಂತ ವಿಶಿಷ್ಟವಾಗಿದೆ.

ತುಮಕೂರು ಜಿಲ್ಲೆ ತಿಪಟೂರು ತಾಲೂಕಿನ ಹಂದನಕೆರೆ ಒಂದು ಹೋಬಳಿ ಮಟ್ಟದ ಗ್ರಾಮ. ಆದರೆ ನಾಡಿನ ಪ್ರತಿಷ್ಠಿತ ವ್ಯಕ್ತಿಗಳ ಅತ್ಯಂತ ನೆಚ್ಚಿನ ತಾಣವಿದು. ಅದರಲ್ಲೂ ಪ್ರಮುಖ ರಾಜಕಾರಣಿಗಳು ಗುಪ್ತವಾಗಿ ಭೇಟಿ ಕೊಡುವ ಕ್ಷೇತ್ರ. ಚುನಾವಣೆ ಸಂದರ್ಭದಲ್ಲಂತೂ ರಾಜಕಾರಣಿಗಳು ಮೇಲಿಂದ ಮೇಲೆ ಆಗಮಿಸುತ್ತಾರೆ. ಇದಕ್ಕೆ ಕಾರಣ ಶ್ರೀಗಿರಿಸಿದ್ದೇಶ್ವರರು ಇಲ್ಲಿ ನೀಡುವ ಅಪರೂಪದ ಬರಹ ಭವಿಷ್ಯ!



ಹಂದನಕೆರೆ ಶ್ರೀ ಗಿರಿಸಿದ್ಧೇಶ್ವರ

ಸಾಮಾನ್ಯರೇ ಇರಲಿ ದೊಡ್ಡ ಮುಖಂಡರೇ ಇರಲಿ; ಅವರ ಪ್ರಶ್ನೆಗೆ ಇಲ್ಲಿ ಬರಹ ರೂಪದಲ್ಲಿ ಉತ್ತರ ಸಿಕ್ಕುತ್ತದೆ. ಶ್ರೀಗಿರಿಸಿದ್ದೇಶ್ವರ ಸ್ವಾಮಿಗಳ ನಿಜೈಕ್ಯಕ್ಷೇತ್ರ ಹಂದನಕೆರೆಯಲ್ಲಿ ಸ್ವಾಮಿಯ ಉತ್ಸವ ಮೂರ್ತಿಯ ಗದ್ದುಗೆ ಇದೆ. ಆ ಗದ್ದುಗೆಯ ಕಳಶದ ಮೇಲೆ ಒಂದು ಬಳಪವನ್ನು ಕಟ್ಟಿಡಲಾಗಿದೆ. ಗದ್ದುಗೆಯನ್ನು ಪೂಜಿಸಿ ಅದನ್ನು ಎತ್ತಿ ಹಿಡಿದಾಗ ಸ್ವಾಮಿಯೇ ಸ್ವತಃ ಕಪ್ಪು ಸ್ಲೇಟ್ ಮೇಲೆ ಭಕ್ತರ ಪ್ರಶ್ನೆಗೆ ಉತ್ತರವನ್ನು ಬರೆಯುತ್ತದೆ. ಸಾಕ್ಷಾತ್ ಭಗವಂತನೇ ಭಕ್ತರ ಪ್ರಶ್ನೆಗೆ ಉತ್ತರ ನೀಡುತ್ತಾನೆಂಬ ನಂಬಿಕೆ ಇದ್ದು, ಇದು ಸುಳ್ಳಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದಾಹರಣೆಯೇ ಇಲ್ಲ ಎಂಬುದು ಬಹುಜನರ ಅಭಿಪ್ರಾಯ.

ಶಿವನವತಾರಿ ಶ್ರೀಗಿರಿಸಿದ್ದೇಶ್ವರ ಕ್ಷೇತ್ರ:

ಹಂದನಕೆರೆಯ ಶ್ರೀಗಿರಿಸಿದ್ದೇಶ್ವರರನ್ನು ಸಾಕ್ಷಾತ್ ಶಿವನ ಅವತಾರ ಎನ್ನಲಾಗುತ್ತೆ. ಪುರಾಣ ಪುಣ್ಯಕತೆಗಳಲ್ಲಿ ಗಿರಿಸಿದ್ದೇಶ್ವರಸ್ವಾಮಿಗಳ ಅವತಾರದ ಬಗ್ಗೆ ಪ್ರಸ್ತಾಪಗಳಿದ್ದು, ಈ ಭಾಗದ ಜನರನ್ನು ಕಾಡುತ್ತಿದ್ದ ಮಾಯಾಗಾರ ರಾಕ್ಷಸನನ್ನು ಸಂಹರಿಸಲು ಶಿವನೇ ಸ್ವತಃ ಅವತಾರವೆತ್ತಿದ್ದಾನೆಂಬುದು ಪ್ರತೀತಿ.



ಹಂದನಕೆರೆ ಶ್ರೀ ಗಿರಿಸಿದ್ಧೇಶ್ವರ ಅವತಾರ

ಹಂದನಕೆರೆಯ ಸಮೀಪದಲ್ಲಿರುವ ಸಬ್ಬೇನಹಳ್ಳಿ ಬೆಟ್ಟದ ಮೇಲೆ ಶಿಶುರೂಪದಲ್ಲಿ ಅವತಾರವೆತ್ತಿದ ಶ್ರೀಗಿರಿಸಿದ್ದೇಶ್ವರರು; ಅಯೋನಿಜರಾಗಿ ಜನಿಸಿದ ನಂತರ ಇಲ್ಲಿನ ಮಹಾರಾಜ ಶೈಲೇಶನ ಮಡಿಲು ಸೇರುತ್ತಾರೆ. ಮಹಾರಾಜನ ಪೋಷಣೆಯಲ್ಲಿ ಬೆಳೆಯುವಾಗಲೇ ಹಲವು ಲೀಲೆಗಳನ್ನು ಮಾಡಿದ ಗಿರಿಸಿದ್ದೇಶ್ವರರು; ಜನರಿಗೆ ಕಿರುಕುಳ ನೀಡುತ್ತಿದ್ದ ಮಾಟಗಾರರನ್ನು ಸಂಹರಿಸುತ್ತಾರೆ. ಹಾಗೇ ರಾಕ್ಷಸರನ್ನು ಸಂಹಾರ ಮಾಡಿದ ಆಯುಧವೇ ಸಾಲಿಗ್ರಾಮಲಿಂಗವಾಗಿ ಇಲ್ಲಿ ಪೂಜೆಗೊಳ್ಳುತ್ತಿದೆ. ಶ್ರೀಗಿರಿಸಿದ್ದೇಶ್ವರರು ಅವತಾರವೆತ್ತಿದ್ದು, ಐಕ್ಯರಾಗಿದ್ದು ಹಂದನಕೆರೆಯಲ್ಲಾದರೂ ವಿವಿಧ ಕಡೆಗಳಲ್ಲಿ ಸಂಚರಿಸಿ ಹಲವರಿಗೆ ಅಭಯವನ್ನಿತ್ತು ಆಶೀರ್ವದಿಸಿದ್ದಾರೆ.

ಸುಮಾರು 14ನೇ ಶತಮಾನದಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ಪಾಳಯಗಾರ ತಿಮ್ಮಪ್ಪನಾಯಕನು ಕೋಟೆಯನ್ನು ಕಟ್ಟಿಸಲು ಮುಂದಾದಾಗ ಮಣ್ಣಿನಲ್ಲಿ ಮುಚ್ಚಿಹೋಗಿದ್ದ ಶಿಥಿಲಾವಸ್ಥೆಯ ದೇವಾಲಯ ದೊರೆಯುತ್ತದೆ. ವಿಜ್ಞಾನಿಗಳಿಂದ ಕ್ಷೇತ್ರದ ಮಹತ್ವವನ್ನು ತಿಳಿದು ನೂತನ ದೇವಾಲಯವನ್ನು ಕಟ್ಟಿಸುತ್ತಾನೆ. ಅಂದಿನಿಂದ ಈ ಕ್ಷೇತ್ರ ಪ್ರಸಿದ್ಧವಾಯಿತು.

ಒಂದೇ ದಿನದಲ್ಲಿ ನಿರ್ಮಾಣಗೊಂಡ ದೇವಾಲಯ:

ಶ್ರೀಗಿರಿಸಿದ್ದೇಶ್ವರರು ಅವತಾರವಾದ ಸಬ್ಬೇನಹಳ್ಳಿ ಬೆಟ್ಟವು ಬಹಳ ಶಕ್ತಿಯುತ ತಾಣವಾಗಿದೆ. ಈ ಬೆಟ್ಟಕ್ಕೆ ಸಿದ್ದರಬೆಟ್ಟ ಎಂದು ಕರೆಯಲಾಗುತ್ತದೆ. ಸುತ್ತಮುತ್ತ ಗ್ರಾಮಗಳಲ್ಲಿ ಈ ಬೆಟ್ಟದ ಬಗ್ಗೆ ಪವಿತ್ರ ಮತ್ತು ಭಯ-ಭಕ್ತಿಯ ಭಾವನೆ ಇದೆ. ಗಿರಿಸಿದ್ದೇಶ್ವರರಿಗೆ ದೇವಾಲಯ ಕಟ್ಟಿಸಬೇಕೆಂಬ ಬಯಕೆ ಶತಮಾನಗಳಿಂದಲೂ ಭಕ್ತರಲ್ಲಿತ್ತು. ಆದರೆ ಇಲ್ಲಿ ಯಾವುದೇ ಕೆಲಸವಾಗಬೇಕಾದರೂ ಸ್ವಾಮಿಯ ಅಪ್ಪಣೆಯಾಗಬೇಕು. ಒಂದೇ ರಾತ್ರಿಯಲ್ಲಿ ದೇವಾಲಯ ಕಟ್ಟಬೇಕೆಂಬ ಅಪ್ಪಣೆಯಾಯಿತು. ಬೆಟ್ಟದ ಮೇಲೆ ಯಾವುದೇ ವಾಹನಗಳು ಬರುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಂತ್ರೋಪಕರಣಗಳು ತೆಗೆದು ಕೊಂಡು ಹೋಗವುದಕ್ಕೂ ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಭಕ್ತರೆಲ್ಲರೂ ಸ್ವಾಮಿಯ ಮೇಲೆ ಭಾರ ಹಾಕಿ ಒಂದು ದಿನಾಂಕ ನಿಗದಿಗೊಳಿಸಿ ಸಿದ್ಧತೆ ಮಾಡಿಕೊಂಡರು.

ಹಂದನಕೆರೆ ಶ್ರೀ ಗಿರಿಸಿದ್ಧೇಶ್ವರ ದೇವಸ್ಥಾನ

ಆ ನಿಗದಿತ ದಿನಾಂಕದಂದು ಕಲ್ಲಿನ ಕಂಬ, ಚಪ್ಪಡಿಗಳನ್ನು ಹೊತ್ತು ತಂದು, ಒಂದೇ ರಾತ್ರಿಯಲ್ಲಿ ಇಡೀ ದೇವಾಲಯವನ್ನು ಕಟ್ಟಿ ಮುಗಿಸಿದರು. ಪುರಾಣಗಳಲ್ಲಿ ಇಂತಹ ಉದಾಹರಣೆಗಳನ್ನು ಕಾಣುತ್ತೇವೆ. ಆದರೆ ಕೇವಲ ಮೂರು ವರ್ಷಗಳ ಹಿಂದೆ ಇಂತಹ ಕಲಿಗಾಲದಲ್ಲೂ ಇದು ಸಾಧ್ಯವಾಗಿದ್ದು ಶ್ರೀಗಿರಿಸಿದ್ದೇಶ್ವರ ಸ್ವಾಮಿಯ ಕೃಪೆ ಎನ್ನುವುದು ಸಮಸ್ತ ಭಕ್ತರ ನಂಬಿಕೆ.

ಸಂತಾನ, ಆರೋಗ್ಯ, ವಿದ್ಯಾಭ್ಯಾಸ ಸೇರಿದಂತೆ ಯಾವುದೇ ಸಂಕಲ್ಪ ಮಾಡಿಕೊಂಡು ಬೆಟ್ಟಕ್ಕೆ ಬಂದು ಸ್ವಾಮಿಯ ದರ್ಶನ ಮಾಡುವುದರಿಂದ; ಸಂಕಲ್ಪ ಈಡೇರಿಯೇ ತೀರುತ್ತದೆ ಎಂಬುದು ಇಲ್ಲಿನ ಹಿರಿಯರ ಮಾತು. ಆ ಕಾರಣಕ್ಕೆ ನಿತ್ಯ ನೂರಾರು ಭಕ್ತರು ಬೆಟ್ಟಕ್ಕೆ ಬರುತ್ತಾರೆ. ಶಿವರಾತ್ರಿಯಲ್ಲಿ ನಡೆಯುವ ಜಾತ್ರೆಯ ವೇಳೆ ವಿವಿಧ ಸಂಕಲ್ಪಗಳನ್ನು ಮಾಡಿಕೊಂಡು ಮುಡಿಯನ್ನು ಕಟ್ಟಿ ಸಾವಿರಾರು ಭಕ್ತರು ಗಿರಿಯನ್ನು ಏರುತ್ತಾರೆ. ಮುಡಿಯನ್ನು ತಲೆಯ ಮೇಲೆ ಹೊತ್ತು ಬರಿಗಾಲಿನಿಂದ ಬೆಟ್ಟ ಹತ್ತಿ ಮುಡಿ ಅರ್ಪಿಸಿದರೆ ಅವರ ಸಕಲ ಸಂಕಲ್ಪಗಳು ಈಡೇರುತ್ತವೆ ಎಂಬ ಪ್ರತೀತಿ ಇದೆ. ಇದಲ್ಲದೆ 5 ಇಲ್ಲವೆ 9 ಅಮವಾಸೆ ಅಥವಾ ಹುಣ್ಣಿಮೆಯಂದು ಬೆಟ್ಟ ಹತ್ತುವ ವ್ರತವನ್ನು ಸಹ ಆಚರಿಸುತ್ತಾರೆ.

ಸರ್ಪದೋಷ ಪರಿಹಾರ ಕ್ಷೇತ್ರ:

ಈ ಸೃಷ್ಟಿಯಲ್ಲಿರುವ ಪ್ರತಿ ಜೀವಿಗಳಲ್ಲೂ ದೈವತ್ವವನ್ನು ಕಾಣುವುದು ನಮ್ಮ ಪರಂಪರೆ. ಅದರಲ್ಲೂ ನಾಗ ಸಂತತಿಯನ್ನು ಅತ್ಯಂತ ಭಕ್ತಿಯಿಂದ ಪೂಜಿಸುತ್ತೇವೆ. ಸರ್ಪಸಂತತಿಯ ಶಕ್ತಿಯನ್ನು ಕುರಿತು ಹಲವಾರು ಪುರಾಣ ಪುಣ್ಯಕತೆಗಳಿವೆ. ಈ ಕ್ಷೇತ್ರದಲ್ಲಿ ಅಂತಹ ನಾಗಶಕ್ತಿಯ ಕುರುಹನ್ನು ಇಂದಿಗೂ ಕಾಣಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಂದನಕೆರೆ ಸಮೀಪದ ಸಬ್ಬೇನಹಳ್ಳಿ ಗ್ರಾಮದಲ್ಲಿ ನಾಗದೇವತೆಯ ವಿಶೇಷ್ಠ ಕುರುಹಾಗಿರುವ ನಾಗತೀರ್ಥವಿದೆ. ಈ ನಾಗತೀರ್ಥ ಭಕ್ತರ ಭವ ನೀಗುವ ಶಕ್ತಿ ಹೊಂದಿದೆ. ಚಿಕ್ಕಮಕ್ಕಳ ಕೈಯಲ್ಲಿ ಶ್ರೀಕಾರವನ್ನು ಬರೆಯಿಸಿ ನಾಗತೀರ್ಥವನ್ನು ಪೂಜಿಸಿ, ಸೇವಿಸುವುದರಿಂದ ಮಕ್ಕಳು ವಿದ್ಯಾಸಂಪನ್ನರಾಗುತ್ತಾರೆ ಎಂಬ ನಂಬಿಕೆ ಇದೆ.

ನಾಗತೀರ್ಥದ ಬಳಿ ಸರ್ಪದೋಷ ಪರಿಹಾರಕ್ಕೆ ಪೂಜೆ ಮಾಡಿಸಲಾಗುತ್ತದೆ. ಜೊತೆಗೆ ಇಲ್ಲಿನ ಸ್ವಾಮಿಗಳು ವಿವಿಧ ರೋಗಗಳಿಗೆ ಆಯುರ್ವೇದ ಔಷಧಿಯನ್ನು ನೀಡುತ್ತಾರೆ. ಪ್ರತಿವರ್ಷ ಹೋಳಿಹುಣ್ಣಿಮೆ ಸಂದರ್ಭದಲ್ಲಿ ವಿಶೇಷ ಜಾತ್ರಮಹೋತ್ಸವ ನಡೆಯಲಿದೆ

ಹೋಗುವ ಮಾರ್ಗ:

ಬೆಂಗಳೂರಿನಿಂದ 180ಕಿ.ಮೀ. ದೂರವಿದ್ದು, ಬಿ.ಎಚ್.ರಸ್ತೆಯ ಮೂಲಕ ತಿಪಟೂರಿಗೆ ಹೋಗಿ ಅಲ್ಲಿಂದ ಹುಳಿಯೂರು ರಸ್ತೆಯಲ್ಲಿ 30ಕಿ.ಮೀ. ಕ್ರಮಿಸಿ ಹಂದನಕೆರೆ ತಲುಪಬಹುದು. ಹೆಚ್ಚಿನ ಮಾಹಿತಿಗೆ :8861551176

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಶಿವನ ಪಾದಸಾಕ್ಷಿ ಬುಕ್ಕಾಂಬುದಿ ಬೆಟ್ಟ

ಉಜ್ಜಯಿನಿ ಶ್ರೀಸಿದ್ದಲಿಂಗ ಜಗದ್ಗುರುಗಳ ತಪೋಕ್ಷೇತ್ರ

ದಿನಾಂಕ : 05-04-2018

ಮನುಷ್ಯ ಶಕ್ತಿಯನ್ನು ಮೀರಿದ ಮತ್ತೊಂದು ದಿವ್ಯ ಶಕ್ತಿ ಈ ಜಗತ್ತನ್ನು ನಿರ್ವಹಿಸುತ್ತಿದೆ ಮತ್ತು ನಿಯಂತ್ರಿಸುತ್ತಿದೆ. ಅಂತಹ ಶಕ್ತಿಯನ್ನು ಜನಪದರು ಪರಶಕ್ತಿ ಎಂದು ಕರೆಯುತ್ತಾರೆ. ಆ ಪರಶಕ್ತಿಯ ಕುರುಹಾಗಿರುವ ಸ್ಥಳಗಳು ಸಾಕಷ್ಟಿವೆ. ಅಂತಹದ್ದೊಂದು ಕ್ಷೇತ್ರ ಬುಕ್ಕಾಂಬುದಿ ಬೆಟ್ಟ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಅಜ್ಜಂಪುರ ಸಮೀಪದಲ್ಲಿರುವ ಬುಕ್ಕಾಂಬುದಿ ಬೆಟ್ಟದಲ್ಲಿ ಸಾಕ್ಷಾತ್ ಪರಶಿವನು ಪ್ರತ್ಯಕ್ಷನಾದ ಪಾದಗಳಿವೆ. ಪರಮೇಶ್ವರನ ಪಾದದ ಗುರುತುಗಳಿರುವ ಸಿದ್ಧಿಕ್ಷೇತ್ರದಲ್ಲಿ ಅನೇಕ ಯೋಗಿಗಳು, ತಪಸ್ವಿಗಳು ಅನುಷ್ಠಾನ ಕೈಗೊಂಡು ತಮ್ಮ ಅಧ್ಯಾತ್ಮ ದಾಹವನ್ನು ತಣಿಸಿಕೊಂಡಿದ್ದಾರೆ.

ಹಾಗೆ ತಪಸ್ಸು ಮಾಡಿ ಲೋಕ ಕಲ್ಯಾಣದ ಕಾರ್ಯಗಳನ್ನು ಮಾಡಿದ ಮಹಾತ್ಮರಲ್ಲಿ ಉಜ್ಜಯಿನಿ ಶ್ರೀ ಸಿದ್ಧಲಿಂಗ ಜಗದ್ಗುರುಗಳು ಅಗ್ರಗಣ್ಯರು. ಉಗ್ರ ಪ್ರಾಣಿಗಳ ತಾಣವಾಗಿದ್ದ ಈ ದಟ್ಟ ಕಾನನದ ಬೆಟ್ಟದಲ್ಲಿ ಮೂರು ತಿಂಗಳ ಕಾಲ ತಪಸ್ಸು ಮಾಡಿ ಸಿದ್ದಿಗಳಿಸುತ್ತಾರೆ.

ಪತಿವ್ರತೆ ರಾಣಿಯ ಶಾಪದಿಂದ ಈ ಊರಿನಲ್ಲಿ ಗಂಡು ಸಂತಾನವೇ ಬದುಕುತ್ತಿರಲಿಲ್ಲ. ಸಿದ್ಧಲಿಂಗ ಜಗದ್ಗುರುಗಳು ಇಲ್ಲಿ ತಪಸ್ಸು ಗೈದ ನಂತರ ಗ್ರಾಮಕ್ಕಂಟಿದ್ದ ಶಾಪ ವಿಮೋಚನೆಯಾಗಿ ಉತ್ತರೋತ್ತರವಾಗಿ ಅಭಿವೃದ್ಧಿ ಹೊಂದಿತು. ಈ ಕಾರಣದಿಂದಲೇ ಬುಕ್ಕಾಂಬುದಿಯಲ್ಲಿ ಜಾತಿ ಭೇದವಿಲ್ಲದೆ

ಬುಕ್ಕಾಂಬುದಿ ಪರಶಿವನ ಪಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲ ಧರ್ಮೀಯರು ಸಿದ್ಧಲಿಂಗ ಜಗದ್ಗುರುಗಳನ್ನು ಆರಾಧಿಸುತ್ತಾರೆ. ಹಿಂದು ಮುಸ್ಲಿಂರು ಪರಸ್ಪರ ಕೂಡಿ ತಮ್ಮ ತಮ್ಮ ಆಚರಣೆಗಳನ್ನು ಮಾಡುವುದು ಬುಕ್ಕಾಂಬುದಿ ಬೆಟ್ಟದ ವಿಶೇಷ.

ಶ್ರೀ ಸಿದ್ಧಲಿಂಗ ಜಗದ್ಗುರುಗಳ ಅನುಷ್ಠಾನ

ಬೆಟ್ಟದ ಮೇಲೆ ಸಾಕಷ್ಟು ಐತಿಹಾಸಿಕ ಕುರುಹುಗಳಿವೆ. ಚಿಕ್ಕ ಚಿಕ್ಕ ದೇವರ ಮೂರ್ತಿಗಳು, ಶಿವಲಿಂಗಗಳಿದ್ದು, ವಿಶೇಷವಾಗಿ ಕಾಲಭೈರವ ಸ್ವಾಮಿಯು ಈ ಬೆಟ್ಟದ ಶಕ್ತಿಪುರುಷನಾಗಿ ಭಕ್ತರನ್ನು ಕಾಪಾಡುತ್ತಿದ್ದಾನೆ.

ಬುಕ್ಕರಾಯನ ಐತಿಹಾಸಿಕ ಕ್ಷೇತ್ರ:

ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹಕ್ಕ-ಬುಕ್ಕರಲ್ಲಿ ಒಬ್ಬನಾದ ಬುಕ್ಕರಾಯನಿಂದ ಈ ಗ್ರಾಮಕ್ಕೆ ಬುಕ್ಕಾಂಬುದಿ ಎಂಬ ಹೆಸರು ಬಂದಿದೆ. ಐತಿಹಾಸಿಕ ಶ್ರೀಮಂತಿಕೆಯ ವಿಜಯನಗರ ಸಾಮ್ರಾಜ್ಯದ ಸ್ಥಾಪಕನಾದ ಬುಕ್ಕರಾಯನು ಇಲ್ಲಿ ಬೃಹತ್ ಕೆರೆಯೊಂದನ್ನು ಕಟ್ಟಿಸಲು ಮುಂದಾಗುತ್ತಾನೆ.

ತನ್ನ ಆರಾಧ್ಯ ದೈವವಾದ ಹಂಪಿಯ ವಿರೂಪಾಕ್ಷನ ಕೃಪೆಯಂತೆ ಕೆರೆಯ ನಿರ್ಮಾಣ ಕಾರ್ಯ ಭರದಿಂದ ನಡೆದಿತ್ತು. ಎರಡು ಗುಡ್ಡಗಳ ನಡುವೆ ದೊಡ್ಡ ದಂಡೆಯನ್ನು ಕಟ್ಟಿ ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವುದು ಬುಕ್ಕರಾಯನ ಉದ್ದೇಶವಾಗಿತ್ತು. ಆದರೆ ಗುಡ್ಡಗಳ ನಡುವೆ ದೊಡ್ಡ ದಂಡೆಯನ್ನು ಹಾಕುವುದರಿಂದ ಕೆಲ ಗ್ರಾಮಗಳು ನೀರಿನಿಂದ ಮುಳುಗುತ್ತಿದ್ದವು. ಇದಕ್ಕಾಗಿ ಕಿಡಿಗೇಡಿಗಳು ಆತನ ಆಹಾರದಲ್ಲಿ ವಿಷವನ್ನು ಬೆರೆಸಿ ಕೆರೆಯ ಕೆಲಸ ಪೂರ್ಣವಾಗುವ ಮೊದಲೇ ಆತನನ್ನು ಕೊಲೆಗೈಯುತ್ತಾರೆ.

ಬುಕ್ಕರಾಯನ ಕೊಲೆಯ ನಂತರ ಆತನ ಪತ್ನಿ ನೊಂದು ತನ್ನ ಆಭರಣಗಳನ್ನು ಮಾರಿ, ಕೆರೆಯ ತೂಬುಕಟ್ಟಿಸಿ ಅಪೂರ್ಣಗೊಂಡಿದ್ದ ಕೆರೆಯನ್ನು ಪೂರ್ಣಗೊಳಿಸುತ್ತಾಳೆ. ಆದರೆ ತನ್ನ ಗಂಡನ ಸಾವಿಗೆ ಕಾರಣವಾದ ಕೆರೆಯ ನೀರು ಕುಡಿದ ಗ್ರಾಮಸ್ಥರಿಗೆ ಗಂಡು ಸಂತಾನವೇ ಉಳಿಯದಂತೆ ಶಾಪವಿಡುತ್ತಾಳೆ. ಸಿದ್ಧಲಿಂಗ ಜಗದ್ಗುರುಗಳು ತಮ್ಮ ಅನುಷ್ಠಾನದ ವೇಳೆ ಗ್ರಾಮಸ್ಥರ ಶಾಪ ವಿಮೋಚನೆಗೆ ಸಂಕಲ್ಪ ಮಾಡುತ್ತಾರೆ. ಅವರ ಅನುಷ್ಠಾನದ ನಂತರ ಗ್ರಾಮದ ಶಾಪ ವಿಮೋಚನೆಗೊಂಡು ಉತ್ತರೋತ್ತರವಾಗಿ ಗ್ರಾಮ ಅಭಿವೃದ್ಧಿ ಕಂಡಿದೆ ಎಂಬ ನಂಬಿಕೆ ಇರುವುದರಿಂದ ಸರ್ವ ಧರ್ಮೀಯರು ಸಿದ್ಧಲಿಂಗ ಜಗದ್ಗುರುಗಳನ್ನು ಭಕ್ತಿಯಿಂದ ಆರಾಧಿಸುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಭೂತಿ ಪುರುಷ ಸಿದ್ಧಲಿಂಗ ಸನ್ನಿಧಿ:



ಬುಕ್ಕಾಂಬುದಿ ದೇವಸ್ಥಾನ

ಚಿತ್ರದುರ್ಗ ಜಿಲ್ಲೆ ಜಗಳೂರು ತಾಲೂಕಿನ ಬಂಗಾರನಾಯಕನಹಳ್ಳಿಯಲ್ಲಿ ಚನ್ನಬಸವಾರ್ಯ ಮತ್ತು ಗುರುಸಿದ್ಧಾಂಬೆ ಎಂಬ ದಂಪತಿಗಳ ಪವಿತ್ರಸಂಜಾತರಾಗಿ 1890ರಲ್ಲಿ ಜನಿಸಿದ ಸಿದ್ಧಲಿಂಗ ಜಗದ್ಗುರುಗಳು ಬಾಲ್ಯದಿಂದಲೂ ಅಧ್ಯಾತ್ಮವನ್ನು ಮೈಗೂಡಿಸಿಕೊಂಡಿದ್ದವರು. ಉಜ್ಜಯಿನಿ ಮರುಳಸಿದ್ಧ ಜಗದ್ಗುರುಗಳ ಕೃಪಾಕಾರುಣ್ಯಕ್ಕೆ ಒಳಗಾದ ಪೂಜ್ಯರು ಕೇವಲ 16ನೇ ವಯಸ್ಸಿನಲ್ಲೇ ಸದ್ಧರ್ಮ ಪೀಠದ ಜಗದ್ಗುರುಗಳಾಗಿ ಪಟ್ಟಾಭಿಷಿಕ್ತರಾದರು.

ತರ್ಕ, ವ್ಯಾಕರಣಾದಿ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದ ಮಹಾಚಾರ್ಯರು; ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಆಳವಾಗಿ ಅಧ್ಯಯನ ಮಾಡಿದ್ದರು. ತಪಸ್ಸು, ಯೋಗಸಿದ್ಧಿ ಮತ್ತು ಲೋಕಜ್ಞಾನದ ತ್ರಿಮೂರ್ತರೂಪವಾಗಿದ್ದ ಸಿದ್ಧಲಿಂಗ ಭಗವತ್ಪಾದರು ರಂಭಾಪುರಿ ಪೀಠಕ್ಕೆ ಬಂದಿದ್ದ ತೊಡರುಗಳನ್ನು ನಿವಾರಿಸಲು ಬುಕ್ಕಾಂಬುದಿಯಲ್ಲಿ ಘೋರ ತಪಸ್ಸು ಮಾಡುತ್ತಾರೆ. ತಮ್ಮ ಅನುಷ್ಠಾನವನ್ನು ಮುಗಿಸಿಕೊಂಡು ನೇರವಾಗಿ ರಂಭಾಪುರಿ ಪೀಠಕ್ಕೆ ಹೋಗಿ ಶ್ರೀಶಿವಾನಂದ ಜಗದ್ಗುರುಗಳಿಗೆ ಪಟ್ಟಾಭಿಷೇಕ ಮಾಡುತ್ತಾರೆ. ಮೈಸೂರು ಮಹಾರಾಜರ ಬೆಂಬಲವನ್ನು ಪಡೆದು ಪೀಠಕ್ಕೆ ಬಂದಿದ್ದ ತೊಡರುಗಳನ್ನು ನಿವಾರಿಸಿ ರಂಭಾಪುರಿ ಪೀಠದ ಪರಂಪರೆಯನ್ನು ಎತ್ತಿ ಹಿಡಿದ ಕೀರ್ತಿ ಶ್ರೀಸನ್ನಿಧಿಯವರಿಗೆ ಸಲ್ಲುತ್ತದೆ.

ಸಿದ್ಧಲಿಂಗ ಜಗದ್ಗುರುಗಳು ತಪಸ್ಸು ಮಾಡಿದ ಬುಕ್ಕಾಂಬುದಿ ಬೆಟ್ಟವನ್ನು ಪ್ರಸ್ತುತ ರಂಭಾಪುರಿ ಜಗದ್ಗುರು ವೀರಸೋಮೇಶ್ವರ ಭಗವತ್ಪಾದರು ಸ್ವತಃ ಮುಂದೆ ನಿಂತು ಸರ್ವಾಂಗೀಣ ಅಭಿವೃದ್ಧಿ ಮಾಡಿದ್ದಾರೆ. ಶಾಶ್ವತ ಆರ್ಥಿಕ ನಿಧಿಯನ್ನು ಸ್ಥಾಪಿಸಿ ನಿರಂತರ ಪೂಜಾದಿ ಧಾರ್ಮಿಕ ಚಟುವಟಿಕೆಗೆ ಅನುವು ಮಾಡಿಕೊಟ್ಟಿದ್ದಾರೆ. ಪ್ರತಿ ವರ್ಷ ಶ್ರೀಸಿದ್ಧಲಿಂಗ ಜಗದ್ಗುರುಗಳ ಪುಣ್ಯಾರಾಧನೆಯನ್ನು ಆಚರಿಸಲಾಗುತ್ತದೆ. ಸಹಸ್ರಾರು ಸದ್ಭಕ್ತರು ನಾ ಮುಂದು ತಾ ಮುಂದು ಎಂದು ಇಲ್ಲಿ ಸೇವೆಯನ್ನು ಮಾಡುತ್ತಾರೆ.

ಹೋಗುವ ಮಾರ್ಗ :

ಬೆಂಗಳೂರಿನಿಂದ 255ಕಿ.ಮೀ. ದೂರವಿದ್ದು, ಬಿ.ಎಚ್.ರಸ್ತೆ ಮೂಲಕ ಬೀರೂರುವರೆಗೆ ಹೋಗಿ ಅಲ್ಲಿಂದ ಅಜ್ಜಂಪುರ ಮಾರ್ಗವಾಗಿ ಬುಕ್ಕಾಂಬುದಿಗೆ ಹೋಗಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೂರು ದೇವರ ಊರು !

ಮುತ್ತೈದೆ ಭಾಗ್ಯ ಗಟ್ಟಿಗೊಳಿಸುವ ಹೊನ್ನವಳ್ಳಿ ಕ್ಷೇತ್ರ

ದಿನಾಂಕ : 10-05-2018

ಊರು ಎಂದರೆ ಅಲ್ಲೊಂದು ದೇವಾಲಯ ಇದ್ದೇ ಇರುತ್ತದೆ. ಕೆಲವು ಊರುಗಳಲ್ಲಿ ಮೂರ್ನಾಲ್ಕು ದೇವಾಲಯಗಳನ್ನು ಕಾಣುತ್ತೇವೆ. ಆದರೆ ಇಲ್ಲೊಂದು ಊರಿನಲ್ಲಿ ನೂರು ದೇವಾಲಯಗಳ ಇತಿಹಾಸ ಅಚ್ಚರಿಯನ್ನುಂಟು ಮಾಡುತ್ತಿದೆ.

ತುಮಕೂರು ಜಿಲ್ಲೆ ತಿಪಟೂರು ತಾಲೂಕಿನಲ್ಲಿರುವ ಹೊನ್ನವಳ್ಳಿ ಗ್ರಾಮವು ಜನಸಂಖ್ಯೆಯ ದೃಷ್ಟಿಯಿಂದ ಸಾಮಾನ್ಯ ಹೋಬಳಿ ಕೇಂದ್ರ. ಆದರೆ ಈ ಗ್ರಾಮದಲ್ಲಿ ಸುಮಾರು 100 ದೇವಾಲಯಗಳ ಇತಿಹಾಸವಿದೆ. ಸಣ್ಣ ಊರಿನಲ್ಲಿ 100 ದೇವಾಲಯವಿರುವುದು ಇಲ್ಲಿನ ವಿಶೇಷ.

ಹೊನ್ನವಳ್ಳಿ ಶ್ರೀ ಕರಿಸಿದ್ಧೇಶ್ವರರು

ಹೊನ್ನವಳ್ಳಿ ಒಂದು ಐತಿಹಾಸಿಕ ಗ್ರಾಮ. ಸೋಮಶೇಖರ ಮತ್ತು ಚಿತ್ರಶೇಖರ ಎಂಬ ಈರ್ವರು ಸಹೋದರ ಪಾಳಯಗಾರರು ಹೊನ್ನವಳ್ಳಿ ಮತ್ತು ಬಾಣಾವರ ಪ್ರದೇಶವನ್ನು ಆಳುತ್ತಿದ್ದರು. ಆ ಕಾಲದಲ್ಲಿ ಹೊನ್ನವಳ್ಳಿ ಆಡಳಿತದ ಪ್ರಧಾನ ಕೇಂದ್ರವಾಗಿತ್ತು. ಈ ರಾಜರು ಮಹಾ ದೈವಭಕ್ತರಾಗಿದ್ದರು. ಜೊತೆಗೆ ಸರ್ವ ಧರ್ಮದ, ಸರ್ವ ಜನಾಂಗದವರನ್ನೂ ಸಮಾನವಾಗಿ ಕಾಣುತ್ತಿದ್ದ ಇವರು ಎಲ್ಲ ಧರ್ಮೀಯರ ಶ್ರದ್ಧಾ ಭಕ್ತಿಯ ಪ್ರತೀಕವಾಗಿ 100ಕ್ಕೂ ಹೆಚ್ಚು ದೇವಾಲಯಗಳನ್ನು ನಿರ್ಮಿಸಿದ್ದರು ಎಂಬ ಮಾತಿದೆ. ರಾಜಾಡಳಿತ ಅಂತ್ಯಗೊಂಡ ನಂತರ ನಿರ್ವಹಣೆ ಇಲ್ಲದೆ ಹಲವು ದೇವಾಲಯಗಳು ಪಾಳು ಬಿದ್ದಿದ್ದರೆ; ಕೆಲವು ದೇವಾಲಯಗಳು ಜೀರ್ಣೋದ್ಧಾರಗೊಂಡಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಊರಿನ ಗ್ರಾಮದೇವತೆ ಉಡಸಲಮ್ಮ ದೇವಿಗೆ ಹೊನ್ನಾಂಬಿಕಾದೇವಿ ಎಂದು ಹೆಸರು. ಈ ಕಾರಣದಿಂದಲೇ ಈ ಗ್ರಾಮಕ್ಕೆ ಹೊನ್ನವಳ್ಳಿ ಎಂಬ ಹೆಸರು ಬಂದಿದೆ. ಪ್ರಧಾನ ಧೈವಸನ್ನಿಧಿಯಲ್ಲಿ ಲಕ್ಷ್ಮಿನಾರಾಯಣಸ್ವಾಮಿ ದೇವಸ್ಥಾನವಿದ್ದು, ಆಂಜನೇಯ, ಈಶ್ವರ, ಅಮ್ಮನವರು, ಶ್ರೀರಾಮ ಸೇರಿದಂತೆ ಸುಮಾರು 35ಕ್ಕೂ ಹೆಚ್ಚು ದೇವಾಲಯಗಳನ್ನು ಇಂದಿಗೂ ಇಲ್ಲಿ ಸುಸ್ಥಿತಿಯಲ್ಲಿ ಕಾಣಬಹುದು.

ಹೊನ್ನವಳ್ಳಿ ಗಂಗಾಪೂಜೆ

ಪಾಳಯಗಾರರ ಕೋಟೆಯ ಕುರುಹುಗಳಿದ್ದ ಹೊನ್ನವಳ್ಳಿಯು 1926ರವರೆಗೆ ತಾಲೂಕು ಕೇಂದ್ರವಾಗಿತ್ತು. ಬ್ರಿಟೀಷರು ತಿಪಟೂರು ಮಾರ್ಗವಾಗಿ ರೈಲ್ವೆ ಮಾರ್ಗವನ್ನು ನಿರ್ಮಿಸಿದ ನಂತರ ತಿಪಟೂರು ಅಭಿವೃದ್ಧಿ ಹೊಂದಿದ್ದರಿಂದ ಹೊನ್ನವಳ್ಳಿಯಿಂದ ತಾಲೂಕು ಕೇಂದ್ರ ತಿಪಟೂರಿಗೆ ವರ್ಗವಾಯಿತು.

ಶ್ರೀಕರಿಸಿದ್ದೇಶ್ವರರ ತಪೋಕ್ಷೇತ್ರ:

ಹೊನ್ನವಳ್ಳಿ ಗ್ರಾಮವು ಶ್ರೀಕರಿಸಿದ್ದೇಶ್ವರ ಸ್ವಾಮಿಗಳ ತಪೋನುಷ್ಠಾನದಿಂದ ಪಾವನಗೊಂಡ ಕ್ಷೇತ್ರ. ಸುಮಾರು 15ನೇ ಶತಮಾನದಲ್ಲಿದ್ದ ಶ್ರೀಕರಿಸಿದ್ದೇಶ್ವರರು ದೇಶಸಂಚಾರ ಮಾಡುತ್ತ ಇಲ್ಲಿಗೆ ಬಂದಾಗ; ಬಾಯಾರಿಕೆಯಿಂದ ಹೊಲದಲ್ಲಿ ಕೆಲಸ ಮಾಡುತ್ತಿದ್ದವರನ್ನು ನೀರು ಕೇಳುತ್ತಾರೆ. ಆತ ನೀರು ಕೊಡದೇ ಇದ್ದಾಗ ಈ ಭಾಗದ ಪ್ರಸಿದ್ಧ ಗಂಗಾಪಾಣಿ ತಳಿಯ ತೆಂಗಿನಮರವೇ ಬಾಗಿ ಗುರುವಿಗೆ ಎಳನೀರು ಕೊಡುತ್ತದೆ. ಇದನ್ನು ಗಮನಿಸಿದ ರೈತ ಈತ ಯಾರೋ ಮಾಟಗಾರನೆಂದು ಭಾವಿಸಿ ರಾಜನಿಗೆ ದೂರು ನೀಡುತ್ತಾನೆ.

ರಾಜನು ಇವರನ್ನು ವಿಚಾರಿಸಿದಾಗ ತಾನು ಮಾಟಗಾರನಲ್ಲ, ಓರ್ವ ಶಿವಯೋಗಿ ಎಂದು ಹೇಳುತ್ತಾರೆ. ಆಗ ಇವರನ್ನು ಪರೀಕ್ಷಿಸಲು ಮುಂದಾದ ರಾಜ ಊರಿನಲ್ಲಿ ದುಷ್ಟಶಕ್ತಿಯಿಂದ ಭಯಭೀತವಾಗಿದ್ದ ಪ್ರದೇಶದಲ್ಲಿ ರಾತ್ರಿ ವಾಸ ಮಾಡುವಂತೆ ಆಜ್ಞಾಪಿಸುತ್ತಾನೆ. ರಾಜಾಜ್ಞೆಗೆ ಕಿಂಚಿತ್ತು ಹೆದರದ ಕರಿಸಿದ್ದೇಶ್ವರರು ಅದೇ ಸ್ಥಳದಲ್ಲಿ ವಸತಿ ಮಾಡಿ ನಸುಕಿನಲ್ಲಿ ಶಿವಪೂಜೆಯಲ್ಲಿ ತೊಡಗುತ್ತಾರೆ. ಈ ಸಂದರ್ಭದಲ್ಲಿ ಗ್ರಾಮದ ವ್ಯಕ್ತಿಯೊಬ್ಬ ತೀರಿಕೊಂಡು ಶವವನ್ನು ಒಯ್ಯುತ್ತಿರುವಾಗ ಪೂಜ್ಯರು ದಿವ್ಯಶಕ್ತಿಯಿಂದ ನೋಡಿ ಆತನ ಆಯಸ್ಸು ಇನ್ನೂ ಮುಗಿದಿಲ್ಲ ಎಂದು ಹೇಳುತ್ತಾರೆ. ಕೆಲಕಾಲದ ನಂತರ ಆತ ಎದ್ದು ಕುಳಿತುಕೊಳ್ಳುತ್ತಾನೆ. ಇದೆಲ್ಲವನ್ನು ನೋಡಿದ ಮೇಲೆ ರಾಜನು ಗುರುಗಳಿಗೆ ನಮಿಸಿ ತಾವು ಇಲ್ಲಿಯೇ ನೆಲೆಯಾಗುವಂತೆ ಕೋರಿಕೊಳ್ಳುತ್ತಾನೆ.

ಆ ನಂತರ ಕೆಲಕಾಲ ಇಲ್ಲಿಯೇ ಅನುಷ್ಠಾನವನ್ನು ಮಾಡಿದ ಕರಿಸಿದ್ದೇಶ್ವರ ಸ್ವಾಮಿಗಳು; ಮಹಾರಾಜರ ಕೋರಿಕೆಯಂತೆ ಒಂದು ಗಟ್ಟಿಯನ್ನು ಆಶೀರ್ವದಿಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಟ್ಟು ಇಲ್ಲಿಂದ ತಮ್ಮ ದೇಶಸಂಚಾರ ಮುಂದುವರೆಸುತ್ತಾರೆ. ಶ್ರೀಕರಿಸಿದ್ದೇಶ್ವರ ಸ್ವಾಮಿಗಳ ಲಿಂಗೈಕ್ಯ ಗದ್ದುಗೆಯು ಹೊಳಲ್ಕೆರೆ ತಾಲೂಕಿನ ರಾಮಗಿರಿ ಬೆಟ್ಟದಲ್ಲಿದೆ. ಶ್ರೀಕರಿಸಿದ್ದೇಶ್ವರ ಸ್ವಾಮಿಗಳು ಆಶೀರ್ವದಿಸಿ ಕೊಟ್ಟ ಗಟ್ಟಿಗೆ ಕಂತೆಯನ್ನು ಹಾಕಿಸಿ ಹೊನ್ನವಳ್ಳಿಯ ಮಠದಲ್ಲಿ ಇಂದಿಗೂ ಪೂಜಿಸಲಾಗುತ್ತಿದೆ.

ಹೊನ್ನವಳ್ಳಿ ಮಠ

ಭಕ್ತರಿಗೊಲಿಯುವ ಗಂಗಾಮಾತೆ:

ಹೊನ್ನವಳ್ಳಿ ಮಠದ ವಿಶೇಷತೆ ಎಂದರೆ ಗಂಗಾಪೂಜೆ. ಶ್ರೀಕರಿಸಿದ್ದೇಶ್ವರ ಸ್ವಾಮಿಗಳ ದಾಹವನ್ನು ಇಂಗಿಸಿದ ಈ ಕ್ಷೇತ್ರದಲ್ಲಿ ಗಂಗೆಯನ್ನು ಪೂಜಿಸಿದರೆ ತಮ್ಮ ಇಷ್ಟಾರ್ಥಗಳು ಈಡೇರುತ್ತವೆ ಎಂಬ ಪ್ರತೀತಿ ಇದೆ. ಶ್ರೀಕರಿಸಿದ್ದೇಶ್ವರರ ತೋರುಗದ್ದುಗೆಯ ಮುಂದಿರುವ ಭಾವಿಯಲ್ಲಿ ಗಂಗಾಮಾತೆಯನ್ನು ಪ್ರತಿಷ್ಠಾಪಿಸಲಾಗಿದ್ದು, ಭಕ್ತರು ತಮ್ಮ ಯಾವುದೇ ಸಂಕಲ್ಪಕ್ಕಾಗಿ ಇಲ್ಲಿಗೆ ಬಂದು ಕ್ರಮಬದ್ಧವಾಗಿ ಗಂಗಾಪೂಜೆಯನ್ನು ನೆರವೇರಿಸಿ ಫಲಗಳನ್ನು ಪಡೆದುಕೊಳ್ಳುತ್ತಾರೆ. ಅದರಲ್ಲೂ ವಿಶೇಷವಾಗಿ ಗಂಗಾಪೂಜೆಯನ್ನು ನೆರವೇರಿಸುವ ಮಹಿಳೆಯರ ಮುತ್ತೈದೆ ಭಾಗ್ಯ ಗಟ್ಟಿಯಾಗಿರುತ್ತದೆ ಎಂಬ ನಂಬಿಕೆ ಇದೆ.

ಶ್ರೀಕರಿಸಿದ್ದೇಶ್ವರ ಸ್ವಾಮಿಗಳಿಗೆ ಕರ್ಪೂರವೆಂದರೆ ಬಲು ಪ್ರೀತಿ. ಆದ್ದರಿಂದ ಇಲ್ಲಿ ಕರ್ಪೂರ ಸೇವೆ ಮಾಡುವ ಪದ್ಧತಿ ಇದೆ. ಕಾರ್ತೀಕ ಶುದ್ಧ ಬಿದಿಗೆಯಂದು ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಆಗ ರಾಶಿ ರಾಶಿ ಕರ್ಪೂರವನ್ನು ತಂದು ಭಕ್ತರು ಬೆಳಗುತ್ತಾರೆ. ಪ್ರತಿ ಅಮವಾಸೆಯಂದು ರುದ್ರಾಭಿಷೇಕ ಮತ್ತು ಸಹಸ್ರನಾಮಾವಳಿ ವಿಶೇಷ ಪೂಜೆ ನಡೆಯುತ್ತದೆ. ಪ್ರಸ್ತುತ ಪಟ್ಟಾಧ್ಯಕ್ಷರಾದ ಶ್ರೀಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು ಕಳೆದ 40 ವರ್ಷಗಳಿಂದ ಶ್ರೀಮಠವನ್ನು ಮುನ್ನಡೆಸುತ್ತಿದ್ದು ಬರುವ ಭಕ್ತರಿಗೆ ನಿತ್ಯದಾಸೋಹ, ಸುಸಜ್ಜಿತ ವಸತಿ ಸೌಕರ್ಯವನ್ನು ಕಲ್ಪಿಸಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಿದ್ದಾರೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 170 ಕಿ.ಮೀ.ದೂರವಿದ್ದು ರೈಲು ಅಥವಾ ರಸ್ತೆಮಾರ್ಗವಾಗಿ ತಿಪಟೂರಿಗೆ ಹೋಗಿ ಅಲ್ಲಿಂದ 15ಕಿ.ಮೀ. ಕ್ರಮಿಸಿ ಹೊನ್ನವಳ್ಳಿ ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಕಲ್ಪ ಸಿದ್ಧಿಯ ಸಿದ್ಧಪರ್ವತ
ಚಿದಾನಂದ ಅವಧೂತರ ಬಗಳಾಮುಖಿ ಅಂಬಾಮಠ

ದಿನಾಂಕ : 05-07-2018

ಸಂತರು, ಮಹಾಂತರು, ಯೋಗಿಗಳು ತಮ್ಮ ಆತ್ಮ ಸಾಧನೆಯ ಜೊತೆಗೆ ಲೋಕ ಕಲ್ಯಾಣವನ್ನು ಬಯಸುತ್ತಾರೆ. ತಮ್ಮ ಅನುಷ್ಠಾನ ಶಕ್ತಿಯಿಂದ ಜನರ ಸಂಕಷ್ಟಗಳನ್ನು ನೀಗಿಸಿ ಜನರಿಂದ ದೈವತ್ವವನ್ನು ಪಡೆಯುತ್ತಾರೆ. ಅಂತಹ ಅಪರೂಪದ ಅವಧೂತ ಕ್ಷೇತ್ರ ಬಗಳಾಮುಖಿ ಸಿದ್ಧಪರ್ವತ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಪ್ರತಿಷ್ಠಿತ ಸಿದ್ಧಪರ್ವತದಲ್ಲಿರುವ ಈ ಕ್ಷೇತ್ರವು ಅಂಬಾಮಠ ಎಂದೇ ಪ್ರಸಿದ್ಧಿ. ನಾಡಿನ ಲಕ್ಷಾಂತರ ಭಕ್ತರ ಭಕ್ತಿತಾಣವಾಗಿರುವ ಈ ಕ್ಷೇತ್ರಕ್ಕೆ; ಸಂಕಲ್ಪ ಸಿದ್ಧಿ ಕ್ಷೇತ್ರ ಎಂದು ಕರೆಯುತ್ತಾರೆ. ಇದಕ್ಕೆ ಕಾರಣ ಚಿದಾನಂದ ಅವಧೂತರ ತಪಸ್ಸಿಗೆ ಮೆಚ್ಚಿ ಜಗನ್ಮಾತೆ ಪ್ರತ್ಯಕ್ಷಳಾಗಿ ಏನು ವರ ಬೇಕು ಎಂದು ಕೇಳುತ್ತಾಳೆ. ಲೌಕಿಕ ಬದುಕಿನ ಸಂಬಂಧವನ್ನು ಅಂಟಿಸಿಕೊಂಡಿರದ ಅವಧೂತರು ತನ್ನ ನಿಜವಾದ ತಾಯಿ ದರ್ಶನ ಭಾಗ್ಯವೇ ಸಾಕು ಎನ್ನುತ್ತಾರೆ. ನೀನು ಪ್ರತ್ಯಕ್ಷಳಾದ ಈ ಕ್ಷೇತ್ರ ಸಿದ್ಧಿಕ್ಷೇತ್ರವಾಗಿ, ಭಕ್ತರ ಸತ್ಸಂಕಲ್ಪ ಈಡೇರುವಂತೆ ಮಾಡು ಎಂದು ಲೋಕ ಕಲ್ಯಾಣದ ಬೇಡಿಕೆಯನ್ನು ಇಡುತ್ತಾರೆ. ಅದಕ್ಕೆ ಮಹಾ ಮಾತೆಯು ತಥಾಸ್ತು ಎಂದು ಅಭಯವಿತ್ತ ಕಾರಣಕ್ಕಾಗಿ ಈ ಸ್ಥಳವು ಸಿದ್ಧಪರ್ವತ ಎಂದು ಪ್ರಸಿದ್ಧಿಯಾಗಿದೆ.


ಶ್ರೀ ಬಗಳಾಮುಖಿ ದೇವಿ

ಮೂಲದಲ್ಲಿ ಗುಡ್ಡಗಾಡಾಗಿದ್ದ ಸೋಮಲಾಪುರ ಸಮೀಪದ ಗವಿಯೊಳಗೆ ಅವಧೂತರು ಸುದೀರ್ಘ ತಪಸ್ಸು ಮಾಡಿ ತಮ್ಮ ಆತ್ಮಸಾಧನೆಯಿಂದ ದೇವಿಯ ಸಾಕ್ಷಾತ್ಕಾರ ಪಡೆದುಕೊಳ್ಳುತ್ತಾರೆ. ಈ ಕ್ಷೇತ್ರದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ ಚಿದಾನಂದ ಅವಧೂತರು

ಪೂಜೆಗೊಳ್ಳುತ್ತಿರುವ ದೇವಿಯ ಮೂರ್ತಿಯು ಸ್ವಯಂ ಉದ್ಭವ ಮೂರ್ತಿ ಎನ್ನಲಾಗುತ್ತೆ. ದೇವಿಯ ಮುಂಭಾಗದಲ್ಲಿ ಸ್ವತಃ ಚಿದಾನಂದ ಅವಧೂತರು ಸ್ಥಾಪಿಸಿರುವ ಶಕ್ತಿಯುತ ಶ್ರೀಬಗಳಾಮುಖಿ ಚಕ್ರವಿದ್ದು, ಈ ಕಾರಣದಿಂದಲೇ ಬಗಳಾಮುಖಿ ದೇವಿ ಎಂಬ ಹೆಸರು ಬಂದಿದೆ, ಪ್ರತಿ ಅಮವಾಸೆ ಮತ್ತು ಹುಣ್ಣಿಮೆಯಂದು ಸಹಸ್ರಾರು ಭಕ್ತರು ದೇವಿಯ ದರ್ಶನ ಮಾಡುತ್ತಾರೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರದಂದು ವಿಶೇಷ ಪೂಜೆ ನೆರವೇರಿಸಲಾಗುತ್ತದೆ. ವರ್ಷಕ್ಕೊಮ್ಮೆ ಬನದ ಹುಣ್ಣಿಮೆಯಂದು ವಾರ್ಷಿಕ ಜಾತ್ರೆ ಹಾಗೂ ಶರನ್ನವರಾತ್ರಿಯಲ್ಲಿ 9 ದಿನಗಳ ಕಾಲ ದೇವಿಯ ವಿಶೇಷ ಉತ್ಸವ ನಡೆಯಲಿದೆ.

ಅದ್ವೈತ ಶಿಖರ ಚಿದಾನಂದ ಅವಧೂತರು:

ಸಂತ ಪರಂಪರೆಯಲ್ಲಿ ಅವಧೂತರಿಗೆ ವಿಶೇಷ ಸ್ಥಾನವಿದೆ. ಅವಧೂತ ಎಂದರೆ ಸರ್ವಸಂಘ ಪರಿತ್ಯಾಗಿ ಎಂಬ ಅರ್ಥ. ಕರ್ನಾಟಕದ ಅವಧೂತ ಪರಂಪರೆಯಲ್ಲಿ ಅದ್ವೈತ ಸಿದ್ಧಾಂತದ ಶಿಖರ ಎಂದು ಗುರುತಿಸಬಹುದಾದ ಹೆಸರು ಚಿದಾನಂದ ಅವಧೂತರದ್ದು.

ಸುಮಾರು 18ನೇ ಶತಮಾನದಲ್ಲಿ ಜೀವಿಸಿದ್ದ ಚಿದಾನಂದ ಅವಧೂತರು ಹುಟ್ಟಿದ್ದು ನೆರೆಯ ಆಂಧ್ರಪ್ರದೇಶದ ಆದೋನಿ ಜಿಲ್ಲೆಯ ಹಿರೇಹರಿವಾಣ ಎಂಬ ಗ್ರಾಮದಲ್ಲಿ. ಕಡುಬಡ ಕುಟುಂಬದಲ್ಲಿ ಹುಟ್ಟಿದ್ದ ಚಿದಾನಂದಾವಧೂತರ ಮೊದಲ ಹೆಸರು ಝುಂಕಪ್ಪ.

ಬಾಲ್ಯದಲ್ಲಿಯೇ ಅಧ್ಯಾತ್ಮದ ಒಲವು ಹೊಂದಿದ್ದ ಅವಧೂತರು ಹಲವು ಕಡೆಗಳಲ್ಲಿ ಧ್ಯಾನ, ಯೋಗ, ತಪಸ್ಸು ಗೈದ ಕುರುಹುಗಳಿವೆ. ಅವುಗಳಲ್ಲಿ ಬಹುಮುಖ್ಯವಾಗಿ 12 ವರ್ಷ ತಪಸ್ಸು ಮಾಡಿದ ಪುಣ್ಯಭೂಮಿ ಅಂಬಾಮಠ ಎಂದು ಪ್ರಸಿದ್ಧಿಯಾಗಿರುವ ಸಿದ್ಧಪರ್ವತ.

ಸಮಾಜದಲ್ಲಿ ಧರ್ಮ ಗ್ಲಾನಿಯ ಹಂತದಲ್ಲಿದ್ದಾಗ ತಮ್ಮ ಜ್ಞಾನ, ತಪಸ್ಸು ಮತ್ತು ಕ್ರಿಯಾಶಕ್ತಿಯಿಂದ ಹೊಸ ನಿರೀಕ್ಷೆಯನ್ನು ಮೂಡಿಸಿ ಮಾರ್ಗದರ್ಶನ ಮಾಡುತ್ತಾರೆ. ಒಂದೆಡೆ ಮುಸಲ್ಮಾನರ ಪ್ರಾಭಲ್ಯ, ಇನ್ನೊಂದೆಡೆ ಬ್ರಿಟೀಷರ ಆಡಳಿತ ಇಂತಹ ಪರಿಸ್ಥಿತಿಯಲ್ಲಿ 18ನೇ ಶತಮಾನದಲ್ಲಿ ದೇಶ ಎದುರಿಸುತ್ತಿದ್ದ ಧೂರ್ತ ನೀತಿಯಿಂದ ನಮ್ಮ ಧರ್ಮಕ್ಕೆ ಬೀಳುತ್ತಿದ್ದ ಪೆಟ್ಟನ್ನು ನಿವಾರಿಸಲು ಚಿದಾನಂದ ಅವಧೂತರ ಅವತಾರವೆತ್ತಿ ಈ ಧರ್ಮಕ್ಕೆ ಸೂಕ್ತ ಮಾರ್ಗದರ್ಶನ ಮಾಡಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಜಗದ್ಗುರು ಶಂಕರಾಚಾರ್ಯರ ಅದ್ವೈತ ತತ್ವವನ್ನು ಕನ್ನಡದಲ್ಲಿ ನೀಡಿದ ಮೇರು ಸಮರ್ಥ ಶ್ರೀಅವಧೂತರು. ಅವರ ಅದ್ವೈತ ಪ್ರತಿಪಾದನೆಯ ಜ್ಞಾನಸಿಂಧು ಕೃತಿಯು ಇದಕ್ಕೆ ಸಾಕ್ಷಿಯಾಗಿದೆ. ಕನಕಗಿರಿಯಲ್ಲಿ ಚಿದಾನಂದ ಅವಧೂತರ ಸಮಾಧಿ ನೋಡಬಹುದು.

ದೇವಿ ಮಹಾತ್ಮೆಯ ರಚನೆ:

ಉತ್ತರ ಕರ್ನಾಟಕದಲ್ಲಿ ಜಾತಿ, ಮತವೆನ್ನದೆ ಸರ್ವ ಜನಾಂಗದವರ ಮನೆಯಲ್ಲಿ ಪೂಜಿಸಲ್ಪಡುವ ಧಾರ್ಮಿಕ ಕೃತಿ ದೇವಿ ಮಹಾತ್ಮೆ. ಈ ಮೌಲಿಕ ಕೃತಿಯ ರಚನೆಯಾಗಿದ್ದು ಇದೇ ಸಿದ್ಧಪರ್ವತದಲ್ಲಿ. ದೇವಿಯ ಸಾಕ್ಷಾತ್ಕಾರ ಪಡೆದ ಶ್ರೀಚಿದಾನಂದ ಅವಧೂತರಿಗೆ ಬಗಳಾಮುಖಿ ಬೀಜಮಂತ್ರದ ಉಪದೇಶವಾಗುತ್ತದೆ. ಆ ನಂತರ ಪ್ರೇರಣೆಗೊಂಡ ಅವಧೂತರು ದೇವಿ ಮಹಾತ್ಮೆಯನ್ನು ರಚಿಸಿದ್ದಾರೆ.

ಬಾಲ್ಯದಲ್ಲಿ ಹೊನ್ನಪ್ಪ ಎಂಬ ಗುರುವಿನಿಂದ ವಿದ್ಯೆ ಕಲಿತ ಚಿದಾನಂದ ಅವಧೂತರು ಗುರುಚಿದಾನಂದರ ಮಾರ್ಗದರ್ಶನದಲ್ಲೇ ಅಧ್ಯಾತ್ಮ ಹಾದಿಯಲ್ಲಿ ಮುಂದುವರೆದವರು. ದುರ್ಗಾಸಪ್ತಶತಿಯನ್ನು ಕನ್ನಡದಲ್ಲಿ ರಚಿಸುವ ಮೂಲಕ ಕನ್ನಡಿಗರ ಧಾರ್ಮಿಕ ದಾಹವನ್ನು ತಣಿಸಿದ್ದಾರೆ.

ಕೆಲ ಅನುಭಾವಿಗಳ ಪ್ರಕಾರ ನಿಯಮ ಬದ್ಧವಾಗಿ 41 ದಿವಸಗಳ ಕಾಲ ವ್ರತವನ್ನಾಚರಿಸಿ ದೇವಿ ಮಹಾತ್ಮೆಯನ್ನು ಪಾರಾಯಣ ಮಾಡಿದರೆ ದೇವಿಯ ಸಾಕ್ಷಾತ್ಕಾರವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಉತ್ತರ ಕರ್ನಾಟಕ ಭಾಗದಲ್ಲಿ ನವರಾತ್ರಿ ಸಂದರ್ಭದಲ್ಲಿ ಪೂಜೆ, ಪಾರಾಯಣ ಮಾಡಲು ದೇವಿ ಮಹಾತ್ಮೆ ಕಡ್ಡಾಯವಾಗಿ ಬೇಕು.

ಹುಕ್ಕೇರಿ ಹಿರೇಮಠದ ಲಿಂಗೈಕ್ಯ ಶ್ರೀವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ದೇವಿಯ ಆರಾಧಕರಾಗಿದ್ದು, ಅವರ ಕರಕಮಲ ಸಂಜಾತರಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ದೇವಿ ಮಹಾತ್ಮೆಯನ್ನು ಪುಸ್ತಕದ ಜೊತೆಗೆ ಪಾರಾಯಣದ ಕ್ರಮ ತಿಳಿಯುವಂತೆ ಧ್ವನಿಮುದ್ರಿಕೆ ಮೂಲಕ ದೊಡ್ಡ ಪ್ರಮಾಣದಲ್ಲಿ ಪ್ರಕಟಿಸಿದ್ದು, ಎಲ್ಲ ಕಡೆಗಳಲ್ಲಿ ಭಕ್ತರ ಕೈ ಸೇರಿವೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 430 ಕಿ.ಮೀ. ದೂರವಿದ್ದು, ಬಳ್ಳಾರಿ ಮಾರ್ಗವಾಗಿ ಸಿಂಧನೂರು ತಲುಪಿ ಅಲ್ಲಿಂದ 30ಕಿ.ಮೀ ಕ್ರಮಿಸಿ ಸಿದ್ಧಪರ್ವತ ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿವಿನ ಆಗರ ಶ್ರೀಖಾಸ್ಗತೇಶ್ವರ ಅಪರೂಪದ ಗೋಪಾಲ ಕಾವಲಿ ಉತ್ಸವ

ದಿನಾಂಕ : 19-07-2018

ಮನುಷ್ಯನ ಜೀವನದ ಸಾಕ್ಷಾತ್ಕಾರಕ್ಕೆ ಜ್ಞಾನ ಅತ್ಯಂತ ಅವಶ್ಯಕ. ಜ್ಞಾನದ ಮೂಲವೇ ಗುರು. ಅಂತಹ ಗುರುವಿನ ಮಾರ್ಗದರ್ಶನದಲ್ಲಿ ಜ್ಞಾನವನ್ನು ಪಡೆದು ಆತ್ಮ ಸಾಕ್ಷಾತ್ಕಾರ ಮಾಡಿಕೊಂಡು, ಗುರು ಮುಟ್ಟಿ ಗುರುವಾದ ಹಲವಾರು ಉದಾಹರಣೆಗಳು ನಮ್ಮ ಇತಿಹಾಸದಲ್ಲಿವೆ. ಆದರೆ ಗುರುವಿಲ್ಲದೆ ಅರಿವಿನ ಆಗರವಾದ ಅಪರೂಪದ ಶಿವಯೋಗಿ ಶ್ರೀಖಾಸ್ಗತೇಶ್ವರ ಸ್ವಾಮಿಗಳು.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ತಾಳಿಕೋಟೆಯ ಶ್ರೀಖಾಸ್ಗತೇಶ್ವರ ಶಿವಯೋಗಿಗಳು ಈ ಭಾಗದ ಭಕ್ತರ ಪಾಲಿನ ನಡೆದಾಡುವ ದೇವರು. ಖಾಸ್ಗತ ಎಂಬ ಪದದ ಅರ್ಥವೇ ಗುರುವಿಲ್ಲದೇ ಆತ್ಮಸಾಕ್ಷಾತ್ಕಾರ ಮಾಡಿಕೊಂಡು ತನ್ನನ್ನು ತಾನು ಅರಿತವನು ಎಂದು. ಸ್ವತಃ (ಖಾಸ) ಸದ್ಗತಿ (ಗತಿ) ಪಡೆದವನು ಎಂದರ್ಥ. ಖಾಸ್ಗತೇಶ್ವರರ ಮೊದಲ ಹೆಸರು ವಿರಕ್ತಪ್ಪ. ವಿರಕ್ತಪ್ಪ ಶಿವಯೋಗಿಗಳು ಲೋಕ ಸಂಚಾರ ಮಾಡುತ್ತ ಹುಬ್ಬಳ್ಳಿಗೆ ಬಂದಾಗ ಆರೂಢ ಪರಂಪರೆಯ ಆದ್ಯಗುರು ಶ್ರೀಸಿದ್ಧಾರೂಢರ ದರ್ಶನವಾಗುತ್ತದೆ. ಶಿವಯೋಗಿಗಳನ್ನು ಕಂಡು ಸಿದ್ಧಾರೂಢರು; ಕಾಮ, ಕ್ರೋಧಾದಿ ಅರಿಷಡ್ವರ್ಗಗಳನ್ನು ಗೆದ್ದಿರುವ ನೀನು ಸ್ವಯಂ ಸದ್ಗತಿ ಹೊಂದುವುದಾಗಿ ಹೇಳಿ ಖಾಸ್ಗತ ಎಂಬ ಬಿರುದನ್ನು ನೀಡುತ್ತಾರೆ. ಆ ನಂತರ ಖಾಸ್ಗತೇಶ್ವರ ಶಿವಯೋಗಿ ಎಂಬ ನಾಮಾಂಕಿತರಾಗಿ ಶ್ರೀಗಳು ಪ್ರಸಿದ್ಧರಾದರು.


ಶ್ರೀ ಖಾಸ್ಗತ ಶ್ರೀಗಳು

ಜಾತಿ, ಮತ, ಪಂಥವೆನ್ನದೆ ಸರ್ವ ಜನಾಂಗದವರಿಗೆ ಅರಿವು, ಆಚಾರಗಳನ್ನು ಬೋಧಿಸಿ ಸಮಾಜದಲ್ಲಿ ಸಾಮರಸ್ಯಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಖಾಸ್ಗತೇಶ್ವರ ರಥೋತ್ಸವ

ಮುನ್ನುಡಿ ಬರೆದಿದ್ದ ಖಾಸ್ಗತೇಶ್ವರರನ್ನು ಸರ್ವ ಜನಾಂಗದವರು ಇಂದಿಗೂ ಭಕ್ತಿಯಿಂದ ಆರಾಧಿಸುತ್ತಾರೆ. ಇಂದಿಗೂ ತಾಳಿಕೋಟೆಯಲ್ಲಿ ಶ್ರೀಖಾಸ್ಗತೇಶ್ವರ ಮಠ ಮತ್ತು ಮಸೀದಿ ಒಂದೇ ಗೋಡೆಯ ಅಕ್ಕ ಪಕ್ಕದಲ್ಲಿರುವುದು ಇಲ್ಲಿನ ವಿಶೇಷ.

ಧಾರ್ಮಿಕ ಸಂಸ್ಕಾರದ ಜೊತೆಗೆ ಸಾಮಾಜಿಕ ಅರಿವು ಮೂಡಿಸುವ ಹಲವು ಕಾರ್ಯಗಳನ್ನು ಖಾಸ್ಗತೇಶ್ವರರು ಮಾಡಿದ್ದಾರೆ. ಕಾಲರಾ, ಪ್ಲೇಗ್‌ನಂತಹ ಸಾಂಕ್ರಾಮಿಕ ರೋಗಗಳು ತಲೆದೋರಿದಾಗ ಸ್ವತಃ ಮುಂದೆ ನಿಂತು ಗ್ರಾಮಸ್ಥರಿಗೆ ಆರೈಕೆ ಮಾಡುತ್ತಾರೆ, ಮೃತಪಟ್ಟವರ ಅಂತಿಮ ಸಂಸ್ಕಾರವನ್ನು ನೆರವೇರಿಸುತ್ತಾರೆ. ಮಠವನ್ನು ಜಾತಿ ಸಂಕೋಲೆಯಿಂದ ಮುಕ್ತಗೊಳಿಸಿ ಹೆಸರಿಗೆ ತಕ್ಕಂತೆ ಮುಂದೆ ಸ್ವಯಃ ಸದ್ಗತಿ ಹೊಂದುತ್ತಾರೆ.

ಖಾಸ್ಗತೇಶ್ವರ ಮಠದ ಇತಿಹಾಸ :

5 ಶತಮಾನಗಳ ಇತಿಹಾಸ ಹೊಂದಿರುವ ತಾಳಿಕೋಟೆ ವಿರಕ್ತಮಠವು ಇಲ್ಲಿಯವರೆಗೆ 14 ಪೀಠಾಧಿಪತಿಗಳನ್ನು ಕಂಡಿದೆ. ಇಂತಹ ಸುದೀರ್ಘ ಪರಂಪರೆಯಲ್ಲಿ 13ನೇಯ ಪೀಠಾಧಿಪತಿ ಶ್ರೀಖಾಸ್ಗತೇಶ್ವರ ಸ್ವಾಮಿಗಳು.

ಬಾಗಲಕೋಟಿ ಜಿಲ್ಲೆಯ ಶಿರೂರು ಗ್ರಾಮದ ಸಂಗಯ್ಯ ಮತ್ತು ನೀಲಮ್ಮ ದಂಪತಿಗಳ ಪುಣ್ಯಸಂಜಾತರಾಗಿ 1863ರಲ್ಲಿ ಜನಿಸಿದ ಖಾಸ್ಗತೇಶ್ವರ ಸ್ವಾಮಿಗಳಿಗೆ ಕೇವಲ 13ನೇ ವಯಸ್ಸಿನಲ್ಲಿಯೇ ಪಟ್ಟಾಧಿಕಾರವಾಗುತ್ತದೆ. ನಂತರ ಶ್ರೀಮಠದ ಭಿಕ್ಷಪ್ಪಯ್ಯನ ಗದ್ದುಗೆ (ತಪಸ್ಸಿನ ಗದ್ದುಗೆ) ಯಲ್ಲಿ 6ತಿಂಗಳು ಅನುಷ್ಠಾನವನ್ನು ಗೈದು ಅಧ್ಯಾತ್ಮಿಕ ಶಕ್ತಿಯನ್ನು ಸಂಪಾದಿಸಿಕೊಳ್ಳುತ್ತಾರೆ.

ಬಾಲ್ಯದಿಂದಲೂ ಆಧ್ಯಾತ್ಮದ ಕಡೆಗೆ ಒಲವು ಹೊಂದಿದ್ದ ಶ್ರೀಗಳು ಧಾರ್ಮಿಕ ಸಾಧನೆಯ ಜೊತೆಗೆ ಸ್ವತಂತ್ರ ಹೋರಾಟದಲ್ಲಿ ಆಸಕ್ತಿ ಹೊಂದಿದ್ದರು. ಸ್ವತ: ಮುಕ್ತಿ ಫೌಜ್ ಎಂಬ ಸಾಮಾಜಿಕ ನಾಟಕವೊಂದನ್ನು ಬರೆದು ಅಭಿನಯಿಸಿದ್ದಾರೆ. ದೇವನೊಬ್ಬ ನಾಮ ಹಲವು ಎಂಬ ಮಾತನ್ನು ಅಳವಡಿಸಿಕೊಂಡಿದ್ದ ಶ್ರೀಗಳು ಮುಸ್ಲಿಂ ಬಾಂಧವರ ಮಸೀದಿಯಲ್ಲಿ ಆಚರಿಸುತ್ತಿದ್ದ ಎಲ್ಲ ಹಬ್ಬಗಳಲ್ಲೂ ಪಾಲ್ಗೊಂಡು ಪ್ರಾರ್ಥನೆ ನಡೆಸುತ್ತಿದ್ದರು. ಅಂದಿನಿಂದಲೂ ಇಲ್ಲಿ ಯಾವುದೇ ಧರ್ಮ ಸಂಘರ್ಷವಿಲ್ಲದೆ ಉಭಯ ಕೋಮಿನವರು ಸಮನ್ವಯದಿಂದ ಹಬ್ಬ, ಜಾತ್ರೆಗಳನ್ನು ಆಚರಿಸುತ್ತಾರೆ.

ಕೇವಲ 33 ವರ್ಷಗಳ ಕಾಲ ಭೌತಿಕವಾಗಿ ಜೀವಿಸಿದ್ದ ಖಾಸ್ಗತೇಶ್ವರರು 1896ರಲ್ಲಿ ಲಿಂಗೈಕ್ಯರಾದರು. ಅವರ ನಂತರ 14ನೇ ಪೀಠಾಧಿಪತಿಗಳಾದ ವಿರಕ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಖಾಸ್ಗತೇಶ್ವರ ಗೋಪಾಲ ಕಾವಲಿ

ಮಹಾಸ್ವಾಮಿಗಳು ಈ ಪರಂಪರೆಯನ್ನು ಮುಂದುವರೆಸಿದ್ದು, ಸದ್ಯ ಪೀಠಕ್ಕೆ ಶ್ರೀಸಿದ್ಧಲಿಂಗ ದೇವರನ್ನು ಉತ್ತರಾಧಿಕಾರಿಗಳಾಗಿ ನೇಮಿಸಲಾಗಿದೆ.

ಗೋಪಾಲ ಕಾವಲಿ ಉತ್ಸವ:

ಶ್ರೀಖಾಸ್ಗತೇಶ್ವರ ಸ್ವಾಮಿಗಳು ಕಾಶಿ, ಶ್ರೀಶೈಲ, ಗೋಕರ್ಣ ಹೀಗೆ ಲೋಕಸಂಚಾರ ಗೈಯುತ್ತ ಪಂಡರಪುರಕ್ಕೆ ಬರುತ್ತಾರೆ. ಅಲ್ಲಿನ ಗೋಪಾಲ ಕಾವಲಿ ಉತ್ಸವವನ್ನು ನೋಡಿ ಶ್ರೀಮಠದ ಜಾತ್ರೆಯ ವೇಳೆ ಗೋಪಾಲ ಕಾವಲಿ ಉತ್ಸವ ಆರಂಭಿಸುತ್ತಾರೆ. ಕರ್ನಾಟಕದ ಮಟ್ಟಿಗೆ ಇದು ಅತ್ಯಂತ ಅಪರೂಪದ ಉತ್ಸವ.

ಗೋಪಾಲ ಕಾವಲಿ ಉತ್ಸವ ಎಂದರೆ ಹಸುವಿನ ಹಾಲು-ಮೊಸರು ಬೆರೆಸಿದ ಪಂಚಾಮೃತವನ್ನು ಮಡಿಕೆಯಲ್ಲಿ ಕಟ್ಟಿ ತೂಗು ಹಾಕಿರುತ್ತಾರೆ. ಜಾತ್ರೆಯ ದಿನ ಬೆಳಗಿನ ಜಾವ ಈ ಮಡಿಕೆಯನ್ನು ಒಡೆಯಲಾಗುತ್ತದೆ. ಆಗ ಅದರಲ್ಲಿದ್ದ ಪಂಚಾಮೃತ ಇಡೀ ಮಠದ ಪ್ರಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಭಕ್ತರ ಮೇಲೆ ಸಿಡಿಯುತ್ತದೆ. ಹೀಗೆ ಪಂಚಾಮೃತ ಮೈಮೇಲೆ ಬಿದ್ದರೆ ಅವರ ಎಲ್ಲ ಪಾಪಗಳು ನಾಶವಾಗಿ ಜೀವನದಲ್ಲಿ ಇಷ್ಟಾರ್ಥ ಈಡೇರುತ್ತವೆ ಎಂಬ ನಂಬಿಕೆ ಇದೆ. ಈ ಕ್ಷಣಕ್ಕಾಗಿ ಇಡೀ ರಾತ್ರಿ ಭಕ್ತರು ಕಾಯುತ್ತಾರೆ.

ಪ್ರತಿ ವರ್ಷ ಆಷಾಡ ಮಾಸದ ದ್ವಾದಶಿಯಂದು ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಈ ಉತ್ಸವ ಜರುಗಲಿದ್ದು, ಈ ವರ್ಷ ಇದೇ ಜು.24ರಂದು ಗೋಪಾಲ ಕಾವಲಿ ಉತ್ಸವ ನಡೆಯಲಿದೆ. 7ದಿನ ನಿರಂತರ ಭಜನಾ ಸಪ್ತಾಹ ನಡೆಯಲಿದೆ. ಈ ವೇಳೆ ತಾಳಿಕೋಟೆಯ ಸರ್ವ ಜನಾಂಗದವರ ಮನೆಗೆ ಖಾಸ್ಗತೇಶ್ವರರ ಭಾವಚಿತ್ರವಿಟ್ಟ ಪಲ್ಲಕ್ಕಿ ಹೋಗಿ ಪೂಜೆಗೊಳ್ಳುತ್ತದೆ. ಜು.25ರಂದು ಬೆಳಗ್ಗೆ ಆನೆ ಮೆರವಣಿಗೆ ಸಂಜೆ ರಥೋತ್ಸವ ನಡೆಯಲಿದೆ. ಬರುವ ಭಕ್ತರಿಗೆ ವಿಶೇಷ ದಾಸೋಹ ವ್ಯವಸ್ಥೆಯನ್ನು ಶ್ರೀಮಠದಿಂದ ಮಾಡಲಾಗುತ್ತದೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 490ಕಿ.ಮೀ ದೂರವಿದ್ದು, ರಾ.ಹೆ.48ರ ಮೂಲಕ ಆಲಮಟ್ಟಿ ಹೋಗಿ ಅಲ್ಲಿಂದ ಮುದ್ದೆಬಿಹಾಳ ಮಾರ್ಗವಾಗಿ ತಾಳಿಕೋಟೆ ತಲುಪಬೇಕು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಧೂತಪುರುಷ ಶ್ರೀಸಾಯಿಬಾಬ
108 ಸಾಯಿ ಮೂರ್ತಿಯ ವಿಶಿಷ್ಟ ದೇವಾಲಯ

ದಿನಾಂಕ : 26-07-2018

ಗುರುವೆಂದರೆ; ಸಾಮಾನ್ಯ ವ್ಯಕ್ತಿಯ ಲೌಕಿಕ ತುಮುಲಗಳನ್ನು ಕಳೆದು ಆತ್ಮಸಾಕ್ಷಾತ್ಕಾರಕ್ಕೆ ಬೇಕಾದ ಜ್ಞಾನ ಮಾರ್ಗವನ್ನು ಜಗತ್ತಿಗೆ ತೋರಿಸುವ ಮಹಾ ಶಕ್ತಿ. ಅಂತಹ ಸದ್ಗುರುವಿಗೆ ಜಾತಿ ಮತಗಳ ಹಂಗಿಲ್ಲ, ದೇಶ ಭಾಷೆಗಳ ಸಂಕೋಲೆ ಇಲ್ಲ, ಆಹಾರ ವಿಹಾರದ ಭೇದವಿಲ್ಲ, ವಸ್ತ್ರ ಒಡವೆಯ ವ್ಯಾಮೋಹವಿಲ್ಲ. ಇಂತಹ ನಿರಾಭಾರಿ, ನಿರ್ಮೋಹದ ಮೂರ್ತರೂಪ ಸಮರ್ಥ ಸದ್ಗುರು ಶ್ರೀಶಿರಡಿ ಸಾಯಿಬಾಬಾ.

ಶಿರಡಿ ಸಾಯಿಬಾಬಾರನ್ನು ಸರ್ವಜನಾಂಗದ ಭಕ್ತರು ಭಕ್ತಿ ಭಾವದಿಂದ ಪೂಜಿಸುತ್ತಾರೆ. ಕೇವಲ ಒಂದು ಶತಮಾನದ ಹಿಂದೆ ಸಾಮಾನ್ಯರಂತೆಯೇ ಜೀವಿಸಿದ್ದ ಬಾಬಾರವರು ಇಂದು ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ ಶ್ರೀಶ್ರೀಶ್ರೀ ಸಾಯಿನಾಥ ಮಹಾರಾಜರಾಗಿ ಕೋಟ್ಯಾಂತರ ಭಕ್ತರ ಹೃದಯ ಸಿಂಹಾಸನದಲ್ಲಿ ವಿರಾಜಮಾನರಾಗಿದ್ದಾರೆ. ಇವರನ್ನು ಮಾನವ ಸ್ವರೂಪದಲ್ಲಿ ಭುವಿಗೆ ಬಂದ ಭಗವಂತ ಎಂದು ಭಕ್ತರು ನಂಬಿದ್ದಾರೆ.

ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಮಾತ್ಮಮಾಯೆಯ ।
ಪ್ರತ್ಯಕ್ಷೋ ಗುರುರೂಪೇಣಾ ವರ್ತತೇ ಭಕ್ತಿ ಸಿದ್ಧಯೆ ॥

ಎಂಬ ಶ್ಲೋಕದಂತೆ ಭಗವಂತ ತಾನು ಅದೃಶ್ಯನಾಗಿದ್ದರೂ ಕೂಡಾ ಭಕ್ತರ ಭಕ್ತಿ ಸಿದ್ಧಿಗಾಗಿ ಶ್ರೀಗುರುವಿನ ರೂಪದಲ್ಲಿ ಜಗತ್ತಿನಲ್ಲಿ ಅವತಾರವೆತ್ತುತ್ತಾನೆಂಬ ಮಾತಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಕೂಡಾ ಧರ್ಮಕ್ಕೆ ಗ್ಲಾನಿಯುಂಟಾದಾಗ ನಾನು ಮತ್ತೆ ಅವತಾರವೆತ್ತುತ್ತೇನೆ ಎಂದು ಹೇಳಿದ ಮಾತು ಬಾಬಾರಂತಹ ಮಹಾಪುರುಷರಿಂದ ನಿಜವೆನಿಸುತ್ತದೆ.

ಶ್ರೀ ಕೆಂಪಣ್ಣ ಅಪ್ಪಾಜಿ

ಸಾಯಿಬಾಬಾರನ್ನು ಯಾವುದೋ ಒಂದು ತತ್ವಸಿದ್ಧಾಂತಕ್ಕೆ ಸೀಮಿತಗೊಳಿಸಲು ಸಾಧ್ಯವಿಲ್ಲ. ಮಾನವ ಕಲ್ಯಾಣವನ್ನೇ ಪ್ರಮುಖವಾಗಿಟ್ಟುಕೊಂಡು ಅತ್ಯಂತ ಸರಳವಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

108 ಸಾಯಿಬಾಬಾ

ಭಕ್ತರಿಗೆ ಅಧ್ಯಾತ್ಮದ ದಾರಿ ತೋರಿದ ಬಾಬಾರವರು ನಂಬಿದ ಭಕ್ತರ ದುರಿತಗಳನ್ನು ಪರಿಹರಿಸಿದ್ದಾರೆ. ಅವರ ಆಚರಣೆಗಳಲ್ಲಿ ಹಿಂದೂ ಮತ್ತು ಮುಸ್ಲಿಂ ಸೂಫಿ ತತ್ವಗಳು ಅಡಗಿದ್ದವು. ಸಬ್ ಕಾ ಮಾಲೀಕ್ ಏಕ್ ಹೈ (ಸರ್ವರ ಮಾಲೀಕ ಒಬ್ಬನೇ) ಎನ್ನುವ ಮೂಲಕ ಮಸೀದಿಯನ್ನು ಮಂದಿರವನ್ನಾಗಿ ತೋರಿದ ಮಹಾನುಭಾವ ಸಾಯಿಬಾಬಾ.

ಬಾಬಾರನ್ನು ದತ್ತಾತ್ರೆಯರ ಅವತಾರವೆಂದು ಕರೆಯುತ್ತಾರೆ. ಬ್ರಹ್ಮ, ವಿಷ್ಣು, ಮಹೇಶ್ವರರ ಸಂಯುಕ್ತ ಸ್ವರೂಪವೇ ಶ್ರೀಗುರು ದತ್ತಾತ್ರೆಯರು. ಸೃಷ್ಟಿ, ಸ್ಥಿತಿ ಮತ್ತು ಲಯ ಮೂರರಲ್ಲೂ ಸದ್ಗುರುವಿನ ಸಂಬಂಧವಿದೆ. ಆ ಮೂರರ ಮೂರ್ತರೂಪದಲ್ಲಿ ದತ್ತಾತ್ರೆಯರನ್ನು ಪೂಜಿಸುವ ಪುರಾತನ ಪರಂಪರೆಯನ್ನು ಹಿಂದೂ ಸಂಸ್ಕೃತಿಯಲ್ಲಿ ಇಂದಿಗೂ ಕಾಣಬಹುದು. ಅಂತಹ ದತ್ತಾತ್ರೆಯರ ಮರು ಅವತಾರವೇ ಶ್ರೀಶಿರಡಿ ಸಾಯಿಬಾಬಾ ಎಂದು ವಿಶ್ಲೇಷಣೆ ಮಾಡಲಾಗುತ್ತದೆ.

ಅಪರೂಪದ ಸಾಯಿ ಮಂದಿರ:

ಶಿರಡಿ ಸಾಯಿಬಾಬಾರವರ ಮಂದಿರಗಳು ದೇಶಾದ್ಯಂತ ಲಕ್ಷ ಲಕ್ಷ ಸಂಖ್ಯೆಯಲ್ಲಿವೆ. ಅಂತೆಯೇ ಬೆಂಗಳೂರು ಮಹಾನಗರದಲ್ಲಿಯೂ ಸಾಯಿಮಂದಿರಗಳು ಸಾಕಷ್ಟಿವೆ. ಆದರೆ ತಿಂಡ್ಲು ಗ್ರಾಮದಲ್ಲಿರುವ ಶ್ರೀಸತ್ಯಮೂರ್ತಿ ಸಾಯಿ ಮಂದಿರವು ಎಲ್ಲಕ್ಕಿಂತ ವಿಶಿಷ್ಟವಾಗಿದೆ. ಒಂದೇ ಸಾಯಿ ಮಂದಿರದಲ್ಲಿ 108 ಬಾಬಾ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದ್ದು, ಆ ಮೂರ್ತಿಗಳನ್ನು ನೋಡುವುದೇ ಭಕ್ತರಿಗೊಂದು ಆನಂದ.

ಬಾಬಾ ಆರಾಧಕರಾಗಿರುವ ಶ್ರೀಕೆಂಪಣ್ಣ ಅಪ್ಪಾಜಿಯವರು ಕಳೆದ ನಾಲ್ಕು ದಶಕಗಳಿಂದ ಶನೈಶ್ಚರ ಸ್ವಾಮಿಯ ದೇವಾಲಯವನ್ನು ಕಟ್ಟಿ ಪೂಜಿಸಿಕೊಂಡು ಬಂದಿದ್ದಾರೆ. ಒಂದು ದಿನ ಮಧ್ಯಾಹ್ನದ ವೇಳೆ ವಿಶ್ರಾಂತಿ ಪಡೆಯುತ್ತಿದ್ದ ಅಪ್ಪಾಜಿಯವರ ಕನಸಿನಲ್ಲಿ ಕಾಣಿಸಿಕೊಂಡ ಸಾಯಿಬಾಬಾರವರು ನಾನು ಇಲ್ಲಿ ನೆಲೆಯಾಗುತ್ತೇನೆ. ನನ್ನ ದೇವಸ್ಥಾನ ಕಟ್ಟಿಸು ಎಂದು ಪ್ರೇರಣೆ ನೀಡಿದರಂತೆ. ಆ ಪ್ರೇರಣೆಯಂತೆ ಇಲ್ಲಿ ಸಾಯಿ ಮಂದಿರವನ್ನು ಕಟ್ಟಿಸಿದ ಕೆಂಪಣ್ಣ ಅಪ್ಪಾಜಿ, ರಾಜಸ್ಥಾನದ ಶುದ್ಧ ಅಮೃತಶಿಲೆಯ 108 ಮೂರ್ತಿಗಳನ್ನು ಮಾಡಿಸಿ ಇಲ್ಲಿ ಪ್ರತಿಷ್ಠಾಪಿಸಿದ್ದಾರೆ.

ಪ್ರಧಾನ ಪೀಠದಲ್ಲಿ 8ಅಡಿ ಎತ್ತರದ ಬೃಹತ್ ಮೂರ್ತಿಯಿದ್ದು, ಎರಡು ಅಡಿಯ 35, ಒಂದೂವರೆ ಅಡಿಯ 36, ಒಂದೂಕಾಲು ಅಡಿಯ 36 ಮೂರ್ತಿಗಳನ್ನು ಮೂರು ಪ್ರದಕ್ಷಿಣೆಯ ಮಾರ್ಗವಾಗಿ ಸ್ಥಾಪಿಸಲಾಗಿದೆ. ಜೊತೆಗೆ ಗುರುವಿನ ಮೂಲವಾದ ದತ್ತಾತ್ರೆಯ, ಶಂಕರಾಚಾರ್ಯರ ಮತ್ತು ಬುದ್ಧನ ಮೂರ್ತಿಗಳನ್ನು ಸ್ಥಾಪಿಸಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪದ್ಧತಿಯಂತೆ ಎಲ್ಲ ಸಾಯಿಕ್ಷೇತ್ರಗಳಲ್ಲಿರುವ "ಧುನಿ"ಯನ್ನು ಇಲ್ಲಿಯೂ ನಿರ್ಮಿಸಲಾಗಿದ್ದು, ಭಕ್ತರು ವಿವಿಧ ಸಂಕಲ್ಪಗಳನ್ನು ಮಾಡಿಕೊಂಡು ಧಾನ್ಯ ಮತ್ತು ತುಪ್ಪವನ್ನು ಅರ್ಪಿಸಿದರೆ ಇಷ್ಟಾರ್ಥಗಳು ಈಡೇರುತ್ತವೆ ಎಂಬ ನಂಬಿಕೆ ಇದೆ.

108 ಸಾಯಿಬಾಬಾ ದೇವಸ್ಥಾನ

ಗುರುಪೌರ್ಣಿಮೆಯ ವಿಶೇಷ ಪೂಜೆ:

ಭಾರತೀಯ ಸಂಸ್ಕೃತಿಯಲ್ಲಿ ಬೇರೆ ಬೇರೆ ಹೆಸರಿನಲ್ಲಿ ಹಲವು ಪೌರ್ಣಿಮೆಗಳನ್ನು ಆಚರಿಸಲಾಗುತ್ತದೆ. ಆದರೆ ಗುರುಪೌರ್ಣಿಮೆಯನ್ನು ಎಲ್ಲ ಸಂಪ್ರದಾಯದವರು ವಿಶೇಷವಾಗಿ ಆಚರಿಸುತ್ತಾರೆ. ವೇದಗಳಿಗೆ ಮೊಟ್ಟ ಮೊದಲ ಬಾರಿಗೆ ಬ್ರಹ್ಮಸೂತ್ರವನ್ನು ರಚಿಸಿದ ವ್ಯಾಸರನ್ನು ಜ್ಞಾನದ ಮೂಲ ಎಂದು ಗೌರವಿಸಲಾಗುತ್ತದೆ. ಆ ಕಾರಣದಿಂದಲೇ ಭಾರತೀಯ ಗುರುಪರಂಪರೆಯಲ್ಲಿ ವ್ಯಾಸರಿಗೆ ಪ್ರಥಮ ಗೌರವವನ್ನು ಸಲ್ಲಿಸಲಾಗುತ್ತದೆ. ಈ ಹಿನ್ನಲೆಯಲ್ಲಿ ಗುರುಪೌರ್ಣಿಮೆಯನ್ನು ವ್ಯಾಸಪೌರ್ಣಿಮೆ ಎಂದು ಕರೆಯಲಾಗುತ್ತದೆ.

ವ್ಯಾಸಪೌರ್ಣಿಮೆ ಹಾಗೂ ದತ್ತಪೌರ್ಣಿಮೆ ಎಂದು ಕರೆಯುವ ಗುರುಪೌರ್ಣಿಮೆಯಲ್ಲಿ ದತ್ತಾವತಾರಿ ಶಿರಡಿ ಸಾಯಿಬಾಬಾ ಮಂದಿರಗಳಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಅದರಲ್ಲೂ 1918ರಲ್ಲಿ ಬಾಬಾರವರು ಇಹಲೋಕದ ಯಾತ್ರೆ ಮುಗಿಸಿ ಇದೀಗ 100 ವರ್ಷಗಳು ಸಂದಿವೆ. ಈ ಹಿನ್ನೆಲೆಯಲ್ಲಿ ತಿಂಡ್ಲುವಿನಲ್ಲಿರುವ ಸತ್ಯಮೂರ್ತಿ ಸಾಯಿಬಾಬಾ ಮಂದಿರದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

108 ಬಾಬಾ ಮೂರ್ತಿಗಳಿಗೆ 108 ಲೀಟರ್ ಹಾಲಿನ ಅಭಿಷೇಕ, ಧುನಿಯಲ್ಲಿ ಧಾನ್ಯ-ತುಪ್ಪದಿಂದ ಹೋಮ-ಹವನ ಹಾಗೂ ಸಾಮೂಹಿಕ ಶ್ರೀಸತ್ಯನಾರಾಯಣ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ. ಇಡೀ ದಿನ ಭಕ್ತರಿಂದ ಸಾಯಿ ಭಜನೆ ಮತ್ತು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಹೋಗುವ ಮಾರ್ಗ:

ಬೆಂಗಳೂರು ನಗರದ ತಿಂಡ್ಲು ಗ್ರಾಮದಲ್ಲಿರುವ 108 ಸಾಯಿಬಾಬ ಮಂದಿರಕ್ಕೆ ಹೆಬ್ಬಾಳ ಮಾರ್ಗವಾಗಿ ಕೊಡಿಗೆಹಳ್ಳಿ ಮೂಲಕ ಹೋಗಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತರ ಭವಣೆ ನೀಗುವ ಅಂಗಾರ..!

ಆದಿಶಕ್ತಿಯ ಆರಾಧಕ ಘನಪಂಡಿತ ವಿಶ್ವಾರಾಧ್ಯರು

ದಿನಾಂಕ : 07-03-2019

ಮಹಾತ್ಮರು ಸಾಮಾನ್ಯರಂತೆ ಹುಟ್ಟಿದರೂ; ಅಸಮಾನ್ಯರಾಗಿ ಬೆಳೆದು, ಅದ್ಭುತವಾದ ಸಾಧನೆಯನ್ನು ಗೈದು ತಮ್ಮ ಆತ್ಮಸಾಕ್ಷಾತ್ಕಾರದ ಜೊತೆಗೆ ಸಮಾಜದಲ್ಲಿ ಪೂಜ್ಯತೆಯ ಸ್ಥಾನವನ್ನು ಗಳಿಸಿರುತ್ತಾರೆ. ಅಂತಹ ಮಹಾತ್ಮರಲ್ಲಿ ಕಲ್ಯಾಣ ಕರ್ನಾಟಕದ ಭಾಗದ ಅಬ್ಬೆತುಮಕೂರಿನ ಘನಪಂಡಿತ ವಿಶ್ವಾರಾಧ್ಯರು ಪ್ರಮುಖರು

ಪರಮ ತಪಸ್ವಿಗಳಾಗಿ ಆದಿಶಕ್ತಿ ಶಾಂಭವಿಯ ಆರಾಧಕರಾಗಿ, ದೇವಿಯನ್ನು ಸಾಕ್ಷಾತ್ಕರಿಸಿಕೊಂಡು ಆರೂಢ ಪರಂಪರೆಯ ಅಧಿಪತಿಗಳಾಗಿ ಮೆರೆದು ಅಧ್ಯಾತ್ಮ ಲೋಕದಲ್ಲಿ ಅವಿಸ್ಮರಣೀಯ ನಕ್ಷತ್ರದಂತೆ ಮಿಂಚುತ್ತಿರುವ ಅಬ್ಬೆತುಮಕೂರಿನ ವಿಶ್ವಾರಾಧ್ಯರು ಮಾಡಿದ ಪವಾಡಗಳು ಹಲವು.

ಮೂರು ವರ್ಷಗಳ ಕಾಲ ಒಂಟಿ ಕಾಲಿನ ಮೇಲೆ ನಿಂತು ಶಾಂಭವಿಯನ್ನು ಪ್ರತ್ಯಕ್ಷಗೊಳಿಸಿಕೊಳ್ಳುತ್ತಾರೆ. ದೇವಿ ಏನು ವರ ಬೇಕು ಎಂದು ಕೇಳಿದಾಗ; ಬೇಕು ಬೇಡಗಳನ್ನೇ ಕಿತ್ತೊಗೆದು ಸರ್ವಸಂಘ ಪರಿತ್ಯಾಗಿಯಾಗಿರುವ ನನಗೇನು ಬೇಕು ತಾಯಿ, ನೀನು ಪ್ರಸನ್ನಳಾಗಿ ಪ್ರತ್ಯಕ್ಷಳಾದ ಈ ಸ್ಥಳ ಅವಿಮುಕ್ತಕ್ಷೇತ್ರವಾಗಿ, ನಂಬಿ ಬಂದ ಭಕ್ತರ ಭವಣೆಗಳನ್ನು ನೀಗುವ ಪುಣ್ಯಕ್ಷೇತ್ರವಾಗಬೇಕು ಎಂದು ಬೇಡಿಕೆ ಸಲ್ಲಿಸುತ್ತಾರೆ. ವಿಶ್ವಾರಾಧ್ಯರ ಬೇಡಿಕೆಗೆ ಶಾಂಭವಿ ಮಾತೆ ಅಸ್ತು ಎನ್ನುತ್ತಾಳೆ.

ಅಬ್ಬೆತುಮಕೂರು ಶಾಂಭವಿ

ತನ್ನ ಅಧ್ಯಾತ್ಮ ಸಾಧನೆಗೆ ಸಿದ್ಧಿ ದೊರಕಿದ ಸ್ಥಳದಲ್ಲಿ ಅಷ್ಟಭುಜಾಕೃತಿಯ ಸಿದ್ಧಿಕಟ್ಟೆಯನ್ನು ನಿರ್ಮಿಸಿ, ನಿರಂತರವಾಗಿ ಉರಿಯುವ ಒಂದು "ಧುನಿ" ನಿರ್ಮಿಸುತ್ತಾರೆ. ಈ ಧುನಿಯಲ್ಲಿನ ಅಂಗಾರವನ್ನು (ಭಸ್ಮ) ಭಕ್ತರ ಪಾಲಿನ ಬಂಗಾರವೆಂದು ಕರೆಯುತ್ತಿದ್ದ ವಿಶ್ವಾರಾಧ್ಯರು ಭಕ್ತರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾವುದೇ ಸಮಸ್ಯೆಗಳಿದ್ದರೂ; ಶಾಂಭವಿಯನ್ನು ಸ್ಮರಿಸಿ ಅಂಗಾರವನ್ನು ಧರಿಸುತ್ತಿದ್ದರು. ಈ ಅಂಗಾರದಿಂದ ಭಕ್ತರ ಸಂಕಷ್ಟಗಳು ನಿವಾರಣೆಯಾದ ಸಾವಿರಾರು ಉದಾಹರಣೆಗಳು ಇಂದಿಗೂ ಇಲ್ಲಿ ಸಿಗುತ್ತವೆ.



ಅಬ್ಬೆತುಮಕೂರು ವಿಶ್ವಾರಾಧ್ಯ

ಸದ್ಗುರು ವಿಶ್ವಾರಾಧ್ಯರ ಚರಿತ್ರೆ:

ಸದ್ಗುರು ವಿಶ್ವಾರಾಧ್ಯರ ಪೂರ್ವಾಶ್ರಮ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಗವ್ಹಾರ ಗ್ರಾಮ. ಕಾಶೀ ಪೀಠದ ಶಾಖಾಮಠವಾಗಿರುವ ಗವ್ಹಾರ ಹಿರೇಮಠದಲ್ಲಿ ಜನಿಸಿದ ವಿಶ್ವಾರಾಧ್ಯರು ತಮ್ಮ ಸಹೋದರರಾದ ಬಸವಲಿಂಗ ಶಾಸ್ತ್ರಿಗಳೊಂದಿಗೆ ಕಾಶಿಕ್ಷೇತ್ರದಲ್ಲಿದ್ದು ಸಕಲ ವೇದ-ಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ಇವರ ಪಾಂಡಿತ್ಯಕ್ಕೆ ಬೆರಗಾಗಿ ಅಂದಿನ ಕಾಶಿ ಜಗದ್ಗುರುಗಳು ಘನಪಂಡಿತ ಎಂಬ ಬಿರುದು ನೀಡಿದ್ದರು.

ವಿಭೂತಿ ಪುರುಷರೆಂದೇ ಪ್ರಸಿದ್ಧರಾಗಿದ್ದ ಮಹಾತಪಸ್ವಿ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ಭಗವತ್ಪಾದರಿಗೆ ಸಂಸ್ಕೃತ ಶಾಸ್ತ್ರವನ್ನು ಪಾಠ ಮಾಡಿದ ಕೀರ್ತಿ ಸದ್ಗುರು ವಿಶ್ವಾರಾಧ್ಯ ಸಹೋದರರಿಗೆ ಸಲ್ಲುತ್ತದೆ. ಇವರ ಅಧ್ಯಾತ್ಮ ಶಕ್ತಿಯನ್ನು ಕಂಡು ಲೋಕ ಕಲ್ಯಾಣಕ್ಕಾಗಿ ಹುಟ್ಟಿದ ನಿಮ್ಮಿಂದ ಬಹುದೊಡ್ಡ ಸಾಧನೆ ಆಗಲಿದೆ ಎಂದು ಜಗದ್ಗುರುಗಳು ಆಶೀರ್ವದಿಸುತ್ತಾರೆ.

ಮುಂದೆ ದೇವಿಯ ಆರಾಧಕರಾಗಿದ್ದ ಗುಳೇದಗುಡ್ಡದ ಅಡವಿ ಸ್ವಾಮಿಗಳಿಂದ ದೀಕ್ಷೆಯನ್ನು ಪಡೆದು ಶಾಕಾಪುರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ದೇವಿಯ ಆರಾಧನೆಯನ್ನು ಮಾಡುತ್ತಾರೆ. ಹೀಗೆ ಆರಂಭವಾದ ವಿಶ್ವಾರಾಧ್ಯರ ಆಧ್ಯಾತ್ಮ ಹಾದಿ ಮುಂದುವರೆಯುತ್ತದೆ. ಸಕ್ರಪ್ಪಗೌಡರ ಮನವಿಯಂತೆ ಯಾದಗಿರಿ ತಾಲೂಕಿನ ಅಬ್ಬೆತುಮಕೂರಿಗೆ ಬಂದು ನೆಲೆಸುತ್ತಾರೆ. ಅಬ್ಬೆತುಮಕೂರಿನಲ್ಲಿ ಅವರು ಮಾಡಿರುವ ಪವಾಡ ಅಗಣಿತ. ತ್ರಿಕಾಲ ಜ್ಞಾನಿಗಳಾಗಿದ್ದ ವಿಶ್ವಾರಾಧ್ಯರು ಮಹಾತ್ಮ ಗಾಂಧಿಜಿಯ ಅಂತ್ಯ, ದೇಶದ ಸ್ವಾತಂತ್ರ್ಯ ಸೇರಿದಂತೆ ಹಲವು ವಿಷಯಗಳನ್ನು ಮೊದಲೇ ನುಡಿದಿದ್ದರು. ಪಾರ್ಸಿ ಧರ್ಮದ ಧರ್ಮಗುರು ಮೆಹರ್ ಬಾಬಾ ಅವರು ಅಬ್ಬೆತುಮಕೂರಿಗೆ ಬಂದು "ಭೂಮಿಯ ಮೇಲೊಂದು ನಕ್ಷತ್ರರತ್ನವನ್ನು ಕಂಡೆ " ಎಂದು ವಿಶ್ವಾರಾಧ್ಯರ ವ್ಯಕ್ತಿತ್ವವನ್ನು ಕೊಂಡಾಡಿದ್ದಾರೆ.



ಡಾ. ಗಂಗಾಧರ ಶಿವಾಚಾರ್ಯ ಸ್ವಾಮಿಗಳು

ಅಬ್ಬೆತುಮಕೂರಿನಲ್ಲಿ ತಮ್ಮ ಆತ್ಮಸಾಕ್ಷಾತ್ಕಾರದ ಸಾಧನೆಯನ್ನು ಮಾಡಿ ಸಾಕ್ಷಾತ್ ದೇವಿಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS


ಅಬ್ಬೆತುಮಕೂರು ಮಠ

ಒಲಿಸಿಕೊಂಡು ಭಕ್ತರ ಭಾವನೆಗೆ ತಕ್ಕಂತೆ ಭಾವಬ್ರಹ್ಮನಾಗಿ, ಭಕ್ತರ ಮನೆಯ ಅಂಧಕಾರವನ್ನು ನಿವಾರಿಸಲು ಜ್ಯೋತಿಬ್ರಹ್ಮನಾಗಿ, ನಿರ್ಗುಣ ನಿರಾಕಾರ ತತ್ವದ ಪ್ರತೀಕವಾಗಿ ಬಯಲುಬ್ರಹ್ಮನಾಗಿರುತ್ತೇನೆಂದು ಮಾತು ನೀಡಿ ವಿಶ್ವಾರಾಧ್ಯರು ದೇಹತ್ಯಾಗ ಮಾಡುತ್ತಾರೆ.

ಸದ್ಯ ಶ್ರೀಮಠದ ಅಧ್ಯಕ್ಷರಾಗಿರುವ ಡಾ.ಗಂಗಾಧರ ಶಿವಾಚಾರ್ಯ ಸ್ವಾಮಿಗಳು ವಿಶ್ವಾರಾಧ್ಯರ ವಂಶಸ್ಥರಾಗಿದ್ದು, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಯಲ್ಲಿ ಶ್ರೀಕ್ಷೇತ್ರವನ್ನು ಮಾದರಿ ಗೊಳಿಸಿದ್ದಾರೆ.

ಅಬ್ಬೆತುಮಕೂರಿನ ಅವಿಚ್ಛಿನ್ನ ಜಾತ್ರೆ:

ಹೈದ್ರಾಬಾದ್ ಕರ್ನಾಟಕದ ಲಕ್ಷಾಂತರ ಭಕ್ತರ ಶ್ರದ್ಧಾಕೇಂದ್ರವಾಗಿರುವ ಅಬ್ಬೆತುಮಕೂರಿನ ಅವಿಮುಕ್ತಕ್ಷೇತ್ರದ ಅವಿಚ್ಛಿನ್ನ ಜಾತ್ರೆಯು ಈ ಭಾಗದ ಬಹುದೊಡ್ಡ ಧಾರ್ಮಿಕ ಉತ್ಸವ ಎಂಬ ಹೆಗ್ಗಳಿಕೆ ಹೊಂದಿದೆ. ಸದ್ಗುರು ವಿಶ್ವಾರಾಧ್ಯರು ದೇಹತ್ಯಾಗ ಮಾಡಿದ ಪಾಲ್ಗುಣ ಶುದ್ಧ ಪಂಚಮಿಯಂದು ಪ್ರತಿ ವರ್ಷ ಬೃಹತ್ ರಥೋತ್ಸವ ನಡೆಯಲಿದೆ.

ಜಾತ್ರಾ ಮಹೋತ್ಸವದ ಅಂಗವಾಗಿ 10 ದಿನಗಳ ಕಾಲ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಇದೇ ಫೆ.28ರಂದು ಪುರಾಣ ಪ್ರವಚನ ಆರಂಭವಾಗಲಿದ್ದು ಮಾ.10ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಮಾ.11ರಂದು ಶ್ರೀಗಂಗಾಧರ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ವಿಶ್ವಾರಾಧ್ಯರ ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಕಳಾಸಾರೋಹಣ, ಶಾಂಭವಿ ಮಾತೆಗೆ ವಿಶೇಷ ಪೂಜೆ, ರತ್ನಾಂಗ ಹೋಮ ಹಾಗು ಸಂಜೆ ಮಹಾರಥೋತ್ಸವ ನಡೆಯಲಿದೆ. ನಂತರ ಉಜ್ಜಯಿನಿ ಜಗದ್ಗುರುಗಳ ಸಾನಿಧ್ಯದಲ್ಲಿ ಮಾನವ ಧರ್ಮ ಸಮಾವೇಶ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು, ರಾಜಕೀಯ ಮುಖಂಡರು, ವಿವಿಧ ಕ್ಷೇತ್ರದ ಗಣ್ಯರು ಹಾಗೂ ರಥೋತ್ಸವದಲ್ಲಿ ಸುಮಾರು 2 ಲಕ್ಷಕ್ಕೂ ಹೆಚ್ಚು ಭಕ್ತರು ಪಾಲ್ಗೊಳ್ಳಲಿದ್ದಾರೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 490 ಕಿ.ಮೀ.ದೂರವಿರುವ ಅಬ್ಬೆತುಮಕೂರು ಕ್ಷೇತ್ರಕ್ಕೆ ರಾಯಚೂರು ಮಾರ್ಗವಾಗಿ ಯಾದಗಿರಿ ತಲುಪಿ ಅಲ್ಲಿಂದ 6ಕಿ.ಮೀ ಕ್ರಮಿಸಿ ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಖರ ಉತ್ತರದ ಪ್ರಖರ ಪ್ರಸಾದ..!
ಮಾವಿನಹೊಳೆಯಲ್ಲಿ ಮಾತನಾಡುವ ಮಹಾರುದ್ರ

ದಿನಾಂಕ : 08-11-2018

ಮನುಷ್ಯ ಎಷ್ಟೇ ಬುದ್ಧಿವಂತನಾದರೂ ಭಗವಂತನ ಮುಂದೆ ನಗಣ್ಯ. ಸೃಷ್ಟಿ, ಸ್ಥಿತಿ, ಲಯದ ಮಹಾರಹಸ್ಯವನ್ನು ತನ್ನೊಳಗೆ ಹುದುಗಿಸಿಕೊಂಡಿರುವ ಕೆಲ ದೈವಸನ್ನಿಧಾನಗಳಲ್ಲಿ ನಡೆಯುವ ಆಚರಣೆ ಮತ್ತು ಆದೇಶಗಳನ್ನು ಪವಾಡ ಎನ್ನದೇ ಬೇರೆ ದಾರಿಯಿಲ್ಲ. ಈ ಹಿನ್ನೆಲೆಯಲ್ಲಿ ಮಾವಿನಹೊಳೆ ಮಹಾರುದ್ರ ಕ್ಷೇತ್ರದಲ್ಲಿ ಭಗವಂತನ ಪವಾಡವನ್ನು ಪ್ರತ್ಯಕ್ಷ ನೋಡಬಹುದು.

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ಮಾವಿನಹೊಳೆ ಮಹಾರುದ್ರಸ್ವಾಮಿ ಕ್ಷೇತ್ರದಲ್ಲಿ ಪ್ರತಿನಿತ್ಯವೂ ಪವಾಡ ನಡೆಯುತ್ತದೆ. ಇಲ್ಲಿ ಭಗವಂತನೇ ಭಕ್ತರ ಪ್ರಶ್ನೆಗಳಿಗೆ ಉತ್ತರ ನೀಡುತ್ತಾನೆ. ಈ ಕಾರಣದಿಂದ ಭಕ್ತರು ಸ್ವಾಮಿಯನ್ನು ಮಾತನಾಡುವ ಮಹಾರುದ್ರ ಎಂದು ಕರೆಯುತ್ತಾರೆ.

ಸಾಮಾನ್ಯವಾಗಿ ದೇವರಲ್ಲಿ ಪ್ರಸಾದ ಕೇಳುವ ಪದ್ಧತಿ ಸಾಕಷ್ಟು ಕಡೆಗಳಲ್ಲಿದೆ. ಆದರೆ ಮಾವಿನಹೊಳೆ ಮಹಾರುದ್ರನ ಸನ್ನಿಧಾನದಲ್ಲಿ ಹೂವಿನ ಪ್ರಸಾದವಾಗುವ ದೃಶ್ಯವನ್ನು ನೋಡಿದರೆ ಎಂತವರಿಗೂ ಆಶ್ಚರ್ಯವಾಗದಿರದು. ಮಹಾರುದ್ರ ಸ್ವಾಮಿಯ ಮೂರ್ತಿಗೆ ಹೂವಿನ ಪಕಳೆಗಳನ್ನು ಅಂಟಿಸಲಾಗಿರುತ್ತದೆ. ಹೀಗಿದ್ದರೂ ಭಕ್ತರ ಬಹಿರಂಗ ಪ್ರಶ್ನೆಗಳಿಗೆ ಭಗವಂತ ಹೂವಿನ ಪ್ರಸಾದದ ಮೂಲಕ ನಿಖರ ಉತ್ತರ ನೀಡುತ್ತಾನೆ. ಮಹಾರುದ್ರನ ಮೂರ್ತಿಯ ಪ್ರತಿ ಅವಯವಗಳಿಂದ ಬೀಳುವ ಹೂವಿಗೂ ಒಂದೊಂದು ಅರ್ಥವಿದ್ದು; ಪರಂಪರಾನುಗತವಾಗಿ ಇದನ್ನು ವಿಶ್ಲೇಷಿಸಲಾಗುತ್ತದೆ. ಬಹು ಹಿಂದಿನಿಂದಲೂ ಮಾವಿನಹೊಳೆ ಮಠದ ವಂಶಸ್ಥರಾದ ರುದ್ರಯ್ಯ ಮತ್ತು ಮಲ್ಲಯ್ಯ ಅವರನ್ನು ಮೊದಲ್ಗೊಂಡು ಈ ತಲೆಮಾರಿನವರೆಗೆ ವಿಶ್ಲೇಷಣೆ ಮುಂದುವರೆದಿದೆ.



ಮಾವಿನಹೊಳೆ ಶ್ರೀ ಮಹಾರುದ್ರ

ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಸೇರಿದಂತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಮಲ್ಲಿಕಾರ್ಜುನಸ್ವಾಮಿ

ಸುತ್ತಮುತ್ತಲಿನ ಬಹುತೇಕ ರಾಜಕೀಯ ಗಣ್ಯರು ಇಲ್ಲಿ ಅಪ್ಪಣೆಯನ್ನು ಕೇಳಿ ಚುನಾವಣೆಗೆ ಸ್ಪರ್ಧಿಸುವ ಪರಿಪಾಠವಿದೆ. ಸಾಮಾನ್ಯ ಜನರ ಪಾಲಿಗಂತೂ ಇದೊಂದು ನ್ಯಾಯಾಲಯವಾಗಿದೆ. ನಿತ್ಯ ನೂರಾರು ಜನ ತಮ್ಮ ಆಸ್ತಿ–ಪಾಸ್ತಿ ವ್ಯಾಜ್ಯ, ಕೌಟಂಬಿಕ ಕಲಹ, ಮದುವೆ, ಮಕ್ಕಳು, ವ್ಯವಹಾರ, ನೌಕರಿ, ಕೃಷಿ ಹೀಗೆ ಹತ್ತು ಹಲವು ವಿಷಯಗಳ ಮೇಲೆ ಅಪ್ಪಣೆಯನ್ನು ಕೇಳುತ್ತಾರೆ.

ಮಹಾರುದ್ರ ಸ್ವಾಮಿ ಕ್ಷೇತ್ರದ ಹಿನ್ನೆಲೆ:

ಸಾವಿರಾರು ವರ್ಷದ ಇತಿಹಾಸವಿರುವ ಮಾವಿಹೊಳೆ ಕ್ಷೇತ್ರ ಪ್ರವರ್ಧಮಾನಕ್ಕೆ ಬಂದಿದ್ದು 15–16ನೇ ಶತಮಾನದಲ್ಲಿ. ಪಂಚಗಣಾಧೀಶ್ವರರಲ್ಲಿ ಒಬ್ಬರಾಗಿದ್ದ ಶ್ರೀಕೋಲುಶಾಂತಯ್ಯನವರು ಈ ಕ್ಷೇತ್ರಕ್ಕೆ ಬಂದು ಮಹಾರುದ್ರಸ್ವಾಮಿಯ ವಿಗ್ರಹವನ್ನು ಪ್ರತಿಷ್ಠಾಪಿಸಿ ಜೀವಂತ ಸಮಾಧಿಯಾಗಿದ್ದಾರೆ. ಶ್ರೀಕೊಟ್ಟೂರೇಶ್ವರರು, ಶ್ರೀಮದ್ದಾನೇಶ್ವರರು, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಹರಪನಹಳ್ಳಿ ಕೆಂಪಯ್ಯ ಹಾಗೂ ಕೋಲು ಶಾಂತಯ್ಯನವರನ್ನು ಪಂಚಗಣಾಧೀಶ್ವರರೆಂದು ಕರೆಯಲಾಗುತ್ತದೆ.

ಶ್ರೀಕೋಲುಶಾಂತಯ್ಯನವರು ಮಾವಿನಹೊಳೆ ಗ್ರಾಮದ ಹೊರ ವಲಯದಲ್ಲಿದ್ದ ಕರಡಿಗವಿಯಲ್ಲಿ ಸುದೀರ್ಘ ಕಾಲ ಅನುಷ್ಠಾನವನ್ನು ಮಾಡುತ್ತಾರೆ. ಸುದ್ದಿ ತಿಳಿದ ಮಠದ ವಂಶಸ್ಥರು ಹಾಗೂ ಗ್ರಾಮಸ್ಥರು ಸ್ವಾಮಿಗಳನ್ನು ಬೇಡಿಕೊಳ್ಳಲಾಗಿ ಗ್ರಾಮಕ್ಕೆ ಬರುತ್ತಾರೆ. ಹೀಗೆ ಬರುವಾಗ ತಮ್ಮ ಜೋಳಿಗೆಯಲ್ಲಿ ಚೌಡೇಶ್ವರಿ ದೇವಿಯನ್ನು ತೆಗೆದುಕೊಂಡು ಬಂದು ಗ್ರಾಮದಲ್ಲಿ ಸ್ಥಾಪಿಸುತ್ತಾರೆ. ಇಂದಿಗೂ ಜೋಳಿಗೆ ಚೌಡಮ್ಮ ಎಂಬ ಹೆಸರಿನಿಂದ ದೇವಿ ಪೂಜೆಗೊಳ್ಳುತ್ತಿದ್ದಾಳೆ.

ಈ ಕ್ಷೇತ್ರದ ಮೂಲ ಅಧಿಪತಿ ಶ್ರೀಮಲ್ಲಿಕಾರ್ಜುನ ಸ್ವಾಮಿ. ಆದರೆ ದೇವಾಲಯದ ಪಕ್ಕದ ಜಾಗದಲ್ಲಿದ್ದ ಒಂದು ಹುತ್ತದಲ್ಲಿ ಶ್ರೀಮಹಾರುದ್ರಸ್ವಾಮಿಯ ಮೂರ್ತಿ ಇರುವುದನ್ನು ಯೋಗದೃಷ್ಟಿಯಿಂದ ಅವಲೋಕಿಸಿದ ಕೋಲುಶಾಂತಯ್ಯ ಸ್ವಾಮಿಗಳು ಆ ಮೂರ್ತಿಯನ್ನು ಹೊರತೆಗಿಸಿ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಪಕ್ಕದಲ್ಲಿ ಪ್ರತಿಷ್ಠಾಪಿಸಿ ಆ ಮೂರ್ತಿಯ ಹಿಂದೆ ತಾವು ಜೀವಂತ ಸಮಾಧಿಯಾಗುತ್ತಾರೆ. ತಾವು ಸಮಾಧಿಯಾಗುವ ಮೊದಲು "ನಂಬಿ ಬರುವ ಭಕ್ತರಿಗೆ ಮಹಾರುದ್ರಸ್ವಾಮಿಯ ಮುಖಾಂತರ ನಾನು ಆಶೀರ್ವಾದ ನೀಡಿ ಭಕ್ತರ ಬೇಡಿಕೆಗಳನ್ನು ಈಡೇರಿಸುವುದಾಗಿ ಹೇಳುತ್ತಾರೆ" ಅಂತೆಯೇ ಇಂದಿಗೂ ಮಹಾರುದ್ರಸ್ವಾಮಿಯ ಮುಖಾಂತರ ಭಕ್ತರ ಪ್ರಶ್ನೆಗೆ ಸ್ವಾಮಿಗಳು ಉತ್ತರವನ್ನು ನೀಡುತ್ತಿದ್ದಾರೆಂಬ ನಂಬಿಕೆ ಭಕ್ತರಲ್ಲಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರಂತರ ಧರ್ಮಜಾಗೃತಿ ಕಾರ್ಯ:

ಶತಮಾನಗಳ ಸುದೀರ್ಘ ಹಿನ್ನೆಲೆ ಇರುವ ಮಾವಿನಹೊಳೆ ಮಹಾರುದ್ರಸ್ವಾಮಿ ಕ್ಷೇತ್ರದಲ್ಲಿ ಪ್ರತಿ ಶ್ರಾವಣಮಾಸ, ಮಹಾಶಿವರಾತ್ರಿ ಹಾಗೂ ಕಾರ್ತಿಕ ಮಾಸದಲ್ಲಿ ವಿಶೇಷ ಕಾರ್ಯಕ್ರಮಗಳು ನಡೆಯುತ್ತವೆ.

ಶ್ರೀ ಮಹಾರುದ್ರ ದೇವಸ್ಥಾನ

ಶ್ರಾವಣ ಮಾಸದಲ್ಲಿ ಒಂದು ತಿಂಗಳ ಪರ್ಯಂತ ನಿತ್ಯ ರುದ್ರಾಭಿಷೇಕ, ಪೂಜೆ, ದಾಸೋಹ ನಡೆದರೆ; ಶಿವರಾತ್ರಿಯಲ್ಲಿ ಪಲ್ಲಕ್ಕಿ ಉತ್ಸವ, ಜಂಗಮಾರಾಧನೆ, ಅಮ್ಮನವರ ಜಾತ್ರೆ ಮತ್ತು ಮಹಾ ದಾಸೋಹ ನಡೆಯುತ್ತದೆ. ಹಾಗೆಯೇ ಕಾರ್ತೀಕ ಮಾಸದ ಪೌರ್ಣಿಮೆ ಯಂದು ದೀಪೋತ್ಸವ ನಡೆಯುತ್ತದೆ. ತಾವರೆಕೆರೆ ಶಿಲಾಮಠದ ಶ್ರೀಗಳಾದ ಯಡಿಯೂರೂ ಶ್ರೀರೇಣುಕ ಶಿವಾಚಾರ್ಯ ಸ್ವಾಮಿಗಳ ಸಾನಿಧ್ಯದಲ್ಲಿ ಇಲ್ಲಿನ ಎಲ್ಲ ಧಾರ್ಮಿಕ ಉತ್ಸವಗಳು ನಡೆಯುತ್ತವೆ. ಹೊನ್ನಾಳಿ ಹಿರೇಕಲ್ಮಠದ ಲಿಂಗೈಕ್ಯ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಸಹ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಮಾರ್ಗದರ್ಶನ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಇದೇ ನ.11 ಮತ್ತು 12ರಂದು ಕ್ಷೇತ್ರದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಶ್ರೀಗುರುಮಹಾರುದ್ರಸ್ವಾಮಿ ನಿತ್ಯ ದಾಸೋಹ ಮಂದಿರ ಹಾಗೂ ಶ್ರೀಮಲ್ಲಿಕಾರ್ಜುನಸ್ವಾಮಿ ಸಮುದಾಯ ಭವನ ಲೋಕಾರ್ಪಣೆ ನಡೆಯಲಿದೆ. ಶ್ರೀರಂಭಾಪುರಿ, ಶ್ರೀಉಜ್ಜಯಿನಿ, ಶ್ರೀಶೈಲ, ಶ್ರೀಕಾಶಿ ಜಗದ್ಗುರುಗಳ ಸಾನಿಧ್ಯದಲ್ಲಿ ಜನಜಾಗೃತಿ ಧರ್ಮ ಸಮಾರಂಭ ನಡೆಯಲಿದ್ದು, ನಾಡಿನ ಪ್ರಮುಖ ರಾಜಕೀಯ ಮುಖಂಡರು, ವಿವಿಧ ಮಠಾಧೀಶರು ಮತ್ತು ಅಪಾರ ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 273ಕಿ.ಮೀ ದೂರವಿರುವ ಮಾವಿನಹೊಳೆಗೆ ರಾ.ಹೆ.48ರ ಮೂಲಕ ಚಿತ್ರದುರ್ಗ ಮಾರ್ಗವಾಗಿ ಚನ್ನಗಿರಿ ತಲುಪಿ ಅಲ್ಲಿಂದ ಹೋಗಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದುಶ್ಚಟ ಬಿಡಿಸಲು ಕಾಣಿಕೆ ಡಬ್ಬಿ! ಬಾಳಿಗೆ ಪ್ರೇರಣೆ ನೀಡುವ ಬಾಲೇಹೊಸೂರು ಮಠ

ದಿನಾಂಕ : 21-03-2019

ಸಮಾಜಕ್ಕೆ ವಿಭಿನ್ನ ಕೊಡುಗೆ ಕೊಡುವುದು ಮಠ ಮಂದಿರಗಳ ಆದ್ಯತೆಯ ಕರ್ತವ್ಯ. ಆ ಕರ್ತವ್ಯ ನಿರ್ವಹಣೆಗಾಗಿ ಸಮಾಜದಿಂದ ಆರ್ಥಿಕ ನೆರವನ್ನು ಬಯಸುವ ಮಠಮಂದಿರಗಳಲ್ಲಿ ಕಾಣಿಕೆ ಡಬ್ಬಿ ಸಹಜ. ಆದರೆ ಇಲ್ಲೊಂದು ಕಾಣಿಕೆ ಡಬ್ಬಿ ಇಡೀ ಜಗತ್ತಿನಲ್ಲೇ ಮತ್ತೆಲ್ಲೂ ಕಾಣಸಿಗಲು ಸಾಧ್ಯವಿಲ್ಲ. ಅದು ಅಂತಿಂತ ಕಾಣಿಕೆ ಡಬ್ಬಿಯಲ್ಲ; ದುಶ್ಚಟಗಳ ಕಾಣಿಕೆ ಡಬ್ಬಿ!

ಗದಗ ಜಿಲ್ಲೆಯ ನೂತನ ಲಕ್ಷ್ಮೇಶ್ವರ ತಾಲೂಕಿನ ಬಾಲೇಹೊಸೂರಿನಲ್ಲಿರುವ ಶ್ರೀದಿಂಗಾಲೇಶ್ವರ ಮಠದಲ್ಲಿ ದುಶ್ಚಟಗಳನ್ನೇ ಕಾಣಿಕೆಯಾಗಿ ಸ್ವೀಕರಿಸಲು ಕಾಣಿಕೆಡಬ್ಬಿಯನ್ನು ಇರಿಸಲಾಗಿದೆ. ಶ್ರೀಮಠದ ಆವರಣದಲ್ಲಿ ಇಟ್ಟಿರುವ ಕಾಣಿಕೆ ಡಬ್ಬಿಯನ್ನು ನೋಡಿದಾಗ ಎಂತಹವರಿಗೂ ಆಶ್ಚರ್ಯವಾಗದಿರದು.

ಮಠಗಳು ಕೇವಲ ಧಾರ್ಮಿಕ ಚಟುವಟಿಕೆಗಳಿಗೆ ಸೀಮಿತವಾಗದೆ ಸಾಮಾಜಿಕವಾಗಿ ಸಮಾಜವನ್ನು ಸರಿದಾರಿಗೆ ತರುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ದುಶ್ಚಟಗಳಿಗೆ ಬಲಿಯಾಗಿ ಹಾಳಾಗುತ್ತಿರುವ ಯುವ ಸಮುದಾಯವನ್ನು ಸರಿ ದಾರಿಗೆ ತರಲು ಬಾಲೇಹೊಸೂರು ವಿರಕ್ತಮಠದ ಶ್ರೀದಿಂಗಾಲೇಶ್ವರ ಸ್ವಾಮಿಗಳು ಮಠದ ಆವರಣದಲ್ಲಿ ದುಶ್ಚಟಗಳನ್ನು ತ್ಯಜಿಸಲು ಕಾಣಿಕೆ ಡಬ್ಬಿಯನ್ನು ಇರಿಸುವ ಮೂಲಕ ವಿಭಿನ್ನ ಹೆಜ್ಜೆಯನ್ನು ಇಟ್ಟಿದ್ದಾರೆ.


ಬಾಲೇಹೊಸೂರು ಶ್ರೀ ದಿಂಗಾಲೇಶ್ವರ ಗದ್ದುಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಬಾಲೇಹೊಸೂರು ವಿಶೇಷ ಹುಂಡಿ

ಶ್ರೀದಿಂಗಾಲೇಶ್ವರ ಗದ್ದುಗೆಯು ಮುಂಭಾಗದಲ್ಲಿ ನಿಂತು ಸಂಕಲ್ಪವನ್ನು ಮಾಡಿ ತಾವು ಅಂಟಿಸಿಕೊಂಡಿದ್ದ ಯಾವುದೇ ದುಶ್ಚಟವಿದ್ದರೂ ಆ ವಸ್ತುಗಳನ್ನು ಈ ಡಬ್ಬಿಗೆ ಹಾಕಿ ಗದ್ದುಗೆಗೆ ಪ್ರದಕ್ಷಿಣೆ ಹಾಕಿದರೆ; ಜೀವನದಲ್ಲಿ ಹೊಸ ಬದುಕು ಕಟ್ಟಿಕೊಂಡು ಸುಖಃವಾಗಿರ ಬಹುದೆಂಬ ಧಾರ್ಮಿಕ ನಂಬಿಗೆ ಯೊಂದಿಗೆ ಶ್ರೀಗಳು ಸಾಮಾಜಿಕ ಕಳಕಳಿ ಮೆರೆದಿದ್ದಾರೆ.

ಕಾಣಿಕೆ ಡಬ್ಬಿಯ ಮೇಲೆ "ಈ ವಸ್ತುಗಳು ಆರೋಗ್ಯ, ಹಣ, ಮರ್ಯಾದೆಯನ್ನು ಹಾಳು ಮಾಡುತ್ತವೆ, ಪ್ರತಿಜ್ಞಾಪೂರ್ವಕವಾಗಿ ತ್ಯಜಿಸಿ ಪವಿತ್ರಾತ್ಮನಾಗು" ಎಂದು ಬರೆಯಲಾಗಿದೆ. ಗ್ರಾಮದ ಸುತ್ತಮುತ್ತಲಿನಿಂದ ಮಠಕ್ಕೆ ಬರುವ ಹಲವರು ಈ ಪ್ರತಿಜ್ಞೆಯನ್ನು ಸ್ವೀಕರಿಸಿದ್ದಾರೆ. ಗುಟಕಾ, ಇಸ್ಪೀಟು, ಬೀಡಿ, ಸಿಗರೇಟು, ಮಧ್ಯಪಾನ ಇತ್ಯಾದಿ ದುರಬ್ಯಾಸಗಳನ್ನು ಮಾಡುವ ಸಾವಿರಾರು ಜನರು ತಮ್ಮ ದುಶ್ಚಟಗಳ ವಸ್ತುಗಳನ್ನು ಈ ಡಬ್ಬಿಗೆ ಹಾಕಿ ಜೀವನದಲ್ಲಿ ಹೊಸ ಬದುಕು ಕಟ್ಟಿಕೊಂಡಿದ್ದಾರೆ.

ದಿಂಗಾಲೇಶ್ವರ ಮಠದ ಪರಂಪರೆ:

ಸುಮಾರು 15-16ನೇ ಶತಮಾನದಲ್ಲಿ ಆಂಧ್ರಪ್ರದೇಶದಿಂದ ಶಿವಯೋಗಿಗಳೋರ್ವರು ಲೋಕಸಂಚಾರ ಮಾಡುತ್ತ ಈ ಪ್ರದೇಶಕ್ಕೆ ಬರುತ್ತಾರೆ. ದಟ್ಟವಾದ ಅರಣ್ಯದ ಪ್ರಶಾಂತ ಪರಿಸರದಲ್ಲಿ ಕುಳಿತು ದೀರ್ಘವಾದ ತಪಸ್ಸನ್ನು ಮಾಡುತ್ತಾರೆ. ಹೀಗೆ ಅನುಷ್ಠಾನ ಮಾಡುತ್ತಿದ್ದ ಗುರುಗಳಿಗೆ ಈ ಗ್ರಾಮದ ಗಾಣಿಗರ ಮನೆಯ ಹಸುವೊಂದು ನಿತ್ಯ ಹಾಲು ಕರೆಯುತ್ತಿರುತ್ತದೆ. ಈ ವಿಷಯ ಮನೆಯ ಮಾಲೀಕರಿಗೆ ಹಾಗೂ ಗ್ರಾಮಸ್ಥರಿಗೆ ತಿಳಿದು ಗುರುಗಳ ಶಕ್ತಿ ಸುತ್ತಮುತ್ತಲ ಗ್ರಾಮಗಳಿಗೆ ಹರಡುತ್ತದೆ.

ಬಾಲೇಹೊಸೂರು ದಿಂಗಾಲೇಶ್ವರ ಮಠ

ಶಿವಯೋಗಿಗಳ ಶಕ್ತಿಯನ್ನು ಅರಿತ ಭಕ್ತರು ಇಲ್ಲಿಯೇ ಮಠವನ್ನು ಕಟ್ಟಿ ತಮ್ಮ ಊರಿನಲ್ಲೇ ಇರುವಂತೆ ಶ್ರೀಗಳಿಗೆ ಬೇಡಿಕೊಳ್ಳುತ್ತಾರೆ. ದಿಂಗಾಲೇಶ್ವರ ಎಂದರೆ ಹಾಲು ಕುಡಿದು ಬದುಕಿದವರು ಎಂದರ್ಥ. ಭಕ್ತರ ಅಭಿಲಾಷೆಯಂತೆ ಬಾಲೇಹೊಸೂರಿನಲ್ಲಿ ನೆಲೆನಿಂತ ಶ್ರೀಗಳು ಹಾನಗಲ್ ಮತ್ತು ಶಿರಸಿ ತಾಲೂಕಿನಲ್ಲಿ ಎರಡು ಶಾಖಾಮಠಗಳನ್ನು ಸ್ಥಾಪಿಸಿ ಒಂದೇ ದಿನ ಬೆಳಗ್ಗೆ, ಮಧ್ಯಾಹ್ನ ಮತ್ತು ಸಂಜೆ ಕುದುರೆ ಮೂಲಕ ಒಂದೊಂದು ಮಠದಲ್ಲಿ ಪೂಜಾ ಕೈಂಕರ್ಯವನ್ನು ನೆರವೇರಿಸುತ್ತಿದ್ದರೆಂಬ ಉಲ್ಲೇಖವಿದೆ. ಈ ಭಾಗದಲ್ಲಿ ದಿಂಗಾಲೇಶ್ವರ ಸ್ವಾಮಿಗಳನ್ನು ಕುಲದೈವವಾಗಿ ಪೂಜಿಸುವ ದೊಡ್ಡ ಭಕ್ತಗಣವಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗದಗದ ಪುಟ್ಟರಾಜ ಗವಾಯಿಗಳ ಕುಲದೈವ ದಿಂಗಾಲೇಶ್ವರ ಸ್ವಾಮಿಗಳೆಂಬುದು ಗಮನಾರ್ಹ.

ಬಾಲೇಹೊಸೂರು ಶ್ರೀ ದಿಂಗಾಲೇಶ್ವರ ಸ್ವಾಮೀಜಿ

ದಿಂಗಾಲೇಶ್ವರ ಮಠದ ಗುರುಪರಂಪರೆಯಲ್ಲಿ ಬಂದ 5ನೇ ದಿಂಗಾಲೇಶ್ವರ ಶ್ರೀಗಳು ಮಹಾತಪಸ್ವಿಗಳು, ಪೂಜಾನಿಷ್ಠರಾಗಿದ್ದು; ತಾವು ಲಿಂಗೈಕ್ಯರಾಗುವುದನ್ನು ಮೊದಲೇ ಸೂಚಿಸಿ ಅದಕ್ಕೆ ಪೂರ್ವದಲ್ಲಿ 63ದಿನಗಳ ಕಾಲ ಬಸವ ಪುರಾಣವನ್ನು ನಡೆಸಿ ಮಂಗಲಗೊಂಡ ನಂತರ ಪೂಜಾದಿಗಳನ್ನು ಪೂರೈಸಿ ಲಿಂಗೈಕ್ಯರಾಗುತ್ತಾರೆ. ಅವರು ಐಕ್ಯರಾದ ಕೇವಲ ಒಂದು ನಿಮಿಷದ ಒಳಗಾಗಿ ಅವರು ಮುದ್ದಿನಿಂದ ಸಾಕಿದ್ದ ಜಿಂಕೆ ಮತ್ತು ಹಸು ಕೂಡಾ ಪ್ರಾಣತ್ಯಾಗ ಮಾಡುತ್ತವೆ. ಅವರ ಉತ್ತರಾಧಿಕಾರಿಗಳಾಗಿ ಬಂದವರು ಸದ್ಯ ಇರುವ 6ನೇ ದಿಂಗಾಲೇಶ್ವರ ಸ್ವಾಮಿಗಳು.

ಪ್ರವಚನ ಪ್ರಾಚಾರ್ಯ ಪೂಜ್ಯರು:

ಧರ್ಮ, ಸಂಸ್ಕಾರ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರೇರಣೆ ನೀಡುವ ಮಹಾತ್ಮರ ಮಾತುಗಳು ಸಮಾಜವನ್ನು ಸುಧಾರಣೆಯ ಹಾದಿಯಲ್ಲಿ ಕೊಂಡೊಯ್ಯುತ್ತವೆ. ಆ ಹಿನ್ನಲೆಯಲ್ಲಿ ಪ್ರವಚನ ಪ್ರಾಚಾರ್ಯ ಎಂಬ ಹೆಗ್ಗಳಿಕೆ ಹೊಂದಿರುವ ಬಾಲೇಹೊಸೂರಿನ ಶ್ರೀದಿಂಗಾಲೇಶ್ವರ ಸ್ವಾಮಿಗಳ ಪ್ರವಚನ ಉತ್ತರ ಕರ್ನಾಟಕದಲ್ಲಿ ಬಹಳ ಪ್ರಸಿದ್ಧಿ. ಹುಬ್ಬಳ್ಳಿಯಂತಹ ಮಹಾನಗರದಲ್ಲಿ ಶ್ರೀಗಳ ಪ್ರವಚನಕ್ಕೆ ಲಕ್ಷಕ್ಕೂ ಮೀರಿ ಭಕ್ತರು ಆಗಮಿಸಿದ ಉದಾಹರಣೆಗಳಿವೆ.

ಶ್ರೀಮಠದ ಭೂಮಿಯಲ್ಲಿ 10 ಸಾವಿರ ಮರಗಳನ್ನು ಬೆಳೆಸಿ ಹಸಿರು ಕ್ರಾಂತಿ ಮಾಡಿರುವ ಶ್ರೀಗಳು ತತ್ವ-ಸಿದ್ಧಾಂತದ ಜೊತೆಗೆ ಜೀವನ ಮೌಲ್ಯವನ್ನು ಮನಮುಟ್ಟುವಂತೆ ಪ್ರವಚನ ಮಾಡುತ್ತಾರೆ. ಬಾಲೇಹೊಸೂರು ಮಠದ 6ನೇ ಪಟ್ಟಾಧ್ಯಕ್ಷರಾಗಿರುವ ಶ್ರೀಗಳು ಹಲವು ರಚನಾತ್ಮಕ ಕಾರ್ಯಗಳಿಂದ ಗಮನ ಸೆಳೆದವರು. ಗುರು-ವಿರಕ್ತ ಸಮನ್ವಯ ಚಿಂತನೆಯನ್ನು ಮೈಗೂಡಿಸಿಕೊಂಡು ಸಮಾಜಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 350ಕಿ.ಮೀ ದೂರವಿದ್ದು, ರಾ.ಹೆ.48ರ ಮೂಲಕ ರಾಣಿಬೆನ್ನೂರು ಹೋಗಿ ಅಲ್ಲಿಂದ ಗುತ್ತಲ ಮಾರ್ಗವಾಗಿ ಬಾಲೇಹೊಸೂರು ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಾತ್ರೆಯ ಜತೆಜತೆಗೆ ಉರೂಸ್ ಸಂಭ್ರಮ..!

ಡೋಣೋರು ಚಾನುಕೋಟಿ ಮಠದಲ್ಲಿ ಸೌಹಾರ್ದ ಉತ್ಸವ

ದಿನಾಂಕ : 30–05–2019

ಮನುಷ್ಯ ಜಾತಿ ತಾನೊಂದೆ ವಲಂ ಎಂಬ ಆದಿಕವಿ ಪಂಪನ ಮಾತು ಅನುಷ್ಠಾನಕ್ಕೆ ತರುವುದು ಅಷ್ಟು ಸುಲಭವಲ್ಲ. ಸಾಹಿತ್ಯ, ಸಿದ್ಧಾಂತಗಳು ಎಷ್ಟೇ ಸಮನ್ವಯವನ್ನು ಸಾರಿದರೂ ಸಹಭಾಳ್ವೆಯನ್ನು ಸಾರುವ ಆಚರಣೆಗಳು ಕಡಿಮೆ. ಆದರೆ ಇಲ್ಲೊಂದು ಮಠದ ವಾರ್ಷಿಕ ಜಾತ್ರೆಯಲ್ಲಿ ಮುಸ್ಲಿಂರ ಪವಿತ್ರ ಉರೂಸ್ ಉತ್ಸವ ನಡೆಯುವ ಮೂಲಕ ಸೌಹಾರ್ದತೆಯ ಸಂದೇಶವನ್ನು ಸಾರುತ್ತಿದೆ.

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಡೋಣೋರು ಚಾನುಕೋಟಿ ಶ್ರೀಕಟ್ಟೀಮನಿ ಹಿರೇಮಠದಲ್ಲಿ ವರ್ಷಕ್ಕೊಮ್ಮೆ ನಡೆಯುವ ಶ್ರೀಗುರು ಮರುಳಸಿದ್ದೇಶ್ವರ ಜಾತ್ರೆಯ ಸಂದರ್ಭದಲ್ಲಿ ಗ್ರಾಮದೇವತೆ ಚೌಡೇಶ್ವರಿಯ ಜಾತ್ರೆ ಹಾಗೂ ಮುಸ್ಲಿಂರ ಹಜರತ್ ಸುಲೇಮಾನ್ ಉರೂಸ್ ಉತ್ಸವವು ನಡೆಯುವುದು ಹಿಂದೂ ಮುಸ್ಲಿಂ ಧರ್ಮಗಳ ಸಮನ್ವಯಕ್ಕೆ ಸಾಕ್ಷಿಯಾಗಿದೆ.

ಯಾವುದೋ ರಾಜಕೀಯ ದುರುದ್ದೇಶಕ್ಕೆ ಮಾನವೀಯತೆ ಮರೆತು ನಗರ ಪ್ರದೇಶಗಳಲ್ಲಿ ಕೋಮು ಸಾಮರಸ್ಯವನ್ನು ಹಾಳುಗೆಡಹುವ ಇಂದಿನ ಆತಂಕಕಾರಿ ಸಂದರ್ಭದಲ್ಲಿ; ಗ್ರಾಮೀಣ ಪ್ರದೇಶದಲ್ಲಿ ಪುರಾತನ ಕಾಲದಿಂದ ನಡೆದುಕೊಂಡು ಬರುತ್ತಿರುವ ಇಂತಹ ಸಾಮರಸ್ಯದ ಉತ್ಸವಗಳು ಗ್ರಾಮಸ್ಥರ ಬಾಂಧವ್ಯ, ಧಾರ್ಮಿಕ ಸೌಹಾರ್ದತೆಗೆ ಕಾರಣವಾಗಿದೆ.


ಡೋಣೋರು ಶ್ರೀ ಮರುಳಸಿದ್ಧೇಶ್ವರ

ಹಿಂದೂಗಳಲ್ಲಿ ವರ್ಷಕ್ಕೊಮ್ಮೆ ಮಹಾತ್ಮರ ಪುಣ್ಯಸ್ಮರಣೆಯನ್ನು ಮಾಡುವಂತೆ; ಮುಸ್ಲಿಂ ಸಮುದಾಯದಲ್ಲೂ ಮೌಲ್ವಿಗಳ, ಹಜರತ್‌ಗಳ ಹೆಸರಿನಲ್ಲಿ ವಾರ್ಷಿಕ ಉತ್ಸವವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಚರಿಸುತ್ತಾರೆ. ಡೋಣೂರಿನಲ್ಲಿ ಮಹಾತ್ಮರಾದ ಶ್ರೀಗುರು ಮರುಳಸಿದ್ದೇಶ್ವರ ಸ್ವಾಮಿಗಳ ರಥೋತ್ಸವ, ಗ್ರಾಮದೇವತೆ ಚೌಡೇಶ್ವರಿ ಜಾತ್ರೆ ಹಾಗೂ ಸುಲೇಮಾನ್ ಹಜರತ್ ಉರೂಸ್ ಒಟ್ಟೊಟ್ಟಿಗೆ ಆಚರಿಸುವುದು ವಿಶೇಷ. ಅದರಲ್ಲೂ ಚಾನುಕೋಟಿ ಮಠದ ಸ್ವಾಮಿಗಳು ಹೋಗಿ ಗಂಧಾರ್ಪಣೆ ಮಾಡಿದ ನಂತರವೇ ಉರೂಸ್ ಆಚರಣೆಯ ವಿಧಿ-ವಿಧಾನಗಳು ಆರಂಭವಾಗುವುದು ಇದು ಹಿಂದೂ ಮುಸ್ಲಿಂ ಬಾಂಧವರು ಸೌಹಾರ್ದತೆಗೆ ಸಾಕ್ಷಿಯಾಗಿದೆ.

ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ

ಚಾನುಕೋಟಿ ಕಟ್ಟೀಮನಿ ಮಠದ ಪರಂಪರೆ:

ಮಠ-ಮಂದಿರಗಳು ಭಾರತೀಯ ಸಂಸ್ಕೃತಿಯ ಪ್ರತೀಕ. ಕೇವಲ ಕಲ್ಲು, ಮಣ್ಣು, ಕಟ್ಟಿಗೆಯ ಕಟ್ಟಡಗಳಾಗದೇ ಲೋಕಕಲ್ಯಾಣದ ಧ್ಯೇಯ ದೀಕ್ಷೆಯ ಹಾದಿಯಲ್ಲಿ ಸಿದ್ದಿ ಸಾಧನೆಗೈದ ಕಾರ್ಯಾಗಾರಗಳಾಗಿವೆ. ಈ ಹಿನ್ನೆಲೆಯಲ್ಲಿ ಡೋಣೋರು ಚಾನುಕೋಟಿ ಕಟ್ಟೀಮನಿ ಹಿರೇಮಠವೂ ಒಂದು.

ವೀರಶೈವ ಸನಾತನ ಪಂಚಪೀಠಗಳಲ್ಲೊಂದಾದ ಶ್ರೀಮದ್ ಉಜ್ಜಯಿನಿ ಶಾಖಾ ಮಠವಾಗಿರುವ ಚಾನುಕೋಟಿ ಹಿರೇಮಠದ ಕರ್ತೃ ಶ್ರೀಗುರು ಮರುಳಸಿದ್ಧರು. ಜಗದ್ಗುರು ರೇವಣಸಿದ್ಧರ ಒಡನಾಡಿಗಳಾಗಿದ್ದ ಮರುಳಸಿದ್ಧರು ಭಕ್ತಿಭಂಡಾರಿ ಬಸವಣ್ಣನವರ ಹಿರಿಯ ಸಮಕಾಲೀನರು ಎಂಬ ಉಲ್ಲೇಖಗಳಿವೆ. 12ನೇ ಶತಮಾನದ ವೇಳೆಗೆ ಬಹು ಪ್ರಭಾವಿಗಳಾಗಿದ್ದ ಮರುಳಸಿದ್ಧರು ಲೋಕ ಸಂಚಾರ ಮಾಡುತ್ತ ಬರುವಾಗ ಈ ಗ್ರಾಮದ ಪಕ್ಕದಲ್ಲಿ ತುಂಬಿ ಹರಿಯುತ್ತಿದ್ದ ದೋಣಿ ನದಿಯನ್ನು ತಮ್ಮ ಯೋಗಶಕ್ತಿಯಿಂದ ಕಂಬಳಿಯನ್ನೇ ನಾವೆಯನ್ನಾಗಿಸಿಕೊಂಡು ದಾಟಿ ಬರುತ್ತಾರೆ. ಈ ಕಾರಣಕ್ಕಾಗಿಯೇ ಈ ಗ್ರಾಮಕ್ಕೆ ಡೋಣೂರು ಎಂಬ ಹೆಸರು ಬಂದಿದೆ ಎಂಬ ಪ್ರತೀತಿ ಇದೆ.

ಮರುಳಸಿದ್ಧರು ಇಲ್ಲಿ ಜೀವಂತ ಸಮಾಧಿ ಹೊಂದಿದ್ದಾರೆಂಬ ಉಲ್ಲೇಖವಿದ್ದು, ಅವರ ಕರ್ತೃ ಗದ್ದುಗೆಯು ಇಂದಿಗೂ ಕೂಡಾ ಶಕ್ತಿಶಾಲಿಯಾಗಿ ನಂಬಿ ಬರುವ ಭಕ್ತರನ್ನು ಕಾಪಾಡುತ್ತಿದೆ ಎಂಬ ನಂಬಿಕೆ ಇದೆ. ಅಂದಿನಿಂದಲೂ ಡೋಣೂರು ಕಟ್ಟೀಮನಿ ಹಿರೇಮಠವು ಈ ಭಾಗದ ಜನರಿಗೆ ಧಾರ್ಮಿಕ ಮಾರ್ಗದರ್ಶನ ಮಾಡಿಕೊಂಡು ಬರುತ್ತಿದ್ದು, ಸುಮಾರು 50ಶಾಖಾ ಮಠಗಳನ್ನು ಹೊಂದಿದ್ದ ಬಗ್ಗೆ ಉಲ್ಲೇಖಗಳಿವೆ. ಮುಸಬಿನಾಳ, ಮುಳ್ಳಾಳ, ಯಂಬತ್ನಾಳ, ಕೊಟ್ನೂರು ಸೇರಿದಂತೆ ಏಳೆಂಟು ಮಠಗಳು ಇಂದಿಗೂ ತಮ್ಮ ಕರ್ತವ್ಯ ನಿರ್ವಹಿಸುತ್ತಿವೆ. ಈ ನಡುವೆ ಶ್ರೀಮಠದ ಪರಂಪರೆಯಲ್ಲಿ ಬಹುಕಾಲ ಯಾವುದೇ ಸ್ವಾಮಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಡೋಣೂರಿನ ಉರೂಸ್

ಇರಲಿಲ್ಲ. ನಂತರ ಭಕ್ತರ ಬೇಡಿಕೆಯಂತೆ ಬಂದ ಶ್ರೀಗುರು ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಪರಂಪರೆಯ ಜೊತೆಗೆ ಸಾಮಾಜಿಕವಾಗಿ ಸಾಕಷ್ಟು ಕಾರ್ಯಗಳನ್ನು ಮಾಡಿದ್ದಾರೆ. ಅವರ ನಂತರ ಶ್ರೀಮಠದ ಚುಕ್ಕಾಣಿಯನ್ನು ಹಿಡಿದಿರುವ ಸದ್ಯದ ಪಟ್ಟಾಧ್ಯಕ್ಷರಾಗಿರುವ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ ಶ್ರೀಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿದ್ದಾರೆ.

ನೂತನ ರಥ ಸಮರ್ಪಣೆ :

ಶ್ರೀಗುರು ಮರುಳಸಿದ್ಧರ ಜಾತ್ರಾ ಮಹೋತ್ಸವವು ಪ್ರತಿ ಬಾದಮಿ ಅಮವಾಸ್ಸೆಯಂದು ನಡೆಯುತ್ತದೆ. ಈಗಾಗಲೇ ಕಳೆದ ಒಂದು ತಿಂಗಳಿನಿಂದ ಪುರಾಣ ಪ್ರವಚನ, ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ನಡೆದುಕೊಂಡು ಬರುತ್ತಿದ್ದು, ಇದೇ ಜೂ.1 ರಿಂದ ಜೂ.4ರವರೆಗೆ ಜಗದ್ಗುರು ಪಂಚಪೀಠದೀಶ್ವರರ ಸಾನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಜೂ.1ರಂದು ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದ್ದು, ಜೂ.2ರಂದು ನೂತನ ರಥ ಸಮರ್ಪಣೆ, ಮಂಟಪ ಪೂಜೆ, "ಮರುಳಸಿದ್ಧಾನಾಂಪ್ರಿಯ" ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಜೂ.3ರಂದು ಕುಂಭೋತ್ಸವ ಹಾಗೂ ಅಗ್ನಿಪುಟುವು ಕಾರ್ಯಕ್ರಮ ನಡೆಯಲಿದೆ. ಜೂ.4ರಂದು ಸಾಮೂಹಿಕ ವಿವಾಹ, ಶಿವಧೀಕ್ಷಾ ಮತ್ತು ಶ್ರೀಗುರು ಮರುಳಸಿದ್ದಸ್ವಾಮಿ ರಥೋತ್ಸವ ನಡೆಯಲಿದೆ.

ಹೋಗುವ ಮಾರ್ಗ:

ಬೆಂಗಳೂರಿನಿಂದ 510ಕಿ.ಮೀ ದೂರವಿರುವ ಡೋಣೋರಿಗೆ ರಾ.ಹೆ.48ರ ಮುಖಾಂತರ ಬಸವನ ಬಾಗೇವಾಡಿಗೆ ಹೋಗಿ ಅಲ್ಲಿಂದ ಮಸಬಿನಾಳ್ ಮಾರ್ಗವಾಗಿ 18ಕಿ.ಮೀ. ಕ್ರಮಿಸಿ ತಲುಪಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲೂ ಇಲ್ಲದ ಜೋಡಿ ವೀರಭದ್ರ!
ಮಾಚೋಹಳ್ಳಿಯಲ್ಲೊಂದು ವಿಶಿಷ್ಟ ದೇಗುಲ

ದಿನಾಂಕ : 20-06-2019

ದೇವಸ್ಥಾನಗಳು ಜನರ ನಂಬಿಕೆ, ಶ್ರದ್ಧೆ ಮತ್ತು ಭಕ್ತಿಯನ್ನು ಹೆಚ್ಚಿಸುವ ಪವಿತ್ರ ಸ್ಥಾನಗಳು. ಹಿಂದೂ ನಂಬಿಕೆಯ ಪ್ರಕಾರ ಸುಮಾರು 33ಕೋಟಿ ದೇವಾನು ದೇವತೆಗಳ ಉಲ್ಲೇಖವಿದೆ. ಅಂತೆಯೇ ಯಾವುದೇ ದೇವಾಲಯಕ್ಕೆ ಹೋದರೂ ಯಾವುದಾದರೊಂದು ದೇವರ ಮೂರ್ತಿಯನ್ನು ಕಾಣುತ್ತೇವೆ. ಆದರೆ ಇಲ್ಲೊಂದು ದೇವಾಲಯದಲ್ಲಿ ಮಾತ್ರ ಮತ್ತೆಲ್ಲೂ ಕಾಣಸಿಗದ ಒಂದೇ ದೇವಾಲಯದ ಗರ್ಭಗುಡಿಯಲ್ಲಿ ಒಂದೇ ದೇವರ ಎರಡು ಮೂರ್ತಿಗಳಿವೆ !

ಪುರಾತನ ಕಾಲದ ದೇವಾಲಯುಗಳಲ್ಲಿ ಯಾವ ಹೆಸರಿನಲ್ಲಿ ದೇವಾಲಯಗಳಿರುತ್ತವೆಯೋ ಆ ದೇವರ ಮೂರ್ತಿಯೊಂದನ್ನೇ ಕಾಣುತ್ತಿದ್ದೆವು. ಹೆಚ್ಚೆಂದರೆ ಪರಿವಾರ ದೇವತೆಗಳ ಮೂರ್ತಿಗಳನ್ನು ಪ್ರತ್ಯೇಕವಾಗಿ ಸ್ಥಾಪಿಸಲಾಗಿರುತ್ತದೆ. ಆದರೆ ಯಾವುದೇ ದೇವಾಲಯಗಳಲ್ಲೂ ಒಂದೇ ಗರ್ಭಗುಡಿಯಲ್ಲಿ ಒಂದೇ ದೇವರ ಎರಡು ಮೂರ್ತಿಗಳ ಉದಾಹರಣೆಗಳಿಲ್ಲ. ಅಂತಹದ್ದೊಂದು ಅಪರೂಪದ ಉದಾಹರಣೆಗೆ ಸಾಕ್ಷಿ ಬೆಂಗಳೂರಿಗೆ ಸಮೀಪದಲ್ಲೇ ಇರುವ ಮಾಚೋಹಳ್ಳಿ ಶ್ರೀಜೋಡಿ ವೀರಭದ್ರೇಶ್ವರ ದೇವಾಲಯ.

ಮಾಚೋಹಳ್ಳಿ ಗ್ರಾಮದಲ್ಲಿರುವ ಐತಿಹಾಸಿಕ ಶ್ರೀಜೋಡಿ ವೀರಭದ್ರೇಶ್ವರ ದೇವಾಲಯದ ಗರ್ಭಗುಡಿಯಲ್ಲಿ ಎರಡು ವೀರಭದ್ರನ ಮೂರ್ತಿಗಳಿವೆ. ಸುಮಾರು 4ಅಡಿ ಗಾತ್ರದ ಒಂದು ಹಾಗೂ 3 ಅಡಿ ಗಾತ್ರದ ಇನ್ನೊಂದು ಹೀಗೆ ಎರಡು ಮೂರ್ತಿಗಳನ್ನು ನಾವಿಲ್ಲಿ ಕಾಣಬಹುದು.

ಶ್ರೀ ಜೋಡಿ ವೀರಭದ್ರ

ಜೋಡಿ ಮೂರ್ತಿಗಳನ್ನು ಸ್ಥಾಪಿಸಿರುವುದರ ಹಿಂದಿನ ಉದ್ದೇಶ ಸ್ಪಷ್ಟವಾಗಿಲ್ಲವಾದರೂ; ಇಲ್ಲಿನ ಹಲವು ಅಂಶಗಳು ಜೋಡಿ ಉತ್ತರವನ್ನೇ ನೀಡುತ್ತವೆ. ವೀರಭದ್ರ ಸ್ವಾಮಿಯ ಉತ್ಸವ ಮೂರ್ತಿಗಳು ಕೂಡಾ ಜೋಡಿಯಾಗಿದ್ದು, ದೇವಾಲಯದ ಕಟ್ಟಡದ ಮೇಲೆ ಕೂಡಾ ಜೋಡಿ ವೀರಭದ್ರನ ಮೂರ್ತಿಗಳಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದು ಊಹೆಯ ಪ್ರಕಾರ ದೇವಾಲಯ ನಿರ್ಮಾಣ ಕಾಲಕ್ಕೆ ಒಂದು ಮೂರ್ತಿ ಕೆತ್ತನೆ ಮಾಡಿ ಸ್ಥಾಪಿಸಿದ್ದು, ಆ ನಂತರದ ಕಾಲಘಟ್ಟದಲ್ಲಿ ಮತ್ತೊಂದು ಬೃಹತ್ ಮೂರ್ತಿಯನ್ನು ಸ್ಥಾಪಿಸಿರಬಹುದು. ಆದರೆ ದೊಡ್ಡ ಮೂರ್ತಿಯ ಸ್ಥಾಪನೆಯ ಕಾಲಕ್ಕೆ ಚಿಕ್ಕಮೂರ್ತಿಯನ್ನು ವಿಸರ್ಜಿಸಲು ಪ್ರಯತ್ನಿಸಿದಾಗ; ಭಗವಂತ ಅದಕ್ಕೆ ಅಪ್ಪಣೆಯನ್ನು ನೀಡಿಲ್ಲವೆಂಬುದು ದೇವಾಲಯದ ಅರ್ಚಕರಾದ ರುದ್ರೇಶ್ ಅವರ ಮಾತು. ಅಂದಿನಿಂದ ಜೋಡಿವೀರಭದ್ರ ಸ್ವಾಮಿ ಎಂಬ ಹೆಸರಿನಲ್ಲಿ ಈ ದೇವಾಲಯ ಪ್ರಸಿದ್ಧವಾಗಿದೆ.

ಜೋಡಿ ಫಲ ನೀಡುವ ವೀರಭದ್ರ :

ಜೋಡಿ ವೀರಭದ್ರಸ್ವಾಮಿಯನ್ನು ಪೂಜಿಸುವುದರಿಂದ ಜೋಡಿ ಫಲಗಳನ್ನೇ ಪಡೆಯಬಹುದು ಎಂಬುದು ಇಲ್ಲಿನ ನಂಬಿಕೆ. ಕಳೆದ ಮೂರು ತಲೆಮಾರಿನಿಂದಲೂ ಇಲ್ಲಿ ಪೂಜೆ ಮಾಡುತ್ತಿರುವ ಅರ್ಚಕರಾದ ರುದ್ರೇಶ್ ಕುಟುಂಬದಲ್ಲಿ ಅಂತಹ ಜೋಡಿ ಫಲಕ್ಕೆ ಸಾಕ್ಷಿಗಳಿವೆ. ರುದ್ರೇಶ್ ಅವರ ತಾತ ಶ್ರೀರುದ್ರಪ್ಪ ಅವರು ಇಲ್ಲಿನ ಅರ್ಚಕರಾಗಿದ್ದು, ಅವರಿಗೆ ಅವಳಿ ಹೆಣ್ಣುಮಕ್ಕಳಾಗಿದ್ದವು. ಅದೇ ರೀತಿ ಸದ್ಯ ಪ್ರಧಾನ ಅರ್ಚಕರಾಗಿರುವ ರುದ್ರೇಶ್ ಅವರಿಗೂ ಕೂಡಾ ಅವಳಿ ಗಂಡುಮಕ್ಕಳಾಗಿದ್ದು, ಇದು ಜೋಡಿವೀರಭದ್ರನನ್ನು ಪೂಜಿಸಿದ ಫಲ ಎಂದು ಹೇಳುತ್ತಾರೆ.

ಕೇವಲ ಅರ್ಚಕರು ಮಾತ್ರವಲ್ಲದೇ ಸಂತಾನವಿಲ್ಲದೆ ಜೋಡಿ ವೀರಭದ್ರನಲ್ಲಿ ಹರಕೆ ಮಾಡಿಕೊಂಡ ಹಲವರಿಗೆ ಇಲ್ಲಿ ಸಂತಾನ ಫಲ ಲಭಿಸಿದೆ. ಅದರಲ್ಲಿ ಕೆಲವರಿಗೆ ಅವಳಿ ಸಂತಾನವಾಗಿದೆ. ಕೇವಲ ಸಂತಾನ ಮಾತ್ರವಲ್ಲದೇ ಆರೋಗ್ಯ ಸಮಸ್ಯೆ, ವಿವಾಹ, ವ್ಯವಹಾರ, ರಾಜಕೀಯ ಹೀಗೆ ಹಲವು ವಿಷಯಗಳನ್ನು ಹೊತ್ತು ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಮೂರು ಅಮವಾಸ್ಸೆಗಳಂದು ಬಂದು ಸ್ವಾಮಿಯ ಪಾದತೀರ್ಥದಲ್ಲಿ ಪುಣ್ಯಸ್ನಾನ ಮಾಡಿ, ಪ್ರದಕ್ಷಿಣೆ ಹಾಕಿ ಸಂಕಲ್ಪ ಮಾಡಿಕೊಂಡರೆ ಅವರ ಸಮಸ್ಯೆಗಳಿಗೆ ಪರಿಹಾರ ಖಚಿತ ಎಂಬುದು ಇಲ್ಲಿ ಫಲ ಪಡೆದವರ ಮಾತು.

ಜೋಡಿ ವೀರಭದ್ರ ದೇವಸ್ಥಾನ

ವಿಶೇಷವಾಗಿ ಮಾಚೋಹಳ್ಳಿ ಮತ್ತು ಸುತ್ತಮುತ್ತಲ ಗ್ರಾಮಗಳ ಗ್ರಾಮಸ್ಥರು ಯಾವುದೇ ಶುಭಕಾರ್ಯಗಳನ್ನು ಮಾಡುವ ಮೊದಲು ಜೋಡಿ ವೀರಭದ್ರ ಸ್ವಾಮಿಗೆ ಪೂಜೆ ಸಲ್ಲಿಸಿ ಹೂವಿನ ಪ್ರಸಾದ ಕೇಳುವ ಪದ್ಧತಿ ಇದೆ. ಸ್ವಾಮಿ ಬಲಕ್ಕೆ ಪ್ರಸಾದ ನೀಡಿದರೆ ಕೆಲಸ ಆಗಿಯೇ ತೀರುತ್ತದೆ ಎಂಬ ನಂಬಿಕೆ ಇದೆ. ರೈತರು ಹೊಲದಲ್ಲಿ ಕೊಳವೆ ಭಾವಿ ಕೊರೆಸುವ ಸಂಬಂಧ ಇಲ್ಲಿ ದೇವರ ಪ್ರಸಾದವನ್ನು ಕೇಳಿ ಅದರಂತೆ ಉತ್ತಮ ನೀರು ಪಡೆದ ಸಾಕಷ್ಟು ಉದಾಹರಣೆಗಳಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಚೋಹಳ್ಳಿ ಕ್ಷೇತ್ರದ ಇತಿಹಾಸ :

ವೀರಭದ್ರನ ಕ್ಷೇತ್ರಗಳು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿದ್ದು, ಮೈಸೂರು ಕರ್ನಾಟಕದಲ್ಲಿ ಕಡಿಮೆ. ಆದರೆ ಬೆಂಗಳೂರು ಸುತ್ತಮುತ್ತ ಕೆಲವು ಪ್ರತಿಷ್ಠಿತ ವೀರಭದ್ರ ಸ್ವಾಮಿಯ ದೇವಾಲಯಗಳಿದ್ದು, ಅವುಗಳಲ್ಲೊಂದು ಮಾಗಡಿ ರಸ್ತೆಯಲ್ಲಿರುವ ಮಾಚೋಹಳ್ಳಿ ಶ್ರೀವೀರಭದ್ರ ಸ್ವಾಮಿ ದೇವಾಲಯ.

ಸುಮಾರು 3 ಶತಮಾನಕ್ಕಿಂತ ಪೂರ್ವದ್ದೆಂದು ಹೇಳಲಾಗುವ ವೀರಭದ್ರಸ್ವಾಮಿ ದೇವಾಲಯವು ಈ ಭಾಗದಲ್ಲಿ ಭಕ್ತರ ಭಕ್ತಿ ಶ್ರದ್ಧೆಯ ಕೇಂದ್ರವಾಗಿದೆ. ಮಾಗಡಿ, ನೆಲಮಂಗಲ ಸೇರಿದಂತೆ ಹಲವು ಗ್ರಾಮಗಳಲ್ಲಿ ಮಾಚೋಹಳ್ಳಿ ವೀರಭದ್ರನ ಒಕ್ಕಲು ಮನೆತನಗಳಿದ್ದು ಅವರೆಲ್ಲರೂ ನಡೆದುಕೊಳ್ಳುತ್ತಾರೆ.

ಪುರಾತನ ಕಾಲದ ಕಲ್ಲಿನ ದೇವಾಲಯವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಪ್ರತಿ ಅಮವಾಸ್ಸೆಗೆ ರುದ್ರಾಭಿಷೇಕ, ಕಾರ್ತೀಕ ಕೊನೆಯ ಸೋಮವಾರದಂದು ಲಕ್ಷ ದೀಪೋತ್ಸವ ಹಾಗೂ ಶಿವರಾತ್ರಿಗೆ ಜಾತ್ರಾ ಮಹೋತ್ಸವ ನಡೆಯುತ್ತದೆ. ಶಿವರಾತ್ರಿಯ ಜಾತ್ರೆಗೆ ಪೂರಕವಾಗಿ ದೇವಾಲಯದ ಮುಂಭಾಗದಲ್ಲಿ 51ಅಡಿ ಎತ್ತರದ ಬೃಹತ್ ಶಿವನ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಬರುವ ಭಕ್ತರಿಗೆ ದಾಸೋಹ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ನಗರವಾಸಿಗಳಿಗೆ ಪೂಜೆ–ಪುನಸ್ಕಾರ ಸೇರಿದಂತೆ ಧಾರ್ಮಿಕ ವಿಧಿ–ವಿಧಾನಗಳಿಗೆ ಬೇಕಾದ ಯಾವುದೇ ಅಗತ್ಯ ಮಾಹಿತಿ ಮತ್ತು ಮಾರ್ಗದರ್ಶನಕ್ಕಾಗಿ ದೇವಾಲಯ ಸಮಿತಿಯು ಸಹಾಯ ಕೇಂದ್ರವನ್ನು ತೆರೆದಿದ್ದು, ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು.

ಶ್ರೀಜೋಡಿ ರುದ್ರೇಶ್ವರ ಚಾರಿಟೆಬಲ್ ಟ್ರಸ್ಟ್ ಮೂಲಕ ಹಲವು ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡುತ್ತಿರುವ ಶ್ರೀರುದ್ರೇಶ್‌ರವರು ನಿತ್ಯ ದಾಸೋಹ, ಉಚಿತ ಆರೋಗ್ಯ ತಪಾಸಣೆ ಹಾಗೂ ದುರ್ಬಲ ವೃದ್ಧರಿಗಾಗಿ ಸೇವಾಶ್ರಮ ಇನ್ನಿತರೆ ಜನೋಪಯೋಗಿ ಕೆಲಸಗಳನ್ನು ಮಾಡುವ ಉದ್ದೇಶ ಹೊಂದಿದ್ದಾರೆ. ಟ್ರಸ್ಟಿನ ಈ ಕೆಲಸಕ್ಕೆ ಸಹಾಯ ಮಾಡಲಿಚ್ಛಿಸುವವರು ಚೆಕ್, ಡಿಡಿ ಮೂಲಕ ಆರ್ಥಿಕ ನೆರವು ನೀಡಬಹುದು. ಎಸ್‌ಬಿಐ ಬ್ಯಾಂಕ್ A/c No. 38101225180 IFSC: SBIN0040893

ಹೋಗುವ ಮಾರ್ಗ:

ಬೆಂಗಳೂರಿನಿಂದ ಕೇವಲ 20ಕಿ.ಮೀ. ದೂರದಲ್ಲಿರುವ ಮಾಚೋಹಳ್ಳಿಗೆ ಮಾಗಡಿ ರಸ್ತೆ ಮೂಲಕ ನೈಸ್‌ರಸ್ತೆಯ ನಂತರ ಬಲಕ್ಕೆ 1ಕಿ.ಮೀ. ಕ್ರಮಿಸಿದರೆ ಮಾಚೋಹಳ್ಳಿ ಜೋಡಿವೀರಭದ್ರ ದೇವಾಲಯ ತಲುಪಬಹುದು. ಹೆಚ್ಚಿನ ಮಾಹಿತಿಗೆ ದೂ: 9845668024

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಶೇಷ ಕ್ಷೇತ್ರ ಮತ್ತು ಮಹಾತ್ಮರ ಲೇಖನಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವ ಧರ್ಮದ ಮಹಾಗುರು
ಶ್ರೀ ಜಗದ್ಗುರು ರೇಣುಕಾಚಾರ್ಯ
ಜಯಂತಿ ಯುಗಮಾನೋತ್ಸವ

ದಿನಾಂಕ : 22–02–2018

ಜಾತಿ, ಧರ್ಮದ ಹೆಸರಿನಲ್ಲಿ ಸಮಾಜ ವಿಘಟನೆಯತ್ತ ಸಾಗುತ್ತಿರುವ ಸದ್ಯದ ಪರಿಸ್ಥಿತಿಯಲ್ಲಿ "ಮಾನವ ಜಾತಿ ತಾನೊಂದೆ ವಲಂ" ಎಂಬ ಪಂಪನ ಕಾವ್ಯದ ಸಾಲು ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಈ ತತ್ವವನ್ನು ಯುಗ ಯುಗಗಳ ಹಿಂದೆಯೇ ಜಗತ್ತಿಗೆ ಬೋಧಿಸಿದ ಮಹಾಗುರು ಶ್ರೀಜಗದ್ಗುರು ರೇಣುಕಾಚಾರ್ಯರು. ಶ್ರೀಜಗದ್ಗುರು ರೇಣುಕಾಚಾರ್ಯರು ಶಿವಾದ್ವೈತ ಸಿದ್ಧಾಂತವನ್ನು ಬೋದಿಸಲು ಭುವಿಗವತರಿಸಿದ ದಿನವನ್ನೇ ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವವನ್ನಾಗಿ ಆಚರಿಸಲಾಗುತ್ತದೆ.

ಎಲ್ಲ ಧರ್ಮಗಳಿಗಿಂತ ಮಾನವ ಧರ್ಮ ಅತಿಶ್ರೇಷ್ಠ. ಶ್ರೀಜಗದ್ಗುರು ಪಂಚಾಚಾರ್ಯರು ವೀರಶೈವ ಧರ್ಮದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ಮೂಲಕ ಮಾನವಧರ್ಮವನ್ನು ಎತ್ತಿ ಹಿಡಿದಿದ್ದಾರೆ. ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ಅಗ್ರಗಣ್ಯರಾದ ರೇಣುಕಾಚಾರ್ಯರು ನೆರೆಯ ತೆಲಂಗಾಣದ ಕೊಲ್ಲಿಪಾಕಿ ಸ್ವಯಂಭು ಸೋಮೇಶ್ವರ ಲಿಂಗದಿಂದ ಅವತರಿಸಿ ಮಲಯಾಚಲಕ್ಕೆ ಬಂದು ಮಹಾಮುನಿ ಅಗಸ್ತ್ಯನನ್ನು ನಿಮಿತ್ತ ಮಾಡಿಕೊಂಡು ಜಗತ್ತಿನ ಸಮಸ್ತ ಮಾನವರನ್ನುದ್ದೇಶಿಸಿ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸುತ್ತಾರೆ. ಹಾಗೆ ಜಗದ್ಗುರು ರೇಣುಕಾಚಾರ್ಯರು ಮಾಡಿದ ಉಪದೇಶದ

ಶ್ರೀ ಜಗದ್ಗುರು ರೇಣುಕಾಚಾರ್ಯರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾರವೇ ರೇಣುಕಾಗ್ರಸ್ತ್ಯ ಸಂವಾದ ರೂಪದಲ್ಲಿ ರಚಿಸಲ್ಪಟ್ಟ ಸಿದ್ಧಾಂತ ಶಿಖಾಮಣಿ ಗ್ರಂಥ.



ಶ್ರೀ ಜಗದ್ಗುರು ರಂಭಾಪುರೀ ಮಹಾಪೀಠದ
ಕ್ಷೇತ್ರನಾಥ ಮತ್ತು ಗೋತ್ರಪುರುಷ
ಶ್ರೀ ವೀರಭದ್ರಸ್ವಾಮಿ

ಶ್ರೀಜಗದ್ಗುರು ರೇಣುಕಾಚಾರ್ಯರು ಬೋಧಿಸಿರುವ ಸಿದ್ಧಾಂತವು ಜೀವ ಶಿವನಾಗುವ, ಮಾನವ ಮಹಾದೇವನಾಗುವ, ಅಂಗ ಲಿಂಗವಾಗುವ, ದೇಹ ದೇವಾಲಯವಾಗುವ ಮಹಾ ಮಾರ್ಗವನ್ನು ಹೊಂದಿದೆ. ಇಲ್ಲಿ ಜಾತಿ-ಮತದ ಹಂಗಿಲ್ಲ, ಸ್ತ್ರೀ-ಪುರುಷರೆಂಬ ಭೇದವಿಲ್ಲ, ಮೇಲು ಕೀಳೆಂಬ ತರತಮವಿಲ್ಲ. ಶ್ರೀಜಗದ್ಗುರು ರೇಣುಕಾಚಾರ್ಯರ ತತ್ವ-ಸಿದ್ಧಾಂತಗಳು ಕೇವಲ ಬೋಧನೆಗೆ ಸೀಮಿತವಾಗದೆ; ಸಮಾಜದ ಸುಧಾರಣೆಗೆ ಸಾಕ್ಷಿಭೂತವಾಗಿವೆ.

ಕೊಲ್ಲಿಪಾಕಿ ಎಂಬ ಪದವು ಕೊಲನುಪಾಕ, ಕುಲ್ಯಪಾಕ ಎಂಬ ಪದದ ರೂಪಾಂತರ ಶಬ್ದ. ಈ ಪದದ ಅರ್ಥವೇ ಕುಲವನ್ನು ಪಾವನಗೊಳಿಸು ಎಂಬುದಾಗಿದೆ. ಇದಕ್ಕೆ ಪೂರಕವೆಂಬಂತೆ 18ಜಾತಿ ಜನಾಂಗಗಳಿಗೂ ಮಠಗಳನ್ನು ಕಟ್ಟಿ, ಎಲ್ಲ ಮಠಗಳಿಗೂ ಶಿಷ್ಯರನ್ನು ನೇಮಿಸಿ ಸರ್ವರಿಗೂ ಸಂಸ್ಕಾರ ನೀಡಿದವರು ಜಗದ್ಗುರು ರೇಣುಕಾಚಾರ್ಯರು. ಅವರು ಸ್ಥಾಪಿಸಿರುವ 18 ಮಠಗಳ ಕುರುಹು ಇಂದಿಗೂ ಕೊಲ್ಲಿಪಾಕಿ ಕ್ಷೇತ್ರದಲ್ಲಿವೆ.

ವಿಜ್ಞಾನ ಎಷ್ಟೇ ಬೆಳೆದಿದ್ದರೂ ಮನುಷ್ಯನಿಗೆ ಮಾನಸಿಕ ನೆಮ್ಮದಿ ಸಿಗುವುದು ಅಧ್ಯಾತ್ಮದಲ್ಲಿ ಮಾತ್ರ. ಅಂತಹ ಅಧ್ಯಾತ್ಮದ ಅರಿವಿಗೆ ಸಂಸ್ಕಾರ ಅಗತ್ಯ. ಹುಟ್ಟಿದ ಪ್ರತಿಯೊಬ್ಬ ಮನುಷ್ಯನಿಗೂ ಧರ್ಮ-ಸಂಸ್ಕಾರವನ್ನು ನೀಡುವ ಬಹುದೊಡ್ಡ ಪರಂಪರೆಯ ಮೂಲ ಪ್ರವರ್ತಕರಾದ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯರಿಗೆ ತತ್ವೋಪದೇಶವನ್ನು ಮಾಡಿ ಮಲಯಾಚಲದ ಪರ್ವತ ಶ್ರೇಣಿಯಲ್ಲಿ ಪೃಥ್ವಿ ತತ್ವದ ಸಂಕೇತವಾದ ಹಸಿರು ಧ್ವಜವನ್ನು ಹಿಡಿದು ಭದ್ರಾನದಿ ದಂಡೆಯಲ್ಲಿ ಶ್ರೀಜಗದ್ಗುರು ರಂಭಾಪುರಿ ವೀರಸಿಂಹಾಸನ ಪೀಠವನ್ನು ಸಂಸ್ಥಾಪಿಸಿದ್ದಾರೆ. ರಂಭಾಪುರಿಯಲ್ಲಿ ಪ್ರತಿ ಫಾಲ್ಗುಣ ಶುದ್ಧ ತ್ರಯೋದಶಿಯಂದು ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಮತ್ತು ಕ್ಷೇತ್ರನಾಥ ವೀರಭದ್ರ ಸ್ವಾಮಿ ಮಹಾರಥೋತ್ಸವದ ಅಂಗವಾಗಿ ಒಂದು ವಾರಗಳ ಕಾಲ ವಿಶೇಷ ಜಾತ್ರಾ ಮಹೋತ್ಸವ ನಡೆಯಲಿದೆ. ಜಾತ್ರಾ ಮಹೋತ್ಸವದಲ್ಲಿ ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾರಥೋತ್ಸವ, ಕೆಂಡೋತ್ಸವ, ಶಯನೋತ್ಸವ, ವಸಂತೋತ್ಸವ, ಕೆಂಡಾರ್ಚನೆ, ಸುರಗಿ ಸಮಾರಾಧನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರ್ಮ ಸಂಗಮಕ್ಕೆ ಸಾಕ್ಷಿ ಬಾಳೆಹೊನ್ನೂರು:

ಹರ ಮುನಿದರು ಗುರಕಾಯ್ವನೆಂಬ ಮಾತಿನಂತೆ ಸರ್ವಧರ್ಮದಲ್ಲೂ ಗುರುವಿಗೆ ಮೊದಲನೇ ಸ್ಥಾನ ನೀಡಲಾಗಿದೆ. ಅದರಲ್ಲೂ ವೀರಶೈವ ಧರ್ಮದ ತತ್ವತ್ರಯಗಳಲ್ಲೊಂದಾದ ಅಷ್ಟಾವರಣದಲ್ಲಿ ಗುರುವಿಗೆ ಪ್ರಥಮ ಸ್ಥಾನ. ಅಂತಹ ಗುರುಪರಂಪರೆಯ ಮೂಲ; ಶ್ರೀಜಗದ್ಗುರು ರೇಣುಕಾಚಾರ್ಯರು ನೆಲೆನಿಂತಿರುವ ರಂಭಾಪುರಿ ಪೀಠ.

ನಂಬಿ ಬರುವ ಭಕ್ತರ ಬಾಳನ್ನು ಹೊನ್ನಾಗಿಸುವ ಪುಣ್ಯಕ್ಷೇತ್ರ ಇದಾಗಿರುವುದರಿಂದ ಬಾಳೆಹೊನ್ನೂರು ಎಂದು ಪ್ರಸಿದ್ಧಿಯಾಗಿದೆ. ಪೀಠದ ಗೋತ್ರಪುರುಷನಾದ ಶ್ರೀವೀರಭದ್ರಸ್ವಾಮಿಯು ಕ್ಷೇತ್ರನಾಥನಾಗಿ ನೆಲೆನಿಂತ ಪುರಾತನ ದೇವಾಲಯವಿದ್ದು, ಭೂಗರ್ಭ ಸಂಜಾತರಾದ ಶ್ರೀಜಗದ್ಗುರು ರುದ್ರಮುನಿ ಶಿವಾಚಾರ್ಯರು ರಚಿಸಿದ ಉದ್ಭವ ನಂದಿಯು ಭಕ್ತರ ಆರಾಧ್ಯ ದೈವವಾಗಿದೆ. ಶ್ರೀವೀರಭದ್ರಸ್ವಾಮಿಯ ಸಾಕ್ಷಿಯಾಗಿ ಹರಕೆನಂದಿಯನ್ನು ಪೂಜಿಸುವ ಭಕ್ತರ ಇಷ್ಟಾರ್ಥಗಳು ಸಿದ್ಧಿಸುತ್ತವೆ ಎಂಬ ನಂಬಿಕೆ ಇದೆ.

ಶ್ರೀಜಗದ್ಗುರು ರೇಣುಕಾಚಾರ್ಯ ಪರಂಪರೆಯ ವೀರಸಿಂಹಾಸನ ಮಹಾಪೀಠದಲ್ಲಿ ಇಲ್ಲಿಯವರೆಗೆ 120 ಜಗದ್ಗುರುಗಳು ಪೀಠಾರೋಹಣ ಮಾಡಿದ್ದು, ಸದ್ಯ ಇರುವ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ಡಾ.ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು 121ನೇಯ ಜಗದ್ಗುರುಗಳು. ಶ್ರೀಪೀಠದ ಇತಿಹಾಸದಲ್ಲಿ ಅಭೂತಪೂರ್ವ ಅಭಿವೃದ್ಧಿಗಳ ಮೂಲಕ ಭಕ್ತರಿಗೆ ಸಕಲ ಸೌಲಭ್ಯಗಳನ್ನು ಒದಗಿಸುವುದರ ಜೊತಗೆ ಪೀಠದ ಪರಂಪರೆ ಮತ್ತು ಸಮಾಜದ ಸಂಘಟನೆಯನ್ನು ಸಮನ್ವಯದಿಂದ ಕೊಂಡೊಯ್ದ ಕೀರ್ತಿ ಇಂದಿನ ಜಗದ್ಗುರುಗಳಿಗೆ ಸಲ್ಲುತ್ತದೆ. ಪೀಠಾರೋಹಣ ರಜತ ಮಹೋತ್ಸವದ ಅಂಗವಾಗಿ ಕೈಗೆತ್ತಿಕೊಳ್ಳಲಾಗಿದ್ದ ಶ್ರೀಸೋಮೇಶ್ವರ ಶಿಲಾದೇವಾಲಯ ಮತ್ತು ಶ್ರೀಜಗದ್ಗುರು ರಂಭಾಪುರೀಶ ನಿವಾಸ ಹಾಗೂ120 ಲಿಂಗೈಕ್ಯ ಜಗದ್ಗುರುಗಳ ಜೀವನ್ಮುಕ್ತಿಸ್ಥಲವನ್ನು ಪುನರುಜ್ಜೀವನಗೊಳಿಸಿದ ಭವ್ಯ ಕಟ್ಟಡಗಳು ಭಕ್ತರ ಮನಸೂರೆಗೊಳ್ಳುತ್ತಿವೆ.

ಡಾ. ವೀರಸೋಮೇಶ್ವರ ಜಗದ್ಗುರುಗಳು

ಧರ್ಮದಲ್ಲಿ ಬಂದಿದ್ದ ಸಂಘರ್ಷವನ್ನು ಸೂಕ್ಷ್ಮವಾಗಿ ಪರಿಹರಿಸಲು ಶ್ರೀವೀರಸೋಮೇಶ್ವರ ಜಗದ್ಗುರುಗಳು ಕೈಗೊಂಡ ನಿರ್ಧಾರಗಳು ಭವಿಷ್ಯತ್ತಿನ ದಿನಗಳಿಗೆ ಸೂಕ್ತ ಫಲಿತಾಂಶವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀಡಿವೆ. ಈ ಹಿಂದೆ 2003ರಲ್ಲಿ ಗುರುವಿರಕ್ತರ ಸಮಾವೇಶವನ್ನು ನಡೆಸಿ ಹೊಸ ಇತಿಹಾಸವನ್ನು ಸೃಷ್ಟಿಸಿದ್ದ ಜಗದ್ಗುರುಗಳು; ಈ ವರ್ಷವೂ ಕೂಡಾ ಗುರುವಿರಕ್ತ ಜಗದ್ಗುರುಗಳನ್ನು ಆಹ್ವಾನಿಸಿ ಹೊಸ ದಾಖಲೆಗೆ ಮುಂದಾಗಿದ್ದಾರೆ.

ಶ್ರೀಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ:

ಪ್ರತಿವರ್ಷ ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿಯನ್ನು ವಿವಿಧ ಕ್ಷೇತ್ರದ ಗಣ್ಯರಿಗೆ ನೀಡಿ ಗೌರವಿಸಲಾಗುತ್ತದೆ. 1 ಲಕ್ಷ ನಗದು, ಕಂಚಿನ ಪತ್ರ ಹಾಗೂ ಸ್ಮರಣಿಕೆಯನ್ನು ಒಳಗೊಂಡಿರುವ 2018ನೇ ಸಾಲಿನ ಪ್ರಶಸ್ತಿಯನ್ನು ಶ್ರೀ ಶಿವಯೋಗ ಮಂದಿರ ಧರ್ಮಸಂಸ್ಥೆಯ ಅಧ್ಯಕ್ಷರಾದ ಹೊಸಪೇಟೆ ಕೊಟ್ಟೂರುಸ್ವಾಮಿ ಮಠದ ಶ್ರೀಮ.ನಿ.ಪ್ರ. ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳಿಗೆ ನೀಡಲಾಗುತ್ತಿದೆ.

ಡಾ. ಸಂಗನಬಸವ ಮಹಾಸ್ವಾಮಿಗಳು

ಬಾಗಲಕೋಟೆ ಜಿಲ್ಲೆಯ ಬಿದರಿ ಗ್ರಾಮದ ಬಸವಲಿಂಗಯ್ಯ ಗುರಮ್ಮ ದಂಪತಿಗಳ ಪುತ್ರರಾಗಿ 1938ರಲ್ಲಿ ಜನಿಸಿದ ಡಾ.ಸಂಗನಬಸವ ಮಹಾಸ್ವಾಮಿಗಳು ಕಾಶಿಯಲ್ಲಿ ದರ್ಶನ ಶಾಸ್ತ್ರ, ವ್ಯಾಕರಣ, ಕಾವ್ಯತೀರ್ಥ ವೇದಾಂತಾಚಾರ್ಯ, ತಂತ್ರಾಚಾರ್ಯ ಪದವಿಗಳನ್ನು ಪಡೆದಿದ್ದಾರೆ. ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಿರುವ ಇವರು ವೀರಶೈವ ಲಿಂಗಾಯುತ ಪ್ರತ್ಯೇಕ ಧರ್ಮ ವಿವಾದದ ಸಂದರ್ಭದಲ್ಲಿ ಗಟ್ಟಿ ನಿಲುವು ತೆಗೆದುಕೊಂಡು ಸಮಾಜಕ್ಕೆ ದಿಟ್ಟ ಉತ್ತರವನ್ನು ನೀಡಿದ್ದರು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಕ್ಷ್ಮೇಶ್ವರದಲ್ಲಿ ಗುರುಮನೆ ದಸರಾ

ರಂಭಾಪುರಿ ಜಗದ್ಗುರುಗಳ ಶರನ್ನವರಾತ್ರಿ ಧರ್ಮ ಸಮ್ಮೇಳನ

ದಿನಾಂಕ : 4–10–18

ಭಾರತವನ್ನು ವಿಶ್ವಗುರು ಎಂದು ಜಗತ್ತು ಗೌರವಿಸಲು ಮುಖ್ಯ ಕಾರಣ ಇಲ್ಲಿನ ಅಧ್ಯಾತ್ಮ ಶಕ್ತಿ ಹಾಗೂ ಸಾಂಸ್ಕೃತಿಕ ವೈಭವ. ಈ ಎರಡನ್ನೂ ಒಳಗೊಂಡಿರುವ ಬಹುದೊಡ್ಡ ಉತ್ಸವ ದಸರಾ. ಮೈಸೂರಿನಲ್ಲಿ ನಡೆಯುವ ಅರಮನೆ ದಸರಾ ವಿಶ್ವ ವಿಖ್ಯಾತ ಮನ್ನಣೆ ಪಡೆದುಕೊಂಡಿದೆ. ಅರಮನೆ ದಸರಾದಂತೆ ನಾಡಿನ ಕಲೆ, ಸಂಸ್ಕೃತಿ, ಧರ್ಮಾಚರಣೆಯ ದ್ಯೋತಕವಾಗಿ ನಡೆಯುವ ಗುರುಮನೆ ದಸರಾ ಕೂಡಾ ನಾಡಿನ ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿದೆ. ಗುರುಮನೆ ದಸರಾಕ್ಕೆ ಹೆಸರಾಗಿರುವ ಬಾಳೆಹೊನ್ನೂರಿನ ಶ್ರೀಮದ್ ರಂಭಾಪುರಿ ವೀರಸಿಂಹಾಸನ ಪೀಠದ ಶರನ್ನವರಾತ್ರಿ ದಸರಾ ದರ್ಬಾರ್ ಮಹೋತ್ಸವವು ಈ ವರ್ಷ ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣದಲ್ಲಿ ಇದೇ ಅ.10 ರಿಂದ 19ರವರೆಗೆ ನಡೆಯಲಿದೆ.

ನವರಾತ್ರಿ ಎಂದರೆ ಶಕ್ತಿಯ ಆರಾಧನೆಗೆ ಮೀಸಲು. ಒಂಬತ್ತು ದಿನಗಳ ಕಾಲ ಆದಿಶಕ್ತಿಯನ್ನು ವಿವಿಧ ಅವತಾರಗಳಲ್ಲಿ ಪೂಜಿಸುವ ಮೂಲಕ ದಿಗ್ವಿಜಯವನ್ನು ಸಾಧಿಸಿ 10ನೇ ದಿವಸ ವಿಜಯೋತ್ಸವವನ್ನು ಆಚರಿಸುವ ಸಂಕೇತ. ಮಹಾಭಾರತವನ್ನು ಮೊದಲ್ಗೊಂಡು ಪುರಾತನ ಕಾಲದಿಂದಲೂ ನವರಾತ್ರಿ ಆಚರಣೆಯ ಉಲ್ಲೇಖವನ್ನು ಕಾಣುತ್ತೇವೆ. ನವರಾತ್ರಿ ಉತ್ಸವದ ಸಂದೇಶವೆಂದರೆ; ದುಷ್ಟರನ್ನು ಸಂಹರಿಸಿ ಅಧರ್ಮದ ನಾಶ

ದಸರಾ ದರ್ಬಾರಿನಲ್ಲಿ ಶ್ರೀ ಗಂಗಾಧರ ಜಗದ್ಗುರುಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡುವುದು; ಶಿಷ್ಟರ ರಕ್ಷಣೆಯೊಂದಿಗೆ ಧರ್ಮವನ್ನು ಕಾಪಾಡುವುದು.

ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ವೀರಶೈವ ಧರ್ಮದಲ್ಲಿ ಶಿವನಷ್ಟೇ ಆದ್ಯತೆಯನ್ನು ಶಕ್ತಿಗೂ ಕೂಡಾ ನೀಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀಮದ್ ರಂಭಾಪುರಿ ಮಹಾಪೀಠವು ಶಕ್ತಿಯ ಆರಾಧನೆಗೆ ಮೀಸಲಾಗಿರುವ ನವರಾತ್ರಿ ಉತ್ಸವವನ್ನು ವಿಭಿನ್ನವಾಗಿ ಆಚರಿಸಿಕೊಂಡು ಬಂದಿದೆ. ಈ ಹಿಂದೆ ಕೇವಲ ಪೀಠದ ಪರಿಸರದಲ್ಲಿ ಆಚರಿಸಲ್ಪಡುತ್ತಿದ್ದ ದಸರಾ ಮಹೋತ್ಸವವು 118ನೇ ಜಗದ್ಗುರು ಶಿವಾನಂದ ರಾಜೇಂದ್ರ ಭಗವತ್ಪಾದರ ಕಾಲದಲ್ಲಿ ನಾಡಿನ ವಿವಿಧ ಪ್ರಾಂತಗಳಲ್ಲಿ ಆಚರಿಸುವ ಪರಿಪಾಠ ಆರಂಭವಾಯಿತು. 1934ರಲ್ಲಿ ಮೈಸೂರು ಮಹಾರಾಜರ ಕೋರಿಕೆಯಂತೆ ಜಗದ್ಗುರುಗಳೇ ಸ್ವತಃ ಮೈಸೂರು ದಸರಾಕ್ಕೆ ಚಾಲನೆ ನೀಡಿ ಆಶೀರ್ವದಿಸಿದರು. ಅಂದಿನಿಂದ ನಾಡಿನ ಹಲವಾರು ಪ್ರಾಂತಗಳಲ್ಲಿ ದಸರಾ ದರ್ಬಾರ್ ನಡೆಯುವ ಮೂಲಕ ಆಯಾಯ ಪ್ರಾಂತದ ಸಾಂಸ್ಕೃತಿಕ ಇತಿಹಾಸ ಶ್ರೀಮಂತಗೊಂಡಿದೆ.



ದಸರಾ ದರ್ಬಾರಿನಲ್ಲಿ ಡಾ. ವೀರಸೋಮೇಶ್ವರ ಜಗದ್ಗುರುಗಳು

ಶ್ರೀಪೀಠದ ಪರಂಪರೆಯಲ್ಲಿ 121ನೇ ಜಗದ್ಗುರುಗಳಾಗಿರುವ ಪ್ರಸ್ತುತ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ಡಾ.ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರ ಕಾಲದಲ್ಲಿ ದಸರಾ ಮಹೋತ್ಸವಕ್ಕೆ ಹೊಸ ಮೆರಗು ಬಂದಿದೆ. ಕಳೆದ 26 ವರ್ಷಗಳಿಂದ ವಿಭಿನ್ನವಾಗಿ ದಸರಾ ದರ್ಬಾರ್ ನಡೆಸಿಕೊಂಡು ಬಂದಿರುವ ಜಗದ್ಗುರುಗಳ 27ನೇ ದಸರಾ ಮಹೋತ್ಸವವು ಈ ಬಾರಿ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ನಡೆಯಲಿದೆ.

ಧರ್ಮ ಜಾಗೃತಿ, ಸಂಸ್ಕೃತಿಯ ಪೋಷಣೆ, ಸಾಹಿತ್ಯದ ಅಭಿವೃದ್ಧಿ, ಕೃಷಿಗೆ ಪ್ರೇರಣೆ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಆಸಕ್ತಿ ಹೀಗೆ ಎಲ್ಲ ಕ್ಷೇತ್ರಕ್ಕೆ ಆದ್ಯತೆಯನ್ನು ನೀಡಿ ರಾಷ್ಟ್ರಭಕ್ತಿಯನ್ನು ಬೆಳೆಸುವ ಉದಾತ್ತ ಚಿಂತನೆಯೊಂದಿಗೆ ರೂಪಿಸಲ್ಪಡುವ ರಂಭಾಪುರಿ ಪೀಠದ ಶರನ್ನವರಾತ್ರಿ ದಸರಾ ಮಹೋತ್ಸವವು ನಾಡಹಬ್ಬ ನವರಾತ್ರಿಗೆ ಹೊಸ ಅರ್ಥವಂತಿಕೆ ತಂದು ಕೊಡಲಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುಲಿಗೆರೆಯಲ್ಲಿ ಪರಂಪರೆಯ ಅನಾವರಣ:

ಸುದೀರ್ಘ ಇತಿಹಾಸವಿರುವ ರಂಭಾಪುರಿ ಪೀಠದ ದಸರಾ ಮಹೋತ್ಸವಕ್ಕೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿದ ಕೀರ್ತಿ ಮಹಾತಪಸ್ವಿ ಲಿಂಗೈಕ್ಯ ಜಗದ್ಗುರು ವೀರಗಂಗಾಧರ ಭಗವತ್ಪಾದರಿಗೆ ಸಲ್ಲುತ್ತದೆ. ಲಕ್ಷ್ಮೇಶ್ವರವು ಗಂಗಾಧರ ಜಗದ್ಗುರುಗಳ ತಪೋಭೂಮಿಯಾಗಿದ್ದು, ಇಲ್ಲಿನ ಮುಕ್ತಿಮಂದಿರದಲ್ಲಿ ಅವರ ದಿವ್ಯ ಗದ್ದುಗೆಯಿದೆ. ನ ಭೂತೋ ನ ಭವಿಷ್ಯತಿ ಎಂಬಂತೆ ಅವರ ಕಾಲದಲ್ಲಿ 1008 ಅಡ್ಡಪಲ್ಲಕ್ಕಿ ಮಹೋತ್ಸವವನ್ನು ಮಾಡುವ ಮೂಲಕ ಇದೇ ಲಕ್ಷ್ಮೇಶ್ವರದಲ್ಲಿ ದಾಖಲೆ ನಿರ್ಮಿಸಿದ್ದರು. ಜೊತೆಗೆ ಜಗದ್ಗುರು ರೇಣುಕಾಚಾರ್ಯರ ಇತಿಹಾಸದಲ್ಲಿ ಉಲ್ಲೇಖಗೊಂಡಿರುವ ತ್ರಿಕೋಟಿ ಲಿಂಗ ಸ್ಥಾಪನೆಯನ್ನು ಮಾಡಲು ಸಂಕಲ್ಪ ಮಾಡಿ ಆ ಕಾರ್ಯಕ್ಕೂ ಕೂಡಾ ಚಾಲನೆ ನೀಡಿದ್ದರು. ಇಂತಹ ಪುಣ್ಯಭೂಮಿಯಲ್ಲಿ ಗಂಗಾಧರ ಜಗದ್ಗುರುಗಳು ಸ್ವತಃ ದಸರಾ ದರ್ಬಾರ ನಡೆಸಿದ್ದರು. ಈಗ ಪ್ರಸ್ತುತ ಜಗದ್ಗುರುಗಳ ದಸರಾ ಮಹೋತ್ಸವ ಇಲ್ಲಿಯೇ ನಡೆಯುತ್ತಿರುವುದು ಇತಿಹಾಸ ಮರುಕಳಿಸಿದಂತಾಗಿದೆ.

ಲಕ್ಷ್ಮೇಶ್ವರವು ಒಂದು ಐತಿಹಾಸಿಕ ಸ್ಥಳ. ಪ್ರಾಚೀನ ಕಾಲದಲ್ಲಿ ಈ ಊರಿಗೆ ಪುಲಿಗೆರೆ ಎಂಬ ಹೆಸರಿತ್ತು. ಇಲ್ಲಿ ಅತ್ಯಂತ ಪುರಾತನವಾದ ಸೋಮೇಶ್ವರ ದೇವಾಲಯುವಿದೆ. ಈ ದೇವಾಲಯುವು ಇತ್ತೀಚೆಗೆ ಸಂಪೂರ್ಣ ಜೀರ್ಣೋದ್ಧಾರಗೊಂಡಿದ್ದು, ನಾಡಿನಾದ್ಯಂತ ಭಕ್ತರು ಈ ದೇವಾಲಯ ವೀಕ್ಷಿಸಲು ಆಗಮಿಸುತ್ತಾರೆ.



ದಸರಾ ದರ್ಬಾರ ವೇದಿಕೆ ಕಾರ್ಯಕ್ರಮ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಮಾಜಿಕ ಬಲವರ್ಧನೆಗೆ ವೇದಿಕೆ:

ಧಾರ್ಮಿಕ ಪರಂಪರೆಯ ಹಿನ್ನಲೆಯಲ್ಲಿ ನಡೆಯುವ ದಸರಾ ಮಹೋತ್ಸವವು ಸಾಮಾಜಿಕ ಬಲವರ್ಧನೆಗೂ ನಾಂದಿಯಾಗಲಿದೆ. 10 ದಿನಗಳ ಕಾಲ ನಡೆಯುವ ಧರ್ಮ ಸಮಾವೇಶದಲ್ಲಿ ಆ ಭಾಗದ ಜ್ವಲಂತ ಸಮಸ್ಯೆಗಳ ಕುರಿತು ಬೆಳಕು ಚೆಲ್ಲುವ ಯತ್ನ ನಡೆಯಲಿದೆ. ಕೃಷಿ, ಸಾಹಿತ್ಯ, ಸಂಗೀತ, ಕಲೆ ಹೀಗೆ ವಿವಿಧ ಕ್ಷೇತ್ರದ ಗಣ್ಯರಿಗೆ ವೇದಿಕೆಯನ್ನು ಕಲ್ಪಿಸಿಕೊಡುವುದು, ಪ್ರತಿಭಾವಂತರಿಗೆ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸುವುದು, ಸಾಧಕರ ಆತ್ಮವಿಶ್ವಾಸ ವೃದ್ಧಿಯ ಜೊತೆಗೆ ಇತರರಿಗೂ ಪ್ರೇರಣೆ ನೀಡಿದಂತಾಗುತ್ತದೆ.

ಯಾವುದೇ ಜಾತಿ, ಮತ, ಪಂಥವೆನ್ನದೆ ಸರ್ವ ಜನಾಂಗದವರು ಪಾಲ್ಗೊಳ್ಳುವ ಕಾರ್ಯಕ್ರಮದಲ್ಲಿ ಸರ್ವರಿಗೂ ಜ್ಞಾನ ದಾಸೋಹದ ಜೊತೆಗೆ ನಿತ್ಯ ಅನ್ನ ದಾಸೋಹ ನಡೆಯಲಿದ್ದು; ಭಾವೈಕ್ಯತೆ, ಸಾಮರಸ್ಯದ ವಾತಾವರಣಕ್ಕೂ ದಸರಾ ಸಮಾವೇಶ ಮುನ್ನುಡಿ ಬರೆಯಲಿದೆ.

10 ದಿನಗಳ ಧರ್ಮ ಯಜ್ಞ:

ಪೀಠದ ವಾರ್ಷಿಕ ಕಾರ್ಯಕ್ರಮಗಳಲ್ಲೇ ಅತ್ಯಂತ ಆಕರ್ಷಕ ಮತ್ತು ಬೃಹತ್ ಕಾರ್ಯಕ್ರಮ ಶರನ್ನವರಾತ್ರಿ ದಸರಾ ಮಹೋತ್ಸವ. 10 ದಿನಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ ಪಾರಂಪರಿಕವಾದ ಹತ್ತು ಹಲವು ಧಾರ್ಮಿಕ ಆಚರಣೆಗಳು ನಿರಂತರವಾಗಿ ನಡೆಯಲಿವೆ. ಪ್ರತಿನಿತ್ಯ ಮುಂಜಾನೆ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ ಸಂಜೆ ಧರ್ಮ ಸಮಾವೇಶ ನಡೆಯಲಿದೆ. ಪ್ರತಿನಿತ್ಯ ಧರ್ಮ ಸಮಾವೇಶದ ನಂತರ ಶಿವಾಚಾರ್ಯರು, ಪೀಠದ ಸಿಬ್ಬಂಧಿಗಳು, ಪಟ್ಟದ ಆನೆ ಹಾಗೂ ವಿವಿಧ ಸಂಘಟನೆಗಳ ಕಾಯಕರ್ತರು ಜಗದ್ಗುರುಗಳಿಗೆ ನಜರ್ ಸಮರ್ಪಣೆ ಮಾಡಲಿದ್ದಾರೆ.

ವಿಜಯದಶಮಿಯ ದಿವಸ ಮುಂಜಾನೆ ಸ್ವತಃ ಜಗದ್ಗುರಗಳೇ ಅಗ್ರೋದಕವನ್ನು ತಲೆಯ ಮೇಲೆ ಹೊತ್ತು ತಂದು ಮಹಾಪೂಜೆಯನ್ನು ನೆರವೇರಿಸಲಿದ್ದಾರೆ. ಅಂದು ಮಧ್ಯಾಹ್ನ ಸಕಲ ಮಂಗಲವಾದ್ಯಗಳೊಂದಿಗೆ ಜಗದ್ಗುರುಗಳನ್ನು ಅಡ್ಡಪಲ್ಲಕ್ಕಿಯಲ್ಲಿ ಶಮೀಮಂಟಪದವರೆಗೆ ಕರೆತರಲಾಗುವುದು. ಈ ಮೂಲಕ ಸೀಮೋಲ್ಲಂಘನೆ ಮಾಡುವ ಜಗದ್ಗುರುಗಳು ಬನ್ನಿವೃಕ್ಷಕ್ಕೆ ಪೂಜೆ ಸಲ್ಲಿಸಿ ಭಕ್ತರಿಗೆ ಬನ್ನಿಬಂಗಾರವನ್ನು ನೀಡಿ ಹರಸಲಿದ್ದಾರೆ.

ಸಂಜೆ ಮಾನವ ಧರ್ಮ ಮಹಾಮಂಟಪದಲ್ಲಿ ವೀರಸಿಂಹಾಸನಾರೋಹಣ ಮಾಡಲಿರುವ ಜಗದ್ಗುರುಗಳು ಶಾಂತಿ ಸಂದೇಶವನ್ನು ಅನುಗ್ರಹಿಸಲಿದ್ದಾರೆ. ಅಂತಿಮವಾಗಿ ಪೀಠದ ಪರಂಪರೆಯಂತೆ ಕುಶಾಲು ತೋಪನ್ನು ಹಾರಿಸುವ ಮೂಲಕ ಹತ್ತು ದಿನಗಳ ಕಾರ್ಯಕ್ರಮ ಸಂಪನ್ನಗೊಳ್ಳಲಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಶೈಲದಲ್ಲಿ ಉಘೇ ಉಘೇ ಮಲ್ಲಯ್ಯ!
ಯುಗ ಯುಗದ ಇತಿಹಾಸ ಸಾರುವ ಯುಗಾದಿ ಜಾತ್ರೆ

ದಿನಾಂಕ : 15–03–2018

ದ್ವಾದಶ ಜ್ಯೋತಿರ್ಲಿಂಗಗಗಳಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ಕ್ಷೇತ್ರವೂ ಒಂದು. ಇಡೀ ಭೂಮಿಯ ಮಧ್ಯಭಾಗದಲ್ಲಿರುವ ಶ್ರೀಶೈಲಕ್ಕೆ ಭೂಮಂಡಲದ ನಾಭಿ ಕ್ಷೇತ್ರ ಎಂಬ ಹಿರಿಮೆ ಇದೆ. ಪುರಾಣ ಪ್ರಸಿದ್ಧ ಶ್ರೀಶೈಲ ಕ್ಷೇತ್ರದಲ್ಲಿ ಜ್ಯೋತಿರ್ಲಿಂಗದ ಜೊತೆಗೆ ಭಾರತದ 18 ಶಕ್ತಿಪೀಠಗಳಲ್ಲೊಂದಾದ ಶ್ರೀಭ್ರಮರಾಂಭ ದೇವಾಲಯ ಮತ್ತು ಸನಾತನ ಪಂಚಪೀಠಗಳಲ್ಲೊಂದಾದ ಶ್ರೀಮದ್ಗಿರಿರಾಜ ಸೂರ್ಯ ಸಿಂಹಾಸನ ಪೀಠವು ಈ ಕ್ಷೇತ್ರದಲ್ಲಿದೆ.

ಯುಗಾದಿ ಎಂದರೆ ಯುಗದ ಆದಿ ಎಂಬ ಅರ್ಥ. ಅಂತೆಯೇ ಶ್ರೀಶೈಲ ಕ್ಷೇತ್ರವೂ ಯುಗ ಯುಗಗಳ ಸುದೀರ್ಘ ಇತಿಹಾಸವನ್ನು ಹೊಂದಿದೆ. ತ್ರೇತಾಯುಗದಲ್ಲಿ ಶ್ರೀರಾಮ ಮತ್ತು ಸೀತಾಮಾತೆ ಶ್ರೀಶೈಲ ಪೀಠದ ಆದಿ ಜಗದ್ಗುರು ಶ್ರೀಚತುವ್ರಕ್ತ ಶಿವಾಚಾರ್ಯರ ಸಾನಿಧ್ಯದಲ್ಲಿ ಸ್ಥಾಪಿಸಿರುವ ಸಹಸ್ರ ಲಿಂಗವು ಶ್ರೀಶೈಲದಲ್ಲಿ ಇಂದಿಗೂ ಪೂಜೆಗೊಳ್ಳುತ್ತಿದೆ. ದ್ವಾಪರಯುಗದಲ್ಲಿ ಆದಿಜಗದ್ಗುರು ಶ್ರೀದೇನುಕರ್ಣ ಶಿವಾಚಾರ್ಯರ ಸಾನಿಧ್ಯದಲ್ಲಿ ಪಾಂಡವರು ಸ್ಥಾಪಿಸಿರುವ ಪಂಚಲಿಂಗಗಳನ್ನು ಇಂದಿಗೂ ಕಾಣಬಹುದು. ಹೀಗೆ ಪ್ರತಿ ಯುಗದ ಚಾರಿತ್ರಿಕ ಕುರುಹುಗಳೊಂದಿಗೆ ಪೂಜೆಗೊಳ್ಳುವ ಶ್ರೀಶೈಲ ಕ್ಷೇತ್ರದಲ್ಲಿ ಯುಗದ

ಶ್ರೀಶೈಲ ಜಗದ್ಗುರು ಶ್ರೀ ಪಂಡಿತಾರಾಧ್ಯರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀಶೈಲ ಮಲ್ಲಿಕಾರ್ಜುನ ಭ್ರಮರಾಂಭ

ಆದಿಯ ಪ್ರತೀಕವಾದ ಯುಗಾದಿ ಜಾತ್ರೆ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ.

ಕಂಕಣ ಪೂಜೆಯೊಂದಿಗೆ ಆರಂಭವಾಗುವ ಶಿವಸಂಕಲ್ಪ ಪೂಜೆಯು ಶ್ರೀಮಲ್ಲಿಕಾರ್ಜುನ ಸ್ವಾಮಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ಭ್ರಮರಾಂಬದೇವಿಗೆ ಕುಂಕುಮಾರ್ಚನೆ ಮತ್ತು ಶ್ರೀಶೈಲ ಪೀಠದ ಜಗದ್ಗುರು ಪಂಡಿತಾರಾಧ್ಯರ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕದೊಂದಿಗೆ ನೆರವೇರಲಿದೆ.

ಕ್ಷೇತ್ರದ ಪೌರಾಣಿಕ ಇತಿಹಾಸದಂತೆ ಈ ಕ್ಷೇತ್ರದಲ್ಲಿ ಶಿವನು ಮಲ್ಲಿಕಾದೇವಿಯಾಗಿದ್ದ ಭ್ರಮಾರಂಭೆಯನ್ನು ಕಲ್ಯಾಣವಾಗುತ್ತಾನೆ. ಆ ಕಾರಣದಿಂದಲೇ ಮಲ್ಲಿಕಾರ್ಜುನ ಎಂಬ ಹೆಸರು ಬಂದಿದೆ. ಅದರ ಪ್ರತೀಕವಾಗಿ ಜಾತ್ರಾ ಮಹೋತ್ಸವ ನಡೆಯುವ ಐದುದಿನಗಳ ಕಾಲ ಪ್ರತಿದಿನ ರಾತ್ರಿ ಮಲ್ಲಿಕಾರ್ಜುನ ಭ್ರಮರಾಂಬದೇವಿಯ ಕಲ್ಯಾಣೋತ್ಸವ ನಡೆಸಲಾಗುತ್ತದೆ. ಉತ್ಸವಮೂರ್ತಿಗಳನ್ನು ಅಲಂಕಾರ ಮಾಡಿ ವಿವಿಧ ವಾಹನಗಳಲ್ಲಿ ಉತ್ಸವ ನಡೆಸಲಾಗುತ್ತದೆ.

ಯುಗಾದಿಯಂದು ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವ ನಡೆಯಲಿದೆ. ಬಯಲು ವೀರಭದ್ರ ಸ್ವಾಮಿ ದೇವಾಲಯದಿಂದ ಶ್ರೀಮಲ್ಲಿಕಾರ್ಜುನ ದೇವಾಲಯದವರೆಗೆ ಪರಂಪರೆಯಂತೆ ಶ್ರೀಶೈಲ ಜಗದ್ಗುರುಗಳನ್ನು ಆಡಳಿತ ಮಂಡಳಿಯವರು ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಆಹ್ವಾನಿಸಿ ಗುರುಗಳಿಗೆ ಗೌರವ ಸಮರ್ಪಣೆ ಮಾಡುತ್ತಾರೆ. ಅಂತಿಮವಾಗಿ ವಸಂತೋತ್ಸವದೊಂದಿಗೆ ಪೂರ್ಣಾಹುತಿ ಪೂಜೆಯನ್ನು ನೆರವೇರಿಸಿ ಐದು ದಿನಗಳ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಶ್ರೀಶೈಲ ಪೀಠದ ಪರಂಪರೆ :

ಶ್ರೀಶೈಲ ಕ್ಷೇತ್ರಕ್ಕಿರುವ ಯುಗ ಯುಗಗಳ ಇತಿಹಾಸಕ್ಕೆ ಶ್ರೀಶೈಲ ಪೀಠವು ಮುಕುಟಪ್ರಾಯವಾಗಿದೆ. ಹಲವಾರು ಶಾಸನಗಳು, ಶಿಲ್ಪಗಳು ಈ ಇತಿಹಾಸವನ್ನು ಸಾರಿ ಹೇಳುತ್ತಿವೆ. ದೇವಾಲಯದ ಆವರಣದಲ್ಲಿರುವ ಶ್ರೀಮಲ್ಲಿಕಾರ್ಜುನ ಜಗದ್ಗುರುಗಳ ಗದ್ದುಗೆ, ದೇವಾಲಯದ ಶಿಲಾ ಗೋಡೆಯ ಮೇಲಿರುವ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವದ ಶಿಲ್ಪಗಳು ಪೀಠದ ಪರಂಪರೆಯನ್ನು ಸಾರುತ್ತಿವೆ. ತೆಲುಗಿನ ಆದಿಕವಿ ಪಾಲ್ಕುರಿಕೆ ಸೋಮನಾಥ ರಚಿಸಿರುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಡಿತಾರಾಧ್ಯ ಚರಿತ್ರೆ ಹಾಗೂ ನನ್ನಚೋಡ ಮಹಾಕವಿಯ ಕುಮಾರ ಸಂಭವ ಕೃತಿಗಳಲ್ಲಿ ಪೀಠದ ಸಾಕಷ್ಟು ಮಾಹಿತಿಗಳು ಲಭ್ಯವಿವೆ.



ಶ್ರೀಶೈಲ ಜಾತ್ರೆ – ತೇರು

ಹಿಂದಿನಿಂದಲೂ ದೇವಾಲಯದ ಸಂಪೂರ್ಣ ಆಡಳಿತ ಶ್ರೀಪೀಠದ ಅಧೀನದಲ್ಲೇ ನಡೆಯುತ್ತಿತ್ತು. ಶ್ರೀಶೈಲ ಕ್ಷೇತ್ರಕ್ಕೆ ಸುಸಜ್ಜಿತ ರಸ್ತೆ ನಿರ್ಮಾಣಕ್ಕಾಗಿ ಲಿಂಗೈಕ್ಯ ಜಗದ್ಗುರು ವಾಗೀಶ ಪಂಡಿತಾರಾಧ್ಯರು ಸಾಕಷ್ಟು ಶ್ರಮ ಪಟ್ಟಿದ್ದಾರೆ. 1950ರ ನಂತರ ದೇವಾಲಯವು ಮುಜರಾಯಿ ಇಲಾಖೆಯ ಅಧೀನಕ್ಕೊಳಪಟ್ಟು ಆಡಳಿತವನ್ನು ನಿರ್ವಹಿಸುತ್ತಿದೆಯಾದರೂ, ಧಾರ್ಮಿಕವಾದ ಮಾರ್ಗದರ್ಶನವನ್ನು ಶ್ರೀಶೈಲ ಪೀಠದಿಂದ ಪಡೆದುಕೊಳ್ಳುವ ಪದ್ಧತಿ ಇಂದಿಗೂ ಇದೆ.

ಶ್ರೀಶೈಲವು ಹಲವಾರು ಶಿವಶರಣರ ಆಧ್ಯಾತ್ಮಿಕ ಸಾಧನೆಯ ತಾಣ ಅಂತಹ ಶಿವಶರಣರಲ್ಲಿ ಅಕ್ಕಮಹಾದೇವಿ ಮತ್ತು ಹೇಮರೆಡ್ಡಿ ಮಲ್ಲಮ್ಮನವರ ಹೆಸರು ಪ್ರಮುಖವಾಗಿದೆ. ಶಿವಶರಣೆ ಹೇಮರಡ್ಡಿ ಮಲ್ಲಮ್ಮನ ಕರ್ಮಭೂಮಿಯಾಗಿದ್ದ ಶ್ರೀಶೈಲದಲ್ಲಿ ಭವ್ಯವಾದ ಮಲ್ಲಮ್ಮನ ದೇವಾಲಯ ನಿರ್ಮಾಣ ಮಾಡಲು ಶ್ರೀಶೈಲದ ಲಿಂಗೈಕ್ಯ ಜಗದ್ಗುರು ಉಮಾಪತಿ ಪಂಡಿತಾರಾಧ್ಯರು ಹಲವು ವರ್ಷಗಳ ಕಾಲ ಶ್ರಮ ಪಟ್ಟಿದ್ದಾರೆ.

ಪ್ರಸ್ತುತ ಶ್ರೀಶೈಲ ಪೀಠದ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಭಗವತ್ಪಾದರು ಪ್ರಖಾಂಡ ಪಂಡಿತರಾಗಿದ್ದು, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ದೇಶದೆಲ್ಲೆಡೆ ಪ್ರಸಾರ ಮಾಡಲು ನಿರಂತರ ಶ್ರಮಿಸುತ್ತಿದ್ದಾರೆ. ಜೊತೆಗೆ ದೇಶದ ಮೂಲೆ ಮೂಲೆಗಳಿಂದ ನಿತ್ಯ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಯಾತ್ರಿನಿವಾಸ, ನಿತ್ಯ ದಾಸೋಹ ವ್ಯವಸ್ಥೆಯನ್ನು ಮಾಡಿದ್ದಾರೆ. ಜಾತ್ರೆಯ ಸಂದರ್ಭದಲ್ಲಿ ಆಗಮಿಸುವ ಲಕ್ಷಾಂತರ ಭಕ್ತರಿಗೆ ಧರ್ಮಜಾಗೃತಿಯನ್ನು ಮೂಡಿಸುವ ಸಂಬಂಧ ರಾಷ್ಟ್ರೀಯ ಜನಜಾಗೃತಿ ಧರ್ಮಸಮಾವೇಶವನ್ನು ಆಯೋಜಿಸಿ ಪ್ರತಿವರ್ಷ ಬೃಹತ್ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ.

ಕಂಬಿ ಹೊತ್ತು ಬರುವ ಕನ್ನಡಿಗರು:

ಶಿವರಾತ್ರಿಯಲ್ಲಿ ದೇಶದ ಮೂಲೆ ಮೂಲೆಗಳಿಂದ ಭಕ್ತರು ಶ್ರೀಶೈಲಕ್ಕೆ ಆಗಮಿಸಿದರೆ; ಯುಗಾದಿಯಲ್ಲಿ ಕನ್ನಡ ನಾಡಿನ ಭಕ್ತರದ್ದೇ ಸಿಂಹಪಾಲು. ಅದಕ್ಕೆ ಕಾರಣ ಮಲ್ಲಯ್ಯನ ಕಂಬಿ ಉತ್ಸವ. ಶ್ರೀಶೈಲ ಪ್ರಾದೇಶಿಕವಾಗಿ ಆಂಧ್ರಪ್ರದೇಶದಲ್ಲಿದ್ದರೂ ಕರ್ನಾಟಕದ ಸುಮಾರು 15 ಜಿಲ್ಲೆಗಳ ಲಕ್ಷಾಂತರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತರ ಆರಾಧ್ಯ ಕ್ಷೇತ್ರ. ರಾಯಚೂರು, ಬಾಗಲಕೋಟೆ, ಬೆಳಗಾವಿ, ಕಲಬುರಗಿ, ಯಾದಗಿರಿ, ವಿಜಯಪುರ, ಹುಬ್ಬಳ್ಳಿ, ದಾವಣಗೆರೆ, ಗದಗ, ಬಳ್ಳಾರಿ, ಕೊಪ್ಪಳ, ಹಾವೇರಿ ಸೇರಿದಂತೆ ಗಡಿಭಾಗದ ಜಿಲ್ಲೆಗಳಿಂದ ಮಲ್ಲಿಕಾರ್ಜುನನ ಕಂಬಿಯನ್ನು ತೆಗೆದುಕೊಂಡು ಶ್ರೀಶೈಲಕ್ಕೆ ಬರುತ್ತಾರೆ.

ಶ್ರೀಶೈಲ ಜಗದ್ಗುರು ಪೀಠ

ಕಮಾನಿನಂತಿರುವ ಬಿದಿರಿನ ಕಂಬಕ್ಕೆ ಹಿತ್ತಾಳೆಯ ಕವಚವನ್ನು ಹಾಕಿ ಶ್ರೀಶೈಲ ಪೀಠದ ಗೋತ್ರಪುರುಷ ನಂದಿಯನ್ನು ಪ್ರತಿಷ್ಠಾಪಿಸಿದ ಕಂಬಿಯನ್ನು ವರ್ಷಪೂರ್ತಿ ಊರಿನಲ್ಲಿಟ್ಟು ಪೂಜೆ ಗೈಯ್ಯುತ್ತಾರೆ. ಯುಗಾದಿ ಜಾತ್ರೆಯ ವೇಳೆ ಅಂತಹ ಲಕ್ಷಾಂತರ ಕಂಬಿಗಳು ಶ್ರೀಶೈಲಕ್ಕೆ ಬರುತ್ತವೆ. ಹೀಗೆ ಬರುವಾಗ; "ಸಿದ್ಧಗಿರಿ ಶಿವಗಿರಿ ಮಹಾಂತ ಮಲ್ಲಯ್ಯ" ಎಂದು ಬಿರುದಾವಳಿಗಳನ್ನು ಘೋಷಿಸಿದಾಗ; ಉಳಿದವರು ಉಘೇ ಉಘೇ ಮಲ್ಲಯ್ಯ ಎನ್ನುತ್ತಾರೆ.

ಯುಗಾದಿ ರಥೋತ್ಸವಕ್ಕಾಗಿ ಹೋಳಿ ಹುಣ್ಣಿಮೆಯಿಂದಲೇ ಕರ್ನಾಟಕದಿಂದ ಲಕ್ಷಾಂತರ ಭಕ್ತರು ಪಾದಯಾತ್ರೆ, ದೀಡು ನಮಸ್ಕಾರವನ್ನು ಹಾಕುತ್ತ ಬರುತ್ತಾರೆ. ಕೆಲವರು ತಮ್ಮ ತಂದೆ ಅಥವಾ ತಾಯಿಯನ್ನು ಹೊತ್ತು ಬರುತ್ತಾರೆ. ಇನ್ನು ಕೆಲವರು ಅಕ್ಕಿ ಮೂಟೆಯನ್ನು ಹೊತ್ತು ಪಾದಯಾತ್ರೆ ಮೂಲಕ ಬಂದು ಮಲ್ಲಯ್ಯನ ದರ್ಶನ ಮಾಡಿ ದಾಸೋಹ ನಡೆಸುತ್ತಾರೆ.

10ಲಕ್ಷಕ್ಕೂ ಅಧಿಕ ಜನರು ಆಗಮಿಸುವುದರಿಂದ ಯಾವುದೇ ತೊಂದರೆ ಆಗದಂತೆ ಶ್ರೀಶೈಲ ಜಗದ್ಗುರುಗಳು ಆಡಳಿತಾಧಿಕಾರಿಗಳೊಂದಿಗೆ ಪೂರ್ವಾಲೋಚನೆ ನಡೆಸಿ ಅಗತ್ಯ ಕ್ರಮಕ್ಕೆ ಸೂಚನೆ ನೀಡುತ್ತಾರೆ. ಸಾವಿರಾರು ಭಕ್ತರು ಮಲ್ಲಿಕಾರ್ಜುನ ಸ್ವಾಮಿಯ ಹೆಸರಿನಲ್ಲಿ ನಿರಂತರ ದಾಸೋಹವನ್ನು ಮಾಡುತ್ತಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಶಾಲ ಹೃದಯದ ಶ್ರೀ ವಿಶ್ವೇಶ್ವರ ಜಗದ್ಗುರು

ಕಾಶಿಯಲ್ಲಿ ಪುಣ್ಯಾರಾಧನೆ * ಗುರುಕುಲದ ಶತಮಾನೋತ್ಸವ

ದಿನಾಂಕ : 11-10-2018

ಗುರುವೆಂದರೆ ಜ್ಞಾನ, ಗುರುವೆಂದರೆ ಮಾರ್ಗ, ಗುರುವೆಂದರೆ ಭಕ್ತಿ, ಗುರುವೆಂದರೆ ಸಮಾಜದ ಶಕ್ತಿ. ಜ್ಞಾನ, ಮಾರ್ಗ, ಭಕ್ತಿ, ಶಕ್ತಿ ಈ ಯಾವುದಕ್ಕೂ ಸಂಕುಚಿತ ಸಂಕೋಲೆಯಿಲ್ಲ. ವಿಶಾಲವಾದ, ಭೌತಿಕ ಚೌಕಟ್ಟನ್ನು ಮೀರಿದ ವಿಶ್ವವ್ಯಾಪಕತೆ ಇದೆ. ಗುರುವಾದವರು ಆ ವಿಶಾಲ ಹೃದಯುವನ್ನು ಹೊಂದಬೇಕಾದ್ದು ಮೊದಲನೇ ಅರ್ಹತೆ. ಇದಕ್ಕೆ ಉತ್ತಮ ಉದಾಹರಣೆ ಕಾಶಿ ಪೀಠದ 85ನೇ ಜಗದ್ಗುರುಗಳಾಗಿದ್ದ ಲಿಂಗೈಕ್ಯ ಶ್ರೀವಿಶ್ವೇಶ್ವರ ಶಿವಾಚಾರ್ಯ ಭಗವತ್ಪಾದರು.

ಕಾಶಿ ಜ್ಞಾನಸಿಂಹಾಸನ ಪೀಠದ ಸುದೀರ್ಘ ಪರಂಪರೆಯನ್ನು ತಲೆಯ ಮೇಲೆ ಹೊತ್ತು 85ನೇ ಜಗದ್ಗುರುಗಳಾಗಿ ನಾಲ್ಕು ದಶಕಗಳ ಕಾಲ ಪೀಠವನ್ನು ಮುನ್ನಡೆಸಿದ ಶ್ರೀವಿಶ್ವೇಶ್ವರ ಶಿವಾಚಾರ್ಯ ಭಗವತ್ಪಾದರು ಪೀಠದ ಗುರುಪರಂಪರೆಗೆ ಇಟ್ಟ ಮುಕುಟಮಣಿ ಎಂದೇ ಗುರುತಿಸಿಕೊಂಡವರು.

ನ್ಯಾಯಶಾಸ್ತ್ರ ಮತ್ತು ಸಾಹಿತ್ಯ ಶಾಸ್ತ್ರದಲ್ಲಿ ಅಪಾರ ಪಾಂಡಿತ್ಯವನ್ನು ಪಡೆದುಕೊಂಡಿದ್ದ ಜಗದ್ಗುರುಗಳು; ದೇಶದಾದ್ಯಂತ ನಿರಂತರ ಸಂಚರಿಸಿ ಧರ್ಮ ಜಾಗೃತಿಗಾಗಿ ನಡೆಸಿದ ಧರ್ಮಯಾತ್ರೆಗಳನ್ನು ಆಯಾಯ ಪ್ರಾಂತ ಪ್ರದೇಶದ ಭಕ್ತರು ಭಕ್ತಿ ಗೌರವಗಳಿಂದ ಸ್ಮರಿಸಿಕೊಳ್ಳುತ್ತಾರೆ. ಮಹಾರಾಷ್ಟ್ರ, ಕರ್ನಾಟಕ, ಉತ್ತರಪ್ರದೇಶ ಮತ್ತು

ಶ್ರೀ ವಿಶ್ವೇಶ್ವರ ಜಗದ್ಗುರುಗಳ ಗದ್ದುಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಧ್ಯಪ್ರದೇಶ ಬಹುಭಾಗದಲ್ಲಿ ವಿಶ್ವೇಶ್ವರ ಭಗವತ್ಪಾದರ ಧರ್ಮ ದೌರಾ(ಯಾತ್ರೆ) ಬಹಳ ಪರಿಣಾಮವನ್ನು ಬೀರಿತ್ತು.

ಶ್ರೀ ವಿಶ್ವೇಶ್ವರ ಜಗದ್ಗುರುಗಳು

ವಿಶಾಲ ಹೃದಯದ ಜೊತೆಗೆ ಸಮಚಿತ್ತ ಭಾವವನ್ನು ಹೊಂದಿದ್ದ ಸನ್ನಿಧಿಯವರು ಪೀಠಕ್ಕೆ ಬಂದೊದಗಿದ ಹಲವು ಅಡಚಣೆ, ಆರ್ಥಿಕ ಮುಗ್ಗಟ್ಟುಗಳನ್ನು ಸಮರ್ಥವಾಗಿ ಎದುರಿಸಿ; ಪೀಠದ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳು ನಿರಂತರವಾಗಿ ನಡೆದುಕೊಂಡು ಬರಲು ಬೇಕಾದ ಶಾಶ್ವತ ವ್ಯವಸ್ಥೆಯನ್ನು ಕಲ್ಪಿಸಿದ್ದರು.

ಜ್ಞಾನದ ತವರು ಎಂದು ಕರೆಯಲ್ಪಡುವ ಕಾಶಿಗೆ ಬರುವ ದೇಶದ ವಿವಿಧ ಪ್ರಾಂತಗಳ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ಅನುಕೂಲವಾಗುವಂತೆ ಪೀಠದಲ್ಲಿದ್ದ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲವನ್ನು ಅಭಿವೃದ್ಧಿಗೊಳಿಸುವುದರ ಜೊತೆಗೆ; ದೇಶದ ಪ್ರತಿಷ್ಠಿತ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ಶಕ್ತಿವಿಶಿಷ್ಟಾದ್ವೈತ ವೇದಾಂತ ಪೀಠವನ್ನು ತೆರೆದು ವೀರಶೈವ ಸಿದ್ಧಾಂತವನ್ನು ಅಧ್ಯಯನ ಮಾಡಲು ಶಾಶ್ವತ ವ್ಯವಸ್ಥೆಯನ್ನು ಮಾಡಿದ ಕೀರ್ತಿ ವಿಶ್ವೇಶ್ವರ ಜಗದ್ಗುರುಗಳಿಗೆ ಸಲ್ಲುತ್ತದೆ. 1972ರಲ್ಲಿ ಸ್ಥಾಪನೆಗೊಂಡ ಶಕ್ತಿವಿಶಿಷ್ಟಾದ್ವೈತ ಪೀಠದಲ್ಲಿ ಇಲ್ಲಿಯವರೆಗೆ ಸಾವಿರಾರು ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದಾರೆ.

ಶ್ರೀವಿಶ್ವೇಶ್ವರ ಭಗವತ್ಪಾದರ ಪೂರ್ವಾಶ್ರಮ:

1917ರ ಫಾಲ್ಗುಣ ಮಾಸದ ಕೃಷ್ಣಪಕ್ಷದ ದ್ವಾದಶಿಯಂದು ಇಂದಿನ ಹಾವೇರಿ ಜಿಲ್ಲೆ ಹಿರೇಕೆರೂರು ತಾಲೂಕಿನ ಮದಗ ಮಾಸೂರ ಗ್ರಾಮದ ಹಿರೇಮಠಸ್ಥರಾದ ಪರಮೇಶ್ವರಯ್ಯ ಹಾಗೂ ರುದ್ರಮ್ಮ ದಂಪತಿಗಳ ಪುಣ್ಯಗರ್ಭದಿಂದ ಜನಿಸಿದ ಶ್ರೀವಿಶ್ವೇಶ್ವರ ಶಿವಾಚಾರ್ಯ ಭಗವತ್ಪಾದರ ಜನ್ಮನಾಮ ಸಿದ್ಧಲಿಂಗಯ್ಯ. ರಟ್ಟಿಹಳ್ಳಿ ಕಬ್ಬಿಣಕಂತಿಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಆಶೀರ್ವಾದದಿಂದ ಬೆಳೆದ ಬಾಲಕ ಪ್ರಾಥಮಿಕ ಶಿಕ್ಷಣ ರಟ್ಟಿಹಳ್ಳಿಯಲ್ಲೇ ನಡೆಸಿ ಮುಂದೆ ಕಡೇನಂದಿಹಳ್ಳಿಯಲ್ಲಿ ಸಂಸ್ಕೃತಾಧ್ಯಯನವನ್ನು ಆರಂಭಿಸುತ್ತಾರೆ.

ಪಂಡಿತ ಗುರುಮೂರ್ತಿ ಶಾಸ್ತ್ರಿಗಳ ಬಳಿ 8ವರ್ಷ ಅಮರಕೋಶ, ಶಬ್ದ ರೂಪಾವಲಿ, ಸಮಾಸ ಚಕ್ರ, ಕುಮಾರ ಸಂಭವ ಇತ್ಯಾದಿ ಕಾವ್ಯಗಳನ್ನು ಅಧ್ಯಯನ ಮಾಡಿದರು. ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯರ ಆದೇಶಾಶೀರ್ವಾದದಂತೆ ಕ್ಯಾಸನೂರು ಮಠಕ್ಕೆ ಪಟ್ಟಾಧಿಕಾರವಾದರೂ; ಪುತ್ರವರ್ಗ ಮಠದ ತಕರಾರಿನಿಂದ ಮಠದ ಅಧಿಕಾರ ಕೈತಪ್ಪುತ್ತದೆ. ಮುಂದೆ ಶ್ರೀಶೈಲ ಜಗದ್ಗುರುಗಳ ಆದೇಶದಂತೆ ಹೆಚ್ಚಿನ ಅಧ್ಯಯನಕ್ಕಾಗಿ ಕಾಶಿಗೆ ತೆರಳಿ; ತತ್ಕಾಲೀನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಗದ್ಗುರು ವೀರಭದ್ರ ಶಿವಾಚಾರ್ಯರ ಸಮ್ಮುಖದಲ್ಲಿ ಶ್ರೀವಿಶ್ವಾರಾಧ್ಯ ಗುರುಕುಲದಲ್ಲಿ ಪ್ರವೇಶ ಪಡೆಯುತ್ತಾರೆ.

ನ್ಯಾಯಶಾಸ್ತ್ರ ಮತ್ತು ಸಾಹಿತ್ಯಶಾಸ್ತ್ರದಲ್ಲಿ ಉನ್ನತ ಅಧ್ಯಯನವನ್ನು ನಡೆಸುತ್ತಿರುವಾಗಲೇ ಕಾಶೀ ಜಗದ್ಗುರುಗಳು ಲಿಂಗೈಕ್ಯರಾಗುತ್ತಾರೆ. ಅವರ ಮೃತ್ಯುಪತ್ರದ ಪ್ರಕಾರ 1948ರ ಸರ್ವಧಾರಿನಾಮ ಸಂವತ್ಸರದ ಕಾರ್ತೀಕ ಶುದ್ಧ ತ್ರಯೋದಶಿಯಂದು ರಂಭಾಪುರಿ ಮತ್ತು ಉಜ್ಜಯಿನಿ ಜಗದ್ಗುರುಗಳ ಸಾನಿಧ್ಯದಲ್ಲಿ ಶ್ರೀಮದ್ ಕಾಶಿ ಜ್ಞಾನಸಿಂಹಾಸನ ಪೀಠದ 85ನೇ ಜಗದ್ಗುರುಗಳಾಗಿ ಪಟ್ಟಾಧಿಕಾರ ಹೊಂದುತ್ತಾರೆ.

ಪಂಚಪೀಠಗಳ ಪರಂಪರೆ, ವೀರಶೈವ ಧರ್ಮ ಪ್ರಚಾರದೊಂದಿಗೆ ಸುಮಾರು 41 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಸನ್ನಿಧಿಯವರು; ಅನಾರೋಗ್ಯಕ್ಕೆ ತುತ್ತಾಗಿ 1989ರ ಆಶ್ವೀಜ ತೃತೀಯಾದಂದು ಪುಣೆ ನಗರದ ಜಗದ್ಗುರು ವಿಶ್ವಾರಾಧ್ಯ ವಿದ್ಯಾರ್ಥಿ ನಿಲಯದಲ್ಲಿ ಲಿಂಗೈಕ್ಯರಾಗುತ್ತಾರೆ.

ಪುಣ್ಯಾರಾಧನೆ ಮತ್ತು ಶತಮಾನೋತ್ಸವ :

ನವರಾತ್ರಿಯ ಪರ್ವಕಾಲದಲ್ಲಿ ಪ್ರತಿ ಆಶ್ವೀಜ ತೃತಿಯಾದಂದು(ಇಂದು) ಶ್ರೀವಿಶ್ವೇಶ್ವರ ಶಿವಾಚಾರ್ಯ ಭಗವತ್ಪಾದರ ಪುಣ್ಯಾರಾಧನೆಯುನ್ನು ಆಚರಿಸಲಾಗುತ್ತದೆ. ಅಂದು ಗುರುಗಳ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ ಮತ್ತು ವಿವಿಧ ಧಾರ್ಮಿಕ ಪೂಜಾ ವಿಧಿ ವಿಧಾನಗಳು ನಡೆಯಲಿವೆ. ಜೊತೆಗೆ ಪೀಠದಲ್ಲಿರುವ ಎಲ್ಲ ಲಿಂಗೈಕ್ಯ ಜಗದ್ಗುರುಗಳ ಗದ್ದುಗೆಗಳಿಗೂ ಮಹಾರುದ್ರಾಭಿಷೇಕ ಮತ್ತು ವಿಶೇಷ ಪೂಜೆ ನಡೆಯಲಿದೆ.

ಈ ವರ್ಷ ವಿಶೇಷವಾಗಿ ಕಾಶೀ ಪೀಠದ ಜಗದ್ಗುರು ವಿಶ್ವಾರಾಧ್ಯ ಗುರುಕುಲದ ಶತಮಾನೋತ್ಸವ ವರ್ಷಾಚರಣೆಗೂ ಚಾಲನೆ ದೊರೆಯಲಿದೆ. ಪ್ರಾಚೀನ ಕಾಲದಿಂದ ನಡೆಯುತ್ತಿದ್ದ ಗುರುಕುಲವು 1918ರಲ್ಲಿ ನೂತನ ನಾಮಾಂಕಿತಗೊಂಡು ದೇಶದ ವಿವಿಧ ಪ್ರಾಂತದ ವಿದ್ಯಾರ್ಥಿಗಳಿಗೆ ನಿರಂತರವಾಗಿ ವಿದ್ಯಾದಾನ ಮಾಡಿಕೊಂಡು ಬಂದಿದೆ. ಸದ್ಯ ಗುರುಕುಲವು 100 ವರ್ಷಗಳನ್ನು ಪೂರೈಸಿದ್ದು ವರ್ಷಪೂರ್ತಿ ಶತಮಾನೋತ್ಸವ ಆಚರಿಸಲು ಪ್ರಸ್ತುತ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಸಂಕಲ್ಪ ಮಾಡಿದ್ದು, ಈಗಾಗಲೇ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇತ್ತೀಚೆಗೆ ಸಾಂಕೇತಿಕ ಚಾಲನೆ ನೀಡಿದ್ದಾರೆ. ಗುರುಕುಲದಲ್ಲಿ ಅಧ್ಯಯನ ನಡೆಸಿ ದೇಶದ ವಿವಿಧ ಪ್ರಾಂತಗಳಲ್ಲಿರುವ ಸ್ವಾಮೀಜಿಗಳ ಸಮ್ಮುಖದಲ್ಲಿ ದೇಶಾದ್ಯಂತ ವರ್ಷಪೂರ್ತಿ ನಡೆಯುವ ಶತಮಾನೋತ್ಸವವು ಮುಂದಿನ ವರ್ಷ ದೇಶದ ಪ್ರಧಾನಿಯ ಸಮ್ಮುಖದಲ್ಲಿ ಸಮಾರೋಪಗೊಳ್ಳಲಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಶೀಪೀಠದ ಸುಜ್ಞಾನನಿಧಿ

ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭವತ್ಪಾದರು

ದಿನಾಂಕ : 23-08-2018

"ಜ್ಞಾನಮಿಚ್ಛೇತು ಶಂಕರಾತ್" ಎಂಬ ಉಕ್ತಿಗನುಸಾರವಾಗಿ ಯಾವುದೇ ಜ್ಞಾನವಿದ್ದರೂ ಅದು ಶಿವನಿಂದಲೇ ಉಪದೇಶಿಸಲ್ಪಡಬೇಕೆಂಬ ಮಾತಿದೆ. ಅಂತಹ ಶಿವನು ನಿತ್ಯನಿವಾಸ ಮಾಡಿರುವ ಕಾಶೀ ಪಟ್ಟಣಕ್ಕೆ ಜ್ಞಾನದ ತವರು ಎನ್ನಲಾಗುತ್ತೆ. ಈ ಹಿನ್ನೆಲೆಯಲ್ಲಿ ಜ್ಞಾನಾರ್ಜನೆಗಾಗಿ ಇಡೀ ಜಗತ್ತಿನ ಮೂಲೆ ಮೂಲೆಗಳಿಂದ ವಿದ್ವಾಂಸರು ಆಗಮಿಸಿ ಅಧ್ಯಯನ ನಡೆಸಿದ ಜಗತ್ತಿನ ಏಕೈಕ ನಗರಿ ಕಾಶಿ. ವೇದಾಗಮ, ಉಪನಿಷತ್ತಿನ ಬ್ರಹ್ಮಸೂತ್ರಕ್ಕೆ ಜಗದ್ಗುರು ಶಂಕರಾಚಾರ್ಯರು, ರಾಮಾನುಜಾಚಾರ್ಯರು ಸಿದ್ಧಾಂತ ಸಹಿತವಾದ ವ್ಯಾಖ್ಯಾನವನ್ನು ಬರೆದಿದ್ದು ಕೂಡಾ ಕಾಶಿಯಲ್ಲಿ. ಮುಸಲ್ಮಾನ ಧರ್ಮದ ಖ್ಯಾತ ವಿದ್ವಾಂಸ ಮ್ಯಾಕ್ಸ್ ಮುಲ್ಲರ್ ಕೂಡಾ ಕಾಶಿಯಲ್ಲಿ ಉಪನಿಷತ್ತಿನ ಅಧ್ಯಯನ ನಡೆಸಿದ್ದಾರೆ.



ಶ್ರೀ ಕಾಶೀ ಜಗದ್ಗುರುಗಳು

ಉತ್ತರ ವಾಹಿನಿಯಾಗಿ ಹರಿಯುವ ಗಂಗಾನದಿಯ ಪಶ್ಚಿಮ ದಂಡೆಯಲ್ಲಿರುವ ವಾರಣಾಸಿ ನಗರವು ನೈಸರ್ಗಿಕ ವಾಸ್ತುಪಟ್ಟಣ. ಪುರಾಣಗಳ ಪ್ರಕಾರ ಕೈಲಾಸದಲ್ಲೂ ಇಲ್ಲದ ವಾಸ್ತುಮಹತ್ವ ಈ ನಗರಕ್ಕೆ ಇರುವುದರಿಂದಲೇ ಶಿವನು ಕಾಶಿಯಲ್ಲಿ ನೆಲೆಸಿದ್ದಾನೆ. ಇಂತಹ ಕಾಶಿ ಪಟ್ಟಣದಲ್ಲಿರುವ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಜಂಗಮವಾಡಿ ಪೀಠವು ಪುರಾತನ ಕಾಲದಿಂದಲೂ ದೇಶದ ಸಾವಿರಾರು ವಿದ್ವಾಂಸರಿಗೆ ಅನ್ನಾಶ್ರಯ ಗಳನ್ನು ನೀಡಿ ಜ್ಞಾನಸುಧೆಯನ್ನು ಹರಿಸಿದೆ. ಇಲ್ಲಿನ ತಾಮ್ರಶಾಸನದ ಪ್ರಕಾರ5ನೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶತಮಾನದಲ್ಲೇ ಕಾಶೀ ಮಹಾರಾಜರಿಂದ ಭೂದಾನವನ್ನು ಪಡೆದ ಪೀಠಕ್ಕೆ ಸುಮಾರು 85 ಜನ ಜಗದ್ಗುರುಗಳು ಆಗಿ ಹೋಗಿದ್ದಾರೆ. ಸದ್ಯ ಇರುವ ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು 86ನೇ ಜಗದ್ಗುರುಗಳಾಗಿ 1989ರಿಂದ ಶ್ರೀಪೀಠದ ಸರ್ವಾಂಗೀಣ ಅಭಿವೃದ್ಧಿಯನ್ನು ಕೈಗೊಂಡಿದ್ದಾರೆ.

ಡಾ. ಚಂದ್ರಶೇಖರ ಭಗವತ್ಪಾದರು

ಪಂಡಿತ ಪರಂಪರೆಯ ಪೂರ್ವಾಶ್ರಮ:

ಕಾಶೀ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರಿಗೆ ಇಂದು 72ನೇ ಜನ್ಮದಿನೋತ್ಸವದ ಸಂಭ್ರಮ. ವೇ.ಮೂ.ಸಿದ್ದಯ್ಯ ಪುರಾಣಮಠ ಮತ್ತು ಸಾವಂತ್ರಮ್ಮ ದಂಪತಿಗಳ ಪುಣ್ಯಗರ್ಭದಿಂದ ಸರ್ವಜಿತ್ ನಾಮ ಸಂವತ್ಸರದ ಶ್ರಾವಣ ಶುದ್ಧ ದ್ವಾದಶಿಯಂದು (28.8.1947) ಜನಿಸಿದ ಪೂಜ್ಯರ ಪೂರ್ವಾಶ್ರಮದ ಹೆಸರು ಶೇಖರಯ್ಯ. ಭಾರತೀಯ ಪಂಚಾಂಗದ ಪ್ರಕಾರ ಶ್ರಾವಣ ಶುದ್ಧ ದ್ವಾದಶಿಯಂದು (ಇಂದು) ಪೂಜ್ಯರು ಜನ್ಮದಿನವನ್ನು ಆಚರಿಸಿಕೊಳ್ಳಲಿದ್ದು, ಈ ವರ್ಷ ರಾಯಚೂರು ಜಿಲ್ಲೆ ಲಿಂಗಸೂಗೂರಿನ ಈಶ್ವರ ದೇವಾಲಯದಲ್ಲಿ ಶ್ರಾವಣ ಮಾಸದ ತಪೋನುಷ್ಠಾನವನ್ನು ಕೈಗೊಂಡಿರುವ ಜಗದ್ಗುರುಗಳ ಜನ್ಮದಿನೋತ್ಸವವನ್ನು ಸದ್ಭಕ್ತರು ಹಮ್ಮಿಕೊಂಡಿದ್ದಾರೆ.

ತಾಯಿಯ ತವರೂರಾದ ನಾಗನೂರು ಹಿರೇಮಠದಲ್ಲಿ ಜನ್ಮತಳೆದ ಬಾಲಕನ ಮೇಲೆ ಕುಟುಂಬದ ವಾತಾವರಣ ಬಹಳ ಪರಿಣಾಮವನ್ನು ಬೀರಿದೆ. ವಿದ್ವಾಂಸರಾಗಿದ್ದ ನಾಗನೂರು ಬೃಹನ್ಮಠದ ಪಂಡಿತ ಕಾಶೀನಾಥ ಶಾಸ್ತ್ರಿಗಳು ಪೂಜ್ಯರ ಪೂರ್ವಾಶ್ರಮದ ಮಾವ. ಪೂಜ್ಯರ ಅಜ್ಜನಾಗಿದ್ದ ಶ್ರೀವಿರೂಪಾಕ್ಷ ಪುರಾಣಮಠ ಅವರು ಪ್ರಖಾಂಡ ಪಂಡಿತರು, ವೇದಾಗಮ ಶಿಕ್ಷಕರಾಗಿದ್ದರು. ಈ ಹಿನ್ನೆಲೆಯಲ್ಲಿಯಲ್ಲಿ ಕಾಶಿ ಜಗದ್ಗುರುಗಳ ಕುಟುಂಬವೇ ಪಂಡಿತರಿಂದ ಕೂಡಿತ್ತು.

ಬಾಗಲಕೋಟೆ ಜಿಲ್ಲೆ ಬದಾಮಿ ತಾಲೂಕಿನ ಹುಟ್ಟೂರು ತೋಗುಣಿಸಿಯಲ್ಲಿ ಪ್ರಾಥಮಿಕ, ಆ ನಂತರ ಬ್ಯಾಡಗಿ, ಗುಳೇದಗುಡ್ಡದಲ್ಲಿ ಮುಂದಿನ ಅಧ್ಯಯನವನ್ನು ನಡೆಸಿದರು. 1963ರಲ್ಲಿ ಗುಳೇದಗುಡ್ಡ ಅಮರೇಶ್ವರ ಮಠದ ಉತ್ತರಾಧಿಕಾರಿಗಳಾಗಿ ಆಯ್ಕೆಗೊಂಡು ಚಂದ್ರಶೇಖರಯ್ಯ ಎಂಬ ಮರುನಾಮಕರಗೊಂಡ ನಂತರ ಸೊಲ್ಲಾಪುರದ ವಾರದ ಮಲ್ಲಪ್ಪನವರ ಸಂಸ್ಕೃತ ಪಾಠಶಾಲೆಯಲ್ಲಿ ಉನ್ನತ ಶಿಕ್ಷಣಾಭ್ಯಾಸವನ್ನು ಮಾಡಿದರು. ಹಿರಿಯ ಶ್ರೀಗಳು ಲಿಂಗೈಕ್ಯರಾದ ನಂತರ ಶ್ರೀಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳೆಂಬ ಅಭಿನಾಮದೊಂದಿಗೆ 1970ರಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಮರೇಶ್ವರ ಮಠಕ್ಕೆ ಪಟ್ಟಾಭಿಷೇಕಗೊಂಡು ಆ ನಂತರ ಹೆಚ್ಚಿನ ಅಧ್ಯಯನಕ್ಕಾಗಿ ಕಾಶಿಗೆ ತೆರಳುತ್ತಾರೆ.

ಜ್ಞಾನದಿಂದ ಜಗತ್ತು ಗೆದ್ದ ಜಗದ್ಗುರು:

ಜ್ಞಾನದ ಮೂಲ ಗುರು; ಗುರುವಿನ ಮಾನದಂಡ ಸರಸ್ವತಿ. ಓರ್ವ ಸರ್ವಶ್ರೇಷ್ಠ ಗುರುವಾಗಬೇಕಾದರೆ; ಮೊದಲು ಪರಿಪೂರ್ಣ ಶಿಷ್ಯನಾಗಬೇಕು. ಶಿಷ್ಯನೆಂದರೆ ನಿರಂತರ ಅಧ್ಯಯನ; ಅಧ್ಯಯನದ ಮೂಲಕ ಪಕ್ವಗೊಂಡರೆ ಮಾತ್ರ ಗುರುಸ್ಥಾನಕ್ಕೆ ಮಹತ್ವ. ಈ ನಿಟ್ಟಿನಲ್ಲಿ ತಮ್ಮ ಅಪಾರ ಜ್ಞಾನದ ಮೂಲಕ ಜಗತ್ತಿನಾದ್ಯಂತ ಭಕ್ತರ ಮನಗೆದ್ದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು.

1970 ರಿಂದ 1989ರವರೆಗೆ ನಿರಂತರ19 ವರ್ಷ ಕಾಶಿಯಲ್ಲಿ ಸುದೀರ್ಘ ಅಧ್ಯಯನ ಮಾಡಿ ಜ್ಞಾನನಿಧಿಯೇ ಆಗಿದ್ದಾರೆ. ಕಾಶಿಪೀಠದ ಅಂದಿನ ಜಗದ್ಗುರು ಶ್ರೀವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಆಶೀರ್ವಾದದಿಂದ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ಪ್ರವೇಶ ಪಡೆದು ಅಧ್ಯಯನ ಆರಂಭಿಸಿದ ಶ್ರೀಗಳು, ಸಂಪೂರ್ಣಾನಂದ ಸಂಸ್ಕೃತ ವಿವಿಯಲ್ಲಿ ವೇದಾಂತಾಚಾರ್ಯ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದು, ಮೂರು ಚಿನ್ನದ ಪದಕ ತಮ್ಮದಾಗಿಸಿಕೊಳ್ಳುತ್ತಾರೆ. ಹಿರಿಯ ಜಗದ್ಗುರುಗಳ ಪ್ರೇರಣೆಯಂತೆ "ಸಿದ್ಧಾಂತ ಶಿಖಾಮಣಿ ಮತ್ತು ಷಡ್ದರ್ಶನಗಳು ಒಂದು ತೌಲನಿಕ ಅಧ್ಯಯನ" ಎಂಬ ವಿಷಯದ ಮೇಲೆ ಪಂಡಿತ ದೇವಸ್ವರೂಪ ಮಿಶ್ರರವರ ಮಾರ್ಗದರ್ಶನದಲ್ಲಿ 6 ವರ್ಷಗಳ ಸುದೀರ್ಘ ಸಂಶೋಧನೆ ನಡೆಸಿ ಪಿಎಚ್ಡಿ ಪದವಿ ಗಳಿಸುತ್ತಾರೆ. ಇಷ್ಟಕ್ಕೆ ನಿಲ್ಲದ ಇವರ ಜ್ಞಾನದಾಹ ಡಿ.ಲಿಟ್ ಪದವಿಗಾಗಿ ಮತ್ತೆ 6ವರ್ಷ ಸಂಶೋಧನೆ ಮುಂದುವರೆಸುತ್ತಾರೆ. "ಶಕ್ತಿವಿಶಿಷ್ಟಾದ್ವೈತ ತತ್ವತ್ರಯ ವಿಮರ್ಶಃ" ಎಂಬ ಮಹಾಪ್ರಬಂಧವನ್ನು ಸಲ್ಲಿಸಿ ವಿದ್ಯಾವಾಚಸ್ಪತಿ (ಡಿ.ಲಿಟ್) ಪದವಿಯನ್ನು ಪಡೆಯುತ್ತಾರೆ.

ಅಷ್ಟರಲ್ಲಾಗಲೇ ದೇಶದ ವಿವಿಧ ರಾಜ್ಯಗಳಲ್ಲಿನ ವಿದ್ವತ್ ಸ್ಪರ್ಧೆಗಳು, ವಿಚಾರ ಸಂಕೀರಣಗಳಲ್ಲಿ ಪಾಲ್ಗೊಂಡು ದೇಶದ ವಿದ್ವಾಂಸರ ಗಮನ ಸೆಳೆದಿದ್ದರು. ಸಿದ್ಧಾಂತ ಶಿಖಾಮಣಿಯ ವಿದ್ವತ್ಪೂರ್ಣ ಪ್ರವಚನದ ಮೂಲಕ ದೇಶದ ಬಹುತೇಕ ರಾಜ್ಯಗಳಲ್ಲಿ ಪ್ರಸಿದ್ಧರಾಗಿದ್ದರು. ಈ ಮಧ್ಯೆ ಕಾಶಿ ಪೀಠದ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ನಂತರ ಜಗದ್ಗುರು ಪಂಚಾಚಾರ್ಯರ ಒಮ್ಮತಾಭಿಪ್ರಾಯದಂತೆ 1989ರಲ್ಲಿ ಕಾಶಿ ಪೀಠದ 86ನೇ ಜಗದ್ಗುರುಗಳಾಗಿ ಜ್ಞಾನಸಿಂಹಾಸನಾರೋಹಣ ಮಾಡಿದರು.

ಜ್ಞಾನ ಪ್ರಸಾರಕ್ಕೆ ಪ್ರಥಮ ಆದ್ಯತೆ:

ಕಾಶೀ ಪೀಠದ ಜಗದ್ಗುರುಗಳಾದ ನಂತರ ಶ್ರೀಚಂದ್ರಶೇಖರ ಶಿವಾಚಾರ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಕಾಶೀ ಜಂಗಮವಾಡಿ ಮಠ

ಮಹಾಸ್ವಾಮಿಗಳು ಪೀಠದ ಮೂಲ ಆಶಯದಂತೆ; ಜ್ಞಾನಪ್ರಸಾರಕ್ಕೆ ಹಲವು ಶಾಶ್ವತ ವ್ಯವಸ್ಥೆಗಳನ್ನು ಕಲ್ಪಿಸಿದ್ದಾರೆ. ಪೀಠದಲ್ಲಿ ನಡೆಯುತ್ತಿದ್ದ ಗುರುಕುಲದ ಅಭಿವೃದ್ಧಿಯ ಜೊತೆಗೆ; ಸಂಪೂರ್ಣಾನಂದ ವಿವಿಯ ವೇದಾಂತ ವಿಭಾಗದಲ್ಲಿ ಶಕ್ತಿವಿಶಿಷ್ಟಾದ್ವೈತ ಅಧ್ಯಯನ ಪೀಠ ಹಾಗೂ ಬನಾರಸ್ ಹಿಂದೂ ವಿವಿಯಲ್ಲಿ ವೀರಶೈವ ಆಗಮ ಅಧ್ಯಯನ ಕೇಂದ್ರಗಳು ಸ್ಥಾಪಿಸಲು ಪ್ರಮುಖ ಪಾತ್ರ ವಹಿಸಿದ್ದಾರೆ. ಪ್ರತಿ ವರ್ಷ ಮಹಾಶಿವರಾತ್ರಿಯ ಸಂದರ್ಭದಲ್ಲಿ ರಾಷ್ಟ್ರೀಯ ಮಟ್ಟದ ವಿದ್ವತ್ ಸಮ್ಮೇಳನವನ್ನು ನಡೆಸುವುದು, ಪ್ರತಿಷ್ಠಿತ ವಿದ್ವಾಂಸರಿಗೆ ವಿವಿಧ ಪ್ರಶಸ್ತಿಗಳನ್ನು ನೀಡುತ್ತಿದ್ದಾರೆ. ಕರ್ನಾಟಕದ ಗದಗ, ಗುಳೇದಗುಡ್ಡ, ಬಂಕಾಪುರ, ಬಿಸನಹಳ್ಳಿ ಹಾಗೂ ಆಂಧ್ರಪ್ರದೇಶದ ಶಾದನಗರ ಸೇರಿದಂತೆ ವಿವಿಧೆಡೆಗಳಲ್ಲಿ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲವನ್ನು ತೆರೆದಿದ್ದಾರೆ.

ಜ್ಞಾನ ಪ್ರಸಾರದ ಜೊತೆಗೆ ಧಾರ್ಮಿಕ ಸಂಸ್ಕಾರವನ್ನು ನೀಡುವಲ್ಲಿ ಶ್ರೀಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಪಾತ್ರ ಪ್ರಮುಖವಾಗಿದೆ. ದೇಶದ ವಿವಿಧೆಡೆಯಿರುವ ವೀರಶೈವ ಸಮಾಜವನ್ನು ಸಂಘಟಿಸಿ ಅವರಿಗೆ ಧರ್ಮ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಪಂಜಾಬ್, ಹರಿಯಾಣ, ದೆಹಲಿ, ರಾಜಸ್ಥಾನ, ಉತ್ತರಪ್ರದೇಶ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಗೋವಾ, ಮಹಾರಾಷ್ಟ್ರ, ಕರ್ನಾಟಕ, ಮಧ್ಯಪ್ರದೇಶ, ಉತ್ತರಾಖಂಡ್, ಛತ್ತಿಸಗಡ್ ಸೇರಿದಂತೆ ಹಲವು ರಾಜ್ಯಗಳ ಲಕ್ಷಾಂತರ ಜನರಿಗೆ ಲಿಂಗಧೀಕ್ಷೆ ನೀಡಿದ್ದಾರೆ. ಜೊತೆಗೆ ನೇಪಾಳ ಮತ್ತು ರಷ್ಯಾದ ಸಾವಿರಾರು ಜನರಿಗೆ ಧೀಕ್ಷೆಯನ್ನು ನೀಡಿ ವೀರಶೈವ ಧರ್ಮಕ್ಕೆ ವಿಶ್ವಮಾನ್ಯತೆಯನ್ನು ತಂದು ಕೊಟ್ಟಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾಗೀಶರ ವರ ಪ್ರಸಾದ
ಶ್ರೀ ಉಮಾಪತಿ ಜಗದ್ಗುರು
ದಾವಣಗೆರೆಯಲ್ಲಿ ಉಭಯ ಪೀಠಾಧಿಪತಿಗಳ ಪುಣ್ಯಸ್ಮರಣೆ

ದಿನಾಂಕ : 20-09-2018

ಭಾರತೀಯ ಉತ್ಕೃಷ್ಟ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮಠ ಪೀಠಗಳ ಪಾತ್ರ ಪ್ರಮುಖವಾಗಿದೆ. ಈ ಹಿನ್ನೆಲೆಯಲ್ಲಿ ಪಂಚಪೀಠಗಳಲ್ಲೊಂದಾಗಿರುವ ಶ್ರೀಶೈಲ ಪೀಠದ ಲಿಂಗೈಕ್ಯ ಜಗದ್ಗುರು ವಾಗೀಶ ಪಂಡಿತಾರಾಧ್ಯರ ಕರಕಮಲ ಸಂಜಾತರಾದ ಶ್ರೀಉಮಾಪತಿ ಪಂಡಿತಾರಾಧ್ಯ ಭಗವತ್ಪಾದರ ಕಾರ್ಯ ಗಮನಾರ್ಹ. ಲಭ್ಯ ದಾಖಲೆಗಳ ಪ್ರಕಾರ; ಶ್ರೀಶೈಲ ಪೀಠದ 31ನೇ ಜಗದ್ಗುರುಗಳಾಗಿದ್ದ ಉಮಾಪತಿ ಪಂಡಿತಾರಾಧ್ಯ ಭಗವತ್ಪಾದರು ಚತುರ್ಭಾಷ ಪಂಡಿತರು. ಕನ್ನಡ, ಹಿಂದಿ, ತೆಲುಗು ಮತ್ತು ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಹೊಂದಿದ್ದರು. ಮಹಾಸಾಧಕರಾಗಿದ್ದ ಶ್ರೀವಾಗೀಶ ಪಂಡಿತಾರಾಧ್ಯ ಭಗವತ್ಪಾದರ ವರಪ್ರಸಾದವಾಗಿ ಪೀಠಕ್ಕೆ ನೇಮಕಗೊಂಡವರು ಉಮಾಪತಿ ಜಗದ್ಗುರುಗಳು.

1981ರಲ್ಲಿ ಶ್ರೀಶೈಲ ಸೂರ್ಯ ಸಿಂಹಾಸನವನ್ನು ಆರೋಹಣ ಮಾಡಿದ ಪೂಜ್ಯರು ಹಿರಿಯ ಜಗದ್ಗುರು ವಾಗೀಶ ಪಂಡಿತಾರಾಧ್ಯರ ಗರಡಿಯಲ್ಲಿ 5ವರ್ಷ ಪರಿಪಕ್ವಗೊಂಡು ಪೀಠದ ಇತಿಹಾಸವನ್ನು ಉಜ್ವಲಗೊಳಿಸುವಲ್ಲಿ ಶ್ರಮ ವಹಿಸಿದರು.

ಶ್ರೀಶೈಲ ಕ್ಷೇತ್ರದ ಸಂಪೂರ್ಣ ಜವಾಬ್ದಾರಿ ಒಂದು ಕಾಲಕ್ಕೆ ಪೀಠದ ಅಧೀನದಲ್ಲಿದ್ದ ಸಂದರ್ಭದಲ್ಲಿ; ಆಂಧ್ರ ಸರ್ಕಾರದ ಮುಜರಾಯಿ ಇಲಾಖೆ ಸ್ಥಾಪಿಸಿದ ಟ್ರಸ್ಟ್ ಬೋರ್ಡ್ನ ಪ್ರಥಮ ಅಧ್ಯಕ್ಷರಾಗಿ ಅಭಿವೃದ್ಧಿ ಕಾರ್ಯಕ್ಕೆ ಮುನ್ನುಡಿ ಬರೆದವರು ವಾಗೀಶ ಜಗದ್ಗುರುಗಳು. ಅವರ ದೂರದೃಷ್ಟಿತ್ವದ ಕೊಡುಗೆಯಾಗಿ ಕ್ಷೇತ್ರಕ್ಕೆ ಬರುವ ಯಾತ್ರಿಕರ ಅನುಕೂಲಕ್ಕೆ ಹಲವು ಮಹತ್ವದ ಯೋಜನೆಗಳಿಗೆ ಚಾಲನೆ ನೀಡಿದರು. ಅವುಗಳಲ್ಲಿ ಪ್ರಮುಖವಾದದ್ದು ಶ್ರೀಶೈಲಕ್ಕೆ ರಸ್ತೆ ನಿರ್ಮಾಣ.

ಶ್ರೀಶೈಲ ಪೀಠದ ದಾವಣಗೆರೆ ಮಠ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀಶೈಲ – ವಾಗೀಶ ಜಗದ್ಗುರುಗಳು

ಕರ್ನಾಟಕ ಮತ್ತು ಆಂಧ್ರದ ರಾಜ್ಯಪಾಲರು ನೂತನ ರಸ್ತೆ ಉದ್ಘಾಟಿಸಿದಾಗ ವಾಗೀಶ ಜಗದ್ಗುರುಗಳ ಕಾರು ಮೊದಲ ಸಂಚಾರ ನಡೆಸಿತ್ತು. ಭಕ್ತರ ವಸತಿಗಾಗಿ ಯಾತ್ರಿನಿವಾಸ, ನಿತ್ಯಾನ್ನ ದಾಸೋಹ ಕೇಂದ್ರಗಳನ್ನು ಪೀಠದ ವತಿಯಿಂದ ಸ್ಥಾಪಿಸುವ ಕಾರ್ಯ, ಜೊತೆಗೆ ಕ್ಷೇತ್ರದೊಂದಿಗೆ ಅವಿನಾಭಾವ ಸಂಬಂಧ ಇರಿಸಿ ಕೊಂಡಿದ್ದ ಶಿವಶರಣರ ಇತಿಹಾಸ ಶಾಶ್ವತ ಗೊಳಿಸುವುದಕ್ಕೂ ಮುನ್ನುಡಿ ಬರೆದಿದ್ದರು. ಇಂತಹ ಹತ್ತು ಹಲವು ಯೋಜನೆಗಳು ವಾಗೀಶ ಜಗದ್ಗುರುಗಳಿಂದ ಆರಂಭವಾದರೂ ಅವುಗಳನ್ನು ಪೂರ್ಣಗೊಳಿಸಿದ ಕೀರ್ತಿ ಶ್ರೀಉಮಾಪತಿ ಜಗದ್ಗುರುಗಳಿಗೆ ಸಲ್ಲುತ್ತದೆ.

'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂಬ ಉಕ್ತಿಯಂತೆ ವಜ್ರದಷ್ಟು ಕಠಿಣ ಮಾತುಗಳನ್ನಾಡುತ್ತಿದ್ದ ಉಮಾಪತಿ ಜಗದ್ಗುರುಗಳು ಹೂವಿನಂತೆ ಮೃದು ಮನಸ್ಸನ್ನು ಹೊಂದಿದ್ದರು ಎಂಬುದು ಅವರನ್ನು ಹತ್ತಿರದಿಂದ ಬಲ್ಲವರ ಮಾತು. ಪಶು–ಪಕ್ಷಿ, ಪ್ರಾಣಿಗಳ ಮೇಲೆ ಅಪಾರ ಪ್ರೀತಿಯನ್ನು ಇರಿಸಿಕೊಂಡಿದ್ದ ಶ್ರೀಗಳು ತಮ್ಮ ಬಿಡುವಿನ ವೇಳೆಯಲ್ಲಿ ಅವುಗಳ ಜೊತೆ ಕಾಲ ಕಳೆಯುತ್ತಿದ್ದರು. ಹಾಸ್ಯದ ಜೊತೆಗೆ ಧರ್ಮೋಪದೇಶ ನೀಡುವ ವಿಶೇಷ ಕಲೆ ಶ್ರೀಗಳಿಗೆ ಕರಗತವಾಗಿತ್ತು. ಮೂರು ಭಾಷೆಗಳಲ್ಲಿ ಅದ್ಭುತ ಆಶೀರ್ವಚನ ನೀಡುತ್ತಿದ್ದ ಇವರ ಹಾಸ್ಯಮಿಶ್ರಿತ ಮಾತುಗಳನ್ನು ಕೇಳಲು ಜನ ಉತ್ಸುಕತೆಯಿಂದ ಕಾಯುತ್ತಿದ್ದರು. ಕೇವಲ ಶ್ರೀಶೈಲದ ಪರಿಸರದಲ್ಲಿ ಮಾತ್ರವಲ್ಲದೆ ಆಂಧ್ರ, ಕರ್ನಾಟಕದ ಹಲವು ಭಾಗಗಳಲ್ಲಿದ್ದ ಪೀಠದ ಶಾಖಾ ಮಠಗಳ ಅಭಿವೃದ್ಧಿ, ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ ಜೊತೆಗೆ ಸಾಮಾಜಿಕ, ಧಾರ್ಮಿಕ ಕ್ಷೇತ್ರಕ್ಕೆ ಹಲವು ಕೊಡುಗೆಗಳನ್ನು ನೀಡಿದ್ದಾರೆ.

ಉಮಾಪತಿ ಜಗದ್ಗುರುಗಳ ಪೂರ್ವಾಶ್ರಮ:

ಬಸವಜನ್ಮಭೂಮಿ ಬಾಗೇವಾಡಿಯ ಹಿರೇಮಠದ ಸಂಗಯ್ಯ, ಶಿವಲಿಂಗಮ್ಮ ದಂಪತಿಗಳ ಪುಣ್ಯಗರ್ಭದಲ್ಲಿ1949ರಲ್ಲಿ ಜನಿಸಿದ ಪೂಜ್ಯರ ಮೇಲೆ ಅಜ್ಜ ವಿರೂಪಾಕ್ಷಯ್ಯ ಅವರ ಪ್ರಭಾವ ಗಾಢವಾಗಿ ಬೀರಿತು. ಸಹಜವಾಗಿಯೇ ಧರ್ಮ ಸಿದ್ಧಾಂತದಲ್ಲಿ ಆಸಕ್ತಿ ಹೊಂದಿದ್ದ ಇವರು; ಪ್ರಾಥಮಿಕ ಶಿಕ್ಷಣವನ್ನು ಬಾಗೇವಾಡಿಯಲ್ಲಿ ಪೂರೈಸಿ ಮುಂದೆ ಶಿವಯೋಗ ಮಂದಿರ ಹಾಗೂ ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ವಿದ್ಯಾಭ್ಯಾಸ ಮುಂದುವರೆಸಿದರು. ಹುಬ್ಬಳ್ಳಿ ಹೊಸಮಠದ ಶ್ರೀಶಿವಬಸವ ಸ್ವಾಮಿಗಳಿಂದ ಸಂಸ್ಕೃತ ಸಾಹಿತ್ಯದ ಆಳವಾದ ಅಧ್ಯಯನವನ್ನು ಮಾಡಿದ ಶ್ರೀಉಮಾಪತಿ ದೇವರು ಮುಂದೆ ಉನ್ನತ ಅಧ್ಯಯನಕ್ಕಾಗಿ ಕಾಶಿಗೆ ತೆರಳಿದರು. ಕಾಶಿಯಲ್ಲಿ ಆರೇಳು ವರ್ಷಗಳ ಕಾಲ ಇದ್ದು, ಸಂಪೂರ್ಣಾನಂದ ಸಂಸ್ಕೃತ ವಿವಿ, ಕಾಶಿ ಹಿಂದೂ ವಿವಿ ಮತ್ತು ಪ್ರಯಾಗ ವಿವಿಯಲ್ಲಿ ಅಧ್ಯಯನ ನಡೆಸಿ ವಿವಿಧ ಪದವಿಗಳನ್ನು ಪಡೆದುಕೊಂಡರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದಿನ ಕಾಶಿ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಭಗವತ್ಪಾದರ ಶಿಫಾರಸ್ಸು ಮತ್ತು ರಂಭಾಪುರಿ ವೀರಗಂಗಾಧರ ಜಗದ್ಗುರುಗಳ ಸಮ್ಮತಿಯಂತೆ ಶ್ರೀಶೈಲ ವಾಗೀಶ ಜಗದ್ಗುರುಗಳ ಉತ್ತರಾಧಿಕಾರಿಗಳಾಗಿ ಆಯ್ಕೆಗೊಂಡು ತತ್ಕಾಲೀನ ಸಮಾನ ಪೀಠಾಚಾರ್ಯರ ಸಾನಿಧ್ಯದಲ್ಲಿ 1981ರಲ್ಲಿ ಸೂರ್ಯಸಿಂಹಾಸನದ ಪೀಠಾರೋಹಣ ಮಾಡಿದರು. ಸುಮಾರು 30 ವರ್ಷ ಈ ಪರಂಪರೆಯನ್ನು ಮುನ್ನಡೆಸಿ 2011ರಲ್ಲಿ ಲಿಂಗೈಕ್ಯರಾದರು.

ಶ್ರೀಶೈಲ – ಉಮಾಪತಿ ಜಗದ್ಗುರುಗಳು

ದಾವಣಗೆರೆಯೊಂದಿಗೆ ಅವಿನಾಭಾವ ನಂಟು:

ಶ್ರೀಶೈಲ ಪೀಠವು ಪ್ರಾದೇಶಿಕವಾಗಿ ಆಂಧ್ರಪ್ರದೇಶದಲ್ಲಿದ್ದರೂ; ಪೀಠದ ಕಾರ್ಯಕ್ಷೇತ್ರದ ವಿಸ್ತಾರ ದೇಶದ ವಿವಿಧ ಪ್ರಾಂತಗಳಲ್ಲಿ ಹರಡಿಕೊಂಡಿದೆ. ಅದರಲ್ಲೂ ಕರ್ನಾಟಕದಲ್ಲಿ ಶ್ರೀಶೈಲ ಪೀಠದ ಕಾರ್ಯ ಬಹಳಷ್ಟು ವ್ಯಾಪಿಸಿಕೊಂಡಿದೆ. ಆ ಹಿನ್ನೆಲೆಯಲ್ಲಿ ದಾವಣಗೆರೆಯನ್ನು ಶ್ರೀಶೈಲದ ಎರಡನೇ ಕೇಂದ್ರಸ್ಥಾನ ಎಂದು ಕರೆಯಲಾಗುತ್ತದೆ.

ಲಿಂಗೈಕ್ಯ ವಾಗೀಶ ಜಗದ್ಗುರುಗಳ ಕಾಲದಲ್ಲಿ ಸ್ಥಾಪನೆಗೊಂಡ ಶಿಕ್ಷಣ ಸಂಸ್ಥೆಗಳು, ದಾವಣಗೆರೆ ನಗರದಲ್ಲಿರುವ ಶ್ರೀಶೈಲ ಮಠ ಈ ಭಾಗದ ಭಕ್ತ ಸಮುದಾಯಕ್ಕೆ ಆ ಕಾಲದಿಂದಲೂ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಸೇವೆಯನ್ನು ಮಾಡುತ್ತಾ ಬಂದಿದೆ.

ಯೋಗಾ ಯೋಗಾವೆಂಬಂತೆ ಉಮಾಪತಿ ಜಗದ್ಗುರುಗಳು ಉತ್ತರಾಧಿಕಾರಿ ಪರೀಕ್ಷೆಗೆ ಬಂದು ವಾಗೀಶ ಜಗದ್ಗುರುಗಳನ್ನು ಬೇಟಿಯಾಗಿದ್ದು ದಾವಣಗೆರೆಯಲ್ಲಿ, ಆಯ್ಕೆಯಾಗಿ ಘೋಷಣೆಯಾಗಿದ್ದು ದಾವಣಗೆರೆಯಲ್ಲಿ, ಮುಂದೆ ಲಿಂಗೈಕ್ಯರಾಗಿದ್ದು ಕೂಡಾ ಇದೇ ದಾವಣಗೆರೆಯಲ್ಲಿ. ದಾವಣಗೆರೆ ಜಿಲ್ಲೆಯಲ್ಲಿ ಶ್ರೀಶೈಲ ಪೀಠದ ಮೂರು ಜಗದ್ಗುರುಗಳ ಗದ್ದುಗೆಗಳಿವೆ. ಉಮಾಪತಿ ಜಗದ್ಗುರುಗಳಿಗಿಂತ ಮೊದಲು ವಾಗೀಶ ಜಗದ್ಗುರುಗಳ ಗದ್ದುಗೆ ಹಾಗೂ 26ನೇ ಪೀಠಾಧಿಪತಿಯಾಗಿದ್ದ ಜಡೆಯ ಶಂಕರ ಭಗವತ್ಪಾದರ ಗದ್ದುಗೆ ಕೂಡಾ ಹೊನ್ನಾಳಿ ಹಿರೇಕಲ್ಮಠದಲ್ಲಿದೆ.

ವಾಗೀಶ ಜಗದ್ಗುರುಗಳು 1986ರ ಸೆ.15ರಂದು ಲಿಂಗೈಕ್ಯರಾಗಿದ್ದು, ಉಮಾಪತಿ ಜಗದ್ಗುರುಗಳು 2011ರ ಅ.29ರಂದು ಲಿಂಗೈಕ್ಯರಾದ ನಂತರ ದಾವಣಗೆರೆಯ ಭಕ್ತರು ಪ್ರತಿ ವರ್ಷ ಪ್ರಸ್ತುತ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಭಗವತ್ಪಾದರ ಸಾನಿಧ್ಯದಲ್ಲಿ ಉಭಯ ಜಗದ್ಗುರುಗಳ ಪುಣ್ಯಸ್ಮರಣೋತ್ಸವವನ್ನ ಆಚರಿಸಿಕೊಂಡು ಬರುತ್ತಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಾಗತಿಕ ಧರ್ಮಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿ

ದಿನಾಂಕ : 20–04–2019

ಒಂದು ದೇಶದ ಇತಿಹಾಸ, ಪರಂಪರೆ, ಸಂಸ್ಕೃತಿ, ಆಚರಣೆ ಎಲ್ಲದರ ಪರಿಚಯವಾಗುವುದು ಆ ದೇಶದ ಸಾಹಿತ್ಯದಿಂದ. ಆ ಕಾರಣದಿಂದಲೇ ಯಾವುದೇ ದೇಶದ ಸಾಹಿತ್ಯ ಸಮೃದ್ಧವಾಗಿದ್ದರೆ ಅಲ್ಲಿನ ಸಂಸ್ಕೃತಿ ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದುಕೊಳ್ಳುತ್ತದೆ. ಅದರಲ್ಲೂ ಧಾರ್ಮಿಕ ಇತಿಹಾಸವನ್ನು ಪ್ರಚಾರಗೊಳಿಸುವ, ಶಾಶ್ವತಗೊಳಿಸುವ ಬಹುದೊಡ್ಡ ಮಾಧ್ಯಮ ಸಾಹಿತ್ಯ. ಆ ನಿಟ್ಟಿನಲ್ಲಿ ಭಾರತೀಯ ಧರ್ಮಗ್ರಂಥಗಳು ವಿಶ್ವಮನ್ನಣೆಗೆ ಪಾತ್ರವಾಗಿದ್ದು, ಇತ್ತೀಚಿನ ದಿನಗಳಲ್ಲಿ ವೀರಶೈವ ಧರ್ಮಗ್ರಂಥವಾಗಿರುವ ಶ್ರೀಸಿದ್ಧಾಂತ ಶಿಖಾಮಣಿ ಗ್ರಂಥವು ಜಾಗತಿಕ ಮಟ್ಟದಲ್ಲಿ ಬಹುದೊಡ್ಡ ಸ್ಥಾನ ಪಡೆದುಕೊಂಡಿದೆ.

ಭಾರತೀಯ ಸಾಹಿತ್ಯ ಭಂಡಾರದಲ್ಲಿರುವಷ್ಟು ಸಾಮಾಗ್ರಿ ಮತ್ತಿನ್ನಾವುದೇ ದೇಶದಲ್ಲಿಯೂ ಸಿಗಲಾರದು. ಅದರಲ್ಲೂ ಧಾರ್ಮಿಕ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ಪುಸ್ತಕಗಳು ನಿತ್ಯ ಸತ್ಯ ನಿರೂಪಿತ ಮಹಾನ್ ಧರ್ಮ ಗ್ರಂಥಗಳಾಗಿವೆ. ಅಂತಹದ್ದೊಂದು ದಾರ್ಶನಿಕ ಗ್ರಂಥವಾದ ಶ್ರೀಸಿದ್ಧಾಂತ ಶಿಖಾಮಣಿ ಮೂಲ ಸಂಸ್ಕೃತ ಕೃತಿಯು ಇಲ್ಲಿಯವರೆಗೆ ಸುಮಾರು 15ಕ್ಕೂ ಹೆಚ್ಚಿನ ದೇಸಿ ಭಾಷೆಗಳಿಗೆ ಹಾಗೂ 4ಕ್ಕೂ ಹೆಚ್ಚು ಅಂತರ್ದೇಸಿ ಭಾಷೆಗಳಿಗೆ ಭಾಷಾಂತರಗೊಂಡಿದೆ.



ಶ್ರೀ ಸಿದ್ಧಾಂತ ಶಿಖಾಮಣಿ

ವೀರಶೈವಾಚಾರ ಸಂಪನ್ನವಾದ ಶ್ರೀಸಿದ್ಧಾಂತ ಶಿಖಾಮಣಿಯನ್ನು ಮೊಟ್ಟ ಮೊದಲಿಗೆ ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿ ಸಾಮಾನ್ಯ ಜನರಿಗೆ ತಲುಪಿಸಿದ್ದು; ದೇಶ ಕಂಡ ಅಪ್ರತಿಮ ವಿದ್ವಾಂಸರು, ಮಹಾನ್ ಪಂಡಿತರು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಿದ್ಧಾಂತ ಶಿಖಾಮಣಿ ಆಪ್

ತರ್ಕ–ಶಾಸ್ತ್ರ ಪಾರಂಗತರಾಗಿರುವ ಪ್ರಸ್ತುತ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾರು. ಶ್ರೀಸಿದ್ಧಾಂತ ಶಿಖಾಮಣಿಯನ್ನು ಸುದೀರ್ಘ ಕಾಲ ಅಧ್ಯಯನ ನಡೆಸಿ ದೇಶದ ಮೂಲೆ ಮೂಲೆಗಳಲ್ಲಿ ಪ್ರವಚನ ಮಾಡಿದ ಕೀರ್ತಿ ವೇದಾಂತಾಚಾರ್ಯ ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಸಲ್ಲುತ್ತದೆ. ತಮ್ಮ ಪ್ರವಚನದ ಸಾರವನ್ನು ಸಾಹಿತ್ಯ ರೂಪದಲ್ಲಿ ಪ್ರಕಟಿಸಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ ಪೂಜ್ಯರು, ಕಳೆದ 25 ವರ್ಷಗಳಿಂದ ನಿರಂತರವಾಗಿ ದೇಶದ ಬಹುತೇಕ ಎಲ್ಲ ಪ್ರಮುಖ ಭಾಷೆಗಳಿಗೂ ಶ್ರೀಸಿದ್ಧಾಂತ ಶಿಖಾಮಣಿಯನ್ನು ಭಾಷಾಂತರಿಸಿದ್ದಾರೆ.

ಶ್ರೀಮದ್ ಕಾಶಿ ಜ್ಞಾನಸಿಂಹಾಸನ ಮಹಾ ಪೀಠದ ಶೈವ ಭಾರತಿ ಶೋಧ ಪ್ರತಿಷ್ಠಾನದ ಮೂಲಕ ಇಲ್ಲಿಯವರೆಗೆ ಕನ್ನಡ, ತೆಲುಗು, ತಮಿಳು, ಮಲಯಾಳಂ, ಮರಾಠಿ, ಗುಜರಾತಿ, ಬೆಂಗಾಲಿ, ಹಿಂದಿ, ಪಾಲಿ, ಮೈಥಿಲಿ, ಅವಧಿ, ಬೋಜಪುರಿ ಸೇರಿದಂತೆ 15ಕ್ಕೂ ಹೆಚ್ಚು ದೇಸಿ ಭಾಷೆಗಳಲ್ಲಿ ಪ್ರಕಟಿಸಿದ್ದಾರೆ. ನಂತರ ಜಾಗತಿಕ ಭಾಷೆಗಳಲ್ಲೂ ಶ್ರೀಸಿದ್ಧಾಂತ ಶಿಖಾಮಣಿಯನ್ನು ಪ್ರಕಟಿಸುವ ಉದ್ದೇಶದಿಂದ ಇಂಗ್ಲೀಷ್, ರಷ್ಯನ್, ನೇಪಾಳಿ ಭಾಷೆಗಳಲ್ಲೂ ಶ್ರೀಸಿದ್ಧಾಂತ ಶಿಖಾಮಣಿ ಪ್ರಕಟಿಸಿದ್ದಾರೆ. ಸದ್ಯ ವಾರಣಾಸಿಯುಲ್ಲಿರುವ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ವಿದೇಶಿ ಭಾಷಾ ವಿಭಾಗದ ಜಪಾನಿ ಮತ್ತು ಜರ್ಮನಿ ಭಾಷಾ ತಜ್ಞರಿಂದ ಆಯಾ ಭಾಷೆಗಳಿಗೂ ಶ್ರೀಸಿದ್ಧಾಂತ ಶಿಖಾಮಣಿ ಅನುವಾದಗೊಳ್ಳುತ್ತಿದೆ. ಇಲ್ಲಿಯವರೆಗೆ ಎಲ್ಲ ಭಾಷೆಯ ಕೃತಿಗಳು ಸೇರಿ ಸುಮಾರು 10 ಲಕ್ಷ ಪ್ರತಿಗಳು ಜನರ ಕೈ ಸೇರಿದ್ದು, ಭಾರತೀಯ ಸಾಹಿತ್ಯ ಲೋಕದಲ್ಲಿ ಇದೊಂದು ಮೈಲುಗಲ್ಲು ಎಂದು ಬಿಂಬಿಸಲ್ಪಟ್ಟಿದೆ. ಮತ್ತೊಂದು ವಿಶೇಷವೆಂದರೆ ಆಯಾಯ ಪ್ರಾದೇಶಿಕ ಭಾಷೆಯ ಕೃತಿಗಳು ಆಯಾಯಾ ಪ್ರದೇಶದಲ್ಲೇ ಬಿಡುಗಡೆಗೊಂಡಿದ್ದು, ರಷ್ಯನ್ ಮತ್ತು ನೇಪಾಳಿ ಭಾಷೆಯ ಕೃತಿಗಳು ಸಹ ಆ ದೇಶದಲ್ಲೇ ಬಿಡುಗಡೆಗೊಂಡಿವೆ.

ಶ್ರೀಸಿದ್ಧಾಂತ ಶಿಖಾಮಣಿ ಆ್ಯಪ್:

ಶ್ರೀಸಿದ್ಧಾಂತ ಶಿಖಾಮಣಿ ಗ್ರಂಥದ ಜನಪ್ರಿಯತೆಯನ್ನು ಹೆಚ್ಚಿಸಲು ಕಾಶೀ ಜಗದ್ಗುರುಗಳು ಕೈಗೊಂಡ ಮತ್ತೊಂದು ಮಹತ್ವದ ಯೋಜನೆ "ಶ್ರೀಸಿದ್ಧಾಂತ ಶಿಖಾಮಣಿ ಆ್ಯಪ್". ಪ್ರಸ್ತುತ ಬೆರಳ ತುದಿಯಲ್ಲಿ ಜಗತ್ತನ್ನು ನೋಡುವ ತಂತ್ರಜ್ಞಾನವಿದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ಘಟನೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಸಿದ್ಧಾಂತ ಶಿಖಾಮಣಿ ಅಂತರರಾಷ್ಟ್ರೀಯ ಭಾಷೆಗಳಿಗೆ ತರ್ಜುಮೆ ಮಾಡಿದವರು

ಕ್ಷಣ ಮಾತ್ರದಲ್ಲಿ ಸಾಮಾನ್ಯರು ವೀಕ್ಷಿಸಬಹುದಾದ ಕಾಲದ ವೇಗಕ್ಕೆ ಅನುಗುಣವಾಗಿ ಡಿಜಿಟಲ್ ಪುಸ್ತಕಗಳನ್ನು (ಇ–ಪುಸ್ತಕ) ಓದುಗರ ಕೈಗೆ ನೀಡುವುದಕ್ಕಾಗಿ ಸಿದ್ಧಾಂತ ಶಿಖಾಮಣಿಯ ಆ್ಯಪ್ ಅಭಿವೃದ್ಧಿಗೊಳಿಸಲಾಗಿದೆ.

ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡಿರುವ ಧರ್ಮ ಗ್ರಂಥ ಶ್ರೀಸಿದ್ಧಾಂತ ಶಿಖಾಮಣಿ ಎಂಬ ಹೆಗ್ಗಳಿಕೆ ಹೊಂದಿದೆ. ಈಗಾಗಲೇ ಈ ಆ್ಯಪ್‌ನಲ್ಲಿ ಎಲ್ಲ ಭಾಷೆಯ ಇ–ಪುಸ್ತಕ ಲಭ್ಯವಿದ್ದು, ಅಂತರಾಷ್ಟ್ರೀಯ ಭಾಷೆಗಳಿಗೆ ತರ್ಜುಮೆಗೊಂಡಿರುವ ಮತ್ತು ತರ್ಜುಮೆಗೊಳ್ಳುತ್ತಿರುವ ಪುಸ್ತಕಗಳನ್ನು ಕೂಡಾ ಈ ಆ್ಯಪ್ ನಲ್ಲಿ ಅಪಲೋಡ್ ಮಾಡಿ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಉಚಿತವಾಗಿ ಈ ಆ್ಯಪ್‌ನ್ನು ನೀಡಲು ಉದ್ದೇಶಿಸಲಾಗಿದೆ.

ಆ್ಯಂಡ್ರಾಯ್ಡ್ ಮೊಬೈಲ್‌ನಲ್ಲಿ "ಶ್ರೀಸಿದ್ಧಾಂತ ಶಿಖಾಮಣಿ" ಆ್ಯಪ್ ವಿನ್ಯಾಸಗೊಳಿಸಿದ್ದು, ಜಗತ್ತಿನ ಯಾವುದೇ ಸ್ಥಳದಿಂದ ಬೇಕಾದರೂ, ಯಾವುದೇ ಭಾಷೆಯ ಪುಸ್ತಕವನ್ನು ಆ್ಯಪ್ನಲ್ಲಿ ಓದಬಹುದು. ಹಾಗೂ ಕನ್ನಡ, ಇಂಗ್ಲೀಷ್, ತೆಲುಗು, ಮಲಯಾಳಂ ಮತ್ತು ಮರಾಠಿ ಭಾಷೆಗಳಲ್ಲಿ ಮಾಡಿಸಿರುವ ಶ್ರೀಸಿದ್ಧಾಂತ ಶಿಖಾಮಣಿ ಪಾರಾಯಣದ ಆಡಿಯೋ ರೆಕಾರ್ಡಿಂಗ್ ಕೂಡಾ ಉಚಿತವಾಗಿ ಈ ಆ್ಯಪ್ನಲ್ಲಿ ದೊರೆಯಲಿದೆ.

ಈಗಾಗಲೇ 15ಕ್ಕೂ ಹೆಚ್ಚು ಭಾಷೆಯಲ್ಲಿ ಲಭ್ಯವಿರುವ ಆ್ಯಪ್‌ನ್ನು ಉನ್ನತೀಕರಿಸಿ ಎಲ್ಲ ಜಾಗತಿಕ ಭಾಷೆಯ ಇ–ಪುಸ್ತಕವನ್ನು ಆ್ಯಪ್‌ನಲ್ಲಿ ಅಪ್ಲೋಡ್ ಮಾಡಿ ಪರಿಪೂರ್ಣಗೊಂಡ ನೂತನ ಆ್ಯಪ್‌ನ್ನು ಜಾಗತಿಕ ಮಟ್ಟದಲ್ಲಿ ಲೋಕಾರ್ಪಣೆಗೊಳಿಸುವ ಯೋಜನೆಯುನ್ನು ಕಾಶಿ ಜಗದ್ಗುರುಗಳು ಹಮ್ಮಿಕೊಂಡಿದ್ದು, 2020ರಲ್ಲಿ ಕಾಶಿಯಲ್ಲಿ ಹಮ್ಮಿಕೊಂಡಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ದೇಶದ ಪ್ರಧಾನಿಯಿಂದ ಲೋಕಾರ್ಪಣೆಗೊಳಿಸಲು ತೀರ್ಮಾನಿಸಲಾಗಿದೆ.

ಬೆಂಗಳೂರಿನ ಶೈವಶಾಪ್ ಅಕಾಡೆಮಿಯ ಬಿ.ಟಿ.ವಿರೇಶ್ ಮಾರ್ಗದರ್ಶನದಲ್ಲಿ ಗೋಲ್ಸಾರ್ ಇಂಡಿಯಾ ಟೆಕ್ನಾಲಜಿಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಈ ಆ್ಯಪ್ ವಿನ್ಯಾಸಗೊಳಿಸಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನವ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿ:

ಜಗತ್ತಿನ ಸಮಸ್ತ ಮನುಕುಲವನ್ನುದ್ದೇಶಿಸಿ ಅಗಸ್ತ್ಯರನ್ನು ನಿಮಿತ್ತ ಮಾಡಿಕೊಂಡು ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಶಿವಾದ್ವೈತ ಸಿದ್ಧಾಂತದ ಸಾರವಾಗಿರುವ, ವೀರಶೈವಾಚಾರ ಕುರಿತ ಪ್ರಾಚೀನ ಗ್ರಂಥ ಶ್ರೀಸಿದ್ಧಾಂತ ಶಿಖಾಮಣಿ. ಆತ್ಮವಿಕಾಸದ ಸೋಪಾನಗಳಾದ ಪಿಂಡಸ್ಥಲದಿಂದ ಹಿಡಿದು ಜ್ಞಾನ ಶೂನ್ಯಸ್ಥಲದವರೆಗೆ ಒಟ್ಟು 101 ಸ್ಥಲಗಳಿದ್ದು, ವೀರಶೈವ ತತ್ವತ್ರಯಗಳಾದ ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳನ್ನು ಶಾಸ್ತ್ರೀಯವಾಗಿ ಈ ಕೃತಿಯಲ್ಲಿ ವಿವರಿಸಲಾಗಿದೆ.

ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ।
ಏತಾನಿ ಮಾನಭೂತಾನಿ ನೋಪಹನ್ಯಾನಿ ಯುಕ್ತಿಭಿಃ॥

ಸಾಮಾನ್ಯವಾಗಿ ಸಿದ್ಧಾಂತ ಪ್ರತಿಪಾದಕರು ತಮ್ಮ ಸಿದ್ಧಾಂತವನ್ನು ಮಂಡಿಸುವಲ್ಲಿ ಇತರೆ ಸಿದ್ಧಾಂತಗಳನ್ನು ಖಂಡಿಸುವ ಉದಾಹರಣೆಗಳಿವೆ. ಆದರೆ ಶ್ರೀಸಿದ್ಧಾಂತ ಶಿಖಾಮಣಿಯಲ್ಲಿ ಬೇರೆ ಯಾವುದೇ ಸಿದ್ಧಾಂತದ ಬಗ್ಗೆ ಎಲ್ಲಿಯೂ ಲಘುವಾಗಿ ಪ್ರಸ್ತಾಪಿಸುವುದಿಲ್ಲ. ಬದಲಾಗಿ ಯಾವುದೇ ವ್ಯಕ್ತಿಯ ಸಾಧನೆಯ ವಿವಿಧ ಅವಸ್ಥೆಯಲ್ಲಿ ಎಲ್ಲ ಸಿದ್ಧಾಂತಗಳು ಪ್ರಸ್ತುತವೆಂದು ಗ್ರಂಥದಲ್ಲೇ ತಿಳಿಸಿದ್ದಾರೆ.

ಕಾಮಿಕಾದಿ ವಾತುಲಾಂತವರೆಗಿನ 28 ಶಿವಾಗಮಗಳ ಸಾರ, ಶ್ರೀಸಿದ್ಧಾಂತ ಶಿಖಾಮಣಿಯಲ್ಲಿ ವಿಸ್ತೃತಗೊಂಡಿದೆ. ಶಿವತತ್ವದ ಸಾರವು ಉಪದೇಶದ ರೂಪದಲ್ಲಿ ರೇಣುಕಾಚಾರ್ಯರಿಂದ ಅಗಸ್ತ್ಯರಿಗೆ ಬೋಧಿಸಲ್ಪಟ್ಟು, ಶಿವಯೋಗಿ ಶಿವಾಚಾರ್ಯರಿಂದ ರಚಿಸಲ್ಪಟ್ಟ ಮಹಾನ್ ಕೃತಿ ಶ್ರೀಸಿದ್ಧಾಂತ ಶಿಖಾಮಣಿ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಂಭಮೇಳದ ಕನ್ನಡ ಕೊಂಡಿ
ಗಂಗಾ ತೀರದಲ್ಲಿ ಜಂಗಮವಾಡಿ ಮಠ

ದಿನಾಂಕ : 17–01–2019

ಭಾರತದ ಸುದೀರ್ಘ ಸಾಂಸ್ಕೃತಿಕ ಇತಿಹಾಸ ಮತ್ತು ಪರಂಪರೆಯಲ್ಲಿ ಕುಂಭಮೇಳವು ಅತ್ಯಂತ ಬೃಹತ್ ಧಾರ್ಮಿಕ ಕಾರ್ಯಕ್ರಮ. ದೇಶದ ನಾಲ್ಕು ಕಡೆಗಳಲ್ಲಿ ಎರಡು ತಿಂಗಳ ಕಾಲ ನಡೆಯುವ ಈ ಧರ್ಮ ಸಂಗಮದಲ್ಲಿ ದೇಶ–ವಿದೇಶದ ಕೋಟ್ಯಾಂತರ ಜನರು ಪಾಲ್ಗೊಳ್ಳುತ್ತಾರೆ.

ದೇಶದ ನಾಲ್ಕು ಕುಂಭಮೇಳಗಳಲ್ಲಿ ಅಲಹಾಬಾದಿನ ಪ್ರಯಾಗ್ ರಾಜ್‌ನಲ್ಲಿ ನಡೆಯುವ ಕುಂಭಮೇಳ ಅತ್ಯಂತ ಪ್ರಸಿದ್ಧವಾಗಿದ್ದು, ಈ ಕುಂಭಮೇಳಕ್ಕೂ ಕನ್ನಡ ನಾಡಿಗೂ ಒಂದು ಧಾರ್ಮಿಕ ಸಂಬಂಧವಿದೆ. ಗಂಗಾ, ಯಮುನಾ ಹಾಗೂ ಸರಸ್ವತಿ ನದಿಗಳ ಸಂಗಮ ಕ್ಷೇತ್ರದಲ್ಲಿ ಕಾಶೀ ಪೀಠದ ಜಂಗಮವಾಡಿ ಪ್ರಾಚೀನ ಮಠವಿದ್ದು ಇದು ಕನ್ನಡ ನಾಡಿನಿಂದ ಹೋಗುವ ಭಕ್ತರಿಗೆ ಭವ್ಯ ಸ್ವಾಗತವನ್ನು ನೀಡುತ್ತಿದೆ.

ಸಂಗಮ ಕ್ಷೇತ್ರದಲ್ಲಿ ವರ್ಷಪೂರ್ತಿ ಭಕ್ತರು ಪುಣ್ಯಸ್ನಾನ ಮಾಡುತ್ತಾರೆ. ಹಾಗೆ ಪುಣ್ಯಸ್ನಾನಕ್ಕಾಗಿ ದಕ್ಷಿಣ ಭಾರತದಿಂದ ಆಗಮಿಸುವ ಯಾತ್ರಾತ್ರಿಗಳಿಗೆ ಇಲ್ಲಿ ವಸತಿ, ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಅದೇ ರೀತಿ ಬೃಹತ್ ಮಟ್ಟದಲ್ಲಿ ನಡೆಯುವ ಕುಂಭಮೇಳದ ಸಂದರ್ಭದಲ್ಲಿ ಏಕ ಕಾಲಕ್ಕೆ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ಭಕ್ತರಿಗೆ ಊಟ–ವಸತಿ ಇತ್ಯಾದಿ ಸೌಕರ್ಯಗಳ ಅವ್ಯವಸ್ಥೆಯುಂಟಾಗಿ ಭಕ್ತರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಶ್ರೀಮಠದಲ್ಲಿ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ.

ದಕ್ಷಿಣದಲ್ಲಿ ಪ್ರಭಲವಾಗಿರುವ ವೀರಶೈವ ಧರ್ಮ ಸಂಸ್ಕೃತಿಯನ್ನು ಉತ್ತರದಲ್ಲಿ ಪ್ರಸಾರ ಮಾಡಿದ ಕೀರ್ತಿ ಶ್ರೀಮದ್ ಕಾಶಿ ಜ್ಞಾನಸಿಂಹಾಸನ ಮಹಾಪೀಠಕ್ಕಿದೆ. ವಾರಣಾಸಿಯಯಲ್ಲಿರುವ ಜಂಗಮವಾಡಿಮಠದಲ್ಲಿ ಅತ್ಯಂತ ಪ್ರಾಚೀನ ಶಾಸನಗಳು ಲಭ್ಯವಿದ್ದು, ನೆರೆಯ ನೇಪಾಳದಲ್ಲಿಯೂ ಕೂಡಾ ಜಂಗಮವಾಡಿ ಶಾಖಾ ಮಠವಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಯಾಗ್‌ದ ಕುಂಭಮೇಳ ಪುಣ್ಯಸ್ನಾನ

ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಪೀಠಾಧಿಪತಿಗಳಾದ ನಂತರ ರಾಜಸ್ಥಾನ, ಹರ್ಯಾಣ, ಪಂಜಾಬ್, ಗುಜರಾತ್, ಸೇರಿದಂತೆ ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಿ ವೀರಶೈವ ಪರಂಪರೆ ಹಾಗೂ ಭಾರತೀಯ ಸಂಸ್ಕೃತಿ ಪ್ರಸಾರಕ್ಕೆ ಸಾಕಷ್ಟು ಕಾರ್ಯಗಳನ್ನು ನಡೆಸುತ್ತಿದ್ದಾರೆ. ಆ ಹಿನ್ನಲೆಯಲ್ಲಿ ಅಲಹಾಬಾದ್ ಪ್ರಯಾಗರಾಜ್‌ನಲ್ಲಿರುವ ಜಂಗಮವಾಡಿ ಶಾಖಾ ಮಠದ ಮೂಲಕ ಧರ್ಮ–ಸಂಸ್ಕೃತಿಯ ಪ್ರಸಾರಕ್ಕೆ ಹಲವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಕುಂಭಮೇಳದಂತಹ ಬೃಹತ್ ಕಾರ್ಯಕ್ರಮಕ್ಕೆ ಶ್ರೀಮಠ ಸಜ್ಜಾಗಿದೆ. ಈಗಾಗಲೇ ಜ.15ರಂದು ಕುಂಭಮೇಳಕ್ಕೆ ಅದ್ಧೂರಿ ಚಾಲನೆ ದೊರೆತಿದ್ದು ಸುಮಾರು ಮೂರು ತಿಂಗಳ ಕಾಲ ನಡೆಯಲಿದೆ.

ಮಾಘ ಪೌರ್ಣಿಮೆಯ ಫೆ.19 ರಿಂದ 21ರವರೆಗೆ ಸ್ವತಃ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಶ್ರೀಶೈಲಜಗದ್ಗುರುಗಳ ಸಾನಿಧ್ಯದಲ್ಲಿ ಕುಂಭ ಮೇಳದಲ್ಲಿ ಪಾಲ್ಗೊಂಡು ಮಂಗಲ ಸ್ನಾನ ಹಾಗೂ ಭಕ್ತರಿಗೆ ದರ್ಶನಾಶೀರ್ವಾದ ನೀಡಲಿದ್ದಾರೆ. ಈ ಸಂದರ್ಭದಲ್ಲಿ ದಕ್ಷಿಣ ಭಾರತದ ಅದರಲ್ಲೂ ವಿಶೇಷವಾಗಿ ಕರ್ನಾಟಕ ಪ್ರಾಂತ್ಯದ ಬಹಳಷ್ಟು ಮಠಾಧೀಶರು, ಭಕ್ತರು ಪಾಲ್ಗೊಳ್ಳಲಿದ್ದಾರೆ.

ಕುಂಭಮೇಳದ ಪೌರಾಣಿಕ ಹಿನ್ನಲೆ:

ಕುಂಭ ವೆಂದರೆ ಕಲಶ, ಮೇಳ ಎಂದರೆ ಜನಸಾಗರ ಎಂದರ್ಥ. ಸಮುದ್ರ ಮಂಥನದಲ್ಲಿ ಹೊರಬಂದ ಅಮೃತ ಕಲಶವು ರಾಕ್ಷಸರಿಗೆ ದೊರೆಯ ಬಾರದೆಂಬ ಉದ್ದೇಶದಿಂದ ವಿಷ್ಣುವು ಅಮೃತದ ಕಲಶವನ್ನು ಬಹು ದೂರ ತೆಗೆದುಕೊಂಡು ಹೋಗುವಂತೆ ಗರುಡನಿಗೆ ಆದೇಶ ಮಾಡುತ್ತಾನೆ. ಆಗ ಗರುಡನು ಆಕಾಶ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಯಾಗ್ ರಾಜ್‌ನಲ್ಲಿರುವ ಜಂಗಮವಾಡಿ ಮಠ

ಮಾರ್ಗವಾಗಿ ಹೋಗುವಾಗ ಆ ಕಲಶದಲ್ಲಿಯ ಅಮೃತದ ಹನಿಗಳು 4 ಸ್ಥಳಗಳಲ್ಲಿ ಪವಿತ್ರವಾದ ನದಿಗಳಲ್ಲಿ ಬೀಳುತ್ತದೆ. ಹರಿದ್ವಾರದ ಗಂಗೆ, ಉಜ್ಜಯಿನಿಯ ಕ್ಷಿಪ್ರಾನದಿ, ನಾಸಿಕ್‌ನ ಗೋದಾವರಿ ಹಾಗೂ ಅಲಹಾಬಾದ್ ಪ್ರಯಾಗ ತ್ರಿವೇಣಿ ಸಂಗಮದಲ್ಲಿ ಬೀಳುತ್ತವೆ.

ಆ ಅಮೃತದ ಹನಿಗಳು ಬಿದ್ದ ಮುಹೂರ್ತದಲ್ಲಿ ಆ ನದಿಗಳಲ್ಲಿ ಸ್ನಾನ ಮಾಡುವುದರಿಂದ ಅಮೃತ ಪಾನದ ಫಲವೇ ದೊರೆಯುವದೆಂಬ ಉದ್ದೇಶದಿಂದ ನಮ್ಮ ಪ್ರಾಚೀನ ಋಷಿ-ಮುನಿಗಳು ಅಲ್ಲಿ ಸ್ನಾನ ಮಾಡುವ ಪರಂಪರೆಯನ್ನು ಹಾಕಿದ್ದಾರೆ. ಅಂತಹ ಪುಣ್ಯಸ್ನಾನಕ್ಕೆ ಸೇರುವ ಜನಸಾಗರವನ್ನು ಕುಂಭಮೇಳ ಎಂದು ಕರೆಯಲಾಗುತ್ತದೆ.

ಧಾರ್ಮಿಕ ಸಂಗಮ ಪ್ರಯಾಗರಾಜ್:

ಪ್ರಯಾಗವೆಂದರೆ ಎರಡು ನದಿಗಳು ಸೇರುವ ಸಂಗಮ ಎಂದರ್ಥ. ನಮ್ಮ ದೇಶದಲ್ಲಿ ಇಂತಹ ಅನೇಕ ಪ್ರಯಾಗಗಳಿವೆ. ಆ ಎಲ್ಲ ಪ್ರಯಾಗಗಳಿಗಿಂತಲೂ ಗಂಗಾ ಯಮುನಾ ಸರಸ್ವತಿ ನದಿಗಳ ಸಂಗಮ ಅತ್ಯಂತ ಪವಿತ್ರ ಮತ್ತು ವಿಶೇಷವಾಗಿದ್ದು, ಆ ಕಾರಣಕ್ಕಾಗಿ ಪ್ರಯಾಗಗಳ ರಾಜ ಎನ್ನುವ ಹಿನ್ನಲೆಯಲ್ಲಿ ಪ್ರಯಾಗರಾಜ್ ಎಂದು ಕರೆಯುತ್ತಾರೆ. ಈ ಬಾರಿ ಕುಂಭಮೇಳದ ಮಹತ್ವವನ್ನು ಹೆಚ್ಚಿಸುವುದಕ್ಕಾಗಿ ಅಲಹಾಬಾದಿನ ಹೆಸರನ್ನು ಸರ್ಕಾರ ಪ್ರಯಾಗರಾಜ್ ಎಂದು ಮರುನಾಮಕರಣ ಮಾಡಿದೆ.

ಜಾತಿ, ಜನಾಂಗ, ಧರ್ಮ, ಭಾಷೆ, ಪ್ರದೇಶದ ಭಿನ್ನತೆಯಿಂದ ಪ್ರತ್ಯೇಕಗೊಂಡಿರುವ ಭಾರತೀಯರು ಕುಂಭಮೇಳದ ನೆಪದಲ್ಲಿ ಒಂದೇ ಉದ್ದೇಶಕ್ಕಾಗಿ ಒಂದೇ ಸ್ಥಳದಲ್ಲಿ ಲಕ್ಷಾಂತರ ಜನರು ಸಂಗಮಗೊಂಡು ಜಾಗತಿಕ ಸಮನ್ವಯ ಸಂದೇಶವನ್ನು ಸಾರುವ ಮೂಲಕ ಪ್ರಯಾಗರಾಜ್ ಕ್ಷೇತ್ರವನ್ನು ಧರ್ಮ ಸಂಗಮವಾಗಿಸಲಿದ್ದಾರೆ.

ಕುಂಭ ಪರ್ವಕಾಲದಲ್ಲಿ ಪ್ರಯಾಗದ ಸಂಗಮಸ್ಥಾನದಲ್ಲಿ ಭಕ್ತಿಯಿಂದ ಸ್ನಾನ ಮಾಡುವುದರಿಂದ ಜೀವಾತ್ಮನು ತನ್ನ ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ ಎಂಬ ಧಾರ್ಮಿಕ ನಂಬಿಕೆಯಿದ್ದು ಆ ಕಾರಣದಿಂದಲೇ ದೇಶ ವಿದೇಶಗಳಿಂದ ಕೋಟ್ಯಾಂತರ ಆಸ್ತಿಕರು ಪ್ರಯಾಗಕ್ಕೆ ಆಗಮಿಸುತ್ತಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾಸೋಹ ದೊರೆಯ ಜಾತ್ರೆ

ಕಲ್ಯಾಣ ಕರ್ನಾಟಕದ ಕೀರ್ತಿಕಲಶ ಶರಣಬಸವೇಶ್ವರರ ತೇರು

ದಿನಾಂಕ : 01-03-2018

'ದಾಸೋಹ' ಶರಣರು ಜಗತ್ತಿಗೆ ಕೊಟ್ಟ ಅಪರೂಪದ ಪರಿಕಲ್ಪನೆ. ದಾಸೋಹ ತತ್ವದಲ್ಲಿ ಧಾರ್ಮಿಕ ಧನ್ಯತೆಯೂ ಇದೆ, ಸಾಮಾಜಿಕ ಸಾರ್ಥಕತೆಯೂ ಇದೆ. ಜೊತೆಗೆ ಶೈಕ್ಷಣಿಕ ಸಾಧನೆಗೂ ದಾಸೋಹವೇ ದಾರಿದೀಪ. ಇಂತಹ ದಾಸೋಹ ತತ್ವವನ್ನು ಇರಿಸಿಕೊಂಡು ದೇಶಾದ್ಯಂತ ಪೂಜ್ಯ ಸ್ಥಾನ ಪಡೆದ ಮಹಾ ಶರಣ ಕಲ್ಬುರ್ಗಿಯ ಶರಣಬಸವೇಶ್ವರರು.

ಮನುಷ್ಯನಿಗೆ ಏನನ್ನು ಕೊಟ್ಟರೂ ತೃಪ್ತಿ ಸಿಗಲು ಸಾಧ್ಯವಿಲ್ಲ. ಆದರೆ ಅನ್ನ ಮತ್ತು ಜ್ಞಾನದಿಂದ ಮಾತ್ರ ಮನುಷ್ಯನಿಗೆ ತೃಪ್ತಿ ದೊರೆಯಲು ಸಾಧ್ಯ. ಅಂತಹ ಅನ್ನ ದಾಸೋಹಕ್ಕೆ ಇಡೀ ರಾಜ್ಯದಲ್ಲೇ ದೊಡ್ಡ ಮಟ್ಟದಲ್ಲಿ ಅಡಿಪಾಯ ಹಾಕಿದವರು ಶ್ರೀಶರಣಬಸವೇಶ್ವರರು. ಶರಣಬಸವೇಶ್ವರರು ಕೇವಲ ಮನುಷ್ಯರಿಗೆ ಮಾತ್ರವಲ್ಲದೆ ಪಶುಪಕ್ಷಿ ಪ್ರಾಣಿಗಳಿಗೂ ಕೂಡಾ ದಾಸೋಹ ಮಾಡಿದ ಮಹಾ ಶರಣ. ದಾಸೋಹಕ್ಕೆ ಪರ್ಯಾಯವೆಂಬಂತೆ ಕರೆಸಿಕೊಳ್ಳುವ, ಕೋಟ್ಯಾಂತರ ಭಕ್ತರ ಆರಾಧ್ಯದೈವ ಶ್ರೀಶರಣಬಸವೇಶ್ವರರು ಕಲ್ಯಾಣ ಕರ್ನಾಟಕದ ಕೀರ್ತಿಕಲಶವಾಗಿದ್ದಾರೆ. ಶೈಕ್ಷಣಿಕ, ಸಾಮಾಜಿಕ ಕ್ರಾಂತಿಯ ಮಹಾಸಂಸ್ಥಾನದ ಕರ್ತೃ ಶ್ರೀಶರಣ ಬಸವೇಶ್ವರರು.



ಶರಣಬಸವೇಶ್ವರರ ಗದ್ದುಗೆ

ಕೋಟ್ಯಾಂತರ ಭಕ್ತರ ಆರಾಧ್ಯ ದೈವವಾಗಿರುವ ಶರಣಬಸವೇಶ್ವರರು; ಜಾತಿ, ಮತ, ಪಂಥವೆನ್ನದೆ ಸರ್ವರಿಗೂ ಮಹಾದಾಸೋಹವನ್ನು ಮಾಡಿದ ದಾಸೋಹಿ. ಶರಣಬಸವೇಶ್ವರರ ಪ್ರಭಾವ ದೇಶ ವಿದೇಶಗಳಲ್ಲೂ ಹರಡಿದೆ. ದೇಶದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜ್ಯ ಶರಣಬಸಪ್ಪ ಅಪ್ಪ

ಧಾರ್ಮಿಕ ಪರಂಪರೆಯಲ್ಲೇ ಮಹಾತ್ಮರೊಬ್ಬರ 1100 ದೇವಾಲಯುಗಳಿರುವ ಮತ್ತೊಂದು ಉದಾಹರಣೆ ಇಲ್ಲ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮಾತ್ರವಲ್ಲದೆ ದೇಶದ ರಾಜಧಾನಿ ದೆಹಲಿ ಮತ್ತು ಅಮೆರಿಕಾದಲ್ಲೂ ಕೂಡಾ ಶರಣಬಸವೇಶ್ವರರ ದೇವಾಲಯಗಳಿವೆ.

ಮಹಾತ್ಮರ ಇತಿಹಾಸಗಳು ಶಾಶ್ವತವಾಗಿ ಉಳಿಂಯುವುದು ಅವರ ಚರಿತ್ರೆ ಮತ್ತು ಪುರಾಣಗಳಿಂದ. ಶರಣಬಸವೇಶ್ವರರ ಕುರಿತು 13 ಪುರಾಣಗಳು ರಚನೆಗೊಂಡಿದ್ದು, ಕನ್ನಡ, ಮರಾಠಿ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿವೆ. ವರ್ಷಪೂರ್ತಿ ನಾಡಿನ ನೂರಾರು ಕ್ಷೇತ್ರಗಳಲ್ಲಿ ಶರಣಬಸವೇಶ್ವರರ ಪುರಾಣ ಪ್ರವಚನ ನಿತ್ಯ ನಿರಂತರವಾಗಿ ನಡೆಯುತ್ತವೆ.

ಇಂತಹ ದಿವ್ಯ ಕ್ಷೇತ್ರದೊಡೆಯ ಶರಣಬಸವೇಶ್ವರರ ಜಾತ್ರೆಯು ಪ್ರತಿವರ್ಷ ಹೋಳಿ ಹುಣ್ಣಿಮೆಯಿಂದ ಆರಂಭವಾಗಿ 15 ದಿನಗಳ ಕಾಲ ಅದ್ದೂರಿಯಾಗಿ ನಡೆಯುತ್ತದೆ. ಇದೇ ಫೆ.2 ರಿಂದ ಜಾತ್ರೆ ಆರಂಭವಾಗಲಿದ್ದು, ಫೆ.5ರಂದು ಗುರುಗಳ ಉಚ್ಚಾಯ ಉತ್ಸವ ನಡೆಯಲಿದೆ. ಫೆ.6ರ ರಂಗಪಂಚಮಿಯಂದು ಶರಣಬಸವೇಶ್ವರರ ಮಹಾ ರಥೋತ್ಸವ ನಡೆಯಲಿದೆ. ರಾಜ್ಯ ಮತ್ತು ಹೊರರಾಜ್ಯಗಳಿಂದ ಲಕ್ಷಾಂತರ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ತಮ್ಮ ಭಕ್ತಿ ಮೆರೆಯುತ್ತಾರೆ.

ಶರಣಬಸವೇಶ್ವರರ ಪರಂಪರೆ:

1746ರಲ್ಲಿ ಜೇವರ್ಗಿ ತಾಲೂಕಿನ ಅರಳಗುಂಡಿ ಎಂಬ ಗ್ರಾಮದಲ್ಲಿ ಜನಿಸಿದ ಶರಣಬಸವೇಶ್ವರರು ಶರಣತತ್ವವನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಾರೆ. ದಾಸೋಹ ತತ್ವಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದ ಶರಣಬಸವೇಶ್ವರರು ಕೇವಲ ಮನುಷ್ಯ ಮಾತ್ರರಲ್ಲದೇ ಪಶು ಪಕ್ಷಿ ಪ್ರಾಣಿಗಳಿಗೂ ದಾಸೋಹವನ್ನು ನೀಡುವ ಮೂಲಕ ದಯವಿರಬೇಕು ಸಕಲ ಜೀವಾತ್ಮರಲ್ಲಿ ಎಂಬ ಶರಣವಾಣಿಯನ್ನು ಸಾಕಾರಗೊಳಿಸಿದ್ದರು.

ತಮ್ಮ ಜಮೀನಿನಲ್ಲಿ ಬೆಳೆದ ಬೆಳಗಳನ್ನು ತಿನ್ನಲು ಬರುತ್ತಿದ್ದ ಪಕ್ಷಿಗಳಿಗೆ ಕುಡಿಯಲು ನೀರಿನ ವ್ಯವಸ್ಥೆಯನ್ನು ಮಾಡುವ ಮೂಲಕ ಹಕ್ಕಿ ರೂಪದಲ್ಲಿ ಹರನೇ ಬಂದಿದ್ದಾನೆಂದು ಹೇಳುತ್ತಾರೆ. 'ಹಕ್ಕಿ ಬಂದಾವ ಹಾರಿ, ತೆನೆಯ ತಿಂದಾವ ಹೀರಿ' ಎಂದು ಜನಪದ ಸಾಹಿತ್ಯದಲ್ಲಿ ಶರಣಬಸವೇಶ್ವರರು ಪಕ್ಷಿಗಳಿಗೆ ದಾಸೋಹ ಮಾಡಿಸಿದ ಪರಿಯನ್ನು ಚಿತ್ರಿಸಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ಶರಣತತ್ವವನ್ನು ಪ್ರಚಾರ ಮಾಡುತ್ತ ಬಂದ ಶರಣಬಸವೇಶ್ವರರು ಕಲಬುರಗಿಯಲ್ಲಿ 11-3-1822ರಲ್ಲಿ ಲಿಂಗೈಕ್ಯರಾಗುತ್ತಾರೆ. ಆ ದಿನದಂದೇ ಪ್ರತಿವರ್ಷ ಮಹಾರಥೋತ್ಸವ ನಡೆಸಲಾಗುತ್ತಿದೆ. ಅವರ ಲಿಂಗೈಕ್ಯ ಗದ್ದುಗೆಯೇ ಇಂದು ಕೋಟ್ಯಾಂತರ ಭಕ್ತರ ಆರಾಧ್ಯ ಕ್ಷೇತ್ರವಾಗಿರುವ ಕಲಬುರಗಿ ಶರಣಬಸವೇಶ್ವರ ದೇವಾಲಯ. ಕರ್ತೃ ಗದ್ದುಗೆಯ ಮೇಲಿರುವ ಜೋಡಿ ವಿಗ್ರಹಗಳು ಗುರು ಶಿಷ್ಯರ ಅವಿನಾಭಾವ ಸಂಬಂಧದ ಪ್ರತೀಕವಾಗಿದೆ.



ಶರಣ ಬಸವೇಶ್ವರ ಜಾತ್ರೆ

ಶರಣಬಸವೇಶ್ವರರ ನೆಚ್ಚಿನ ಶಿಷ್ಯರಾದ ಶ್ರೀದೊಡ್ಡಪ್ಪ ಶರಣರು ದಾಸೋಹ ಪರಂಪರೆ ಮತ್ತು ಶರಣಬಸವೇಶ್ವರರ ತತ್ವವನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ದಾಸೋಹ ಪರಂಪರೆಯ 7ನೇ ಪೀಠಾಧಿಪತಿಗಳಾದ ಪೂಜ್ಯ ದೊಡ್ಡಪ್ಪ ಅಪ್ಪ ಅವರ ಕಾಲದಲ್ಲಿ ಶರಣಬಸವೇಶ್ವರರ ತತ್ವಚಿಂತನೆಗೆ ಹೊಸ ರೂಪ ದೊರೆಯುತ್ತದೆ. ನಿಜಾಮರ ಆಡಳಿತ ಪ್ರದೇಶದಲ್ಲಿದ್ದ ಉರ್ದು ಪ್ರಭಾವದ ನಡುವೆಯೂ ಹೆಣ್ಣುಮಕ್ಕಳಿಗಾಗಿ 1934ರಲ್ಲಿ ಮಹಾದೇವಿ ಕನ್ಯಾ ಶಾಲೆಯನ್ನು ತೆರೆಯುವ ಮೂಲಕ ಶಿಕ್ಷಣ ಕ್ರಾಂತಿಗೆ ಮುನ್ನುಡಿ ಬರೆಯುತ್ತಾರೆ. ಸದ್ಯ ಇರುವ ಪೂಜ್ಯ ಶರಣಬಸಪ್ಪ ಅಪ್ಪ ಅವರು 8ನೇ ಪೀಠಾಧಿಪತಿಗಳಾಗಿದ್ದಾರೆ.

ಶರಣಭೂಮಿಯಲ್ಲಿ ಶಿಕ್ಷಣ ಕ್ರಾಂತಿ:

ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದ ಕಲಬುರಗಿ ಪ್ರದೇಶದಲ್ಲಿ ಜ್ಞಾನಾಮೃತದಂತೆ ಸ್ಥಾಪನೆಗೊಂಡ ಶರಣಬಸವೇಶ್ವರ ವಿದ್ಯಾವರ್ಧಕ ಸಂಘವು ಹೈದ್ರಾಬಾದ್ ಕರ್ನಾಟಕದ ಜ್ಞಾನ ದಾಹವನ್ನು ತಣಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದೆ. ಸಂಸ್ಥಾನದ 5ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಅವರು 1903 ರಲ್ಲಿ ಸ್ಥಾಪಿಸಿದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಸೇವೆ ಅಪಾರ.

ಸದ್ಯದ ಪೀಠಾಧಿಪತಿ ಡಾ.ಶರಣಬಸಪ್ಪ ಅಪ್ಪರವರು ಸಂಸ್ಥೆಯ ಅಧ್ಯಕ್ಷರಾದ ನಂತರ ಕಲಬುರಗಿಯನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸಬೇಕೆಂದು ಪಣತೊಟ್ಟು ನಿರಂತರವಾಗಿ ಶ್ರಮಿಸಿದ ಫಲವಾಗಿ ಇಂದು ಶರಣಬಸವೇಶ್ವರ ಸಂಸ್ಥೆಯು ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲಬುರಗಿ ಶರಣ ಬಸವೇಶ್ವರ ದೇವಸ್ಥಾನ

ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಗಳ ಹಲವು ಕಡೆಗಳಲ್ಲಿ ಸುಮಾರು 85 ಶಿಕ್ಷಣ ಸಂಸ್ಥೆಗಳು ಕೆಲಸ ನಿರ್ವಹಿಸುತ್ತಿವೆ. ಮಹಿಳೆಯರ ಶಿಕ್ಷಣಕ್ಕೆ ಆದ್ಯತೆ ನೀಡಿದ ಅಪ್ಪ ಅವರು ಮಹಿಳಾ ಇಂಜಿನಿಯರಿಂಗ್ ಕಾಲೇಜು ತೆರೆದು ಹೊಸ ದಾಖಲೆಯನ್ನು ಸೃಷ್ಟಿಸಿದ್ದಾರೆ. ಶಿಕ್ಷಣವನ್ನು ಸಹ ದಾಸೋಹ ಎಂದು ಪರಿಭಾವಿಸಿರುವ ಅಪ್ಪಾಜಿಯವರು ಅತ್ಯಂತ ಕಡಿಮೆ ಶುಲ್ಕವನ್ನು ಪಡೆದು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದಾರೆ. ಕಡುಬಡವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡುವ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಬಾಳಿಗೆ ಬೆಳಕು ನೀಡಿದ್ದಾರೆ.

ಶಿಕ್ಷಣದ ಜೊತೆಗೆ ದಾಸೋಹ, ಶರಣತತ್ವದ ಪ್ರಚಾರಕ್ಕಾಗಿ ವಿನೂತನ ಯತ್ನಗಳನ್ನು ಮಾಡುತ್ತಾ ಬಂದಿರುವ ಶರಣಬಸಪ್ಪ ಅಪ್ಪ ಅವರ ಸಾಹಿತ್ಯಿಕ ಕೊಡುಗೆ ಕೂಡಾ ಪ್ರಮುಖವಾಗಿದೆ. ಜಗತ್ತಿನ ಮೊಟ್ಟ ಮೊದಲ ಸಂಸತ್ತು ಎಂಬ ಹೆಗ್ಗಳಿಕೆ ಹೊಂದಿರುವ ಅನುಭವ ಮಂಟಪದ ಸೂತ್ರದಾರ ಭಕ್ತಿಭಂಡಾರಿ ಬಸವಣ್ಣನವರ ವಿಗ್ರಹವನ್ನು 2003ರಲ್ಲಿ ಭಾರತದ ಸಂಸತ್ ಭವನದ ಮುಂಭಾಗದಲ್ಲಿ ಸ್ಥಾಪಿಸಲು ಪ್ರಮುಖ ಕಾರಣೀಕರ್ತರು ಪೂಜ್ಯ ಅಪ್ಪ ಅವರು. ವಿಗ್ರಹ ನಿರ್ಮಾಣಕ್ಕೆ ತಗುಲಿದ 20ಲಕ್ಷ ರೂಪಾಯಿ ಸಂಪೂರ್ಣ ವೆಚ್ಚವನ್ನು ಶರಣಬಸವೇಶ್ವರ ಸಂಸ್ಥಾನ ಭರಿಸಿದ್ದು ಗಮನಾರ್ಹ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಹ್ಯಾದ್ರಿ ನಾಡಲ್ಲಿ ಶಿವರಾತ್ರೀಶ್ವರ ಜಯಂತಿ

ದಿನಾಂಕ : 03-01-2019

ಆಚಾರ್ಯರು, ಸಂತ-ಮಹಾಂತರು, ಶರಣರು ಅವತಾರವೆತ್ತಿ ಸಹಸ್ರಾರು ವರ್ಷಗಳೇ ಕಳೆದಿದ್ದರೂ ಅವರ ಸ್ಮರಣೆ ಮಾತ್ರ ನಿತ್ಯ ಪ್ರಸ್ತುತ. ಆ ನಿಟ್ಟಿನಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಸಂಸ್ಥಾಪಕರಾದ ಜಗದ್ಗುರು ಶಿವರಾತ್ರೀಶ್ವರರ ಜಯಂತಿ; ನಾಡಿನ ಸಾಂಸ್ಕೃತಿಕ ಉತ್ಥಾನಕ್ಕೆ ಪೂರಕವಾದ ಮಹೋನ್ನತ ಉತ್ಸವ.

ಮಹಾಪುರುಷರ ಪುಣ್ಯಸ್ಮರಣೆಗಳೆಂದರೆ ಧಾರ್ಮಿಕ, ಐತಿಹಾಸಿಕ, ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿಹಿಡಿಯುವ ಬಹುದೊಡ್ಡ ಕಾರ್ಯಕ್ರಮ. ಶ್ರೀಜಗದ್ಗುರು ಶಿವರಾತ್ರೀಶ್ವರರ ಚರಿತ್ರೆಯೂ ಕೂಡಾ ಬಹು ಆಯಾಮಗಳಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ.

ಪ್ರತಿ ಮಾರ್ಗಶಿರ ಮಾಸದ ಮಾಸಶಿವರಾತ್ರಿಯಿಂದ ಒಂದು ವಾರಗಳ ಕಾಲ ನಡೆಯುವ ಶಿವರಾತ್ರೀಶ್ವರರ ಜಯಂತಿ ಆಚರಣೆಗೆ ಸಕಲ ಸಿದ್ಧತೆಗಳಾಗಿವೆ. ಈ ಹಿಂದೆ ಕೇವಲ ಸುತ್ತೂರಿನಲ್ಲಿ ನಡೆಯುತ್ತಿದ್ದ ಜಯಂತಿ ಕಾರ್ಯಕ್ರಮವು ಭಕ್ತರ ಒತ್ತಾಸೆಯಂತೆ ನಾಡಿನ ವಿವಿಧ ಪ್ರಾಂತಗಳಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ. ಅಂತೆಯೇ 1059ನೇ ಜಯಂತಿ ಮಹೋತ್ಸವವು ಸಹ್ಯಾದ್ರಿ ನಾಡು ಶಿವಮೊಗ್ಗ ನಗರದಲ್ಲಿ ನಡೆಯುತ್ತಿರುವುದು ಈ ವರ್ಷದ ವಿಶೇಷ. ಆನಂದಪುರ ಮುರುಘಾಮಠದ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳ ಗೌರವಾಧ್ಯಕ್ಷತೆ ಹಾಗೂ ಸುತ್ತೂರು ಜಗದ್ಗುರು ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಜ.4ರಿಂದ 10ರವರೆಗೆ ಒಂದು ವಾರಗಳ ಕಾಲ ನಡೆಯಲಿದೆ.



ಸುತ್ತೂರು ಶಿವರಾತ್ರೀಶ್ವರ ಗದ್ದುಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಂಸ್ಕೃತಿಕ ಹಿರಿಮೆಯ ಅನಾವರಣ:

ಜ.4ರಿಂದ ನಡೆಯುವ ಜಯಂತಿ ಮಹೋತ್ಸವವನ್ನು ನೆಪವಾಗಿಟ್ಟುಕೊಂಡು ಬೃಹತ್ ಸಾಂಸ್ಕೃತಿಕ ಉತ್ಸವವನ್ನು ಆಚರಿಸಲು ಸಮಿತಿಯು ಈಗಾಗಲೇ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಹಳೇ ಜಿಲ್ಲಾ ಕಾರಾಗೃಹದ ಆವರಣದಲ್ಲಿ ಸ್ಥಾಪಿಸಿದ ಜಗಜ್ಯೋತಿ ಬಸವೇಶ್ವರ ಅನುಭವ ಮಂಟಪದ ಮುಖ್ಯ ವೇದಿಕೆಯ ಜೊತೆಗೆ ಶುಭಮಂಗಳ ಸಮುದಾಯ ಭವನದಲ್ಲಿ ಮತ್ತೊಂದು ಸಮಾನಂತರ ವೇದಿಕೆಯನ್ನು ನಿರ್ಮಿಸಲಾಗಿದೆ. ಎರಡೂ ವೇದಿಕೆಯಲ್ಲಿ ನಿರಂತರ ವಿಚಾರಗೋಷ್ಠಿಗಳು ನಡೆಯಲಿದ್ದು, ನಾಡಿನ ಹಲವಾರು ಸ್ವಾಮೀಜಿಗಳು, ವಿದ್ವಾಂಸರು, ಸಾಹಿತಿಗಳು, ರಾಜಕೀಯ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ವಿಶೇಷವಾಗಿ ಜ.5ರಿಂದ 10ರವರೆಗೆ ಬೆಳಗ್ಗೆ ಪ್ರಧಾನ ವೇದಿಕೆಯಲ್ಲಿ ವಿಶ್ವಪ್ರಸಿದ್ಧ ನಿರಾಭಾರಿ ಚರಮೂರ್ತಿಗಳಾದ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀಸಿದ್ದೇಶ್ವರ ಮಹಾಸ್ವಾಮಿಗಳ ಆಧ್ಯಾತ್ಮಿಕ ಪ್ರವಚನ ನಡೆಯಲಿದೆ. ನಿತ್ಯ ವಿವಿಧ ವಿಷಯಗಳ ಕುರಿತು ವಿವಿಧ ವಿದ್ವಾಂಸರು ಪ್ರಬಂಧ ಮಂಡಿಸಲಿದ್ದಾರೆ. ಒಟ್ಟಾರೆ ಸಾಹಿತ್ಯದ ತವರು, ಸಹ್ಯಾದ್ರಿನಾಡು ಶಿವಮೊಗ್ಗದಲ್ಲಿ ನಡೆಯುವ ಶಿವರಾತ್ರೀಶ್ವರ ಜಯಂತಿ ಮಹೋತ್ಸವದಲ್ಲಿ ಸಾಹಿತ್ಯ, ಸಂಗೀತ, ತತ್ವಚಿಂತನೆ ಹೀಗೆ ನಿರಂತರ ಜ್ಞಾನ ಪ್ರಸಾರದ ವಿವಿಧ ಕಾರ್ಯಕ್ರಮಗಳು ಅನಾವರಣಗೊಳ್ಳಲಿವೆ.

ಸುತ್ತೂರು ಶಿವರಾತ್ರೀಶ್ವರ ಪರಂಪರೆ:

10ನೇ ಶತಮಾನದಲ್ಲಿ ಚೋಳದೊರೆ ರಾಜೇಂದ್ರ ಚೋಳನು ಗಂಗರ ಮೇಲೆ ಯುದ್ಧ ಸಾರಲು ಆಗಮಿಸುತ್ತಿದ್ದಾಗ; ಕಪಿಲಾನದಿ ದಂಡೆಯ ಮೇಲೆ ಅನುಷ್ಠಾನ ಮಾಡುತ್ತಿದ್ದ ಶಿವರಾತ್ರಿ ಸ್ವಾಮಿಗಳ ದರ್ಶನವಾಗುತ್ತದೆ. ಶ್ರೀಗಳು ಕುಳಿತಿದ್ದ ಮಂಟಪವು ಗಿಡಗೆಂಟೆಗಳಿಂದ ಮುಚ್ಚಿಕೊಂಡಿದ್ದು, ರಾಜನ ಕುದುರೆಯು ಆ ಮಂಟಪವನ್ನು ಸುತ್ತುತ್ತಿರುತ್ತದೆ. ಆದ್ದರಿಂದಲೇ ಈ ಊರಿಗೆ ಸುತ್ತೂರು ಎಂಬ ಹೆಸರು ಬಂದಿದೆ ಎಂಬ ಪ್ರತೀತಿ ಇದೆ. ರಾಜೇಂದ್ರ ಚೋಳನು ಸ್ವಾಮಿಗಳನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡು ತನ್ನ ವೃತ್ತಾಂತವನ್ನು ತಿಳಿಸಲಾಗಿ; ಶಿವಯೋಗಿಗಳು ತಿಳಿ ಹೇಳಿದ ಶಾಂತಿತತ್ವದ ಮಾತುಗಳಿಂದ ಮನಸ್ಸು ಬದಲಿಸಿ ಯುದ್ಧವನ್ನು ಕೈಬಿಟ್ಟು ಗಂಗರೊಂದಿಗೆ ಸ್ನೇಹ ಸಾಧಿಸುತ್ತಾನೆ.



ಶ್ರೀ ಶಿವರಾತ್ರೀಶ್ವರರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುತ್ತೂರು ಶ್ರೀಗಳು

ಸಂಘರ್ಷವನ್ನು ತಪ್ಪಿಸಿದ ಶ್ರೀಗಳಿಗೆ ಇಲ್ಲಿಯೇ ನೆಲೆಯಾಗಬೇಕೆಂದು ಕೋರಿಕೊಳ್ಳುತ್ತಾನೆ. ಚೋಳರಾಜನ ಅಣತಿಯಂತೆ ಶ್ರೀ ಶಿವರಾತ್ರೀಶ್ವರರು ಕಪಿಲಾ ನದಿ ದಂಡೆಯ ಮೇಲೆ ವೀರಸಿಂಹಾಸನ ಮಠವನ್ನು ಸ್ಥಾಪಿಸುತ್ತಾರೆ. ಮುಂದೆ ಈಶಾನ್ಯೇಶ್ವರನೆಂಬ ಶಿಷ್ಯನಿಗೆ ಉತ್ತರಾಧಿಕಾರವನ್ನು ವಹಿಸಿ ತಾವು ಶಿವಯೋಗದಲ್ಲಿ ಸಂಪನ್ನರಾಗುತ್ತಾರೆ.

ಸುತ್ತೂರು ವೀರಸಿಂಹಾಸನ ಮಠವು10ನೇ ಶತಮಾನದಿಂದಲೂ ವೀರಶೈವ ಪರಂಪರೆಯ ಪ್ರತಿಷ್ಠಿತ ಮಠವಾಗಿ; ಧರ್ಮ–ಸಂಸ್ಕಾರದ ನೆಲೆವೀಡಾಗಿ ಮುಂದುವರೆದುಕೊಂಡು ಬಂದಿದೆ. 12ನೇ ಶತಮಾನದ ಹಲವು ಶರಣರು, ಯಡಿಯೂರು ಸಿದ್ಧಲಿಂಗೇಶ್ವರರು, ಮಲೆಮಹಾದೇಶ್ವರರು ಸುತ್ತೂರಿಗೆ ಭೇಟಿ ನೀಡಿದ ಕುರುಹುಗಳಿವೆ. ಶ್ರೀಮಠದ ಪರಂಪರೆಯಲ್ಲಿ ಇಲ್ಲಿಯವರೆಗೆ 23 ಪೀಠಾಧಿಪತಿಗಳು ಆಗಿ ಹೋಗಿದ್ದಾರೆ. 22ನೇ ಪೀಠಾಧಿಪತಿಗಳಾಗಿದ್ದ ಮಂತ್ರಮಹರ್ಷಿ ಶಿವರಾತ್ರಿ ಸ್ವಾಮಿಗಳಿಂದ ಬಹುದೊಡ್ಡ ಅಧ್ಯಾತ್ಮಿಕ ಶಕ್ತಿ ವೃದ್ಧಿಯಾದರೆ; 23ನೇ ಪೀಠಾಧಿಪತಿ ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸ್ಥಾಪಿಸಿದ ಶಿಕ್ಷಣ ಸಂಸ್ಥೆ ಹೊಸ ಕ್ರಾಂತಿಯನ್ನೇ ಮಾಡಿದೆ. ಸದ್ಯ ಇರುವ 24ನೇ ಪೀಠಾಧಿಪತಿ ಶ್ರೀಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು ಶ್ರೀಮಠದ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಹಿರಿಮೆಯನ್ನು ವಿಶ್ವಮಟ್ಟದಲ್ಲಿ ಪ್ರಖ್ಯಾತಗೊಳಿಸಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಾತಿ ಮೀರಿದ ಜಾತ್ರೆ..!
ಕೊಪ್ಪಳ ಗವಿಸಿದ್ದಜ್ಜನ ಅದ್ದೂರಿ ರಥೋತ್ಸವ

ಜಾತ್ರೆ, ಉತ್ಸವಗಳು ಜಾತಿ ಮತ ಪಂಥಗಳನ್ನು ಮೀರಿ ಸಾಮರಸ್ಯದ ಬದುಕಿಗೆ ಬುನಾದಿ ಹಾಕುತ್ತವೆ. ಅದರಲ್ಲೂ ಕರ್ನಾಟಕದ ಮಟ್ಟಿಗೆ ಹೆಸರಿಸಬಹುದಾದ ಬಹುದೊಡ್ಡ ಜಾತ್ರೆಗಳು ನಾಡಿನ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿರಿಮೆಯ ದ್ಯೋತಕಗಳಾಗಿವೆ. ಅಂತಹ ಹೆಸರಾಂತ ಜಾತ್ರೆಗಳಲ್ಲಿ ಕೊಪ್ಪಳದ ಗವಿಸಿದ್ಧೇಶ್ವರ ಸ್ವಾಮಿಯ ಜಾತ್ರೆಯೂ ಒಂದು.

ರಾಜ್ಯದಲ್ಲೇ ಅತ್ಯಂತ ದೊಡ್ಡ ಜಾತ್ರೆ ಎಂಬ ಹಿರಿಮೆ ಇದಕ್ಕಿದೆ. ಕನಿಷ್ಠ 5 ರಿಂದ 6 ಲಕ್ಷ ಜನ ಸೇರಿ ಮಹಾತಪಸ್ವಿ ಗವಿಸಿದ್ಧೇಶ್ವರನ ತೇರು ಎಳೆಯುತ್ತಾರೆ. ಜನಜಾತ್ರೆ ಎಂಬ ಪದಕ್ಕೆ ಪ್ರತ್ಯಕ್ಷ ದೃಶ್ಯ ಇಲ್ಲಿ ಕಾಣಬಹುದು. ಜಾತಿ-ಧರ್ಮದ ಹೆಸರಲ್ಲಿ ಸಮಾಜ ಒಡೆದು ಛಿದ್ರವಾಗುತ್ತಿರುವ ಇಂದಿನ ದಿನಮಾನಗಳಲ್ಲೂ ಸರ್ವಧರ್ಮದ, ಸರ್ವಜಾತಿ ಜನಾಂಗದವರು ಭೇದ ಭಾವವಿಲ್ಲದೆ ಪಾಲ್ಗೊಂಡು ಆಚರಿಸುವ ಜಾತಿ ಮೀರಿದ ಜಾತ್ರೆ ಎಂಬುದು ಈ ಜಾತ್ರೆಯ ಹೆಗ್ಗಳಿಕೆ.

ಜಾತ್ರೆ ಎಂದರೆ ತೇರು, ಉತ್ಸವ, ಜನಪದ ಕಲೆ, ಸಮಾವೇಶ, ಅಂಗಡಿ ಮುಂಗಟ್ಟುಗಳು ಜನರನ್ನು ಆಕರ್ಷಿಸುತ್ತವೆ. ಇದರ ಜೊತೆಗೆ ಕೊಪ್ಪಳ ಜಾತ್ರೆಯ ಪ್ರಮುಖ ವಿಶೇಷತೆ ದಾಸೋಹ. ಉತ್ತರ ಕರ್ನಾಟಕದ ಸಿದ್ದಗಂಗೆ ಎಂಬ ಖ್ಯಾತಿ ಹೊಂದಿರುವ ಗವಿಮಠದ ಜಾತ್ರೆಯಲ್ಲಿ ಆಗಮಿಸಿದ ಲಕ್ಷಾಂತರ ಜನರಿಗೆ ದಾಸೋಹದ ವ್ಯವಸ್ಥೆ ಕಲ್ಪಿಸಲಾಗುತ್ತದೆ. ದಾಸೋಹಕ್ಕಾಗಿ ತಿಂಗಳುಗಳಿಂದ ಭಕ್ತರು ರಾಶಿ ರಾಶಿ ಕಾಯಿಪಲ್ಯೆ, ಅಕ್ಕಿ, ಬೇಳೆ, ವಿವಿಧ ಧಾನ್ಯಗಳ ಜೊತೆಗೆ ವಾಹನಗಳಲ್ಲಿ ಜೋಳದ ರೊಟ್ಟಿಗಳನ್ನು ತಂದು ಮಠಕ್ಕೆ ಒಪ್ಪಿಸುತ್ತಾರೆ. ಹೀಗೆ ಸಂಗ್ರಹವಾದ ಲಕ್ಷಾಂತರ ರೊಟ್ಟಿಗಳನ್ನು ನೋಡುವುದೇ ಒಂದು ವಿಸ್ಮಯ. ಗುಡ್ಡದಷ್ಟು ದೊಡ್ಡ ಅನ್ನದ ರಾಶಿ, ಲಾಡು ರಾಶಿಯನ್ನು ಇಲ್ಲಿ ಹೊರತು ಪಡಿಸಿ ಮತ್ತೆಲ್ಲೂ ನೋಡಲು ಸಾಧ್ಯವಿಲ್ಲ.

ಕೊಪ್ಪಳ ಗವಿಸಿದ್ಧಪ್ಪ ಗದ್ದುಗೆ

ಮಹಾರಥೋತ್ಸವಕ್ಕೆ ಸುತ್ತಮುತ್ತಲ ಹಳ್ಳಿಗಳಿಂದ ಎತ್ತಿನ ಬಂಡಿ, ಟ್ರ್ಯಾಕ್ಟರ್, ಕಾರು, ಲಾರಿ, ಬಸ್ಸು ಜೊತೆಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾದಯಾತ್ರೆಯ ಮೂಲಕ ಆಗಮಿಸುವ ಲಕ್ಷಾಂತರ ಭಕ್ತರ ಜಯಘೋಷ ಮುಗಿಲು ಮುಟ್ಟುತ್ತದೆ.

ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿಗಳು

ಗುರುವಿನ ಸಮಾಧಿಯಲ್ಲಿ ಐಕ್ಯನಾದ ಶಿಷ್ಯ:

ಜನ್ಮ ನೀಡಿದ ತಂದೆ ತಾಯಿಗಳು ಲೌಕಿಕ ಬದುಕಿನ ದಾರಿಯನ್ನು ತೋರಿದರೆ, ಸದ್ಗುರುವು ಪಾರಮಾರ್ಥಿಕ ಬದುಕಿನ ಮಹತ್ವನ್ನು ತೋರುತ್ತಾರೆ. ಅದರಲ್ಲೂ ವೀರಶೈವ ಮಠ-ಪೀಠಗಳ ಪರಂಪರೆಯಲ್ಲಿ ಉತ್ತರಾಧಿಕಾರಿಗಳಾದವರಿಗೆ ತಮ್ಮ ಹಿರಿಯ ಗುರುಗಳೇ ತಂದೆ, ತಾಯಿ, ಗುರು ಎಲ್ಲವೂ ಆಗಿರುತ್ತಾರೆ. ಆ ಕಾರಣದಿಂದಲೇ ಉತ್ತರಾಧಿಕಾರಿಗಳನ್ನು ಹಿರಿಯ ಗುರುಗಳ ಕರಕಮಲ ಸಂಜಾತ ಎಂದು ಕರೆಯುತ್ತಾರೆ. ಈ ಹಿನ್ನೆಲೆಯಲ್ಲಿ ಕೊಪ್ಪಳದ ಗವಿಸಿದ್ದೇಶ್ವರ ಸ್ವಾಮಿಗಳು ತಮ್ಮ ಗುರುಗಳು ಐಕ್ಯವಾಗಲು ಸಿದ್ಧಪಡಿಸಿಕೊಂಡಿದ್ದ ಸಮಾಧಿಯಲ್ಲಿ ತಾವೇ ಐಕ್ಯರಾಗಿ ಗುರುಭಕ್ತಿ ಮೆರೆದ ಮಹಾ ಯೋಗಿ.

ಗವಿಮಠದ ಪರಂಪರೆಯಲ್ಲಿ 11ನೇ ಪೀಠಾಧಿಪತಿಯಾಗಿದ್ದ ಶ್ರೀಗವಿಸಿದ್ದೇಶ್ವರ ಸ್ವಾಮಿಗಳ ಪೂರ್ವಾಶ್ರಮದ ಹೆಸರು ಗುಡದಯ್ಯ. ಕೊಪ್ಪಳ ಸಮೀಪದಲ್ಲಿರುವ ಮಂಗಳಾಪುರದ ಮಹಾದೇವಯ್ಯ ಮತ್ತು ಗುರುಲಿಂಗಮ್ಮ ದಂಪತಿಗಳ ಪುಣ್ಯ ಸಂಜಾತರಾದ ಗುಡದಯ್ಯ; ಬಾಲ್ಯದಿಂದಲೂ ಸದಾ ಶಿವಯೋಗ, ಧ್ಯಾನ, ಅನುಷ್ಠಾನದಲ್ಲಿರುತ್ತಿದ್ದ ಗವಿಸಿದ್ದೇಶ್ವರರು ಒಮ್ಮೆ; ಮೃತಪಟ್ಟ ಹಸುವನ್ನು ತಮ್ಮ ದಿವ್ಯಶಕ್ತಿಯಿಂದ ಬದುಕಿಸುತ್ತಾರೆ. ಆ ಸುದ್ದಿಯನ್ನು ತಿಳಿದು ಊರ ಗೌಡರು ಪೂಜ್ಯರನ್ನು ತಮ್ಮ ಮನೆಗೆ ಕರೆಸಿ ಪೂಜಿಸುತ್ತಾರೆ. ಸುದ್ದಿ ತಿಳಿದ ಗವಿಮಠದ 10ನೇ ಪೀಠಾಧಿಪತಿ ಶ್ರೀಚನ್ನಬಸವ ಮಹಾಸ್ವಾಮಿಗಳು ಮಠಕ್ಕೆ ಕರೆಯಿಸಿ ಅವರ ಅಧ್ಯಾತ್ಮ ಶಕ್ತಿಯನ್ನು ಅರಿತು ತಮ್ಮ ಉತ್ತರಾಧಿಕಾರಿಯಾಗಿ ಸ್ವೀಕರಿಸಿ ಶ್ರೀ ಗವಿಸಿದ್ದೇಶ್ವರ ಸ್ವಾಮಿಗಳೆಂಬ ಅಭಿನಾಮವನ್ನು ನೀಡುತ್ತಾರೆ.

ಚನ್ನಬಸವ ಮಹಾಸ್ವಾಮಿಗಳು ಅಂತಿಮ ಕಾಲದಲ್ಲಿ ತಮ್ಮ ಎಲ್ಲ ಜವಾಬ್ದಾರಿಯನ್ನು ಶಿಷ್ಯನಿಗೆ ವಹಿಸಿ ತಾವು ಶಿವಯೋಗದಲ್ಲಿ ಲೀನವಾಗಲು ಗವಿಯೊಳಗೆ ಸಮಾಧಿ ಕಟ್ಟಿಸುತ್ತಾರೆ. ಆದರೆ ಗುರುವನ್ನು ತೊರೆದು ಇರಲಾಗದೆ ಸ್ವತಃ ಗವಿಸಿದ್ದೇಶ್ವರ ಸ್ವಾಮಿಗಳು ತಾವೇ ಸಮಾಧಿಯಲ್ಲಿ ಲಿಂಗಪೂಜೆ ಗೈಯುತ್ತ ಲಿಂಗದಲ್ಲೇ ಲೀನವಾಗುತ್ತಾರೆ. ಒಂದು ಅಂದಾಜಿನ ಪ್ರಕಾರ 300 ವರ್ಷಗಳಿಂದ ಗವಿಸಿದ್ದೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಪುಷ್ಯ ಬಹುಳ ಬಿದಿಗೆಯಂದು ರಥೋತ್ಸವ

ಕೊಪ್ಪಳ ಜಾತ್ರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಜಾತ್ರೆಯನ್ನು ನಡೆಸಿಕೊಂಡು ಬರಲಾಗುತ್ತಿದೆ.



ಕೊಪ್ಪಳದ ಗವಿಮಠ

ಗವಿಮಠದ ಇತಿಹಾಸ :

ಮಠ ಪರಂಪರೆಯ ತವರಿನಂತಿರುವ ಕರ್ನಾಟಕದಲ್ಲಿ; ಕೊಪ್ಪಳದ ಗವಿಮಠವು ಸುಮಾರು 10ನೇ ಶತಮಾನದ ಸುಮಾರಿಗೆ ಸ್ಥಾಪನೆಯಾಗಿದೆ ಎಂಬ ಉಲ್ಲೇಖಗಳಿವೆ. ಇತಿಹಾಸಕಾರರಾದ ಎಸ್.ಎಂ.ಕಂಬಾಳಿಮಠ ಅವರು ಹೇಳುವ ಪ್ರಕಾರ ಅಲಭ್ಯ ಶಾಸನವೊಂದರಲ್ಲಿ 1008ರಲ್ಲಿ ಗವಿಮಠದ ಸ್ಥಾಪನೆಯ ಉಲ್ಲೇಖವಿದೆ.

ಉತ್ತರದಿಂದ ಲೋಕ ಸಂಚಾರ ಮಾಡುತ್ತ ಆಗಮಿಸಿದ ಶ್ರೀರುದ್ರಮುನಿ ಶಿವಯೋಗಿಗಳು ಮಠದ ಮೂಲ ಪುರುಷರಾಗಿದ್ದು, ಇಲ್ಲಿಯವರೆಗೆ 18 ಪೀಠಾಧಿಪತಿಗಳು ಪೀಠವನ್ನಲಂಕರಿಸಿದ್ದಾರೆ. ಶ್ರೀಮರಿಶಾಂತವೀರ ಸ್ವಾಮಿಗಳು ಹಾಗೂ ಶ್ರೀಶಿವಶಾಂತವೀರ ಸ್ವಾಮಿಗಳ ತಪೋ ಶಕ್ತಿಯಿಂದ ಮಠದ ಕೀರ್ತಿ ಮತ್ತಷ್ಟು ಉನ್ನತವಾಗಿ ಬೆಳೆದಿದೆ. ಸದ್ಯ ಇರುವ 18ನೇ ಪೀಠಾಧಿಪತಿ ಶ್ರೀಅಭಿನವ ಗವಿಸಿದ್ದೇಶ್ವರ ಸ್ವಾಮಿಗಳು ಅನ್ನ, ಅರಿವು, ಆರೋಗ್ಯ ಮತ್ತು ಶಿಕ್ಷಣವನ್ನು ನೀಡುವ ಮೂಲಕ ಶ್ರೀಮಠವನ್ನು ಸಾಮಾಜಿಕವಾಗಿ ಅಭಿವೃದ್ಧಿಗೊಳಿಸಿದ್ದಾರೆ.

ಸುದೀರ್ಘ ಒಂದು ತಿಂಗಳ ಜಾತ್ರೆ :

ಸುದೀರ್ಘ ಒಂದು ತಿಂಗಳ ಕಾಲ ನಡೆಯುವ ಧಾರ್ಮಿಕ ಜಾತ್ರೆಯನ್ನು ಜನ ಜಾಗೃತಿಗೆ ಬಳಸಿಕೊಳ್ಳುವ ಮೂಲಕ ಶ್ರೀಅಭಿನವ ಗವಿಸಿದ್ದೇಶ್ವರ ಸ್ವಾಮಿಗಳು ತಮ್ಮ ಸಾಮಾಜಿಕ ಕಳಕಳಿಯನ್ನು ಮೆರೆದಿದ್ದಾರೆ. ಪ್ರತಿ ಜಾತ್ರೆಯಲ್ಲಿ ಯಾವುದಾದರೊಂದು ವಿಷಯದ ಮೇಲೆ ಜಾಗೃತಿ ಮೂಡಿಸುವ ಯತ್ನ ನಡೆಯುತ್ತದೆ. ಅಂತೆಯೇ ಈ ವರ್ಷ ವಯೋಭೇದವಿಲ್ಲದೆ ಮಾನಸಿಕ ಒತ್ತಡದಿಂದ ಬಳಲುವವರು ಬದುಕಿನಲ್ಲಿ ನಾನಾ ಸಮಸ್ಯೆಗಳನ್ನು ಅನುಭವಿಸುತ್ತಿದ್ದು, "ಸಶಕ್ತ ಮನ – ಸಂತೃಪ್ತ ಜೀವನ " ಎಂಬ ವಾಕ್ಯದ ಮೂಲಕ ಜಾಗೃತಿ ಮೂಡಿಸಲು ಶ್ರೀಮಠ ಮುಂದಾಗಿದೆ. ಒಂದು ತಿಂಗಳು ನಿರಂತರವಾಗಿ ಜಾತ್ರೆ ನಡೆಯಲಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭದ್ರಕಾಳಿಗೆ ಬಗೆ ಬಗೆಯ ಅಲಂಕಾರ

ಯಡೂರಿನಲ್ಲಿ ನವರಾತ್ರಿ ಶಿವಸಪ್ತಾಹ, ಅಖಂಡ ಶಿವನಾಮಸ್ಮರಣೆ

ದಿನಾಂಕ : 04-10-2018

ಶಿವನೊಂದಿಗೆ ಅವಿನಾಭಾವ ಸಂಬಂಧದಿಂದ ಇರುವ ಶಕ್ತಿಯು ಪ್ರಪಂಚದ ಉತ್ಪತ್ತಿಯಲ್ಲಿ ಶಿವನಷ್ಟೇ ಪ್ರಮುಖ ಪಾತ್ರವನ್ನು ಹೊಂದಿದ್ದಾಳೆ. ಜಗತ್ತಿಗೆ ಶಿವನು ನಿಮಿತ್ತ ಕಾರಣನಾದರೆ; ಶಕ್ತಿಯು ಉಪಾದಾನ ಕಾರಣಳಾಗಿದ್ದು ಅಂತಹ ಶಕ್ತಿಯನ್ನು ಆರಾಧಿಸುವ ಪರ್ವ ಕಾಲವೇ ನವರಾತ್ರಿ. ಜಗತ್ತಿನಲ್ಲಿ ಅಧರ್ಮ ಹೆಚ್ಚಾದಾಗ ಅದನ್ನು ದಮನಗೊಳಿಸಲು ಅವತರಿಸಿದ ವೀರಭದ್ರನ ಕರ್ತೃತ್ವದ ಹಿಂದಿನ ಶಕ್ತಿ ಭದ್ರಕಾಳಿ. ಯಡೂರ ಶ್ರೀವೀರಭದ್ರ ಕ್ಷೇತ್ರದಲ್ಲಿರುವ ಭದ್ರಕಾಳಿ ಮಾತೆಗೆ ನವರಾತ್ರಿಯಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ.

ಯಡೂರಿನ ಶ್ರೀ ಭದ್ರಕಾಳಿ

ಭದ್ರಕಾಳಿ ಮಾತೆಗೆ ಪ್ರತಿನಿತ್ಯ ಬಗೆ ಬಗೆಯ ಅಲಂಕಾರಗಳು ನಡೆಯುತ್ತವೆ. ಒಂಬತ್ತು ದಿನಗಳ ಕಾಲ ನಿತ್ಯ ಒಂದೊಂದು ರೀತಿಯ ಅಲಂಕಾರದಲ್ಲಿ ದೇವಿಯನ್ನು ಅರ್ಚಿಸಲಾಗುತ್ತದೆ. ಹಣ್ಣಿನ ಅಲಂಕಾರ, ಬೆಣ್ಣೆಯ ಅಲಂಕಾರ, ಆಭರಣದ ಅಲಂಕಾರ, ಕವಡೆಯ ಅಲಂಕಾರ, ಹೂವಿನ ಅಲಂಕಾರ, ಬಟ್ಟೆಯ ಅಲಂಕಾರ, ನವಿಲುಗರಿಯ ಅಲಂಕಾರ ಹೀಗೆ ವಿಶೇಷವಾಗಿ ನಡೆಯುವ ಅಲಂಕಾರವನ್ನು ಕಣ್ತುಂಬಿಕೊಳ್ಳುವುದೇ ಭಕ್ತರಿಗೆ ಹಬ್ಬವಾಗಿರುತ್ತದೆ. ಒಂದೊಂದು ಅಲಂಕಾರಕ್ಕೂ ಒಂದೊಂದು ಹಿನ್ನಲೆಯಿದ್ದು, ಕೇವಲ ಭಕ್ತರ ಕಣ್ಮನಗಳನ್ನು ಸೆಳೆಯುವುದು ಮಾತ್ರವಲ್ಲದೆ ಕ್ಷೇತ್ರದಲ್ಲಿ ಪ್ರತಿನಿತ್ಯ ಮುಂಜಾನೆ ಚಂಡಿಕಾ ಹೋಮ ಮತ್ತು ಸಂಜೆ ರುದ್ರಹೋಮಗಳು ನಡೆಯಲಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕವಡೆ ಅಲಂಕಾರದಲ್ಲಿ ಭದ್ರಕಾಳಿ

ಭದ್ರಕಾಳಿ ಎಂದರೆ ವೀರಭದ್ರ ಸ್ವಾಮಿಯ ಅರ್ಧಾಂಗಿ. ಮನುಷ್ಯರಂತೆ ದೇವತೆಗಳ ಸಂಬಂಧ ಗಳಿರುವುದಿಲ್ಲ. ವೀರಭದ್ರ ಸ್ವಾಮಿಯ ಕರ್ತೃತ್ವದ ಹಿಂದಿನ ಶಕ್ತಿಯೇ ಭದ್ರಕಾಳಿ. ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸಗೊಳಿಸಿ ಭುವಿಯಲ್ಲಿ ಶಿವದ್ರೋಹಿಗಳಿಗೆ ತಕ್ಕ ಶಿಕ್ಷೆಯನ್ನು ನೀಡಿದ ವೀರಭದ್ರನಲ್ಲಿ ಕ್ರಮೇಣ ಶಕ್ತಿ ಕ್ಷೀಣಿಸುತ್ತಾ ಹೋಗುತ್ತದೆ. ರುದ್ರಭಯಂಕರನಾಗಿದ್ದ ವೀರಭದ್ರನಿಗೆ ಬ್ರಹ್ಮಹತ್ಯಾ ದೋಷದಿಂದ ಶಕ್ತಿ ಕ್ಷೀಣಗೊಳ್ಳಲು ಆರಂಭವಾದಾಗ ಶಿವನು ವೀರಭದ್ರನಿಗೆ ಶಕ್ತಿತುಂಬುವುದಕ್ಕಾಗಿಯೇ ಭದ್ರಕಾಳಿಯನ್ನು ಸೃಷ್ಟಿಸಿ ಆಕೆಯೊಂದಿಗೆ ವಿವಾಹ ಮಾಡುತ್ತಾನೆ.

ಭದ್ರಕಾಳಿಯನ್ನು ವಿವಾಹವಾದ ನಂತರ ಮತ್ತೆ ವೀರಭದ್ರಸ್ವಾಮಿಯಲ್ಲಿ ಹಿಂದಿನ ಶಕ್ತಿ ಬರುತ್ತದೆ. ನಂತರ ಶಿವನು ನೀನು ಭದ್ರಕಾಳಿ ಸಮೇತನಾಗಿ ಭುವಿಯಲ್ಲಿ ನಲೆನಿಂತು ಅಧರ್ಮವನ್ನು ನಾಶಗೊಳಿಸಿ ಧರ್ಮ ದುಂದುಭಿಯನ್ನು ಮೊಳಗಿಸು ಎಂದು ಆಜ್ಞಾಪಿಸುತ್ತಾನೆ. ಭದ್ರಕಾಳಿಯೊಂದಿಗೆ ವಿವಾಹವಾದ ನಂತರ ವೀರಭದ್ರನಿಗೆ ಶಕ್ತಿ ಬರುತ್ತದೆ ಎಂಬ ಕಾರಣಕ್ಕಾಗಿ ಪ್ರತಿವರ್ಷ ಯಡೂರಿನಲ್ಲಿ ಭದ್ರಕಾಳಿ ಹಾಗು ವೀರಭದ್ರಸ್ವಾಮಿಯ ಕಲ್ಯಾಣ ಮಹೋತ್ಸವವನ್ನು ನಡೆಸಲಾಗುತ್ತದೆ. ಈ ಮೂಲಕ ವೀರಭದ್ರಸ್ವಾಮಿಯ ಶಕ್ತಿ ಉಲ್ಬಣಿಸಿ ನಂಬಿದ ಭಕ್ತರನ್ನು ಕಾಪಾಡುತ್ತಾನೆ ಎಂಬ ನಂಬಿಕೆ ಇದೆ.

ಭದ್ರಕಾಳಿ ಸಮೇತ ನಲೆನಿಂತ ವೀರಭದ್ರ:

ಮುಂಬೈ ಕರ್ನಾಟಕ ಪ್ರಾಂತದ ಪ್ರಸಿದ್ಧ ಕ್ಷೇತ್ರವಾಗಿರುವ ಯಡೂರ ಶ್ರೀವೀರಭದ್ರಸ್ವಾಮಿ ದೇವಾಲಯವು ಪ್ರಾಚೀನ ಇತಿಹಾಸವನ್ನು ಹೊಂದಿದೆ. ಸ್ಥಳಪುರಾಣದ ಪ್ರಕಾರ ದಕ್ಷಬ್ರಹ್ಮ ಯಜ್ಞವನ್ನು ಮಾಡಿದ್ದು ಇದೇ ಸ್ಥಳದಲ್ಲಿ ಎನ್ನಲಾಗುತ್ತದೆ. ಆಗ ಅವತಾರವೆತ್ತಿದ ವೀರಭದ್ರನು ದಕ್ಷನನ್ನು ಸಂಹರಿಸಿ ಅದೇ ಯಜ್ಞಕುಂಡದಲ್ಲಿ ಲಿಂಗರೂಪದಲ್ಲಿ ನೆಲೆಯಾಗಿದ್ದಾನೆ. ಇಂದಿಗೂ ಕೂಡಾ ಯಡೂರ ವೀರಭದ್ರಸ್ವಾಮಿಯ ಗರ್ಭಗುಡಿಯು ಯಜ್ಞಕುಂಡ ಮಾದರಿಯಲ್ಲೇ ಇದೆ.

ಪುರಾಣ ಪ್ರಸಿದ್ಧವಾಗಿದ್ದ ಈ ಕ್ಷೇತ್ರವು ಕಾಲಗರ್ಭದಲ್ಲಿ ಹುದುಗಿ ಹೋಗಿದ್ದಾಗ; ಈ ಕ್ಷೇತ್ರಕ್ಕೆ ಬಂದ ಮಹಾನ್ ಶಿವಯೋಗಿ ಶ್ರೀಕಾಡಸಿದ್ದೇಶ್ವರ ಯತಿಗಳು ಈ ಕ್ಷೇತ್ರವನ್ನು ಉತ್ಖನನ ಮಾಡಿ ಲಿಂಗರೂಪಿ ವೀರಭದ್ರನನ್ನು ಜಗತ್ತಿಗೆ ಪರಿಚಯಿಸುತ್ತಾರೆ. ನಂತರ ಸಿಂಗಣದೇವನೆಂಬ ರಜಪೂತ ದೊರೆ 11ನೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶತಮಾನದಲ್ಲಿ ಸುಂದರವಾದ ಬೃಹತ್ ಶಿಲಾ ದೇವಾಲಯವನ್ನು ನಿರ್ಮಾಣಗೊಳಿಸುತ್ತಾನೆ.



ವೀರಭದ್ರ ಮತ್ತು ಭದ್ರಕಾಳಿ ದೇವಸ್ಥಾನ, ಯಡೂರು

ವೀರಭದ್ರನ ದೇವಾಲಯಗಳಿರುವಲ್ಲಿ ಭದ್ರಕಾಳಿ ಸ್ಥಾಪನೆ ಸಾಮಾನ್ಯವಾಗಿರುತ್ತದೆ. ಅಂತೆಯೇ ವೀರಭದ್ರಸ್ವಾಮಿಯ ಸಾನಿಧ್ಯದಲ್ಲಿ ಭದ್ರಕಾಳಿಗೆ ವಿಶೇಷ ಪೂಜೆ. ಕೇವಲ ಉತ್ಸವ ಮೂರ್ತಿಯ ರೂಪದಲ್ಲಿದ್ದ ಭದ್ರಕಾಳಿಗೆ; ಕ್ಷೇತ್ರದ ಧರ್ಮಾಧಿಕಾರಿಗಳಾದ ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಮಹಾಸ್ವಾಮಿಗಳು ಶಾಶ್ವತವಾದ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ.

ಶಿವಸಪ್ತಾಹ, ಜಾಗರಣೆ, ಮೌನವ್ರತ:

ನವರಾತ್ರಿಯಲ್ಲಿ ಎಲ್ಲ ಕಡೆಗಳಲ್ಲಿ ಶಕ್ತಿಯ ಆರಾಧನೆ ನಡೆಯುತ್ತದೆ. ಅಂತೆಯೇ ಯಡೂರ ಕ್ಷೇತ್ರದಲ್ಲಿ ಭದ್ರಕಾಳಿ ಸಮೇತ ವೀರಭದ್ರಸ್ವಾಮಿಗೆ ನಿತ್ಯ ವಿಶೇಷ ಪೂಜೆ ಸಲ್ಲುತ್ತವೆ. ಜೊತೆಗೆ ಈ ಕ್ಷೇತ್ರದಲ್ಲಿ ಕಳೆದ 114 ವರ್ಷಗಳಿಂದ ಶಿವಸಪ್ತಾಹ ಎಂಬ ವಿಶೇಷ ಕಾರ್ಯಕ್ರಮ ನಡೆದುಕೊಂಡು ಬಂದಿದೆ.

ನವರಾತ್ರಿಯಲ್ಲಿ ನಡೆಯುವ ಶಿವಸಪ್ತಾಹದ ಅಂಗವಾಗಿ ಅಖಂಡ ಶಿವನಾಮಸ್ಮರಣೆ, ನಿತ್ಯ ಶಿವಭಜನೆ, ಶಿವಕೀರ್ತನೆಯೊಂದಿಗೆ ಇಡೀ ರಾತ್ರಿ ಜಾಗರಣೆ ನಡೆಯಲಿದ್ದು, ನಂತರ ಮಹಾಮಂಗಳಗೊಳ್ಳಲಿದೆ.

ಕಾಡದೇವರ ಮಠದ ಲಿಂಗೈಕ್ಯ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಕರ್ತೃ ಗದ್ದುಗೆ ಅಭಿಷೇಕ, ಪೂಜೆಗಳು ನಡೆಯಲಿವೆ. ಪರಂಪರೆಯಂತೆ ಕಾಡದೇವರ ಮಠದ ಅಧ್ಯಕ್ಷರೂ ಆಗಿರುವ ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಭಗವತ್ಪಾದರು ಏಳು ದಿನಗಳ ಕಾಲ ಮೌನವ್ರತ ಕೈಗೊಳ್ಳಲಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿರತಿಯಸಿರಿ ಶ್ರೀಸರ್ಪಭೂಷಣರ ಜಯಂತಿ ರಾಜಧಾನಿಯಲ್ಲಿ ನಿರಂತರ ದಾಸೋಹ ಜಾಗೃತಿ

ದಿನಾಂಕ : 15–03–2018

ಮನುಷ್ಯನ ಆಧ್ಯಾತ್ಮ ಸಾಧನೆಗೆ ಮೊಟ್ಟ ಮೊದಲಿಗೆ ಬೇಕಾಗುವುದು; ಸೂಕ್ತ ಗುರುವಿನ ಮಾರ್ಗದರ್ಶನ ಹಾಗೂ ವಿರತಿ ಮನೋಭಾವ. ಈ ಎರಡರಿಂದ ತತ್ವಜ್ಞಾನದ ಮೇರು ಶಿಖರದಲ್ಲಿ ಮಿನುಗಿದ ಮಹಾನಕ್ಷತ್ರ ವಿರತಿಯ ಸಿರಿ ಶ್ರೀಸರ್ಪಭೂಷಣ ಶಿವಯೋಗಿಗಳು.

ಮಹಾನ್ ವಿದ್ವಾಂಸರಾಗಿದ್ದ ಶ್ರೀಸರ್ಪಭೂಷಣ ಶಿವಯೋಗಿಗಳು ತಮ್ಮ ವಿನೂತನ ತತ್ವಪದಗಳ ಮೂಲಕ ಆಧ್ಯಾತ್ಮದ ಸಾರವನ್ನು ಸಮಾಜಕ್ಕೆ ನೀಡಿದವರು. ವಿರತಿ, ವಿದ್ವತ್ತು, ತತ್ವಜ್ಞಾನ, ಸಾಹಿತ್ಯ, ಸಂಗೀತ ಹೀಗೆ ಪರಿಪೂರ್ಣತೆಯ ಸಾಕಾರಮೂರ್ತಿಯಾಗಿ ಬೆಳಗಿದವರು.

ಸರ್ಪಭೂಷಣ ಮಠದ ಓಂಕಾರೇಶ್ವರಸ್ವಾಮಿ

12ನೇ ಶತಮಾನದ ಶರಣರ ವಚನಗಳ ನಂತರ ಅದೇ ಮಾದರಿಯಲ್ಲಿ ತತ್ವಪದಗಳ ಮೂಲಕ ಸಮಾಜಕ್ಕೆ ಸಾಹಿತ್ಯದ ಸಿರಿಯುನ್ನು ಕೊಟ್ಟವರು ಶ್ರೀನಿಜಗುಣ ಶಿವಯೋಗಿಗಳು. ನಿಜಗುಣ ಶಿವಯೋಗಿಗಳ ತತ್ವಪದಗಳನ್ನು ಕೈವಲ್ಯ ಪದ್ಧತಿ ಎಂದು ಕರೆಯುತ್ತಾರೆ. ನಿಜಗುಣರ ನಂತರ ಅಷ್ಟೇ ಪ್ರಸಿದ್ಧಿಯ ತತ್ವಪದಗಳನ್ನು ರಚಿಸಿದವರು ಶ್ರೀಸರ್ಪಭೂಷಣ ಶಿವಯೋಗಿಗಳು. ಸಪ್ಪಣ್ಣನವರ ವಚನಗಳು, ಸ್ವರ ವಚನಗಳು, ಅನುಭವಸಾರ ಇತ್ಯಾದಿಯಾಗಿ ಕರೆಯಲಾಗುವ ಸರ್ಪಭೂಷಣರ ಹಾಡುಗಳು 'ಕೈವಲ್ಯ ಕಲ್ಪವಲ್ಲರಿ' ಎಂದು ಪ್ರಸಿದ್ಧಿಯಾಗಿವೆ. ವಿಶೇಷವೆಂದರೆ ಆ ಎಲ್ಲ ಗೀತೆಗಳಿಗೂ ರಾಗ ಸಂಯೋಜನೆ ಮಾಡಲಾಗಿದೆ. ಶ್ರೀಗಳ ಸಂಗೀತಜ್ಞಾನವನ್ನು ನೋಡಿದರೆ ಛಂದಸ್ಸು ಶಾಸ್ತ್ರದಲ್ಲಿ ಅವರಿಗಿದ್ದ ಪಾಂಡಿತ್ಯದ ಅರಿವಾಗುತ್ತದೆ.

ನಿಜಗುಣರಂತೆ; ಸರ್ಪಭೂಷಣರು ಕೂಡಾ ತಮ್ಮ ತತ್ವಪದಗಳನ್ನು ಶಿವಕಾರುಣ್ಯ ಪ್ರಾರ್ಥನಾಸ್ಥಲ, ಜೀವಸಂಬೋಧನಸ್ಥಲ, ನೀತಿಕ್ರಿಯಾಚರ್ಯಾಸ್ಥಲ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯೋಗಪ್ರತಿಪಾದನಸ್ಥಲ, ಜ್ಞಾನಪ್ರತಿಪಾದನಸ್ಥಲ ಎಂಬ 5 ವಿಭಾಗಗಳಲ್ಲಿ ಒಟ್ಟು 177 ತತ್ವಗೀತೆಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾದ; "ಲಿಂಗಪೂಜೆಯ ಮಾಡಿರೋ । ನಿಮ್ಮೊಳೆ ಪ್ರಾಣ, ಲಿಂಗಪೂಜೆಯ ಮಾಡಿರೋ ಹಾಗೂ ಅನುಭವದಡಿಗೆಯ ಮಾಡಿ ಅದಕ್ಕನುಭಾವಿಗಳು ಬಂದು ನೀವೆಲ್ಲ ಕೂಡಿ" ಇತ್ಯಾದಿಗಳನ್ನು ಹೆಸರಿಸಬಹುದು.

ಶ್ರೀ ಸರ್ಪಭೂಷಣ ಶಿವಯೋಗಿಗಳು

ಸರ್ಪಭೂಷಣರ ಪ್ರಥಮ ಕೃತಿ ಭುಜಂಗಮಾಲಾ ಶಿವಸಂಕೀರ್ತನಮ್. ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಯಲ್ಲಿ ಅಪಾರ ಜ್ಞಾನಹೊಂದಿದ್ದ ಸರ್ಪಭೂಷಣ ಶಿವಯೋಗಿಗಳು ಜ್ಞಾನಶತಕಂ ಎಂಬ ಶ್ರೇಷ್ಠ ಸಂಸ್ಕೃತ ಗ್ರಂಥವನ್ನು ರಚಿಸಿದ್ದಾರೆ. ಹೆಸರಾಂತ ವಿದ್ವಾಂಸರಾದ ರಾಮಚಂದ್ರ ಶಾಸ್ತ್ರಿಗಳು ಈ ಗ್ರಂಥದ ಮುನ್ನುಡಿಯಲ್ಲಿ ಸರ್ಪಭೂಷಣರ ಜ್ಞಾನವನ್ನು ಕೊಂಡಾಡಿದ್ದಾರೆ. ವೀರಶೈವ ಮತಾನುಯಾಯಿಗಳಾಗಿ, ವೀರಶೈವ ಮಠದ ಸ್ವಾಮಿಗಳಾಗಿ ಅದ್ವೈತ, ವೇದಾಂತದ ಪ್ರಸ್ಥಾನಗಳನ್ನು ಅಧ್ಯಯನ ಮಾಡಿದ್ದರ ಪ್ರತಿರೂಪವೇ ಜ್ಞಾನಶತಕಂ ಕೃತಿ ಎಂದು ಬಣ್ಣಿಸಿದ್ದಾರೆ.

ಸರ್ಪಭೂಷಣ ಮಠದ ಪರಂಪರೆ:

ಮಹಾತ್ಮರ ಹುಟ್ಟು ಸಾಮಾನ್ಯವಾಗಿದ್ದರೂ, ಅವರ ಬೆಳವಣಿಗೆ ಮತ್ತು ಸಾಧನೆ ಲೋಕಕ್ಕೆ ಭಿನ್ನವಾಗಿರುತ್ತವೆ. 1795ರಲ್ಲಿ ಚಿಕ್ಕಬಾಣಾವರದಲ್ಲಿ ಜನಿಸಿದ್ದ ಸರ್ಪಭೂಷಣ ಶಿವಯೋಗಿಗಳು ಬಾಲ್ಯದಲ್ಲಿ ಅತ್ಯಂತ ತುಂಟರಾಗಿದ್ದರು. ಜೊತೆಗೆ ವಿದ್ಯೆಯೂ ಅಷ್ಟಕಷ್ಟೆ. ಪುತ್ರನ ಉಪಟಳವನ್ನು ತಾಳಲಾರದೆ ಪೋಷಕರಾದ ಮಲ್ಲಿಕಾರ್ಜುನಯ್ಯ ಮತ್ತು ಚನ್ನಮ್ಮ ದಂಪತಿಗಳು ಬಾಲಕನನ್ನು ಬೆಂಗಳೂರಿನ ತಿಮ್ಮಶೆಟ್ಟಿಮಠಕ್ಕೆ ತಂದು ಬಿಡುತ್ತಾರೆ.

ತಿಮ್ಮಶೆಟ್ಟಿ ಮಠದ ಗುರುಗಳಾಗಿದ್ದ ಶ್ರೀಗುರುಸಿದ್ದಸ್ವಾಮಿಗಳು ಅತ್ಯಂತ ಪ್ರೀತಿಯಿಂದ ಬಾಲಕನಿಗೆ ಶಿಕ್ಷಣವನ್ನು ಕಲಿಸುತ್ತಾರೆ. ತರ್ಕ,ಶಾಸ್ತ್ರ, ವೇದ, ಆಗಮಾದಿ ಸಕಲ ಶಾಸ್ತ್ರಗಳನ್ನು ಅತ್ಯಂತ ನಿಷ್ಠೆಯಿಂದ ಕಲಿತ ಸಪ್ಪಣ್ಣ ಅತಿ ಬೇಗ ಗುರುಗಳ ನೆಚ್ಚಿನ ಶಿಷ್ಯರಾಗುತ್ತಾರೆ. ಮುಂದೆ ಸಪ್ಪಣ್ಣನ ಪಾಂಡಿತ್ಯ, ಪ್ರತಿಭೆಯನ್ನು ಕಂಡು ಗುರುಸಿದ್ಧಸ್ವಾಮಿಗಳು ಮಗನನ್ನು ಮಠಕ್ಕೆ ನೀಡಿ ಎಂದು ಪಾಲಕರಲ್ಲಿ ಕೇಳಿಕೊಂಡು ವಿರಕ್ತ ದೀಕ್ಷೆಯನ್ನು ನೀಡುತ್ತಾರೆ.

ದೀಕ್ಷೆಯ ನಂತರ ಗುರುಗಳ ಆದೇಶದಂತೆ ಲೋಕಸಂಚಾರವನ್ನು ಆರಂಭಿಸಿ ಸುಮಾರು 13ವರ್ಷಗಳಕಾಲ ಕೂಡಲಸಂಗಮ, ಕಾಶಿ, ಶ್ರೀಶೈಲ, ಸೊನ್ನಲಿಗೆ ಸೇರಿದಂತೆ ಹಲವಾರು ಪ್ರಾಂತಗಳನ್ನು ಪರ್ಯಟನೆ ಮಾಡಿ ಮರಳುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು

ಶಿಷ್ಯನ ಮುಖದಲ್ಲಿ ಮೂಡಿದ್ದ ತೇಜಸನ್ನು ಕಂಡು ಹರ್ಷಿತರಾದ ಗುರುಸಿದ್ಧಸ್ವಾಮಿಗಳು ಕೆಲದಿನಗಳಲ್ಲಿ ಲಿಂಗೈಕ್ಯ ರಾಗುತ್ತಾರೆ. ಭಕ್ತರೆಲ್ಲರೂ ಸಪ್ಪಣ್ಣನವರಿಗೆ ಮುಂದಿನ ಗುರುವಾಗಲು ಭಿನ್ನವಿಸಿ ಕೊಂಡರೂ, ಸಪ್ಪಣ್ಣನವರು ಗುರುಗಳೊಂದಿಗೆ ಇದ್ದ ತಮ್ಮ ಸಹಪಾಟಿ ಕಿರಿಯ ಗುರುಸಿದ್ದಸ್ವಾಮಿಗಳಿಗೆ ಪಟ್ಟ ಕಟ್ಟುತ್ತಾರೆ.

ಬೆಂಗಳೂರಿನ ಗಾಂಧಿನಗರದಲ್ಲಿ ಇಂದಿಗೂ ಇರುವ ತಿಮ್ಮಶೆಟ್ಟಿ ಮಠದಲ್ಲೇ ಕೆಲ ಕಾಲ ಇದ್ದು ವಿದ್ವತ್ಪೂರ್ಣವಾದ ಪ್ರವಚನಗಳಿಂದ ನಾಡಿನಾದ್ಯಂತ ಹೆಸರು ಗಳಿಸುತ್ತಾರೆ. ಹಲವು ಕೃತಿಗಳನ್ನು ರಚಿಸುತ್ತಾರೆ. ನಂತರ ಈಗಿನ ಉಪ್ಪಾರಪೇಟೆ ಪೊಲೀಸ್ ಠಾಣೆಯ ಸಮೀಪದಲ್ಲಿ ತಮ್ಮ ಶಿಷ್ಯ ಪಾಲಲೋಚನರ ಕೋರಿಕೆಯಂತೆ ಓಂಕಾರೇಶ್ವರ ದೇವಾಲಯ ಮತ್ತು ಮಠವನ್ನು ಕಟ್ಟಿಸಿ 1839ರಲ್ಲಿ ಲಿಂಗೈಕ್ಯರಾಗುತ್ತಾರೆ.

ಅಲ್ಲಿಂದ ಸುಮಾರು 6ಜನ ಪೀಠಾಧಿಪತಿಗಳನ್ನು ಕಂಡಿರುವ ಸರ್ಪಭೂಷಣ ಮಠದ ಪ್ರಸ್ತುತ ಶ್ರೀಗಳಾದ ಶ್ರೀಮಲ್ಲಿಕಾರ್ಜುನ ದೇವರು ವಚನ ಮತ್ತು ವೀರಶೈವ ತತ್ವಶಾಸ್ತ್ರದಲ್ಲಿ ಅಪಾರ ಪಾಂಡಿತ್ಯವನ್ನು ಪಡೆದಿದ್ದಾರೆ. ಹಾವೇರಿ ಜಿಲ್ಲೆಯ ರಟ್ಟಿಹಳ್ಳಿಯಲ್ಲಿ ಜನಿಸಿರುವ ಶ್ರೀಗಳು ಎಡೆಯೂರು, ಮೈಸೂರಿನ ಸುತ್ತೂರು ಗುರುಕುಲಗಳಲ್ಲಿ ಸಂಸ್ಕೃತಾಭ್ಯಾಸ ಮಾಡಿದ್ದಾರೆ. ಅರಕಲಗೂಡು ದೊಡ್ಡಮಠದ ಪೀಠಾಧಿಪತಿಗಳು ಆಗಿರುವ ಶ್ರೀಗಳು ಸೋಮವಾರಪೇಟೆಯಲ್ಲಿ ಒಂದು ಶಾಲೆಯನ್ನು ನಡೆಸುತ್ತಿದ್ದಾರೆ.

ಶ್ರೀಸರ್ಪಭೂಷಣ ಮಠದ ಟ್ರಸ್ಟಿನ ಮೂಲಕ ಮೂರು ಉಚಿತ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದ್ದು, ವಿದ್ಯಾರ್ಜನೆಗಾಗಿ ರಾಜಧಾನಿಗೆ ಬರುವ ಸಮುದಾಯದ ವಿದ್ಯಾರ್ಥಿಗಳಿಗೆ ನಿರಂತರ ದಾಸೋಹದ ಮೂಲಕ ಶ್ರೀಮಠದಲ್ಲಿ ಜಾಗೃತಿಯ ಕೆಲಸ ನಡೆಯುತ್ತಿದೆ.

ಶ್ರೀಸರ್ಪಭೂಷಣ ಶಿವಯೋಗಿಗಳ ಜಯಂತಿ:

ಪ್ರತಿವರ್ಷ ಚೈತ್ರ ಶುದ್ಧ ಬಿದಿಗೆಯಂದು ಶ್ರೀಸರ್ಪಭೂಷಣ ಶಿವಯೋಗಿಗಳ ಜಯಂತಿಯನ್ನು ಆಚರಿಸಲಾಗುತ್ತದೆ. ಈ ಹಿನ್ನಲೆಯಲ್ಲಿ ಬೆಂಗಳೂರಿನ ಸರ್ಪಭೂಷಣ ಮಠದಲ್ಲಿ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಗದ್ಗುರು ರೇವಣಸಿದ್ಧರ ಸಿದ್ಧಿಕ್ಷೇತ್ರ ಶಿವಗಂಗೆ

ಡಾ. ವೀರೇಂರ ಹೆಗ್ಗಡೆಯವರಿಗೆ "ಶಿವಗಂಗಾಶ್ರೀ" ಪ್ರಶಸ್ತಿ

ದಿನಾಂಕ : 06–03–2018

ನಾಡಿನ ಸುದೀರ್ಘ ಧಾರ್ಮಿಕ ಪರಂಪರೆಯನ್ನು ಹೊಂದಿರುವ ವೀರಶೈವ ಸಿದ್ಧಾಂತದಲ್ಲಿ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಯುಗಯುಗಳಲ್ಲೂ ಅವತಾರವೆತ್ತಿ ಶಿವಾದ್ವೈತ ಸಿದ್ಧಾಂತವನ್ನು ಪ್ರಚುರ ಪಡಿಸಿದ್ದಾರೆ. ರೇಣುಕಾಚಾರ್ಯರು ಕಲಿಯುಗದಲ್ಲಿ ರೇವಣಸಿದ್ಧರಾಗಿ ವೀರಶೈವ ತತ್ವಸಿದ್ಧಾಂತಗಳನ್ನು ಪ್ರಚಾರ ಮಾಡಿದ್ದು, ನಾಡಿನ ಹಲವು ಕಡೆಗಳಲ್ಲಿ ಸಾಕಷ್ಟು ಕುರುಹುಗಳಿವೆ. ಅವುಗಳಲ್ಲೊಂದು ಶಿವಗಂಗೆ ಕ್ಷೇತ್ರ.

ಬೆಂಗಳೂರಿಗೆ ಕೇವಲ 50ಕಿ,ಮೀ ದೂರದಲ್ಲಿರುವ ಶಿವಗಂಗೆ ಕ್ಷೇತ್ರವು ಐತಿಹಾಸಿಕ, ಧಾರ್ಮಿಕ ಮತ್ತು ಸಾಹಿತ್ಯಿಕವಾಗಿ ಮಹತ್ವ ಹೊಂದಿದೆ. ರೇವಣಸಿದ್ಧೇಶ್ವರ ಪರಂಪರೆಯ ರಂಭಾಪುರಿ ಪೀಠದ ಪ್ರಥಮ ಆಚಾರ್ಯರಾದ ಜಗದ್ಗುರು ರುದ್ರಮುನಿ ಭಗವತ್ಪಾದರಿಗೆ ರೇವಣಸಿದೇಶ್ವರರು ಲಿಂಗಧೀಕ್ಷೆಯೊಂದಿಗೆ ಉಪದೇಶ ನೀಡಿದ ಪವಿತ್ರ ಸ್ಥಳ ಶಿವಗಂಗೆ.

ಶಿವಗಂಗೆ ರೇವಣಸಿದ್ಧೇಶ್ವರ

ರುದ್ರಮುನಿ ಸ್ವಾಮಿಗಳಿಗೆ ಲಿಂಗದೀಕ್ಷೆ ನೀಡುವ ಸಂದರ್ಭದಲ್ಲಿ ಸ್ವತಃ ತಮ್ಮ ಕೈಯಲ್ಲಿದ್ದ ಯೋಗದಂಡದಿಂದ ಗಂಗೆಯನ್ನು ಪ್ರತ್ಯಕ್ಷ ಮಾಡಿಕೊಳ್ಳುತ್ತಾರೆ. ರೇವಣಸಿದ್ಧೇಶ್ವರರಿಂದ ಪ್ರಕಟಗೊಂಡ ತೀರ್ಥವೇ ಇಂದು ಜನಸಾಮಾನ್ಯರ ಬಾಯಲ್ಲಿ ಒಳಕಲ್ಲು ತೀರ್ಥ ಎಂದು ಪ್ರಸಿದ್ಧಿಯಾಗಿದೆ. ಬೆಟ್ಟದ ತುದಿಯಲ್ಲಿದ್ದರೂ ಸಿದ್ದಿಪುರುಷರ ಹಸ್ತಸಂಯೋಗದಿಂದ ಉತ್ಪತ್ತಿಯಾದ ಈ ತೀರ್ಥವು ವರ್ಷ ಪೂರ್ತಿ ತುಂಬಿರುತ್ತದೆ. ಇದು ಕುಮದ್ವತಿ ನದಿಯ ಉಗಮ ಸ್ಥಾನವಾಗಿದೆ.

ಜಗದ್ಗುರು ರೇವಣಸಿದ್ಧರಿಂದ ಸ್ಥಾಪಿಸಲಾಗಿರುವ ವೀರಭದ್ರಸ್ವಾಮಿಯ ಮೂರ್ತಿ ಇದೆ. ಬೆಟ್ಟದ ಮೇಲಿರುವುದರಿಂದ ಮೇಲಣಗವಿ ವೀರಸಿಂಹಾಸನ ಮಠವೆಂದು ಪ್ರಸಿದ್ಧವಾಗಿದೆ. ಶಿವಗಂಗೆ ಮಠದ ಪರಂಪರೆ ಬಗ್ಗೆ ಸಾಕಷ್ಟು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶಿವಗಂಗೆ ಒಳಕಲ್ಲು ತೀರ್ಥ

ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗಳಿದ್ದು, 15ನೇ ಶತಮಾನದ ಕವಿ ಗುಬ್ಬಿ ಮಲ್ಲಣಾರ್ಯ ಅವರು ಬರೆದ ವೀರಶೈವಾಮೃತ ಪುರಾಣ ರಚನೆಯಾಗಿದ್ದು ಇದೇ ಸ್ಥಳದಲ್ಲಿ. ಆ ಕೃತಿಯಲ್ಲಿ ಶಿವಗಂಗೆ ಕ್ಷೇತ್ರದ ಗುರುಪರಂಪರೆ ಬಗ್ಗೆ ವಿವರಿಸಿದ್ದಾರೆ. ಶಿವಗಂಗೆ ಸಮೀಪದ ಅಜರಂಗಿಯ ಹಲಗೆಯಾರ್ಯ ಎಂಬ ಸಾಹಿತಿ; ಶೂನ್ಯ ಸಂಪಾದನೆ ಕೃತಿಯನ್ನು ಸಂಕಲನ ಮಾಡಿದ್ದು ಇದೇ ಕ್ಷೇತ್ರದಲ್ಲಿ. ಆ ಕೃತಿಯಲ್ಲಿ ಕೂಡಾ ಶಿವಗಂಗೆಯ ಬಗ್ಗೆ ಸ್ಮರಣೆ ಮಾಡಲಾಗಿದೆ.

ಐತಿಹಾಸಿಕವಾಗಿಯೂ ಕ್ಷೇತ್ರದ ಬಗ್ಗೆ ಸಾಕಷ್ಟು ದಾಖಲೆಗಳಿವೆ. ಹೊಯ್ಸಳ ರಾಣಿ ಶಾಂತಲೆಯು ಜೈನಧರ್ಮದ ಪ್ರಕಾರ ಸಲ್ಲೇಖನಾ ವ್ರತವನ್ನು ಕೈಗೊಂಡು ಆತ್ಮಾರ್ಪಣೆ ಮಾಡಿಕೊಂಡ ಸ್ಥಳ ಶಿವಗಂಗೆ. ಹಲವು ರಾಜಮನೆತನಗಳ ಗೌರವಾಧರಗಳಿಗೆ ಪಾತ್ರವಾಗಿರುವ ಈ ಕ್ಷೇತ್ರವನ್ನು ಕೆಂಪೇಗೌಡರು ಬೆಂಗಳೂರು ನಗರವನ್ನು ನಿರ್ಮಿಸಲು ಬೇಕಾದ ಹಣಕಾಸಿನ ವಹಿವಾಟು ನಡೆಸುವ ಪ್ರಮುಖ ಕೇಂದ್ರವನ್ನಾಗಿಸಿಕೊಂಡಿದ್ದರು. ಇಂದಿಗೂ ಇಲ್ಲಿ ಕೆಂಪೇಗೌಡರ ಹಜಾರವಿದೆ.

ಶಿವಗಂಗೆಯ ಹಿನ್ನೆಲೆ:

ಶಿವಗಂಗೆ ಭಗವಂತ ನಿರ್ಮಿತ ಶಿಲ್ಪ ಎಂದು ಕರೆಯಲಾಗುತ್ತದೆ. ಶಿವಗಂಗೆ ಬೆಟ್ಟವೂ ನಾಲ್ಕು ದಿಕ್ಕುಗಳಿಂದ ನಾಲ್ಕು ರೀತಿಯಲ್ಲಿ ಗೋಚರಿಸುವ ಪ್ರಾಕೃತಿಕ ಶಿಲ್ಪ. ಉತ್ತರದಿಂದ ಆದಿಶೇಷನಂತೆಯೂ, ದಕ್ಷಿಣದಿಂದ ಗಣಪತಿಯಂತೆ, ಪೂರ್ವದಿಂದ ನಂದಿಯಂತೆ ಹಾಗೂ ಪಶ್ಚಿಮದಿಂದ ಶಿವಲಿಂಗದಂತೆ ಗೋಚರಿಸುವ ಶಿವಗಂಗೆ ಬೆಟ್ಟವು ಅತ್ಯಂತ ಪುರಾತನ ಕ್ಷೇತ್ರ.

ಈ ಸೃಷ್ಟಿಯಲ್ಲಿ ಎಲ್ಲಕ್ಕೂ ಒಂದು ನಿಯಮವಿದೆ. ಒಂದರಿಂದ ಮತ್ತೊಂದು ಪಕ್ವಗೊಳ್ಳುತ್ತಾ ಮುಂದೆ ಸಾಗುತ್ತದೆ. ಬೆಣ್ಣೆ ಪಾಕಗೊಂಡರೆ ತುಪ್ಪವಾಗುವುದು ಸಹಜ ಕ್ರಿಯೆ. ಆದರೆ ಶಿವಗಂಗೆ ಕ್ಷೇತ್ರದಲ್ಲಿ ತುಪ್ಪ ಬೆಣ್ಣೆಯಾಗುತ್ತದೆ!! ಶಿವಗಂಗೆ ಕ್ಷೇತ್ರದೊಡೆಯ ಶ್ರೀಗಂಗಾಧರೇಶ್ವರ ಲಿಂಗದ ಮೇಲೆ ತುಪ್ಪವನ್ನು ಹಾಕಿದರೆ ಅದು ಬೆಣ್ಣೆಯಾಗುತ್ತದೆ!

ಗಂಗಾಧರೇಶ್ವರನ ಲಿಂಗಕ್ಕೆ ತುಪ್ಪವನ್ನು ಹಾಕಿದರೆ ಬೆಣ್ಣೆಯಾಗಿ ಪರಿವರ್ತನೆಯಾಗುವುದು ಸೋಜಿಗದಲ್ಲಿ ಪರಮಸೋಜಿಗವಾದರೂ; ಪರಮಾತ್ಮನ ಈ ಲೀಲೆಯನ್ನು ಎಲ್ಲರೂ ಪ್ರತ್ಯಕ್ಷವಾಗಿ ಕಾಣಬಹುದು. ವೈಜ್ಞಾನಿಕವಾಗಿ ಈ ಘಟನೆಗೆ ಕಾರಣವನ್ನು ಕಂಡುಕೊಳ್ಳುವುದು ಕಷ್ಟಸಾಧ್ಯವಾದರೂ ತಜ್ಞರ ಅಭಿಪ್ರಾಯದಂತೆ; ಶಿಲೆಯಿಂದಾವೃತ್ತವಾದ ಗವಿಯ ಮಧ್ಯದಲ್ಲಿರುವ ಲಿಂಗವು ಶೀತಗಲ್ಲಿನಂತೆ ತಣ್ಣಗಿರುತ್ತದೆ. ಆದ್ದರಿಂದ ತುಪ್ಪವನ್ನು ಹಾಕಿದಾಗ ಅದು ಬೆಣ್ಣೆಯಂತೆ ಗಟ್ಟಿಯಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಮಲಯ ಶಾಂತಮುನಿ ಸ್ವಾಮಿಗಳು

ಆದಿಶಕ್ತಿಯು ರಕ್ತಬಿಜಾಸುರನನ್ನು ಸಂಹರಿಸಿ ತನ್ನ ದಣಿವಾರಿಸಿಕೊಳ್ಳಲು ಗಂಗೆಯನ್ನು ಪ್ರತ್ಯಕ್ಷ ಮಾಡಿಕೊಂಡ ಕ್ಷೇತ್ರ ಇದಾಗಿದ್ದು, ಇಲ್ಲಿ ರಕ್ತೇಶ್ವರಿಯ ವಿಗ್ರಹವನ್ನು ಕಾಣಬಹುದು. ಪ್ರಾಚೀನ ಇತಿಹಾಸ ಹೊಂದಿರುವ ಸ್ವರ್ಣಾಂಭ ಸಮೇತ ಗಂಗಾಧರೇಶ್ವರ ದೇವಾಲಯವು ಇಲ್ಲಿನ ಪ್ರಮುಖ ಆಕರ್ಷಣೆ. ಓಂಕಾರೇಶ್ವರ, ಕುಂಬೇಶ್ವರ, ವೀರೇಶ್ವರ, ಸೋಮೇಶ್ವರ, ಸಿದ್ದೇಶ್ವರ ಸೇರಿದಂತೆ ಹಲವು ದೇವತೆಗಳ ಸಾನಿಧ್ಯ ಮತ್ತು ವಿಶೇಷ ಅಷ್ಟತೀರ್ಥ ಕುಂಡಗಳು, ಹಲವು ಶಿಲ್ಪಗಳನ್ನು ಕಾಣಬಹುದು. ಇಲ್ಲಿನ ಮತ್ತೊಂದು ವಿಶೇಷತೆ; ಬೇರೆಲ್ಲೂ ಕಾಣಸಿಗದ ಇಷ್ಟಲಿಂಗೋಪಾಸನೆ ಯಲ್ಲಿರುವ ಜಗದ್ಗುರು ರೇವಣಸಿದ್ದೇಶ್ವರರ ಪ್ರಾಚೀನ ಶಿಲಾಮೂರ್ತಿ ಮತ್ತು ರೇವಣಸಿದ್ದರಿಂದ ಸ್ಥಾಪಿಸಲ್ಪಟ್ಟಿರುವ ವೀರಭದ್ರಸ್ವಾಮಿ ಮೂರ್ತಿಗಳಿವೆ.

ಶಿವಗಂಗಾಶ್ರೀ ಪ್ರಶಸ್ತಿ:

ಶಿವಗಂಗಾ ಕ್ಷೇತ್ರದ ಮೇಲಣಗವಿ ಮಠವು ತನ್ನದೇ ಆದ ಸುದೀರ್ಘ ಪರಂಪರೆಯನ್ನು ಹೊಂದಿದೆ. ಶ್ರೀರಂಭಾಪುರಿ ಶಾಖಾ ಮಠವಾಗಿರುವ ಮೇಲಣಗವಿ ಮಠಕ್ಕೂ ರಂಭಾಪುರಿ ಪೀಠಕ್ಕೂ ಅವಿನಾಭಾವ ಸಂಬಂಧವಿದೆ. ಪ್ರಸ್ತುತ ರಂಭಾಪುರಿ ಜಗದ್ಗುರುಗಳು; ಮೊದಲು ಶಿವಗಂಗೆ ಮೇಲಣಗವಿ ಮಠದ ಪಟ್ಟಾಧ್ಯಕ್ಷರಾಗಿದ್ದರು.

ಶಿವಗಂಗೆಯ ಸದ್ಯದ ಪಟ್ಟಾಧ್ಯಕ್ಷರಾದ ಶ್ರೀ ಮಲಯಶಾಂತಮುನಿ ಶಿವಾಚಾರ್ಯ ಸ್ವಾಮಿಗಳು ಉತ್ತಮ ವಾಗ್ಮಿಗಳು, ವಿದ್ವಾಂಸರು. ಸಾಹಿತ್ಯ ಮತ್ತು ತತ್ವಶಾಸ್ತ್ರವನ್ನು ಅರಿತುಕೊಂಡಿರುವ ಶ್ರೀಗಳು ಹಲವು ರಚನಾತ್ಮಕ ಕಾರ್ಯಗಳ ಮೂಲಕ ನಾಡಿನಾದ್ಯಂತ ಪ್ರಸಿದ್ಧರಾಗಿದ್ದಾರೆ. ಶ್ರೀಗಳು ಶಿವಗಂಗಾ ಮಠದ ಅಧಿಕಾರವನ್ನು ವಹಿಸಿಕೊಂಡು 24 ಸಂವತ್ಸರಗಳು ಕಳೆದಿದ್ದು ಕಳೆದ 8 ವರ್ಷಗಳಿಂದ "ಶಿವಗಂಗಾಶ್ರೀ" ಪ್ರಶಸ್ತಿಯನ್ನು ಸ್ಥಾಪಿಸಿ ನಾಡಿನ ವಿವಿಧ ಕ್ಷೇತ್ರದ ಸಾಧಕರಿಗೆ ನೀಡುತ್ತಾ ಬಂದಿದ್ದಾರೆ.

2018ನೇ ಸಾಲಿನ ಶಿವಗಂಗಾಶ್ರೀ ಪ್ರಶಸ್ತಿಗೆ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರನ್ನು ಆಯ್ಕೆ ಮಾಡಲಾಗಿದ್ದು, ಇದೇ ಮಾ.10ರಂದು ನಡೆಯುವ ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವದಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು. ಪ್ರಶಸ್ತಿಯು 25 ಸಾವಿರ ನಗದು, ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಸಮಾರಂಭದಲ್ಲಿ ಯಡಿಯೂರು ಶ್ರೀಗಳು ಸಾನಿಧ್ಯ ವಹಿಸಲಿದ್ದು, ನಾಡಿನ ವಿವಿಧ ಮಠಾಧೀಶರು, ಸಾಹಿತಿಗಳು, ಗಣ್ಯರು ಪಾಲ್ಗೊಳ್ಳಲಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಾದ್ವೈತ ಘನಲಿಂಗ ಚರ ಚಕ್ರವರ್ತಿ
ಸಮನ್ವಯ ಸಾಕಾರಮೂರ್ತಿ ಶ್ರೀ ಸುವರ್ಣಲಿಂಗ ಶಿವಾಚಾರ್ಯರು

ದಿನಾಂಕ : 09-11-2018

ಜ್ಞಾನ ಮಾನವನನ್ನು ಮಹಾದೇವನನ್ನಾಗಿಸಲು ಇರುವ ಅದ್ಭುತ ಮಾರ್ಗ. ಆ ಜ್ಞಾನದ ಕೊರತೆಯಿಂದಲೇ ಇಂದು ಮಾನವ ದಾನವ ಪ್ರವೃತ್ತಿಯನ್ನು ರೂಢಿಸಿಕೊಂಡು ಸಮಾಜ ಕಂಠಕವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ ತಮ್ಮ ಅದ್ಭುತ ವಿದ್ವತ್ ಸಂಪಾದನೆಯಿಂದ ತಾವು ದೈವತ್ವಕ್ಕೇರುವುದಷ್ಟೇ ಅಲ್ಲದೆ ಸಮಾಜವನ್ನು ಸನ್ಮಾರ್ಗದತ್ತ ಕೊಂಡೊಯ್ದ ಅದೆಷ್ಟೋ ಮಹಾತ್ಮರ ಚರಿತ್ರೆ ನಮ್ಮ ನಡುವೆ ಇದೆ. ಅಂತಹ ದೈವೀಪುರುಷರಲ್ಲೋರ್ವರು ಶ್ರೀಮದ್ವಿಭೂತಿಪುರದ ಲಿಂಗೈಕ್ಯ ಶ್ರೀಸುವರ್ಣಲಿಂಗ ಶಿವಾಚಾರ್ಯರು.


ಶ್ರೀ ಸುವರ್ಣಲಿಂಗ ಶ್ರೀಗಳ ಪ್ರತಿಮೆ

ವೀರಶೈವ ಧರ್ಮದ ಶಿವಾದ್ವೈತ ಸಿದ್ಧಾಂತವನ್ನು ಕರತಲಾಮಲಕ ಮಾಡಿಕೊಂಡಿದ್ದ ಸುವರ್ಣಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಓರ್ವ ಪ್ರಖಾಂಡ ಪಂಡಿತರಾಗಿದ್ದರು. ಜೀವ ಶಿವನಾಗುವ, ಮಾನವ ಮಹಾದೇವನಾಗುವ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಮೇಲೆ ಅಪಾರ ಜ್ಞಾನವನ್ನು ಹೊಂದಿದ್ದ ಪರಮ ಪೂಜ್ಯರು ತಮ್ಮ ವಾಗ್ಝರಿಯ ಮೂಲಕ ನಾಡಿನಾದ್ಯಂತ ಹೆಸರು ಗಳಿಸಿದ್ದರು. ಯಾವುದೇ ಮಾಧ್ಯಮಗಳು ಪ್ರಚಲಿತವಿಲ್ಲದ ಕಾಲದಲ್ಲಿ ನಾಡಿನ ಎಲ್ಲೆಡೆ ಹೋಗಿ ತಮ್ಮ ಪ್ರವಚನದ ಮೂಲಕ ಜನರನ್ನು ಭಕ್ತಿ, ಜ್ಞಾನ ಮತ್ತು ಕರ್ಮ ಮಾರ್ಗದ ಕಡೆಗೆ ಕೊಂಡೊಯ್ದವರು.

ವೇದ, ಆಗಮ, ಉಪನಿಷತ್ ಸೇರಿದಂತೆ ಸಂಸ್ಕೃತ ವೇದಾಂತದಲ್ಲಿ ಪದವಿ ಭೂಷಿತರಾಗಿದ್ದ ಶ್ರೀಗಳು ನಾಡಿನ ಮೂಲೆ ಮೂಲೆಗೂ ಸಂಚರಿಸಿ ಒಂದೊಂದು ಗ್ರಾಮದಲ್ಲಿ ವಾರ, ತಿಂಗಳುಗಟ್ಟಲೆ ವಸತಿ ಮಾಡಿ ಪ್ರವಚನ ಮಾಡುತ್ತಿದ್ದರು. ಹೀಗೆ ತಮ್ಮ ಜೀವಿತಾವಧಿಯಲ್ಲಿ ಅವರು ಮಾಡಿದ ಲೋಕಸಂಚಾರ ಮತ್ತು ಪ್ರವಚನಗಳನ್ನು ಇಂದಿಗೂ ಜನ ಮರೆತಿಲ್ಲ.

ಶ್ರೀಗಳ ಪಾಂಡಿತ್ಯಕ್ಕೆ ಭಕ್ತರು ಮಾತ್ರವಲ್ಲದೆ ಅನೇಕ ವಿಧ್ವಾಂಸರು, ಪಂಡಿತರು ಸಹ ತಲೆದೂಗಿದ್ದಾರೆ. ಗುರುಗಳ ಪಾಂಡಿತ್ಯವನ್ನು ಮೆಚ್ಚಿದ ಮೈಸೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ವೀರಭದ್ರೇಶ್ವರ ಉಚಿತ ವಸತಿ ಶಾಲೆ ವಿದ್ಯಾರ್ಥಿಗಳು

ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರು ಪೂಜ್ಯರನ್ನು ಗೌರವಿಸಿದ್ದರು. ವೇದಾಂತ ವಿದ್ಯೆಯಲ್ಲಿ ಅವರಿಗಿದ್ದ ಪಾಂಡಿತ್ಯಕ್ಕಾಗಿ ಶ್ರೀಗಳಿಗೆ "ಶಿವಾದ್ವೈತ ವಿದ್ವಾನ್ ಘನಲಿಂಗ ಚರಚಕ್ರವರ್ತಿ" ಎಂಬ ಅರ್ಥಪೂರ್ಣ ಬಿರುದು ನೀಡಲಾಗಿತ್ತು.

ಸಮನ್ವಯದ ಕೊರತೆಯಿಂದ ಸಮಾಜವನ್ನು ಇಬ್ಭಾಗ ಮಾಡುವ ಪ್ರಯತ್ನವನ್ನು ಇಂದು ಕಾಣುತ್ತಿದ್ದೇವೆ. ಆದರೆ ಕಳೆದ 5 ದಶಕಗಳ ಹಿಂದೆಯೇ ಸುವರ್ಣಲಿಂಗ ಶ್ರೀಗಳು ಸಮನ್ವಯದ ಸಾಕಾರಮೂರ್ತಿಗಳಾಗಿದ್ದರು. ಸಿದ್ಧಾಂತ ಶಿಖಾಮಣಿಯ ಜೊತೆಗೆ, ಚಾಮರಸ ಕವಿಯ ಪ್ರಭುಲಿಂಗಲೀಲೆ ಕಾವ್ಯವನ್ನು ಅಷ್ಟೇ ಅರ್ಥಪೂರ್ಣವಾಗಿ ಅಭ್ಯಾಸ ಮಾಡಿದ್ದರು. ಎರಡನ್ನೂ ಸಮೀಕರಿಸಿ ಮನಸೆಳೆಯುವಂತೆ ಪ್ರವಚನವನ್ನು ಮಾಡುವ ಮೂಲಕ ರೇಣುಕಾದಿ ಪಂಚಾಚಾರ್ಯರ ಮತ್ತು ಬಸವಾದಿ ಶರಣರ ಸಂದೇಶಗಳನ್ನು ಒಟ್ಟೊಟ್ಟಿಗೆ ನೀಡುತ್ತಿದ್ದ ಅಪರೂಪದ ಶ್ರೀಗಳಾಗಿದ್ದರು.

ಶ್ರೀಗಳ ಪೂರ್ವಾಶ್ರಮ ಮತ್ತು ಸಾಧನೆ:

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ವಡವಡಗಿ ಗ್ರಾಮದಲ್ಲಿ ತಂದೆ ವೇ.ಮೂ. ಶಿವಯ್ಯ, ತಾಯಿ ಶ್ರೀಮತಿ ಶರಣಮ್ಮ ದಂಪತಿಗಳ ಪುಣ್ಯಸಂಜಾತರಾಗಿ 1927ರಲ್ಲಿ ಜನಿಸಿದ ಪೂಜ್ಯರ ಪೂರ್ವಾಶ್ರಮದ ಹೆಸರು ಚನ್ನಬಸವಯ್ಯ. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ನಂತರ ಬಾಗಲಕೋಟೆಯಲ್ಲಿ ಸಂಸ್ಕೃತ ಅಭ್ಯಾಸ ಮಾಡುತ್ತಿದ್ದರು. ಬಾಲಕನಲ್ಲಿದ್ದ ಪ್ರತಿಭೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದ ಮನಗೊಳಿಯ ಶ್ರೀಸಂಗನಬಸವ ಶಿವಾಚಾರ್ಯ ಸ್ವಾಮಿಗಳು ಉನ್ನತ ಅಧ್ಯಯನಕ್ಕಾಗಿ ಬೆಂಗಳೂರಿನ ಮಹಂತರ ಮಠಕ್ಕೆ ಕಳುಹಿಸುತ್ತಾರೆ.

ಮಹಂತರ ಮಠಕ್ಕೆ ಬಂದು ಉನ್ನತ ಸಂಸ್ಕೃತಾಭ್ಯಾಸ ಮಾಡಿದ ಪೂಜ್ಯರ ನಿಖರತೆ, ಪ್ರಖರತೆ ಮತ್ತು ಪಾಂಡಿತ್ಯವನ್ನು ಗಮನಿಸಿದ ಮಹಾತಪಸ್ವಿ ರಂಭಾಪುರಿ ಜಗದ್ಗುರು ವೀರಗಂಗಾಧರ ಭಗವತ್ಪಾದರು ಹೆಚ್ಚಿನ ಪ್ರೋತ್ಸಾಹವನ್ನು ನೀಡಿದರು. ಮುಂದೆ ತಾವು ರಂಭಾಪುರಿ ಪೀಠವನ್ನು ಅಲಂಕರಿಸಿದ ನಂತರ ತೆರವಾಗಿದ್ದ ಬೆಂಗಳೂರಿನ ಶ್ರೀಮದ್ವಿಭೂತಿಪುರ ವೀರಸಿಂಹಾಸನ ಮಠಕ್ಕೆ 1954ರಲ್ಲಿ ಪಟ್ಟಾಧಿಕಾರಿಗಳನ್ನಾಗಿ ನೇಮಿಸಿದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಭೂತಿಪುರ ವೀರಸಿಂಹಾಸನ ಮಠದ 74ನೇ ಪಟ್ಟಾಧ್ಯಕ್ಷರಾಗಿ ಸುಮಾರು 5 ದಶಕಗಳ ಕಾಲ ಶ್ರೀಮಠದ ಅಭಿವೃದ್ಧಿ ಹಾಗೂ ಸಮಾಜ ಮುಖಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ನಗರಜೀವನದ ಭರಾಟೆಯಲ್ಲಿ ಮಂಕಾಗಿದ್ದ ಸುದೀರ್ಘ ಇತಿಹಾಸವಿದ್ದ ವಿಭೂತಿಪುರ ಮಠದ ಅಸ್ತಿತ್ವವನ್ನು ಉಳಿಸುವ ನಿಟ್ಟಿನಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಶ್ರೀಮಠದ ಮೂಲ ದೈವವಾದ ವೀರಭದ್ರೇಶ್ವರ ಸ್ವಾಮಿಯ ಹೆಸರಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆದು ಬಡ ವಿದ್ಯಾರ್ಥಿಗಳ ಪಾಲಿಗೆ ಜ್ಞಾನದಾತರಾದರು. ಅವರು ಅಂದು ನೆಟ್ಟ ಶಿಕ್ಷಣ ಸಸಿ ಇಂದು ಬೃಹತ್ ವೃಕ್ಷವಾಗಿ ಬೆಳೆದು ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ನೀಡುತ್ತಿದೆ. ವಿಜಯದಶಮಿಯ ಪುಣ್ಯಕಾಲದಲ್ಲಿ ಜನಿಸಿದ್ದ ಪೂಜ್ಯರು 2001ರ ಚೈತ್ರಮಾಸದ ದಶಮಿಯಂದು ಲಿಂಗೈಕ್ಯರಾದರು.

ಸುವರ್ಣಶ್ರೀ ಪ್ರಶಸ್ತಿ ಪ್ರದಾನ:

ತಾಯಿಯಂತೆ ಮಕ್ಕಳು, ನೂಲಿನಂತೆ ಸೀರೆ ಎಂಬ ಗಾದೆಯಂತೆ; ಶ್ರೀಸುವರ್ಣಲಿಂಗ ಶಿವಾಚಾರ್ಯ ಸ್ವಾಮಿಗಳ ಕರಕಮಲ ಸಂಜಾತ ವಿಭೂತಿಪುರ ಮಠದ 75ನೇ ಪಟ್ಟಾಧ್ಯಕ್ಷರಾದ ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ಗುರುಗಳ ಹಾದಿಯಲ್ಲೇ ಮುನ್ನಡೆಯುತ್ತಿದ್ದಾರೆ. ಶ್ರೀಗಳು ಸಂಸ್ಥಾಪಿಸಿದ ಶಿಕ್ಷಣಸಂಸ್ಥೆಯನ್ನು ಬೃಹತ್ತಾಗಿ ಬೆಳೆಸಿರುವ ಪೂಜ್ಯರು ಎಲ್ಲ ಜಾತಿ ಜನಾಂಗದ ಬಡಮಕ್ಕಳಿಗೆ ಗುಣಮಟ್ಟದ ಆಂಗ್ಲ ಮಾಧ್ಯಮ ಶಿಕ್ಷಣ ನೀಡಲು ಶ್ರೀವೀರಭದ್ರೇಶ್ವರ ವಸತಿ ಶಾಲೆಯನ್ನು ತೆರೆದು ರಾಜ್ಯದಲ್ಲೇ ವಿಭಿನ್ನ ಸೇವೆಗೆ ನಾಂದಿ ಹಾಡಿದ್ದಾರೆ. ಪಂಪರೆಯನ್ನು ಮುನ್ನಡೆಸುವುದರ ಜೊತೆಗೆ ಸ್ವತಃ ಹಿರಿಯ ಶ್ರೀಗಳಂತೆ ವಿದ್ಯಾಸಂಪನ್ನರೂ ಆಗಿದ್ದಾರೆ. ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯದ ಮೇಲೆ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡಿದ್ದು, ರಾಷ್ಟ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಧರ್ಮಪ್ರಚಾರದ ಕೆಲಸವನ್ನು ಮಾಡುತ್ತಿದ್ದಾರೆ.

ಹಿರಿಯ ಶ್ರೀಗಳ ಸೇವೆ ಮತ್ತು ಸಾಧನೆಯನ್ನು ಶಾಶ್ವತವಾಗಿ ಉಳಿಸಬೇಕೆಂಬ ನಿಟ್ಟಿನಲ್ಲಿ ಶ್ರೀಗಳು; ಸುವರ್ಣಲಿಂಗ ಶಿವಾಚಾರ್ಯ ಸ್ವಾಮಿಗಳ ಹೆಸರಿನಲ್ಲಿ "ಸುವರ್ಣ ಶ್ರೀ" ಎಂಬ ರಾಜ್ಯಮಟ್ಟದ ಪ್ರಶಸ್ತಿಯನ್ನು ಸ್ಥಾಪಿಸಿ ನಾಡಿನ ವಿವಿಧ ಕ್ಷೇತ್ರದ ಗಣ್ಯರಿಗೆ ಪ್ರತಿವರ್ಷ ನೀಡುತ್ತಿದ್ದಾರೆ. ಪ್ರಶಸ್ತಿಯು 25 ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ಪ್ರತಿವರ್ಷ ಕಾರ್ತೀಕ ಮಾಸದ ಕೊನೆಯ ಸೋಮವಾರದಂದು ನಡೆಯುವ ಶ್ರೀವೀರಭದ್ರಸ್ವಾಮಿ ರಥೋತ್ಸವ ಮತ್ತು ಜಾತ್ರೆಯ ಸಂದರ್ಭದಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತದೆ.

ಚತುರ್ಭಾಶ ಪ್ರವೀಣರು, 120ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರುವ, ಸಾರಸ್ವತ ಲೋಕದ ವಿದ್ವನ್ಮಣಿಯಾಗಿರುವ ಮುಂಡರಗಿಯ ನಾಡೋಜ ಶ್ರೀ ಜಗದ್ಗುರು ಡಾ.ಅನ್ನದಾನೇಶ್ವರ ಮಹಾಸ್ವಾಮಿಗಳಿಗೆ 2017ನೇ ಸಾಲಿನ ಸುವರ್ಣಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಡಸೋಸಿ ಮಠದ ಹುಗ್ಗಿ ಜಾತ್ರೆ

ಶ್ರೀ ದುರುದುಂಡೀಶ್ವರರ ಪಲ್ಲಕ್ಕಿ ಮಹೋತ್ಸವ, ಮಹಾ ದಾಸೋಹ

ದಿನಾಂಕ : 13-09-2018

ಗ್ರಾಮೀಣ ಪ್ರದೇಶದಲ್ಲಿರುವ ಮಠ ಮಂದಿರಗಳಲ್ಲಿ ವಾರ್ಷಿಕವಾಗಿ ನಡೆಯುವ ಹಬ್ಬ, ಜಾತ್ರೆ, ಉತ್ಸವಗಳು ಕೇವಲ ಧಾರ್ಮಿಕ ಪರಂಪರೆಯ ಪ್ರತೀಕವಾಗದೇ; ಪ್ರದೇಶವಾರು ಸಂಸ್ಕೃತಿಯ ಪ್ರತಿಬಿಂಬವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ನಿಡಸೋಸಿ ಸಿದ್ಧಸಂಸ್ಥಾನ ಮಠದಲ್ಲಿ ನಡೆಯುವ ಜಾತ್ರೆಯು ಹುಗ್ಗಿ ಜಾತ್ರೆ ಎಂದೇ ಪ್ರಸಿದ್ಧಿಯಾಗಿದೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನಲ್ಲಿರುವ ನಿಡಸೋಸಿ ಸಿದ್ಧ ಸಂಸ್ಥಾನ ಮಠವು ಗಡಿಭಾಗ ಮಾತ್ರವಲ್ಲದೆ ನೆರೆಯ ಮಹಾರಾಷ್ಟ್ರದಲ್ಲಿಯೂ ಭಕ್ತರನ್ನು ಹೊಂದಿರುವ ಪ್ರಭಾವಿ ಮಠ. ಈ ಮಠದಲ್ಲಿ ವರ್ಷಕ್ಕೆ ಎರಡು ಬಾರಿ ಜಾತ್ರೆ ನಡೆಯುತ್ತದೆ. ಶಿವರಾತ್ರಿಯಲ್ಲಿ ಬೆಳ್ಳಿ ರಥೋತ್ಸವ ಹಾಗೂ ಬಾದ್ರಪದ ಮಾಸದಲ್ಲಿ ಕರ್ತೃ ಶ್ರೀದುರದುಂಡೀಶ್ವರ ಸ್ವಾಮಿಗಳ ಪಲ್ಲಕ್ಕಿ ಮಹೋತ್ಸವ ನಡೆಯುತ್ತದೆ. ಈ ಎರಡೂ ಜಾತ್ರೆಗಳಲ್ಲೂ ಹುಗ್ಗಿಯೇ ಪ್ರಧಾನ. ಆದ್ದರಿಂದ ಇದು ಹುಗ್ಗಿ ಜಾತ್ರೆ ಎಂದು ಪ್ರಸಿದ್ಧಿಯಾಗಿದೆ.

ಒಂದು ಕಾಲಕ್ಕೆ ಆರ್ಥಿಕವಾಗಿ ದುರ್ಬಲವಾಗಿದ್ದ ಜನ ಸಮುದಾಯವಿದ್ದ ಪ್ರದೇಶ ಇದಾಗಿತ್ತು. ಎರಡು ಹೊತ್ತಿನ ಸಾಮಾನ್ಯ ಊಟಕ್ಕೂ ತೊಂದರೆಯಲ್ಲಿದ್ದ ಜನ ಸಮುದಾಯಕ್ಕೆ ದಾಸೋಹದ ಮೂಲಕ ಸದೃಢಗೊಳಿಸುವ ಕೆಲಸ ಮಠದಿಂದ ನಡೆಯುತ್ತಿತ್ತು. ಆ ಕಾಲದಲ್ಲಿ ಹುಗ್ಗಿ ಪ್ರಸಾದವೆಂದರೆ ಅತ್ಯಂತ ಹಿರಿದಾದ ಸಿಹಿಪದಾರ್ಥ. ಮಠದ ಜಾತ್ರೆಯ ನೆಪದಲ್ಲಿ ವರ್ಷಕ್ಕೆ ಎರಡು ಬಾರಿ ಈ ಭಾಗದ ಭಕ್ತರಿಗೆ ಹುಗ್ಗಿ ಪ್ರಸಾದವನ್ನು ದಾಸೋಹ ಮಾಡುತ್ತಿದ್ದರಿಂದ ಹುಗ್ಗಿ ಮಠ - ಹುಗ್ಗಿ ಜಾತ್ರೆ ಎಂಬ ಹೆಸರು ಬಂದಿದೆ. ಇಂದು

ಶ್ರೀ ದುರುದುಂಡೀಶ್ವರರ ಗದ್ದುಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಡಸೋಸಿ ಮಹಾದಾಸೋಹ

ಎಷ್ಟೇ ಶ್ರೀಮಂತಿಕೆ ಬಂದಿದ್ದರೂ ಮಠದ ಹುಗ್ಗಿ ಪ್ರಸಾದವನ್ನು ಸ್ವೀಕಾರ ಮಾಡಲು ಭಕ್ತರು ಜಾತ್ರೆಗೆ ಆಗಮಿಸುತ್ತಾರೆ.

ಶ್ರಾವಣ ಮಾಸದ ಒಂದು ತಿಂಗಳ ಪರ್ಯಂತರ ನಡೆಯುವ ಪುರಾಣದ ಮಂಗಲೋತ್ಸವ ಹಾಗೂ ದುರದುಂಡೀಶ್ವರರ ಪಲ್ಲಕ್ಕಿ ಮಹೋತ್ಸವವು ಪ್ರತಿ ಬಾದ್ರಪದ ಮಾಸದ ಅಷ್ಟಮಿಯಂದು ನಡೆಯಲಿದೆ. ಅದರಂತೆ ಇದೇ ಸೆ.16 ಮತ್ತು 17 ರಂದು ಪುರಾಣ ಮಂಗಲೋತ್ಸವ ಮತ್ತು ಪಲ್ಲಕ್ಕಿ ಮಹೋತ್ಸವವು ನಡೆಯಲಿದ್ದು, ಬರುವ ಭಕ್ತರಿಗೆ ಹುಗ್ಗಿ ಪ್ರಸಾದ ವಿತರಣೆ ಮಾಡಲು ಪದ್ಧತಿಯಂತೆ ಮಹಾ ದಾಸೋಹವನ್ನು ಹಮ್ಮಿಕೊಳ್ಳಲಾಗಿದೆ.

ನಿಡಸೋಸಿ ಮಠದ ಪರಂಪರೆ :

ಬೆಳಗಾವಿ ಭಾಗವು ಮಠ ಸಂಸ್ಕೃತಿಯಿಂದ ಪ್ರಭಲವಾಗಿರುವ ಪ್ರದೇಶ. ಅದರಲ್ಲೂ ದಾಸೋಹಕ್ಕೆ ಈ ಮಠಗಳ ಕೊಡುಗೆ ಅಪಾರ. ಇಂತಹ ಮಠಪರಂಪರೆಯ ಮುಕುಟ ಮಣಿಯಂತಿರುವ ನಿಡಸೋಸಿ ಶ್ರೀಸಿದ್ಧಸಂಸ್ಥಾನ ಮಠವು ಮೂರು ಶತಮಾನಗಳ ಇತಿಹಾಸವನ್ನು ಹೊಂದಿದೆ. ಈ ಮಠದ ಮೂಲ ಪುರುಷ ಶ್ರೀನಿಜಲಿಂಗೇಶ್ವರ ಸ್ವಾಮಿಗಳು.

ಇದೇ ಗ್ರಾಮದ ಸಾಮಾನ್ಯ ವೀರಶೈವ ಲಿಂಗಾಯತ ಹೂಗಾರ ಕುಟುಂಬದಲ್ಲಿ ಜನಿಸಿದ್ದ ನಿಜಲಿಂಗಪ್ಪ ಬಾಲ್ಯದಿಂದಲೂ ಆಧ್ಯಾತ್ಮದತ್ತ ಒಲವು ಹೊಂದಿದ್ದರು. ಹಿರಿಯರ ಒತ್ತಾಯಕ್ಕೆ ವಿವಾಹವಾದರೂ; ತನ್ನ ಧಾರ್ಮಿಕ ಆಸಕ್ತಿಯನ್ನು ಕಳೆದುಕೊಳ್ಳಲಿಲ್ಲ. ಹೀಗಿರುವಾಗ ಸಮೀಪದ ಕಮತೂರು ಕರ್ಪೂರಹಳ್ಳದ ಬಿಲ್ವಾಶ್ರಮಕ್ಕೆ ಲೋಕ ಸಂಚಾರ ಮಾಡುತ್ತ ಆಗಮಿಸಿದ ಶ್ರೀದುರದುಂಡೀಶ್ವರ ಮಹಾಸ್ವಾಮಿಗಳ ಶಕ್ತಿಗೆ ಮಾರುಹೋಗಿ ಅವರ ಸೇವೆ ಮಾಡಿಕೊಂಡಿರುತ್ತಾರೆ. ಕೆಲ ವರ್ಷಗಳ ನಂತರ ದುರದುಂಡೀಶ್ವರ ಸ್ವಾಮಿಗಳು ನಿಜಲಿಂಗಪ್ಪನವರಿಗೆ ಒಂದು ರುದ್ರಾಕ್ಷಿ ಮತ್ತು ಲಿಂಗವನ್ನು ಅನುಗ್ರಹಿಸಿ ಅರಭಾವಿಗೆ ತೆರಳುತ್ತಾರೆ. ಆ ನಂತರ ಅದೇ ಜಾಗದಲ್ಲಿ ತಾವು ಅನುಷ್ಠಾನ ಮುಂದುವರೆಸುತ್ತಾರೆ.

ಹೀಗೆ ನಿಜಲಿಂಗೇಶ್ವರರು ತಪಸ್ಸು ಮಾಡುತ್ತಿದ್ದಾಗ ಕೆಲ ಕಿಡಿಗೇಡಿಗಳು ತಪಸ್ಸನ್ನು ಭಂಗಗೊಳಿಸುವಂತೆ ದೇವದಾಸಿಯಾಗಿದ್ದ ಕಲಾವತಿ ಎಂಬ ಮಹಿಳೆಯನ್ನು ಕಳುಹಿಸುತ್ತಾರೆ. ಅವಳು ಹಾಡು ಹೇಳುತ್ತ ಆಶ್ರಮದ ಹೊರಗೆ ನಿಂತಿದ್ದಾಗ ಸರ್ಪವೊಂದು ಹರಿದು ಬಂದು ಭಯಭೀತಳಾಗಿ ಚೀರುತ್ತಾಳೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಡಸೋಸಿ ಜಗದ್ಗುರುಗಳು

ಆಗ ಸ್ವಾಮಿಗಳು ಅವಳಿಗೆ ಧೈರ್ಯ ಹೇಳಿ, ವಿಷಯವು ತಿಳಿದುಕೊಂಡು ನೀನು ಮಾಡುತ್ತಿರುವುದು ತಪ್ಪೆಂದು ಬುದ್ದಿ ಹೇಳುತ್ತಾರೆ.

ಕೆಲ ವರ್ಷದ ನಂತರ ಗ್ರಾಮಕ್ಕೆ ಆಗಮಿಸಿದ ನಿಜಲಿಂಗಪ್ಪನವರು ಗ್ರಾಮದ ಹಿರಿಯರ ಬಳಿ ಮಾತನಾಡಿ ತಮಗಿದ್ದ ಉತ್ಕಟ ಇಚ್ಛೆಯಂತೆ ದುರದುಂಡೀಶ್ವರರು ನೀಡಿದ್ದ ರುದ್ರಾಕ್ಷಿ, ಲಿಂಗವನ್ನು ಇಟ್ಟು ತೋರು ಗದ್ದುಗೆಯನ್ನು ಸ್ಥಾಪಿಸುತ್ತಾರೆ. ಈ ಹಿಂದೆ ಗುರುಗಳಿಂದ ಬುದ್ದಿ ಹೇಳಿಸಿಕೊಂಡಿದ್ದ ದೇವದಾಸಿ ತನ್ನ ತಪ್ಪಿನ ಅರಿವಾಗಿ ಗುರುಗಳಿಗೆ ಶರಣಾಗಿ ತಮ್ಮ ಮಠದ ಗದ್ದುಗೆಯ ಮುಂದಿನ ಮೆಟ್ಟಿಲಿನ ಮೇಲೆ ತನ್ನ ಮೂರ್ತಿಯನ್ನು ಕೆತ್ತಿಸಿ, ಬರುವ ಭಕ್ತರು ಆ ಮೂರ್ತಿಯನ್ನು ತುಳಿದು ಒಳ ಹೋಗಬೇಕು ಆಗ ತನ್ನ ಪಾಪಕ್ಕೆ ಪ್ರಾಯಶ್ಚಿತ್ತ ಎಂದು ಬೇಡಿಕೊಳ್ಳುತ್ತಾಳೆ. ಅರಭಾವಿಯಲ್ಲಿರುವ ದುರದುಂಡೀಶ್ವರರ ಮೂಲ ಗದ್ದುಗೆಯೂ ಸೇರಿದಂತೆ ಈ ಪ್ರಾಂತದಲ್ಲಿರುವ ಎಲ್ಲ ದುರದುಂಡೀಶ್ವರರ ದೇವಾಲಯದ ಮೆಟ್ಟಿಲಿನ ಮೇಲೆ ದೇವದಾಸಿ ಕಲಾವತಿಯ ಮೂರ್ತಿಯನ್ನು ಕಾಣಬಹುದು.

ಹೀಗೆ ಆರಂಭವಾದ ದುರದುಂಡೀಶ್ವರ ಮಠದ ಪರಂಪರೆಯಲ್ಲಿ ಇಲ್ಲಿಯವರೆಗೆ 9ಜನ ಪೀಠಾಧಿಪತಿಗಳು ಆಗಿ ಹೋಗಿದ್ದಾರೆ. ಸದ್ಯ ಇರುವ ಜಗದ್ಗುರು ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು ಮಠದ ಪರಂಪರೆಯ ಜೊತೆಗೆ ಸಮಾಜವನ್ನು ಮುನ್ನಡೆಸುತ್ತಿದ್ದಾರೆ.

ನಿಡಸೋಸಿ ಮಠದ ಸಾಮಾಜಿಕ ಕ್ರಾಂತಿ:

ನಿಡಸೋಸಿ ಶ್ರೀಸಿದ್ಧಸಂಸ್ಥಾನ ಮಠವು ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಾಮಾಜಿಕವಾಗಿ ಹಲವು ಮಹತ್ವದ ಹೆಜ್ಜೆಗಳನ್ನು ಇಟ್ಟಿದೆ. ಮಠದ ಅಧೀನದಲ್ಲಿರುವ ನೂರಾರು ಎಕರೆ ಕೃಷಿ ಭೂಮಿಯಲ್ಲಿ ಮಿಶ್ರ ಬೆಳೆ ಸೇರಿದಂತೆ ಜೈವಿಕ ಮತ್ತು ಸಾವಯವ ಕೃಷಿಗೆ ಒತ್ತು ನೀಡುವ ಮೂಲಕ ಈ ಭಾಗದ ರೈತರಿಗೆ ಹೊಸ ಹುರುಪನ್ನು ನೀಡಿದೆ. ಏತ ನೀರಾವರಿಯ ಮೂಲಕ ಸಾಕಷ್ಟು ರೈತರಿಗೆ ಅನುಕೂಲ ಕಲ್ಪಿಸಿಕೊಟ್ಟಿದೆ.

ಪ್ರಸ್ತುತ ಶ್ರೀಶಿವಲಿಂಗೇಶ್ವರ ಸ್ವಾಮಿಗಳು ಪರಂಪರೆಯ ಜೊತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿರುವುದರ ಪ್ರತೀಕವಾಗಿ ಹಲವು ಜನೋಪಯೋಗಿ ಯೋಜನೆಗಳು ಅನುಷ್ಠಾನಗೊಂಡಿವೆ. ಬೇರೆಡೆಗಳಲ್ಲಿ ಹೈನುಗಾರಿಕೆ, ದೇಸಿ ತಳಿಗಳ ಅಭಿವೃದ್ಧಿ, ಗೊಬ್ಬರ ಇತ್ಯಾದಿ ಕಾರಣಕ್ಕೆ ಗೋಶಾಲೆಯನ್ನು ತೆರೆದರೆ ಇಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಯಸ್ಸಾದ, ಅಂಗವಿಕಲಗೊಂಡ, ಯಾರಿಗೂ ಬೇಡವಾದ ಗೋವುಗಳಿಗಾಗಿ ಗೋಶಾಲೆಯನ್ನು ತೆರೆಯಲಾಗಿದೆ. ಇದೊಂದು ರೀತಿಯ ಗೋವುಗಳ ವೃದ್ಧಾಶ್ರಮವೆಂದು ಹೇಳಬಹುದು.



ನಿಡಸೋಸಿ ಮಠ

ಗಡಿಭಾಗದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿರುವ ಮಠವು; ಹತ್ತಾರು ಶಿಕ್ಷಣ ಸಂಸ್ಥೆಗಳ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ನೀಡುತ್ತಿದೆ. ಒಂದು ಚಿಕ್ಕ ಗ್ರಾಮದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ತೆರೆಯುವ ಮೂಲಕ ಈ ಭಾಗದ ವಿದ್ಯಾರ್ಥಿಗಳು ದೂರದ ನಗರ ಪ್ರದೇಶಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲದೆ ಶಿಕ್ಷಣವನ್ನು ಮೊಟಕುಗೊಳಿಸುವುದನ್ನು ತಪ್ಪಿಸಿದೆ.

ಹೀಗೆ ನಿಡಸೋಸಿ ಸಿದ್ಧಸಂಸ್ಥಾನ ಮಠವು ಕೃಷಿ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಪರಂಪರೆಯ ಜೊತೆಗೆ ಮೂಢನಂಬಿಕೆ ನಿವಾರಣೆಯಂತಹ ವಿಚಾರಗಳಲ್ಲಿ ಮುಂಚೂಣಿಯಲ್ಲಿ ಕೆಲಸ ನಿರ್ವಹಿಸುತ್ತಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೊಳಂಬ ನಾಡಲ್ಲಿ ನೂತನ ಶಿಲಾಮಠ

ನೊಣವಿನಕೆರೆ ಶ್ರೀ ಕಾಡಸಿದ್ದೇಶ್ವರ ಮಠದ ಲೋಕಾರ್ಪಣೆ

ದಿನಾಂಕ : 28-06-2018

ಕಲ್ಪತರುನಾಡು ಎಂದೇ ಪ್ರಸಿದ್ಧವಾಗಿರುವ ತುಮಕೂರು ಜಿಲ್ಲೆ ಹಲವು ಮಹಾತ್ಮರ ಕರ್ಮಭೂಮಿ. ಜಗದ್ಗುರು ರೇವಣಸಿದ್ದೇಶ್ವರರು, ಎಡೆಯೂರು ಸಿದ್ಧಲಿಂಗೇಶ್ವರರು, ಗೋಸಲ ಚನ್ನಬಸವೇಶ್ವರರು, ಹಂದನಕೆರೆ ಗಿರಿಸಿದ್ದೇಶ್ವರರು, ಜೇನುಕಲ್ ಸಿದ್ದೇಶ್ವರರು ಹೀಗೆ ಹಲವು ಸತ್ಪುರಷರ ಪಾದಸ್ಪರ್ಶದಿಂದ ಪುನೀತವಾದ ನೆಲ. ಇಂತಹ ಪುಣ್ಯಭೂಮಿಯಲ್ಲಿರುವ ನೊಣವಿನಕೆರೆ ಗ್ರಾಮವು ಮಹಾತಪಸ್ವಿ ಶ್ರೀಕಾಡಸಿದ್ದೇಶ್ವರ ಸ್ವಾಮಿಗಳಿಂದ ಪ್ರಸಿದ್ಧಿಯಾಗಿದೆ. ಶ್ರೀಮಠದಲ್ಲಿ ಸದ್ಯ "ನ ಭೂತೋ ನ ಭವಿಷ್ಯತಿ" ಎಂಬಂತೆ ನಿರ್ಮಾಣಗೊಂಡ ನೂತನ ಬೃಹತ್ ಶಿಲಾಮಠದ ಲೋಕಾರ್ಪಣಾ ಸಮಾರಂಭದ ಸಂಭ್ರಮ ಮನೆ ಮಾಡಿದೆ.

ನೊಳಂಬ ರಾಜರು ಬೃಹತ್ ಕೆರೆಯೊಂದನ್ನು ಇಲ್ಲಿ ನಿರ್ಮಿಸಿದ ಕಾರಣಕ್ಕೆ ಈ ಗ್ರಾಮವು ನೊಳಂಬಕೆರೆ, ನೊಣಂಬಕೆರೆ, ನೊಣಬನಕೆರೆ ಮುಂದೆ ನೊಣವಿನಕೆರೆ ಎಂಬ ಹೆಸರು ಪಡೆದಿದೆ. ಸುಮಾರು 5 ಶತಮಾನಗಳ ಇತಿಹಾಸ ಹೊಂದಿರುವ ನೊಣವಿನಕೆರೆ ಶ್ರೀಕಾಡಸಿದ್ದೇಶ್ವರ ಮಠದ ಗುರುಪರಂಪರೆಯಲ್ಲಿ 19ಜನ ಸ್ವಾಮಿಗಳು ಆಗಿ ಹೋಗಿದ್ದಾರೆ. 17ನೇಯ ಪೀಠಾಧಿಪತಿ ಶ್ರೀಕರಿವೃಷಭ ದೇಶೀಕೇಂದ್ರ ಮಹಾಸ್ವಾಮಿಗಳ ಗದ್ದುಗೆಗೆ 15ಕೋಟಿ ರೂಪಾಯಿ ವೆಚ್ಚದಲ್ಲಿ ನೂತನವಾಗಿ ಬೃಹತ್ ಶಿಲಾಮಠ ನಿರ್ಮಾಣ ಮಾಡಲಾಗಿದ್ದು, ಇದೇ ಜು.1ರಿಂದ 5ದಿನಗಳ ಕಾಲ ಶಿಲಾಮಠದ ಲೋಕಾರ್ಪಣೆ ಕಾರ್ಯಕ್ರಮಗಳು ನಡೆಯಲಿವೆ.

ನೊಣವಿನಕೆರೆ ಮಠದ ಗದ್ದುಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಗಂಗಾಧರ ಜಗದ್ಗುರುಗಳು

ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರ ಕಿರಿಯ ಸಮಕಾಲೀನರಾಗಿದ್ದ ಶ್ರೀಮಠದ ಮೂಲಪುರುಷ ಶ್ರೀಕಾಡಸಿದ್ಧೇಶ್ವರ ಸ್ವಾಮಿಗಳು ಮೂಲತಃ ಪುಲಿಗೆರೆಯ ಸೋಮೇಶ್ವರನ ಆರಾಧಕರಾಗಿ ಲೋಕ ಸಂಚಾರ ಮಾಡುತ್ತ ತುಮಕೂರು ನಗರದಲ್ಲಿ ಸೋಮೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿ ಅದರ ಪಕ್ಕದ ಕಟ್ಟೆಯ ಮೇಲೆ ಇರುತ್ತಿದ್ದರಿಂದ ಸೋಮೇಕಟ್ಟೆ ಸ್ವಾಮಿಗಳೆಂದು ಪ್ರಸಿದ್ಧರಾಗಿದ್ದರು. ನೊಣವಿನಕೆರೆಯ ಅಡವಿಯಲ್ಲಿ ಕುಳಿತು ತಪಸ್ಸು ಮಾಡಿದ್ದರಿಂದ ಕಾಡಸಿದ್ಧೇಶ್ವರ, ಅಡವಿಸಿದ್ಧೇಶ್ವರ ಎಂದು ಜನ ಕರೆಯುತ್ತಿದ್ದರು.

ಕರಿಬಸವಸ್ವಾಮಿಗಳು ಅನುಷ್ಠಾನ ಗೈಯುವಾಗ ಬೇಟೆಗಾಗಿ ಕಾಡಿಗೆ ಬಂದ ಚಿಕ್ಕನಾಯಕನಹಳ್ಳಿ ಪಾಳೇಗಾರ ಮುದಿಯಪ್ಪನಾಯಕನು ದೂರದಿಂದ ಜಠಾಧಾರಿ ಶ್ರೀಗಳನ್ನು ಕಾಡುಮೃಗವೆಂದು ಭಾವಿಸಿ ಗುಂಡು ಹಾರಿಸುತ್ತಾನೆ. ಆದರೆ ಯೋಗಾನುಸಂಧಾನದಲ್ಲಿದ್ದ ಶ್ರೀಗಳು ಗುಂಡು ತಗುಲಿದರು ವಿಚಲಿತರಾಗದೆ ಅನುಷ್ಠಾನದಲ್ಲಿರುತ್ತಾರೆ. ನಂತರ ಜಂಗಮಮೂರ್ತಿಗೆ ಗುಂಡು ಹೊಡೆದ ಪಶ್ಚಾತ್ತಾಪದಿಂದ ಮುದಿಯಪ್ಪನಾಯಕನು ಶ್ರೀಗಳಿಗೆ ಶರಣಾಗಿ ಪರಿಹಾರಕ್ಕಾಗಿ ಮಠವನ್ನು ಕಟ್ಟಿಸಿಕೊಡುತ್ತಾನೆ. ಹೀಗೆ ಸೋಮೇಕಟ್ಟೆ ಕಾಡಸಿದ್ಧೇಶ್ವರ ಪರಂಪರೆ ಆರಂಭವಾಯಿತು.

ಮಹಾತಪಸ್ವಿಯ ಜಾಗೃತ ಸ್ಥಾನ:

ನೊಣವಿನಕೆರೆ
ಶ್ರೀಗಳು

ನೊಣವಿನಕೆರೆ ಕಾಡಸಿದ್ಧೇಶ್ವರ ಮಠದ ಗುರುಪರಂಪರೆಯಲ್ಲಿ 17ನೇ ಸ್ವಾಮಿಗಳಾಗಿದ್ದ ಶ್ರೀಕರಿವೃಷಭ ಮಹಾಸ್ವಾಮಿಗಳು ಮಹಾನ್ ತಪಸ್ವಿಗಳು, ಶಾಪಾನುಗ್ರಹ ಸಮರ್ಥರು, ಅನುಷ್ಠಾನ ಮೂರ್ತಿಗಳಾಗಿದ್ದು ಅವರ ಜೀವಂತ ಸಮಾಧಿಯು ಅತ್ಯಂತ ಜಾಗೃತ ಶಕ್ತಿ ಹೊಂದಿದೆ. ಕರಿವೃಷಬೇಂದ್ರ ಸ್ವಾಮಿಗಳು 18ನೇ ಶತಮಾನದ ವಿಧ್ವಾಂಸರಲ್ಲೋರ್ವರಾಗಿದ್ದರು. ಸ್ವತಃ 50ಕ್ಕೂ ಹೆಚ್ಚು ಕೈವಲ್ಯ ಪದಗಳನ್ನು ರಚಿಸಿರುವ ಶ್ರೀಗಳು; ಅಷ್ಟಾವರಣ ತ್ರಿವಿಧಿ, ಅಷ್ಟೋತ್ತರ ಶತ ತ್ರಿವಿಧಿ ಎಂಬ ಮೌಲ್ಯಯುತ ಕೃತಿಗಳನ್ನು ಸಹ ರಚಿಸಿದ್ದಾರೆ.

ಶ್ರೀಮಠದ ಪದ್ಧತಿಯ ಶ್ರಾವಣ ಮಾಸದ ಪಲ್ಲಕ್ಕಿ ಉತ್ಸವಕ್ಕೆ ಅನ್ಯ ಕೋಮಿನವರು ಅಡ್ಡಿಪಡಿಸಿದಾಗ ಭಕ್ತರು ಅಂದಿನ ಬ್ರಿಟೀಷ್ ಅಧಿಕಾರಿಗಳಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೊಣವಿನಕೆರೆ ಶಿಲಾಮಠ

ದೂರು ನೀಡುತ್ತಾರೆ. ದೂರಿನ ವಿಚಾರಣೆ ನಡೆಸಬೇಕಾದ ಅಧಿಕಾರಿಯ ಕನಸಿನಲ್ಲಿ ಶ್ರೀಗಳು ದರ್ಶನ ನೀಡಿ ವಿವರಣೆ ಕೊಡುತ್ತಾರೆ. ಇವರ ತಪಸ್ಸಿನ ಶಕ್ತಿಗೆ ಶರಣಾದ ಅಧಿಕಾರಿ ವಿಲಿಯಂ ಬೌರಿಂಗ್ ಕುಟುಂಬ ಸಮೇತನಾಗಿ ಮಠಕ್ಕೆ ಬಂದು ಶ್ರೀಗಳ ಆಶೀರ್ವಾದ ಪಡೆಯುತ್ತಾನೆ. ಗುರುಗಳ ಮಂತ್ರಾಕ್ಷತೆಯನ್ನು ಪಡೆದು ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆ ನಿರ್ಮಾಣ ಮಾಡಿರುವ ಇತಿಹಾಸ ಇಂದಿಗೂ ಕಣ್ಣಮುಂದಿದೆ.

ಸಮನ್ವಯದ ಸಾಕಾರಮೂರ್ತಿ:

ನೊಣವಿನಕೆರೆ ಶ್ರೀಕಾಡಸಿದ್ದೇಶ್ವರ ಮಠದ ಪ್ರಸ್ತುತ ಶ್ರೀಗಳಾದ ಶ್ರೀಕರಿವೃಷಭ ದೇಶೀಕೇಂದ್ರ ಮಹಾಸ್ವಾಮಿಗಳು 20ನೇಯವರು. ನಾಡಿನಾದ್ಯಂತ ನೊಣವಿನಕೆರೆ ಮಠದ ಪರಿಚಯವಾಗುವಲ್ಲಿ ಇವರ ಪಾತ್ರ ಹಿರಿದು. ಮೂಲತಃ ವಿಜಯಪುರ ಜಿಲ್ಲೆಯ ಸಾಲೋಟಗಿಯವರಾದ ಶ್ರೀಗಳು ವೀರಶೈವರ ಧರ್ಮಗ್ರಂಥ ಶ್ರೀಸಿದ್ಧಾಂತ ಶಿಖಾಮಣಿಯ ಕರ್ತೃ ಶ್ರೀಶಿವಯೋಗಿ ಶಿವಾಚಾರ್ಯರ ವಂಶಸ್ಥರು.

1985ರಲ್ಲಿ ನೊಣವಿನಕೆರೆ ವಿರಕ್ತ ಪರಂಪರೆಯ ಶ್ರೀಕಾಡಸಿದ್ದೇಶ್ವರ ಮಠಕ್ಕೆ ಪಟ್ಟವಾದರೂ; ಗುರು ವಿರಕ್ತ ಪರಂಪರೆಯ ಸಮನ್ವಯವನ್ನು ಸಾಧಿಸಿರುವ ಸಾಕಾರಮೂರ್ತಿಗಳಾಗಿದ್ದಾರೆ. ಮಹಾತಪಸ್ವಿ ರಂಭಾಪುರಿ ಲಿಂಗೈಕ್ಯ ಜಗದ್ಗುರು ವೀರಗಂಗಾಧರ ಮಹಾಸ್ವಾಮಿಗಳಿಂದ ಶಿವದೀಕ್ಷೆಯನ್ನು ಸ್ವೀಕರಿಸಿ 18 ವರ್ಷಗಳ ಕಾಲ ಅವರ ಸೇವೆಗೈದಿರುವ ಶ್ರೀಗಳು ಇಂದಿಗೂ ವೀರಗಂಗಾಧರ ಭಗವತ್ಪಾದರ ಆರಾಧಕರಾಗಿ ಆ ಬಲದಿಂದಲೇ ತಮ್ಮ ಕಾರ್ಯಸಿದ್ಧಿಯನ್ನು ಕಂಡುಕೊಂಡಿದ್ದಾರೆ. ಶಿವಪೂಜಾ ನಿಷ್ಠರಾಗಿ, ವಾಕ್ಸಿದ್ಧಿ ಪುರುಷರಾಗಿ ಲಕ್ಷಾಂತರ ಭಕ್ತರ ಮನಗೆದ್ದಿದ್ದಾರೆ.

ಇದೀಗ ಲೋಕಾರ್ಪಣೆಗೆ ಸಿದ್ಧಗೊಂಡಿರುವ ಶಿಲಾಮಠದ ಸತ್ಸಂಕಲ್ಪದ ರೂವಾರಿಗಳಾದ ಶ್ರೀಕರಿವೃಷಭ ದೇಶೀಕೇಂದ್ರ ಸ್ವಾಮಿಗಳು; ಮಠದ ಸರ್ವಾಂಗೀಣ ಅಭಿವೃದ್ಧಿಗೆ ಮುನ್ನುಡಿ ಬರೆದು ಕಳೆದ ಮೂರು ದಶಕಗಳಲ್ಲಿ ಅಪಾರ ಸಾಧನೆ ಗೈದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಆಂಗ್ಲ ಮಾಧ್ಯಮ ಶಾಲೆ, ಆಯುರ್ವೇದ ಆಸ್ಪತ್ರೆ, ಪ್ಯಾರಾಮೆಡಿಕಲ್ ಕಾಲೇಜು, ನಿತ್ಯ ದಾಸೋಹ ಕೇಂದ್ರ, ಗೋಶಾಲೆ ಹೀಗೆ ಹಲವು ಸಾಮಾಜಿಕ ಕೆಲಸಗಳ ಮೂಲಕ ಶ್ರೀಮಠವನ್ನು ಲೋಕಮಾನ್ಯ ಗೊಳಿಸಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೋಂಟದ ಸಿದ್ದಲಿಂಗೇಶ್ವರ ರಥೋತ್ಸವ
ಸಮನ್ವಯ ಸಿದ್ಧಾಂತಕ್ಕೆ ಸಾಕ್ಷಿ ಎಡೆಯೂರು ಕ್ಷೇತ್ರ

ದಿನಾಂಕ : 22–03–2018

ವೀರಶೈವ ಲಿಂಗಾಯತ ತತ್ವಸಿದ್ಧಾಂತಕ್ಕೆ ಹಲವು ಆಚಾರ್ಯರು, ಮಹಾತ್ಮರು, ಶರಣರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅಂತಹ ಪರಂಪರೆಯನ್ನು ಪ್ರಖರವಾಗಿ ಪ್ರಚುರ ಪಡಿಸಿದ ಶ್ರೀಸಿದ್ಧಲಿಂಗೇಶ್ವರರು ಸಮನ್ವಯದ ಸಾಕಾರಮೂರ್ತಿಗಳಾಗಿ, ಜೀವಂತ ಸಮಾಧಿಯಾದ ದಿವ್ಯ ಕ್ಷೇತ್ರವೇ ಎಡೆಯೂರು.

ಎಡೆಯೂರು ಕ್ಷೇತ್ರ ನಾಡಿನ ಲಕ್ಷಾಂತರ ಭಕ್ತರ ಆರಾಧ್ಯ ತಾಣ. ಶ್ರೀಸಿದ್ಧಲಿಂಗ ಯತಿಗಳು ನಿರ್ವಿಕಲ್ಪ ಸಮಾಧಿಸ್ತರಾದ ದಿನದಂದು ಇಲ್ಲಿ ಮಹಾರಥೋತ್ಸವ ನಡೆಯುತ್ತದೆ. ಇದೇ ಮಾ.24ರಂದು ಎಡೆಯೂರಿನಲ್ಲಿ ರಥೋತ್ಸವ ಜರುಗಲಿದ್ದು, 15 ದಿನಗಳ ಕಾಲ ವಿಶೇಷ ಜಾತ್ರೆ ನಡೆಯುತ್ತದೆ.

ವೀರಶೈವ ಲಿಂಗಾಯತ ಸಿದ್ಧಾಂತದಲ್ಲಿ ಬರುವ ವಿರಕ್ತ ಪರಂಪರೆಯಲ್ಲಿ ಶ್ರೀಸಿದ್ಧಲಿಂಗೇಶ್ವರರದ್ದು ಮಹತ್ವದ ಕಾಲಮಾನ. ತೋಂಟದ ಸಿದ್ಧಲಿಂಗೇಶ್ವರ ಪರಂಪರೆಯ ಪ್ರತ್ಯೇಕ ಛಾಪನ್ನು ಗುರುತಿಸಬಹುದು. 12ನೇ ಶತಮಾನದ ನಂತರ ತುಸು ಮಂಕಾಗಿದ್ದ ವೀರಶೈವ ಸಿದ್ಧಾಂತವನ್ನು ಮತ್ತೆ ಪ್ರಚಾರ ಮಾಡಿ ಪ್ರವರ್ಧಮಾನಕ್ಕೆ ತಂದ ಕೀರ್ತಿ ಸಿದ್ಧಲಿಂಗೇಶ್ವರರಿಗೆ ಸಲ್ಲುತ್ತದೆ. 101ಜನ ಶಿಷ್ಯರಿಗೆ ವಿರಕ್ತ ದೀಕ್ಷೆಯನ್ನು ನೀಡಿದ ತೋಂಟದ ಸಿದ್ದಲಿಂಗೇಶ್ವರರ ಪರಂಪರೆ ಇಂದು ನಾಡಿನಾದ್ಯಂತ ಹೆಮ್ಮರವಾಗಿ ಬೆಳೆದಿದೆ. ಐತಿಹಾಸಿಕವಾಗಿ ಅವರ ಕಾರ್ಯ ಎಷ್ಟು ಸಪ್ರಮಾಣವೋ ಪೌರಾಣಿಕವಾಗಿಯೂ ಅವರು ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ.

ಎಡೆಯೂರು ಸಿದ್ಧಲಿಂಗೇಶ್ವರರು

ಸಿದ್ದಲಿಂಗೇಶ್ವರರು ಬರೆದ 700ಕ್ಕೂ ಹೆಚ್ಚಿನ ವಚನಗಳು ಆಯಾ ಸ್ಥಲಕಟ್ಟುಗಳಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುಗುಣವಾಗಿ ವಿಭಾಗಿಸಲ್ಪಟ್ಟಿವೆ. ಸ್ವತಃ ಸಿದ್ಧಲಿಂಗೇಶ್ವರರೇ ಹೇಳಿರುವಂತೆ ವೀರಶೈವಾಗಮ ಮತ್ತು ಪುರಾಣ ಗ್ರಂಥಗಳನ್ನು ಪ್ರಮಾಣವಾಗಿಟ್ಟುಕೊಂಡು "ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು" ಎಂಬ ಅಂಕಿತದಲ್ಲಿ ಬರೆದಿರುವ ವಚನಗಳು ಷಟ್‌ಸ್ಥಲ ಸಿದ್ಧಾಂತದ ಸಾರಮೃತವಾಗಿವೆ.

ಎಡೆಯೂರು ರಥೋತ್ಸವ

ಸಿದ್ಧಲಿಂಗೇಶ್ವರರ ತೋಂಟದಾರ್ಯ ಪರಂಪರೆ:

15–16ನೇ ಶತಮಾನದಲ್ಲಿ ಜೀವಿಸಿದ್ದ ಶ್ರೀಸಿದ್ಧಲಿಂಗೇಶ್ವರರ ಜನ್ಮಸ್ಥಳ; ಚಾಮರಾಜನಗರ ಜಿಲ್ಲೆಯ ಹರದನಹಳ್ಳಿ ಎಂಬ ಪುಟ್ಟಗ್ರಾಮ. ಮಲ್ಲಿಕಾರ್ಜುನಯ್ಯ ಮತ್ತು ಜ್ಞಾನಾಂಬೆ ದಂಪತಿಗಳ ಪುಣ್ಯಸಂಜಾತರಾಗಿ ಜನಿಸಿದ ಶ್ರೀಸಿದ್ಧಲಿಂಗೇಶ್ವರರು ಬಾಲ್ಯದಲ್ಲಿಯೇ ಶಿವಾಚಾರ ಸಂಪನ್ನರಾಗಿದ್ದರು. ಇವರ ತೇಜಸ್ಸು–ಓಜಸ್ಸುಗಳನ್ನು ಗಮನಿಸಿದ ಹರದನಹಳ್ಳಿ ಮಠದ ಶ್ರೀಗುರು ಚನ್ನಬಸವ ದೇಶೀಕೇಂದ್ರ ಸ್ವಾಮಿಗಳು ಚರಪಟ್ಟವನ್ನು ಕಟ್ಟಿ ಗುರುಸ್ಥಾನಕ್ಕೇರಿಸಿದರು.

ನಂತರ ದೇಶದ ಎಲ್ಲ ಪ್ರಾಂತಗಳಲ್ಲಿ ಸಂಚರಿಸಿದ ಸಿದ್ಧಲಿಂಗೇಶ್ವರರು ಶಿವಾದ್ವೈತ ಸಿದ್ಧಾಂತವನ್ನು ಪ್ರಸಾರ ಮಾಡುತ್ತ, ತರ್ಕ–ಸಂಶಯಗಳಿಗೆ ಉತ್ತರ ನೀಡುತ್ತಾ, ಅಪಾರ ಪಾಂಡಿತ್ಯವನ್ನು ಸಂಪಾದಿಸಿಕೊಳ್ಳುತ್ತಾರೆ. ತಮ್ಮ ಲೋಕಸಂಚಾರದ ವೇಳೆ ಹಲವು ಮತೀಯ ಸಂಘರ್ಷಗಳನ್ನು ಸಮರ್ಥವಾಗಿ ಎದುರಿಸಿ ತಾರ್ಕಿಕ ಉತ್ತರದೊಂದಿಗೆ ಅಜ್ಞಾನಿಗಳ ಸಂಶಯ ನಿವಾರಿಸುತ್ತಾರೆ.

ಹೀಗೆ ಸಂಚಾರ ಗೈಯುತ್ತ ಹೂ–ಹಣ್ಣುಗಳ ತೋಟದಿಂದ ಕಂಗೊಳಿಸುತ್ತಿದ್ದ ಕಗ್ಗೆರೆ ಎಂಬ ಗ್ರಾಮಕ್ಕೆ ಬಂದು ತೋಟದಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ಜಂಗಮೋತ್ತಮರ ಪಾದಸ್ಪರ್ಶದಿಂದ ಹರ್ಷಗೊಂಡ ಆ ಊರಿನ ವ್ಯಾಪಾರಿಯೊಬ್ಬರು ತಮ್ಮ ಮನೆಗೆ ಆಗಮಿಸುವಂತೆ ಬಿನ್ನವಿಸಿಕೊಳ್ಳುತ್ತಾನೆ. ಆದರೆ ಪರಿಸ್ಥಿತಿಗೆ ಬಲಿಯಾಗಿ ಗ್ರಾಮಸ್ಥರು ಕೆಲ ಕಾಲ ಗ್ರಾಮವನ್ನು ತೊರೆದು ವರ್ಷ ಕಳೆದ ನಂತರ ಮರಳಿ ಬರುತ್ತಾರೆ. ಶಿಷ್ಯನ ಭಿನ್ನಹಕ್ಕೆ ಒಪ್ಪಿದ್ದ ಸಿದ್ಧಲಿಂಗೇಶ್ವರರು ಅಲ್ಲಿಯೇ ಉಳಿದಿರುತ್ತಾರೆ. ದೀರ್ಘ ಅನುಷ್ಠಾನದ ಅವಧಿಯಲ್ಲಿ ಮೈತುಂಬ ಹುತ್ತ ಬೆಳೆದಿರುತ್ತದೆ. ಗ್ರಾಮದ ಹಸುವೊಂದು ಮಹಾತ್ಮರ ಮೇಲೆ ಬೆಳೆದ ಹುತ್ತಕ್ಕೆ ಹಾಲು ಸುರಿಸುತ್ತಿರುತ್ತದೆ. ಆಗ ಸಿದ್ಧಲಿಂಗೇಶ್ವರರ ಮಹಿಮೆ ಜಗತ್ತಿಗೆ ತಿಳಿದು ಬರುತ್ತದೆ. ತೋಟದಲ್ಲಿ ಕುಳಿತು ಅನುಷ್ಠಾನ ಮಾಡಿದ ಕಾರಣಕ್ಕೆ ತೋಂಟದ ಸ್ವಾಮಿಗಳೆಂದು ಪ್ರಸಿದ್ಧಿಯಾಗುತ್ತಾರೆ. ಅಲ್ಲಿಂದ ಮುಂದೆ ತನ್ನ 101 ಶಿಷ್ಯರಲ್ಲೋರ್ವರಾದ ಬೋಳಬಸವದೇವರಿಗೆ ಶೂನ್ಯಪಟ್ಟವನ್ನು ಕಟ್ಟಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೀರ್ವದಿಸುತ್ತಾರೆ. ಬೋಳಬಸವದೇವರು ಗದಗ ಡಂಬಳದಲ್ಲಿ ತೋಂಟದಾರ್ಯ ಮಠವನ್ನು ಕಟ್ಟಿ ಈ ಪರಂಪರೆಯನ್ನು ಮುಂದುವರೆಸುತ್ತಾರೆ.

ಗುರು ವಿರಕ್ತ ಸಮನ್ವಯ ಪರಂಪರೆ:

ಎಡೆಯೂರು ಸಿದ್ಧಲಿಂಗೇಶ್ವರ ಪಲ್ಲಕ್ಕಿ

ವೀರಶೈವ ಲಿಂಗಾಯತ ಧರ್ಮದಲ್ಲಿ ಗುರುವರ್ಗ ಮತ್ತು ವಿರಕ್ತವರ್ಗ ಎಂಬ ಎರಡು ಪರಂಪರೆಗಳಿವೆ. ಅಭಿಪ್ರಾಯ ಭೇದಗಳು ಕೊಂಚವುಟ್ಟಿಗೆ ಕಂಡುಬಂದರೂ; ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳೆಂಬ ತತ್ವತ್ರಯಗಳಡಿಯಲ್ಲಿ ಆತ್ಮಸಾಧನೆ ಮಾಡಿದ ಬಹುದೊಡ್ಡ ಮಹಾತ್ಮರ ಉದಾಹರಣೆಗಳು ಸಾಕಷ್ಟಿವೆ. ಈ ಹಿನ್ನಲೆಯಲ್ಲಿ ತೋಂಟದ ಸಿದ್ಧಲಿಂಗೇಶ್ವರರು ಸಮನ್ವಯದ ಸಾಕಾರ ಮೂರ್ತಿಗಳಾಗಿದ್ದರು. ಎಡೆಯೂರು ಕ್ಷೇತ್ರದಲ್ಲಿ ಇಂದಿಗೂ ಆ ಸಮನ್ವಯ ತತ್ವವನ್ನು ಕಾಣಬಹುದು. ರಂಭಾಪುರಿ ಮೂಲ ಪೀಠವು ಮಲೆನಾಡಿನ ಮಧ್ಯದಲ್ಲಿರುವುದರಿಂದ ಮಳೆಗಾಲದಲ್ಲಿ ಕೆಲ ಕಾಲ ವಾಸ್ತವ್ಯ ಹೂಡಲು ಖಾಸಾ ಶಾಖಾ ಮಠವನ್ನು ಎಡೆಯೂರಿನಲ್ಲಿ ಸ್ಥಾಪಿಸಲಾಗಿತ್ತು. ಬಹುತೇಕ ಎಲ್ಲ ಜಗದ್ಗುರುಗಳು ಇಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಶ್ರೀತೋಂಟದ ಸಿದ್ದಲಿಂಗ ಯತಿಗಳು ಸ್ವತಃ ಗುರುವರ್ಗದ ಆಚಾರ್ಯರನ್ನು ತಮ್ಮ ವಚನದಲ್ಲಿ ಹಾಡಿ ಹೊಗಳಿದ್ದಾರೆ.

ಆದಿಯಲ್ಲಿ ಶಿವತತ್ವದಲ್ಲಿ ರೇಣುಕನುದಯನಾಗದಿದ್ದರೆ
ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯೆಂತೋ
ಆ ಶಿವಲಿಂಗದಲ್ಲಿಯೇ ಹುಟ್ಟಿ ಶಿವನಲ್ಲಿಯೇ ಲಯವಾದ
ರೇವಣಸಿದ್ದೇಶ್ವರನು ಅನಾದಿ ಮುಕ್ತನಲ್ಲ ಅವಾಂತರಮುಕ್ತನೆಂಬ ಅಜ್ಞಾನಿಗಳಿಗೆ
ನಾಯನರಕ ತಪ್ಪದು ಮಹಾಲಿಂಗಗುರು ಶಿವಸಿದ್ದೇಶ್ವರ ಪ್ರಭುವೇ ॥

ಶಿಂಶಾನದಿ ದಂಡೆಯಲ್ಲಿರುವ ಎಡೆಯೂರು ಗ್ರಾಮಕ್ಕೆ ಬಂದ ಸಿದ್ಧಲಿಂಗೇಶ್ವರರು ಇಲ್ಲಿನ ಆಧ್ಯಾತ್ಮ ಪರಿಸರವನ್ನು ಕಂಡು ಇಲ್ಲಿಯೇ ಜೀವಂತ ಸಮಾಧಿಯಾಗಲು ನಿರ್ಧರಿಸುತ್ತಾರೆ. ಅಲ್ಲಿದ್ದ ಶ್ರೀರಂಭಾಪುರಿ ಖಾಸಾ ಶಾಖಾ ಮಠದ ಶ್ರೀಚಿಟ್ಟುಗದೇವ ಸ್ವಾಮಿಗಳಲ್ಲಿ ಈ ಕುರಿತು ಮನದಿಚ್ಛೆಯನ್ನು ವ್ಯಕ್ತಪಡಿಸಿದಾಗ, ಸ್ವಾಮಿಗಳು ಊರ ಪ್ರಮುಖರೊಂದಿಗೆ ಚರ್ಚಿಸಿ, ಕ್ಷೇತ್ರನಾಥ ವೀರಭದ್ರಸ್ವಾಮಿಯ ಅಪ್ಪಣೆಯನ್ನು ಪಡೆದು ದೇವಾಲಯದ ಪಕ್ಕದಲ್ಲೇ ನಿರ್ವಿಕಲ್ಪ ಸಮಾಧಿಸ್ತರಾಗಲು ಸ್ಥಳವನ್ನು ತೋರುತ್ತಾರೆ. ಸಿದ್ದಲಿಂಗೇಶ್ವರರ ಗದ್ದುಗೆಯ ಪಕ್ಕದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಡೆಯೂರಿನಲ್ಲಿರುವ ಬಾಳೆಹೊನ್ನೂರು ಮಠ, ಶ್ರೀ ಸಿದ್ಧಲಿಂಗೇಶ್ವರ ದೇವಸ್ಥಾನ

ಇಂದಿಗೂ ಶ್ರೀವೀರಭದ್ರಸ್ವಾಮಿಯ ಪ್ರಾಚೀನ ಮೂರ್ತಿ ಇದ್ದು, ನಿತ್ಯ ಪೂಜೆ ನಡೆಯುತ್ತಿದೆ.

ಸಿದ್ದಲಿಂಗೇಶ್ವರರು ಈ ಮಠಕ್ಕೆ ಭೇಟಿ ನೀಡಿದಾಗ ಅವರಿಗೆ ಕೋಸುಂಬರಿ ಪಾನಕ ನೀಡಿ ಆತಿಥ್ಯ ಮಾಡಲಾಗಿತ್ತು. ಅಂತೆಯೇ ರಥೋತ್ಸವದ ಹಿಂದಿನ ದಿನ ಸಿದ್ದಲಿಂಗೇಶ್ವರರ ಉತ್ಸವವು ಶ್ರೀಮಠಕ್ಕೆ ಬಿಜಯಂಗೈದು ರಥೋತ್ಸವಕ್ಕೆ ಆಹ್ವಾನ ನೀಡಲಾಗುತ್ತದೆ. ಈ ಸಂದರ್ಭದಲ್ಲಿ ಕೋಸಂಬರಿ ಪಾನಕವನ್ನು ವಿತರಿಸುವ ಪರಂಪರೆ ಅಂದಿನಿಂದ ಇಂದಿಗೂ ಮುಂದುವರೆದುಕೊಂಡು ಬಂದಿದೆ. ದೇವಾಲಯವು ಮುಜರಾಯಿ ಇಲಾಖೆಯ ಅಧೀನದಲ್ಲಿದ್ದು, ಎಡೆಯೂರಿನ ರಂಭಾಪುರಿ ಖಾಸಾ ಶಾಖಾ ಮಠದ ಶ್ರೀರೇಣುಕ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಧಾರ್ಮಿಕ ವಿಧಿವಿಧಾನಗಳು ನಡೆಯುತ್ತವೆ.

ಶ್ರೀರೇಣುಕಾಚಾರ್ಯರ ಮತ್ತು ಶ್ರೀಸಿದ್ದಲಿಂಗೇಶ್ವರರ ಮೆರವಣಿಗೆಯು ಶ್ರೀಮಠಕ್ಕೆ ಬಂದು ಸಂಪನ್ನಗೊಳ್ಳುತ್ತದೆ. ರಥೋತ್ಸವದಂದು ಬಾಳೇಹೊನ್ನೂರು ಶಾಖಾ ಮಠದ ತೆಂಗಿನ ಕಾಯಿಯನ್ನು ರಥಕ್ಕೆ ಒಡೆದ ನಂತರವಷ್ಟೇ ರಥೋತ್ಸವಕ್ಕೆ ಚಾಲನೆ ದೊರೆಯುತ್ತದೆ. ವಿರಕ್ತ ಪರಂಪರೆಯ ಶಿವಯೋಗಿಗಳಿಗೂ, ಗುರುವರ್ಗದ ರಂಭಾಪುರಿ ಖಾಸಾ ಶಾಖಾ ಮಠಕ್ಕೂ ಧಾರ್ಮಿಕ, ಸಾಂಸ್ಕೃತಿಕವಾದ ಅವಿನಾಭಾವ ಸಂಬಂಧವಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿರಕ್ತ ಪರಂಪರೆಯ ವಿಶಿಷ್ಟ ಮಠ ಚಿಕ್ಕಸೂಗೂರು
ಚೌಕಿಮಠದ ಶ್ರೀ ಸಿದ್ಧರಾಮೇಶ್ವರ ಜಾತ್ರೆ

ದಿನಾಂಕ : 04-10-2018

ಕನ್ನಡ ನಾಡು ವಿಶಿಷ್ಟ ಸಂಸ್ಕೃತಿಯ ಬೀಡು. ಇಲ್ಲಿನ ತತ್ವಸಿದ್ಧಾಂತಗಳು, ಸಂಪ್ರದಾಯ ಪರಂಪರೆಗಳು ಕೂಡಾ ಅಷ್ಟೇ ಭಿನ್ನ. ನಮ್ಮ ನಾಡಿನ ಮಠ ಪರಂಪರೆ ಇಡೀ ದೇಶಕ್ಕೇ ಮಾದರಿ ಎನ್ನಬಹುದು. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ಮಠಗಳ ಕೊಡುಗೆ ಅಪಾರ. ಇಂತಹ ಮಠಪರಂಪರೆಯಲ್ಲಿ ಚೌಕಿಮಠವು ಅತ್ಯಂತ ವಿಶಿಷ್ಟ ಸ್ಥಾನದಲ್ಲಿ ನಿಲ್ಲುತ್ತದೆ.

ರಾಯಚೂರು ನಗರಕ್ಕೆ ಹೊಂದಿಕೊಂಡಿರುವ ಚಿಕ್ಕಸೂಗೂರ ಗ್ರಾಮದಲ್ಲಿರುವ ಚೌಕಿಮಠವು ಈ ನಾಡಿನ ಪ್ರತಿಷ್ಠಿತ ಮಠಗಳಲ್ಲೊಂದು. ಚೌಕಿಮಠವೂ ವೀರಶೈವ ಧರ್ಮದ ವಿರಕ್ತ ಪರಂಪರೆಗೆ ಸೇರಿದೆ. ಚಿತ್ರದುರ್ಗದ ಮುರುಘಾ ಪರಂಪರೆ, ಹುಬ್ಬಳ್ಳಿ ಮೂರುಸಾವಿರ ಮಠದ ಪರಂಪರೆಗಳಂತೆಯೇ 'ಕೆಂಪಿನ ಸಮಯ'ದ ಪರಂಪರೆ ಕೂಡಾ ಪ್ರಮುಖವಾದದ್ದು. 12ನೇ ಶತಮಾನದಲ್ಲಿ ಅಲ್ಲಮಪ್ರಭುಗಳಿಂದ ಆರಂಭವಾದ ಶೂನ್ಯ ಸಿಂಹಾಸನ ಪರಂಪರೆಯು ನಾಡಿನ ವಿವಿಧೆಡೆಗಳಲ್ಲಿ ಏಕಕಾಲದಲ್ಲಿ ಮುಂದುವರೆಯಿತು. ಅಂತಹ ಶೂನ್ಯ ಪರಂಪರೆಯನ್ನು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಪ್ರಬಲವಾಗಿ ಪ್ರಸಾರ ಮಾಡಿದ್ದು ಕೆಂಪಿನ ಸಮಯದ ಕೋಡಂಗಲ್ ಮೂಲದ ವಿರಕ್ತಮಠ.

ಚಿಕ್ಕಸೂಗೂರು ಗದ್ದುಗೆ

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಪೀಠವೆಂದು ಪ್ರಸಿದ್ಧವಾಗಿರುವ ಕೋಡಂಗಲ್ ಮಠದ ಮೂಲ ಪುರುಷರು ಶ್ರೀ ನಿರಂಜನ ಮಹಾಸ್ವಾಮಿಗಳು. ಇವರಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರೇರಿತರಾಗಿ ಈ ಪರಂಪರೆಯನ್ನು ಮುಂದುವರೆಸಿದ ಮಹಾ ಶಿವಯೋಗಿ ಶ್ರೀವೈರಾಗ್ಯಚನ್ನಬಸವ ಸ್ವಾಮಿಗಳು ಈ ಪರಂಪರೆಯನ್ನು ಬಹುವಿಸ್ತಾರವಾಗಿ ಬೆಳೆಸಿದರು.

ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು

ಮೈಸೂರು ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ವಿರಕ್ತ ಪರಂಪರೆಗಳಲ್ಲಿರುವಷ್ಟು ಪ್ರಚಾರ ಕೆಂಪಿನ ಸಮಯದ ಪರಂಪರೆಯಲ್ಲಿ ಇಲ್ಲದ ಕಾರಣಕ್ಕೆ ಶ್ರೀಮಠದ ಸುದೀರ್ಘ ಪರಂಪರೆಯ ಪರಿಚಯ ಬೇರೆ ಭಾಗಗಳಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ಆದರೂ 'ನಿರಂಜನ ವಂಶ ರತ್ನಾಕರ', 'ಚಿಕ್ಕಸೂಗೂರು ಚಿತ್ಕಳೆ', 'ಕರ್ನಾಟಕ ವೀರಶೈವ ಮಠಗಳು' ಸೇರಿದಂತೆ ಹಲವು ಪ್ರಮುಖ ಕೃತಿಗಳಲ್ಲಿ ಮತ್ತು ಸಾಕಷ್ಟು ಶಾಸನಗಳಲ್ಲೂ ಶ್ರೀಮಠದ ಉಲ್ಲೇಖವಿದೆ. ನಿಜಾಮರ ಆಡಳಿತಾವದಿಯಲ್ಲಿ ಈ ಮಠದ ಚೌಕಿಯಲ್ಲಿ ನ್ಯಾಯ ತೀರ್ಮಾನಗಳು ನಡೆಯುತ್ತಿದ್ದವೆಂಬ ಕಾರಣಕ್ಕೆ ಈ ಮಠಕ್ಕೆ ಚೌಕಿ ಮಠವೆಂಬ ಹೆಸರು ಬಂದಿದೆ.

770 ಶಾಖಾಮಠಗಳ ಸ್ಥಾಪನೆ:

ಕೆಂಪಿನ ಸಮಯುದ ಕೋಡಂಗಲ್ ವಿರಕ್ತಮಠದ ಪರಂಪರೆಯು ಚಿಕ್ಕಸೂಗೂರ ಚೌಕಿಮಠದ ಮೂಲ ಬಸವತೀರ್ಥ ಮಠ. ಬಸವತೀರ್ಥವೂ 12ನೇ ಶತಮಾನದಲ್ಲಿ ಬಸವಣ್ಣನವರು ನಡೆದಾಡಿ ಪೂಜೆ, ಪ್ರಸಾದ ಮಾಡಿದ ಕ್ಷೇತ್ರ. ಇಲ್ಲಿ ಬಸವಣ್ಣನವರ ಪಾದೋದಕದಿಂದ ನಿರ್ಮಾಣಗೊಂಡ ಕೊಂಡವನ್ನೇ ಬಸವತೀರ್ಥ ಎಂದು ಕರೆಯುವುದು ಪ್ರತೀತಿ. ಅಂತಹ ಬಸವತೀರ್ಥ ಮಠದ ಅಧಿಪತಿಗಳಾಗಿದ್ದ ವೈರಾಗ್ಯ ಚನ್ನಬಸವ ಶಿವಯೋಗಿಗಳು ಮಹಾ ತಪಸ್ವಿಗಳಾಗಿದ್ದರು. ಇವರ ಕಾಲದಲ್ಲೇ ಶ್ರೀಮಠದ ವ್ಯಾಪ್ತಿ ವಿಸ್ತಾರವಾಯಿತು.

ಹೈದ್ರಾಬಾದ್ ಕರ್ನಾಟಕ ಭಾಗವನ್ನು ಕಾರ್ಯಕ್ಷೇತ್ರವನ್ನಾಗಿಸಿಕೊಂಡಿದ್ದ ಶ್ರೀಗಳು ತಮ್ಮ ಲೋಕಸಂಚಾರದ ವೇಳೆ ಒಂದು ನಿಯುಮವನ್ನು ರೂಢಿಸಿಕೊಂಡಿದ್ದರು. ಒಂದು ಊರಿನಲ್ಲಿ ಒಂದೇ ದಿನ ವಾಸ್ತವ್ಯ ಮಾಡಿ ಸ್ನಾನಾದಿ ಪೂಜಾನುಷ್ಠಾನಗಳನ್ನು ಮಾಡುತ್ತಿದ್ದರೇ ವಿನಃ ಮರುದಿನ ಅಲ್ಲಿ ಇರುತ್ತಿರಲಿಲ್ಲ. ಹೀಗೆ ಪೂಜ್ಯರು ವಾಸ್ತವ್ಯ ಮಾಡಿದ ಪ್ರತಿ ಊರುಗಳಲ್ಲೂ ಅವರ ಶಿಷ್ಯರು ಮಠಗಳನ್ನು ಸ್ಥಾಪಿಸಿದ್ದಾರೆ. ಹಾಗೆ ಸ್ಥಾಪನೆಯಾದ ಮಠಗಳ ಸಂಖ್ಯೆ ಬರೋಬ್ಬರಿ 770.

ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ ಆಂಧ್ರ ಮತ್ತು ತೆಲಂಗಾಣದ ಹೈದ್ರಾಬಾದ್, ಸಿಕಂದ್ರಾಬಾದ್, ಮೆಹಬೂಬ್ನಗರ, ರಂಗಾರೆಡ್ಡಿ, ಸಂಗಾರೆಡ್ಡಿ, ಮೇಧಕ್, ಶಂಶಾಬಾದ್ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸಾಕಷ್ಟು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಠಗಳು ಅಸ್ತಿತ್ವ ಕಳೆದು ಕೊಂಡಿವೆಯಾದರೂ ಇಂದಿಗೂ ಸುಮಾರು 200ಕ್ಕೂ ಹೆಚ್ಚಿನ ಶಾಖಾ ಮಠಗಳು ಕೋಡಂಗಲ್ ನಿರಂಜನ ಜಗದ್ಗುರು ಪೀಠದ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿವೆ.



ಚಿಕ್ಕಸೂಗೂರು ಚೌಕಿಮಠ

119ನೇ ಜಾತ್ರಾ ಮಹೋತ್ಸವ:

ಚಿಕ್ಕಸೂಗೂರು ಚೌಕಿಮಠದಲ್ಲಿ ಪ್ರತಿವರ್ಷ ಜಾತ್ರಾ ಮಹೋತ್ಸವವು ಅದ್ದೂರಿಯಾಗಿ ನಡೆಯುತ್ತದೆ. ವಿಜಯದಶಮಿಯಾಗಿ 10 ದಿನಗಳಾದ ನಂತರ ಬರುವ ಆಶ್ವೀಜ ಮಾಸದ ಪಂಚಮಿಯಂದು ಶ್ರೀಮಠದ ಕರ್ತೃ ಶ್ರೀಸಿದ್ಧರಾಮೇಶ್ವರ ಸ್ವಾಮಿಯ ಮಹಾರಥೋತ್ಸವ ನಡೆಯಲಿದೆ.

ಚೌಕಿಮಠದ ಪ್ರಸ್ತುತ ಪೀಠಾಧ್ಯಕ್ಷರಾದ ಶ್ರೀ.ಮ.ನಿ.ಪ್ರ. ಡಾ.ಸಿದ್ಧಲಿಂಗ ಮಹಾಸ್ವಾಮಿಗಳ ಸಂಕಲ್ಪದಂತೆ ಒಂದು ವಾರಗಳ ಕಾಲ ನಿರಂತರವಾಗಿ ನಡೆಯುವ ಜಾತ್ರಾ ಮಹೋತ್ಸವದ ಅಂಗವಾಗಿ ಅ.3ರಿಂದ ಭೀಮಕವಿ ವಿರಚಿತ ಬಸವ ಪುರಾಣ ಪ್ರವಚನ ನಡೆಯುತ್ತಿದೆ. ಅ.9 ರಂದು ಷಟಸ್ಥಲ ಧ್ವಜಾರೋಹಣ ಅ.10 ರಂದು ಮಹಾರಥೋತ್ಸವ ನಡೆಯಲಿದೆ. ಅಂದು ಬೆಳಿಗ್ಗೆ ವಿವಿಧ ಮಠದ ಪೂಜ್ಯರ ಸಮ್ಮುಖದಲ್ಲಿ ಸಿದ್ಧರಾಮೇಶ್ವರರ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಗಣಾರಾಧನೆ, ಧರ್ಮಸಭೆ ಇತ್ಯಾದಿ ಧಾರ್ಮಿಕ ವಿಧಿವಿಧಾನಗಳು ನಡೆಯಲಿವೆ.

ರಥೋತ್ಸವದಲ್ಲಿ ಅಸಂಖ್ಯಾತ ಭಕ್ತರು ಪದ್ಧತಿಯಂತೆ ಉಪವಾಸ ವ್ರತ ಕೈಗೊಂಡು ಪಾಲ್ಗೊಳ್ಳುತ್ತಾರೆ. ರಥೋತ್ಸವದ ನಂತರ ಸರ್ವರಿಗೂ ಪ್ರಸಾದ ವಿತರಣೆ ನಡೆಯುತ್ತದೆ. ಅ.11ರಂದು ಸಂಜೆ ಪದ್ಧತಿಯಂತೆ ಉಚ್ಚಾಯ ಮಹೋತ್ಸವ ಹಾಗೂ ಕಡುಬಿನ ಕಾಳಗ ಎಂಬ ಸಾಂಪ್ರದಾಯಿಕ ಉತ್ಸವಗಳು ನಡೆಯುತ್ತವೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ನಾಡಿನ ಹಲವಾರು ಮಠಾಧೀಶರು,ರಾಜಕೀಯ ಮುಖಂಡರು, ಸಾವಿರಾರು ಸದ್ಭಕ್ತರು ಪಾಲ್ಗೊಳ್ಳಲಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವತೆಗಳ ತವರು ದೇಗುಲಮಠ

ಶರಣ ಪರಂಪರೆಯ ಕುರುಹು ಆದಿನಿರ್ವಾಣ ಸ್ವಾಮಿಗಳು

ದಿನಾಂಕ : 15-11-2018

ಕನ್ನಡ ನಾಡಿನಲ್ಲಿ ಮಠ ಸಂಸ್ಕೃತಿಗೆ ವಿಶೇಷ ನೆಲೆಗಟ್ಟಿದೆ. ಅಂತಹ ಮಠಸಂಸ್ಕೃತಿಯ ವಿಸ್ತರಣೆಗೆ ಬಹುದೊಡ್ಡ ಆಯಾಮವನ್ನು ತಂದು ಕೊಟ್ಟಿದ್ದು 12ನೇ ಶತಮಾನದ ಶರಣ ಪರಂಪರೆ. ಆ ಕಾಲ ಘಟ್ಟದಿಂದ ಮುಂದುವರೆದು ಶರಣಪರಂಪರೆಯನ್ನು ಎತ್ತಿ ಹಿಡಿದ ವೀರಶೈವ ಮಠಗಳ ಪೈಕಿ ಕನಕಪುರದ ಶ್ರೀದೇಗುಲಮಠವೂ ಒಂದು.

ಮೈಸೂರು ಕರ್ನಾಟಕ ಭಾಗದ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಿ ಮಠಗಳಲ್ಲಿ ಒಂದಾಗಿರುವ ದೇಗುಲ ಮಠಕ್ಕೆ 6 ಶತಮಾನಗಳ ಇತಿಹಾಸವಿದೆ. ನಮ್ಮ ಧಾರ್ಮಿಕ ಪರಂಪರೆಯಲ್ಲಿ ಮಠ-ಮಂದಿರ ಎಂಬ ಜೋಡಿ ಪದವಿದೆ. ಇದು ಒಂದೇ ಪದವಾಗಿ ಬಳಕೆಯಾಗುವ ವಿಶೇಷ ಕ್ಷೇತ್ರ ದೇಗುಲಮಠ!

ದೇಗುಲ ಎಂದರೆ ದೇವಸ್ಥಾನ, ಮಠ ಎಂದರೆ ಗುರುಸ್ಥಾನ. ದೇವರು ಮತ್ತು ಗುರುವಿನ ಸ್ಥಾನವಾಗಿ ದೇಗುಲಮಠ ಪ್ರಸಿದ್ಧವಾಗಿದೆ. ಕನಕಪುರದ ಸುತ್ತಮುತ್ತಲಿರುವ ಎಲ್ಲ ದೇವಾನುದೇವತೆಗಳ ಉತ್ಸವ ಮೂರ್ತಿಗಳು ವರ್ಷಕ್ಕೊಮ್ಮೆ ಜಾತ್ರೆಗೆ ಶ್ರೀಮಠಕ್ಕೆ ಆಗಮಿಸಿ ಮಠದ ಆತಿಥ್ಯವನ್ನು ಸ್ವೀಕರಿಸಿ ಹೋಗುವ ಪದ್ಧತಿ ಇದೆ. ದೇವತೆಗಳೆಲ್ಲ ವರ್ಷಕ್ಕೊಮ್ಮೆ ಇಲ್ಲಿಗೆ ಬಂದು ಹೋಗುವುದರಿಂದ ದೇವತೆಗಳಿಗೆ ಮಠವೇ ತವರುಮನೆ ಎಂಬ ಕಾರಣಕ್ಕೆ ಈ ಮಠಕ್ಕೆ ದೇಗುಲಮಠ ಎಂಬ ಹೆಸರು ಬಂದಿದೆ. ಈ ಪದ್ಧತಿಯುನ್ನು ಇಂದಿಗೂ ನೋಡಬಹುದು.


ದೇಗುಲಮಠದ ನಿರ್ವಾಣಸ್ವಾಮಿ ಗದ್ದುಗೆ

ದೇಗುಲ ಮಠದ ಗುರುಪರಂಪರೆ :

ಬಸವಾದಿ ಪ್ರಮಥರಿಂದ ಆರಂಭವಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇಗುಲಮಠದ ಸ್ವಾಮೀಗಳು

ವಿರಕ್ತ ಪರಂಪರೆಯಲ್ಲಿ ಆದಿನಿರ್ವಾಣ ಸ್ವಾಮಿಗಳು ಕೂಡಾ ಪ್ರಮುಖರು. ಈಗಿನ ಕನಕಪುರವು ಆ ಕಾಲಕ್ಕೆ ಕಾನಕನಹಳ್ಳಿ ಎಂದು ಕರೆಯಲ್ಪಡುತ್ತಿದ್ದ ಪುಟ್ಟ ಗ್ರಾಮ. ದಟ್ಟವಾಗಿದ್ದ ಕಾಡುಪ್ರದೇಶಕ್ಕೆ ಆಗಮಿಸಿದ ಆದಿ ನಿರ್ವಾಣ ಸ್ವಾಮಿಗಳು ಗುಡಿಸಲನ್ನು ಕಟ್ಟಿಕೊಂಡು ಶಿವಯೋಗ ಮಾಡುತ್ತಾ ಆಧ್ಯಾತ್ಮ ಸಾಧನೆಯಲ್ಲಿ ತೊಡುಗುತ್ತಾರೆ. ನಿರ್ವಾಣ ಸ್ವಾಮಿಗಳ ತಪಸ್ಸಿನ ಶಕ್ತಿ ಸುತ್ತಮುತ್ತಲ ಪ್ರದೇಶದಲ್ಲಿ ಪ್ರಚಾರವಾಗಿ ಭಕ್ತರು ಆಗಮಿಸುತ್ತಾರೆ. ತಮ್ಮ ಕಷ್ಟ-ನಷ್ಟಗಳನ್ನು ಹೇಳಿಕೊಂಡು ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಇದೇ ಜಾಗದಲ್ಲಿ ಮಠವನ್ನು ಕಟ್ಟಿ ಮುಂದೆ ನಿರ್ವಾಣ ಸ್ವಾಮಿಗಳು ಐಕ್ಯರಾದ ನಂತರ ಇಲ್ಲಿಯೇ ಗದ್ದುಗೆ ನಿರ್ಮಿಸಲಾಗಿದೆ.

ಹೀಗೆ ಆರಂಭವಾದ ದೇಗುಲ ಮಠದ ಪರಂಪರೆಯಲ್ಲಿ ಸುಮಾರು 14ಜನ ಸ್ವಾಮಿಗಳು ಇದುವರೆಗೂ ಇಲ್ಲಿನ ಶೂನ್ಯ ಸಿಂಹಾಸನಾರೋಹಣ ಮಾಡಿದ್ದಾರೆ. ಅನೇಕ ತಪಸ್ವಿಗಳು, ಪವಾಡ ಪುರುಷರು, ಸಾಮಾಜಹಿತ ಚಿಂತಕರನ್ನು ಕಂಡಿರುವ ದೇಗುಲಮಠ ಪರಂಪರೆಯಲ್ಲಿ ಇಮ್ಮಡಿ ನಿರ್ವಾಣ ಸ್ವಾಮಿಗಳು ಹಾಗೂ ಶ್ರೀಇಮ್ಮಡಿ ಮಹಾಲಿಂಗ ಸ್ವಾಮಿಗಳ ಕಾಲಾವಧಿಯಲ್ಲಿ ಮಠದ ಚರಿತ್ರೆ ಗಮನಾರ್ಹವಾದ ಬೆಳವಣಿಗೆ ಕಂಡಿದೆ.

ಸದ್ಯ ಇರುವ 13ನೇ ಮುಮ್ಮಡಿ ಡಾ.ನಿರ್ವಾಣ ಮಹಾಸ್ವಾಮಿಗಳು ಕಳೆದ ನಾಲ್ಕು ದಶಕಗಳಿಂದ ಮಠದ ಸರ್ವಾಂಗೀಣ ಅಭಿವೃದ್ಧಿಯ ಜೊತೆಗೆ ಉತ್ಕೃಷ್ಟ ಧರ್ಮ ಪರಂಪರೆಯನ್ನು ಮುನ್ನಡೆಸಿದ್ದಾರೆ. ಇವರ ಉತ್ತರಾಧಿಕಾರಿಗಳಾಗಿ ಬಂದ ಮುಮ್ಮಡಿ ಮಹಾಲಿಂಗ ಸ್ವಾಮಿಗಳು 19 ವರ್ಷಗಳ ಕಾಲ ಮಠದ ಬೆಳವಣಿಗೆಗೆ ಹಲವು ರಚನಾತ್ಮಕ ಕಾರ್ಯಗಳನ್ನು ರೂಪಿಸಿದ್ದರು. ಕಿರಿಯ ವಯಸ್ಸಿನಲ್ಲೇ ಶ್ರೀಗಳು ಅನಾರೋಗ್ಯಕ್ಕೆ ತುತ್ತಾಗಿ ಲಿಂಗೈಕ್ಯರಾದ್ದರಿಂದ ಹಿರಿಯ ಶ್ರೀಗಳು ನೂತನ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿದ್ದಾರೆ.

ಗ್ರಾಮೀಣ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ:

ಕನಕಪುರ ದೇಗುಲಮಠವು ಕೇವಲ ಧಾರ್ಮಿಕ ಪರಂಪರೆಯಲ್ಲಷ್ಟೇ ಅಲ್ಲದೇ ಸಾಮಾಜಿಕವಾಗಿ ಹಲವು ಮಹತ್ವದ ಕೊಡುಗೆಯನ್ನು ನೀಡಿದೆ. ಸುಮಾರು 5 ದಶಕಗಳ ಹಿಂದೆ ಸ್ಥಾಪನೆಗೊಂಡಿರುವ ಶ್ರೀನಿರ್ವಾಣಸ್ವಾಮಿ ವಿದ್ಯಾಪೀಠವು ಬಡವಿದ್ಯಾರ್ಥಿಗಳ ಪಾಲಿಗೆ ಜ್ಞಾನಗಂಗೆಯಾಗಿದೆ.

ಇಮ್ಮಡಿ ಮಹಾಲಿಂಗ ಸ್ವಾಮಿಗಳ ಕಾಲದಲ್ಲಿ 1962ರಲ್ಲಿ 3ಪ್ರೌಢಶಾಲೆಗಳನ್ನು ತೆರೆದ ವಿದ್ಯಾಪೀಠವು 1970ರಲ್ಲಿಯೇ ಉಚಿತ ವಸತಿನಿಯಲವನ್ನು ತೆರೆದು 400 ಬಡ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿತ್ತು. ಸದ್ಯ ಶ್ರೀಮಠದ ಉಚಿತ ವಿದ್ಯಾರ್ಥಿ ನಿಲಯದಲ್ಲಿ 1200 ವಿದ್ಯಾರ್ಥಿಗಳಿದ್ದಾರೆ. ಶ್ರೀಮುಮ್ಮಡಿ ನಿರ್ವಾಣ ಸ್ವಾಮಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಮಠದ ಪಟ್ಟಾಧಿಕಾರವನ್ನು ಸ್ವೀಕರಿಸಿದ ನಂತರ ಶೈಕ್ಷಣಿಕ ಸೇವೆಗೆ ಮೊದಲ ಆದ್ಯತೆಯನ್ನು ನೀಡಿ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದಿದ್ದಾರೆ.

ಸದ್ಯ ನಿರ್ವಾಣ ಸ್ವಾಮಿ ವಿದ್ಯಾಪೀಠದ ಅಧೀನದಲ್ಲಿ 9 ಪ್ರೌಢಶಾಲೆ, 6 ಪ್ರಾಥಮಿಕ ಶಾಲೆ, 3 ಪಿಯುಸಿ ಕಾಲೇಜು, 6 ಸಂಸ್ಕೃತ ಪಾಠಶಾಲೆ ಹಾಗೂ ಐಟಿಐ, ಬಿಎಡ್ ಮತ್ತು ನರ್ಸಿಂಗ್ ಸೇರಿದಂತೆ ಒಟ್ಟು 33 ಸಂಸ್ಥೆಗಳು ನಡೆಯುತ್ತಿವೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರೆಯಬೇಕೆಂಬ ಕಾರಣಕ್ಕೆ ಸಿಬಿಎಸ್ಸಿ ಶಾಲೆಯನ್ನು ಸಹ ಶ್ರೀಮಠ ನಡೆಸುತ್ತಿದೆ. ಇಲ್ಲಿ ಕರ್ನಾಟಕ, ಆಂಧ್ರ ಮತ್ತು ತಮಿಳುನಾಡಿನ ಬಡವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ.

ವಿದ್ಯಾರ್ಥಿಗಳಿಗೆ ಔಪಚಾರಿಕ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣಕ್ಕೆ ಒತ್ತು ನೀಡಲಾಗಿದ್ದು, ಯೋಗ, ಧ್ಯಾನ, ಸಾಮೂಹಿಕ ಪ್ರಾರ್ಥನೆ ಹಾಗೂ ಗುರು ಹಿರಿಯರಿಂದ ದೇಶ, ಧರ್ಮ, ಸಂಸ್ಕೃತಿಯ ಕುರಿತ ಉಪದೇಶವನ್ನು ನೀಡುವ ಮೂಲಕ ವಿದ್ಯಾರ್ಥಿಗಳನ್ನು ಮುಂದಿನ ಸತ್ಪ್ರಜೆಗಳನ್ನಾಗಿ ಮಾಡುವ ಮಹತ್ವದ ಜವಾಬ್ದಾರಿಯನ್ನು ಶ್ರೀಮಠ ನಿರ್ವಹಿಸುತ್ತಿದೆ.

ನಿರಂಜನ ಪಟ್ಟಾಧಿಕಾರ ಮಹೋತ್ಸವ:

ನಾಡಿನ ಮಠಗಳಲ್ಲಿ ಪ್ರಮುಖವಾಗಿರುವ ಕನಕಪುರದ ದೇಗುಲಮಠದ ನೂತನ ಶ್ರೀಗಳ ನಿರಂಜನ ಪಟ್ಟಾಧಿಕಾರವು ಇದೇ ನ.17 ಮತ್ತು 18ರಂದು ನಾಡಿನ ವಿವಿಧ ಮಠಾಧೀಶರು ಮತ್ತು ಗಣ್ಯರ ಸಮ್ಮುಖದಲ್ಲಿ ನಡೆಯಲಿದೆ.

ನೊಣವಿನಕೆರೆ ಶ್ರೀಕರಿವೃಷಭ ದೇಶೀಕೇಂದ್ರ ಸ್ವಾಮಿಗಳ ನೇತೃತ್ವದಲ್ಲಿ ಅಗ್ರೋದಕ, ಮಹಾಗಣಪತಿ ಪೂಜೆ, ಸ್ವಸ್ತಿವಾಚನ, ನಾಂದಿ ಸಮಾರಾಧನೆ, ನವಗ್ರಹ, ಮಹಾಮೃತ್ಯುಂಜಯ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಕುಟ್ಟವಾಡಿಯ ಶ್ರೀಮತಿ ಲೀಲಾವತಿ ಮತ್ತು ಶ್ರೀಕುಮಾರಸ್ವಾಮಿ ದಂಪತಿಗಳ ಪುತ್ರರಾದ ಶ್ರೀಕೀರ್ತಿಪ್ರಭುಸ್ವಾಮಿಯವರಿಗೆ ಶ್ರೀಮುಮ್ಮಡಿ ಡಾ.ನಿರ್ವಾಣ ಮಹಾಸ್ವಾಮಿಗಳಿಂದ ಷಟಸ್ಥಲ ಬ್ರಹ್ಮೋಪದೇಶ ನಡೆಯಲಿದೆ. ನೂತನ ಶ್ರೀಗಳು ಸ್ನಾತಕೋತ್ತರ ಪದವಿಯನ್ನು ಪಡೆದು ಪಿ.ಎಚ್.ಡಿ. ಸಂಶೋಧನೆ ನಡೆಸುತ್ತಿದ್ದಾರೆ. ಕಾಶಿಯಲ್ಲಿ ವಿದ್ವತ್ ಪದವಿ ಪಡೆದಿರುವ ಶ್ರೀಗಳು ಬಾಲ್ಯದಿಂದಲೂ ಅಧ್ಯಾತ್ಮದಲ್ಲಿ ಆಸಕ್ತಿ ಹೊಂದಿದ್ದು ದೇಗುಲ ಮಠದ 15ನೇ ಪೀಠಾಧಿಪತಿಯಾಗಿ ನಿರಂಜನ ಪೀಠವನ್ನೇರಲಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವಿ ಮಹಾತ್ಮೆಯ ಅನಾವರಣ

ಪಾರಾಯಣದ ಧ್ವನಿಮುದ್ರಿಕೆ : ಹುಕ್ಕೇರಿ ಮಠದ ದಾಖಲೆ ಕಾರ್ಯ

ದಿನಾಂಕ : 27-10-2018

ಜಗತ್ತು ಶಿವಶಕ್ತಿಯರ ಸಂಯುಕ್ತರೂಪ ಎಂದು ಬಣ್ಣಿಸಲಾಗುತ್ತದೆ. ಶಿವನನ್ನು ಬಿಟ್ಟು ಶಕ್ತಿಯಾಗಲಿ, ಶಕ್ತಿಯನ್ನು ಬಿಟ್ಟು ಶಿವನನ್ನಾಗಲಿ ಕಲ್ಪಿಸಿಕೊಳ್ಳುವುದೂ ಅಸಾಧ್ಯ. ಅಂತಹ ಶಕ್ತಿಯನ್ನು ಆರಾಧಿಸುವ ಪರ್ವ ಕಾಲವೇ ನವರಾತ್ರಿ. ನವರಾತ್ರಿಯಲ್ಲಿ ಬೇರೆಲ್ಲಕ್ಕಿಂತ ಹೆಚ್ಚಿನ ಆದ್ಯತೆ ಇರುವುದು ದೇವಿ ಪಾರಾಯಣಕ್ಕೆ.

ಆದಿಶಕ್ತಿಯನ್ನು ಆರಾಧಿಸುವ ಭಕ್ತಸಮೂಹ ಇಡೀ ದೇಶದಲ್ಲಿದೆ. ಉತ್ತರ ಭಾರತದಲ್ಲಿ ದೇವಿಯ ಆರಾಧನೆ ವಿಶೇಷವಾಗಿದ್ದರೂ; ದಕ್ಷಿಣದಲ್ಲೂ ದೇವಿ ಆರಾಧನೆಗೆ ಆದ್ಯತೆ ಇದೆ. ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಜಾತಿ, ಮತ, ವರ್ಗ ಭೇದವಿಲ್ಲದೆ ದೇವಿಯನ್ನು ಆರಾಧಿಸುವ ಪರಂಪರೆ ನಾಡಿನಾದ್ಯಂತ ಇದೆ. ಹೀಗೆ ದೇವಿಯನ್ನು ಆರಾಧಿಸುವವರಿಗೆ ಇರುವ ಆಧಾರ ದೇವಿ ಮಹಾತ್ಮೆ ಪುರಾಣ ಗ್ರಂಥ. ದಕ್ಷಿಣ ಕರ್ನಾಟಕ ಭಾಗದಲ್ಲಿ ಸಂಸ್ಕೃತದಲ್ಲಿರುವ ದುರ್ಗಾ ಸಪ್ತಶತಿ ಗ್ರಂಥವನ್ನು ಪಾರಾಯಣ ಮಾಡುವ ಮೂಲಕ ದೇವಿಯನ್ನು ಆರಾಧಿಸಿದರೆ; ಉತ್ತರ ಕರ್ನಾಟಕ, ಮಧ್ಯಕರ್ನಾಟಕದ ಬಹುಭಾಗದವರ ಆಧಾರ ಗ್ರಂಥ ಕನ್ನಡದಲ್ಲಿರುವ ಶ್ರೀದೇವಿ ಮಹಾತ್ಮೆ ಪಾರಾಯಣ ಗ್ರಂಥ.

ಕನ್ನಡದಲ್ಲಿರುವ ಏಕೈಕ ದೇವಿ ಪುರಾಣದ ಈ ಕೃತಿಯುನ್ನು ರಚಿಸಿದವರು; ದೇವಿ ಉಪಾಸಕರಾದ ಶ್ರೀಚಿದಾನಂದ ಅವಧೂತರು. ರಾಯುಚೂರು ಜಿಲ್ಲೆಯು ಸಿಂಧನೂರು ತಾಲೂಕಿನ ಸಿದ್ಧಪರ್ವತ ಕ್ಷೇತ್ರದಲ್ಲಿ ದೇವಿಯನ್ನು ಸಾಕ್ಷಾತ್ಕರಿಸಿಕೊಂಡ ಅವಧೂತರು; ಇದೇ ಸಿದ್ಧಿಕ್ಷೇತ್ರದಲ್ಲಿ ಕುಳಿತು ಕನ್ನಡದಲ್ಲಿ ರಚಿಸಿದ ಮಹಾಗ್ರಂಥ ದೇವಿ ಮಹಾತ್ಮೆ.

ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಮಠ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವಿ ಮಹಾತ್ಮೆ ಪಾರಾಯಣ ಗ್ರಂಥ

ಉತ್ತರ ಕರ್ನಾಟಕದ ಪ್ರತಿ ಊರುಗಳಲ್ಲಿ ಹಾಗೂ ಬಹುತೇಕ ಪ್ರತಿ ಮನೆಗಳಲ್ಲಿ ಲಭ್ಯವಿರುವ ದೇವಿ ಮಹಾತ್ಮೆಯನ್ನು ಅತ್ಯಂತ ಭಕ್ತಿ ಭಾವದಿಂದ ಇಟ್ಟು ಪೂಜಿಸುತ್ತಾರೆ. ಕೆಲವು ಪಾರಂಪರಿಕ ಕುಟುಂಬಗಳು ಮಾತ್ರ ಇದನ್ನು ಪಾರಾಯಣ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿವೆ. ಆದರೆ ಈ ಮಹಾಗ್ರಂಥವನ್ನು ಸರ್ವರೂ ಪಾರಾಯಣ ಮಾಡಬೇಕೆಂಬ ಸದಿಚ್ಛೆಯಿಂದ ಹುಕ್ಕೇರಿ ಶ್ರೀಗುರುಶಾಂತೇಶ್ವರ ಮಠದ ಶ್ರೀಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ದೊಡ್ಡ ಅಕ್ಷರಗಳಲ್ಲಿ ಸಂಪೂರ್ಣ ದೇವಿ ಮಹಾತ್ಮೆಯನ್ನು ಪುನರ್ ಮುದ್ರಣಗೊಳಿಸುವುದರ ಜೊತೆಗೆ ಈ ಗ್ರಂಥದ ಪಾರಾಯಣವನ್ನು ಮೊಟ್ಟ ಮೊದಲ ಬಾರಿಗೆ ಡಿವಿಡಿ ಮೂಲಕ ಧ್ವನಿ ಮುದ್ರಣಗೊಳಿಸಿ ಭಕ್ತರಿಗೆ ಮಹದುಪಕಾರ ಮಾಡಿದ್ದಾರೆ.

ಸಾಮಾನ್ಯ ಜನರಿಗೆ ಪಾರಾಯಣ ಮಾಡಲು ಉಚ್ಚಾರಣೆ ಮತ್ತು ವಿಧಾನವನ್ನು ತಿಳಿಸಿಕೊಡುವ ಈ ಗ್ರಂಥ ಮತ್ತು ಡಿವಿಡಿಗಳು ಉತ್ತರ ಕರ್ನಾಟಕದಲ್ಲಿ ಬಹುಜನಪ್ರಿಯತೆ ಪಡೆಯುತ್ತಿವೆ. ಕಳೆದ ವರ್ಷ ನವರಾತ್ರಿ ಸಂದರ್ಭದಲ್ಲಿ ಈ ಯೋಜನೆಯನ್ನು ಕೈಗೊಂಡ ಹುಕ್ಕೇರಿ ಹಿರೇಮಠ; ಈ ಯೋಜನೆಗಾಗಿ ಸುಮಾರು 20 ಲಕ್ಷ ರೂಪಾಯಿ ಹಣವನ್ನು ವಿನಿಯೋಗಿಸಿದೆ. 48 ದಿನಗಳ ಆಡಿಯೋ ರೆಕಾರ್ಡಿಂಗ್ ನಡೆಸಿರುವ ಡಿವಿಡಿಯಲ್ಲಿ ಸುಮಾರು 12 ಗಂಟೆಗಳ ಪಾರಾಯಣವಿದೆ.

ದೇವಿ ಪುರಾಣದ ಮಹತ್ವ:

ದೇವಿ ಮಹಾತ್ಮೆ ಎಂಬ ಪುರಾಣ ಗ್ರಂಥವು ಅಚ್ಚಕನ್ನಡದ ಭಾಮಿನಿ ಷಟ್ಪದಿಯಲ್ಲಿ ರಚನೆಗೊಂಡಿರುವ ವಿಶೇಷ ಕೃತಿ. ಇದು ಶಾಕ್ತಪರಂಪರೆಯನ್ನು ಒಪ್ಪುವವರಿಗೆ ಅತ್ಯಂತ ಹಿರಿದಾದ ಗ್ರಂಥ. ಶ್ರೀಚಿದಾನಂದ ಅವಧೂತರು ರಚಿಸಿರುವ ಈ ಗ್ರಂಥದಲ್ಲಿ 18 ಅಧ್ಯಾಯಗಳಿದ್ದು, 796 ಷಟ್ಪದಿಗಳ ಪದ್ಯಗಳಿವೆ. ಕೇವಲ ಪುರಾಣಗ್ರಂಥವಾಗಿಯಷ್ಟೇ ಅಲ್ಲದೇ ಸಾಹಿತ್ಯಕವಾಗಿಯೂ ಇದರ ಕಾವ್ಯಗುಣಗಳಿಂದ ಇದೊಂದು ಮೌಲಿಕ ಗ್ರಂಥವೆಂದು ಪರಿಗಣಿಸಲ್ಪಟ್ಟಿದೆ.

ದೇವಿ ಮಹಾತ್ಮೆಯು ಒಂದು ಶುದ್ಧ ಧಾರ್ಮಿಕ ಮಹತ್ವವುಳ್ಳ ಕೃತಿ. ಈ ಗ್ರಂಥವನ್ನು ಪ್ರತಿ ಶುಕ್ರವಾರ, ಮಂಗಳವಾರ ಹಾಗೂ ಅಮವಾಸೆ, ಪೌರ್ಣಿಮೆಯಂದು ಪಾರಾಯಣ ಮಾಡುವುದರಿಂದ ಸಕಲ ಬೇಡಿಕೆಗಳು ಈಡೇರುತ್ತವೆ ಎಂಬ ಮಾತಿದೆ. ಸ್ವತಃ ಗ್ರಂಥಕರ್ತರಾದ ಚಿದಾನಂದ ಅವಧೂತರು ಗ್ರಂಥಾರಂಭದಲ್ಲಿ ಈ ಬಗ್ಗೆ ಸಂಪೂರ್ಣವಾಗಿ ವಿವರಿಸಿದ್ದಾರೆ. ಇನ್ನು ನವರಾತ್ರಿಯ ಸಂದರ್ಭದಲ್ಲಿ ದೇವಿ ಪುರಾಣಕ್ಕೆ ವಿಶೇಷ ಫಲಗಳಿವೆ. ಸ್ವತಃ ಪಾರಾಯಣ ಮಾಡುವುದರಿಂದ, ಪಾರಾಯಣವನ್ನು ಕೇಳುವುದರಿಂದಲೂ ದೇವಿಯ ಕೃಪೆಗೆ ಪಾತ್ರರಾಗಲು ಸಾಧ್ಯ. ಓದಲು ಸಾಧ್ಯವಿಲ್ಲದವರು ಹಾಗೂ ತಪ್ಪಾಗಿ ಓದುವ ಬದಲು ದೇವಿ ಪಾರಾಯಣದ ಧ್ವನಿಮುದ್ರಿಕೆಯನ್ನು ಮನೆಯಲ್ಲಿ ಹಾಕುವುದರಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಕಾರಾತ್ಮಕ ಶಕ್ತಿಯ ನಾಶವಾಗಿ ಸಕಾರಾತ್ಮಕ ಚಿಂತನೆ ಮೂಡಲಿದೆ ಎಂಬುದು ಸ್ವಾಮೀಜಿ ಅಭಿಪ್ರಾಯ.

ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ

ದೇವಿ ಮಹಾತ್ಮೆ ಗ್ರಂಥವು ಇಡೀ ಸೃಷ್ಟಿ ನಿಯಮವನ್ನು ಸಾರುವ ಶ್ರೇಷ್ಠ ಪಾರಮಾರ್ಥಿಕ ಗ್ರಂಥ. ಈ ಗ್ರಂಥವನ್ನು ಸಂಪೂರ್ಣ ಅಧ್ಯಯನ ಮಾಡಿದ ಅನುಭವಿಗಳ ಪ್ರಕಾರ ದೇವಿ ಮಹಾತ್ಮೆಯು ಧಾರ್ಮಿಕವಾಗಿ ಪುರಾಣ ಗ್ರಂಥವಾಗಿದ್ದರೂ ಲೌಕಿಕವಾಗಿ ಇಡೀ ಬದುಕಿನ ವಿವರ ನೀಡುವ ದೇಹ ಪುರಾಣವಾಗಿದೆ. ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟ ರಾಕ್ಷಸರೆಂದರೆ ಮನುಷ್ಯನನ್ನು ಕಾಡುವ ಅರಿಷಡ್ವರ್ಗಗಳೆಂದು ವಿಶ್ಲೇಷಿಸಲಾಗುತ್ತದೆ. ಜೀವ, ಜಗತ್ತು, ಜೀವನ ಮೂರರ ಸಾರವನ್ನು ಒಳಗೊಂಡಿರುವ ದೇವಿ ಮಹಾತ್ಮೆಯ ಪಾರಾಯಣದಿಂದ ಲೌಕಿಕ ಮತ್ತು ಅಲೌಕಿಕ ಅನುಭೂತಿಯನ್ನು ಪಡೆಯಲು ಸಾಧ್ಯ.

ಹುಕ್ಕೇರಿಯಲ್ಲಿ ನವರಾತ್ರಿ ಉತ್ಸವ:

ಹುಕ್ಕೇರಿ ಶ್ರೀಗುರುಶಾಂತೇಶ್ವರ ಹಿರೇಮಠವು ನಾಡಿನಲ್ಲೇ ಅತ್ಯಂತ ಪ್ರಸಿದ್ಧವಾಗಿರುವ ಮಠ. ಪ್ರತಿವರ್ಷ ಇಲ್ಲಿ ನಡೆಯುವ ನವರಾತ್ರಿ ಉತ್ಸವವು ಕೇವಲ ರಾಜ್ಯ ಮಾತ್ರವಲ್ಲದೇ ದೇಶದಲ್ಲೇ ಪ್ರಸಿದ್ಧಿಯಾಗಿದೆ. 9 ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ಜರುಗುವ ನವರಾತ್ರಿ ಮಹೋತ್ಸವವು ಉತ್ತರ ಕರ್ನಾಟಕ ಭಾಗದ ಭಕ್ತರಿಗೆ ಮೈಸೂರು ದಸರಾವನ್ನೇ ನೆನಪಿಸುವ ಬಹುದೊಡ್ಡ ಸಾಂಸ್ಕೃತಿಕ ಉತ್ಸವವಾಗಿದೆ.

9 ದಿನಗಳ ಕಾಲ ದಿನಕ್ಕೆ ಎರಡು ಅಧ್ಯಾಯದಂತೆ ದೇವಿ ಮಹಾತ್ಮೆಯ 18 ಅಧ್ಯಾಯಗಳ ಸಂಪೂರ್ಣ ಪಾರಾಯಣವನ್ನು ಹಮ್ಮಿಕೊಳ್ಳಲಾಗಿದ್ದು, ಹುಣಶ್ಯಾಳ ಕೈವಾಲ್ಯಾಶ್ರಮದ ಶ್ರೀನಿಜಗುಣ ದೇವರು ಪುರಾಣ ಪ್ರವಚನ ನಡೆಸಿಕೊಡಲಿದ್ದಾರೆ.

ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಶಕ್ತಿಯನ್ನು ಶಿವನಂತೆಯೇ ಪೂಜಿಸುವ ನಾಡಿನ ಬಹುತೇಕ ಎಲ್ಲ ಮಠಗಳಲ್ಲೂ ನವರಾತ್ರಿ ಆಚರಣೆಗಳನ್ನು ಕಾಣಬಹುದು. ಅದರಲ್ಲೂ ದೇವಿಮಹಾತ್ಮೆ ಗ್ರಂಥ ಮತ್ತು ಧ್ವನಿಮುದ್ರಿಕೆ ಯೋಜನೆಯನ್ನು ಪೂರ್ಣಗೊಳಿಸಿರುವ ಹುಕ್ಕೇರಿ ಮಠದಲ್ಲಿ ನವರಾತ್ರಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತದೆ. ದೇವಿ ಪಾರಾಯಣದ ಡಿವಿಡಿ ಅಥವಾ ಗ್ರಂಥಗಳಿಗಾಗಿ ದೂ: 9686114101 ಸಂಪರ್ಕಿಸಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲ್ಯಾಣ ಕರ್ನಾಟಕದ ನಡೆದಾಡುವ ದೇವರು ಹಾರಕೂಡ ಚನ್ನಬಸವ ಸ್ವಾಮಿಗಳ ಜಾತ್ರೆ

ದಿನಾಂಕ : 10-01-2019

ಕಲ್ಯಾಣ ಕರ್ನಾಟಕ ಬಸವಾದಿ ಶಿವಶರಣರಿಂದ ಪವಿತ್ರವಾದ ನೆಲ. ಕ್ರಾಂತಿ, ಸುಧಾರಣೆ, ಸಾಹಿತ್ಯ, ಸಂಘಟನೆ ಹಾಗೂ ಧರ್ಮ ಜಾಗೃತಿಗೆ ಶಿವಶರಣರ ಕೊಡುಗೆ ಅಪಾರ. ಆ ನಿಟ್ಟಿನಲ್ಲಿ ಕಲ್ಯಾಣ ಕರ್ನಾಟಕದ ಧಾರ್ಮಿಕ ಇತಿಹಾಸವನ್ನು ಶ್ರೀಮಂತಗೊಳಿಸಿದ ಮಹಾನ್ ತಪಸ್ವಿ ಶ್ರೀಹಾರಕೂಡ ಹಿರೇಮಠದ ಚನ್ನಬಸವ ಸ್ವಾಮಿಗಳು.

ಬಸವಕಲ್ಯಾಣ ತಾಲೂಕಿನಲ್ಲಿರುವ ಹಾರಕೂಡ ಸಂಸ್ಥಾನ ಹಿರೇಮಠದ 6ನೇ ಪೀಠಾಧಿಪತಿಯಾಗಿದ್ದ ಶ್ರೀಚನ್ನಬಸವ ಶಿವಯೋಗಿಗಳನ್ನು ಇಂದಿಗೂ ಭಕ್ತರು ಭಕ್ತಿಯಿಂದ ನಡೆದಾಡುವ ದೇವರು ಎಂದು ಸಂಬೋಧಿಸುತ್ತಾರೆ. ಶತಾಯುಷಿಗಳಾಗಿದ್ದ ಶ್ರೀಗಳ ತಪೋಶಕ್ತಿ ಭಕ್ತರನ್ನು ಧರ್ಮವಂತರನ್ನಾಗಿಸುವುದರ ಜೊತೆಗೆ ಸಮಾಜವನ್ನು ಸನ್ಮಾರ್ಗದತ್ತ ಕೊಂಡೊಯ್ದಿತ್ತು.

ಷ. ಬ್ರ. ಶ್ರೀ ಚನ್ನಬಸವ ಶಿವಯೋಗಿಗಳು
ಸುಕ್ಷೇತ್ರ ಹಾರಕೂಡ ತಾ॥ ಬಸವಕಲ್ಯಾಣ ಜಿ॥ ಬೀದರ

ಸಾಮಾಜಿಕ ಪಿಡುಗಾಗಿದ್ದ ಅಸ್ಪೃಶ್ಯತೆಯ ನಿವಾರಣೆಗಾಗಿ ಶತಮಾನದ ಹಿಂದೆಯೇ ದಿಟ್ಟ ಹೆಜ್ಜೆಯನ್ನಿಟ್ಟು ಸಮಾಜದಲ್ಲಿ ಸಮಾನತೆಯನ್ನು ತಂದು ಕೊಟ್ಟಿದ್ದ ಮಹಾತ್ಮ ಶ್ರೀಚನ್ನಬಸವ ಶಿವಯೋಗಿಗಳು. ಜಾತಿವ್ಯವಸ್ಥೆಯನ್ನು ನಿವಾರಿಸಲು ಸ್ವತಃ ದಲಿತರ ಮನೆಗೆ ಹೋಗಿ ಭಕ್ತರಿಗೆ ಆಶೀರ್ವಾದ ಮಾಡಿದ್ದರು. ಹೀಗೆ ಶ್ರೀಗಳ ಆಶೀರ್ವಾದ ಪಡೆದಿದ್ದ ದಲಿತ ಬಾಲಕ (ಶಿವಣ್ಣ) ಮುಂದೆ ರಾಜ್ಯದ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಗಳ ದೂರದೃಷ್ಟಿತ್ವದ ಜಾತ್ಯಾತೀತ ಚಿಂತನೆಯು ಇಂದಿಗೂ ಕೂಡಾ ಶ್ರೀಮಠ ಮುನ್ನಡೆಸಿಕೊಂಡು ಹೋಗುತ್ತಿದೆ. ಮಠದ ಆವರಣದಲ್ಲಿ ಸಂವಿಧಾನ ಶಿಲ್ಪಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾರಕೂಡ ಮಠದ ಜಾತ್ರೆ

ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಇಡೀ ರಾಜ್ಯದಲ್ಲೇ ಮತ್ಯಾವ ಮಠದಲ್ಲಿಯೂ ಇಂತಹ ಉದಾಹರಣೆ ಇಲ್ಲ. ಇಂತಹ ಅಪರೂಪದ ಪರಂಪರೆಗೆ ನಾಂದಿ ಹಾಡಿದ್ದ ಶತಾಯುಷಿ ಶ್ರೀಚನ್ನಬಸವ ಶಿವಯೋಗಿಗಳ 67ನೇ ಜಾತ್ರಾ ಮಹೋತ್ಸವವು ಡಿ.10ರಂದು ನಡೆಯಲಿದೆ.

ಗಡಿಭಾಗದ ಬೃಹತ್ ಉತ್ಸವ :

ಡಾ.ಚನ್ನವೀರ ಶಿವಾಚಾರ್ಯ ಸ್ವಾಮಿಗಳು

ಗಡಿನಾಡು ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಹಾರಕೂಡ ಮಠದ ಜಾತ್ರಾ ಮಹೋತ್ಸವವು ಕೇವಲ ಧಾರ್ಮಿಕ ಕಾರ್ಯಕ್ರಮವಾಗಿರದೆ; ಬಹುದೊಡ್ಡ ಸಾಂಸ್ಕೃತಿಕ ಉತ್ಸವವೆಂಬ ಹಿರಿಮೆ ಹೊಂದಿದೆ. ಶ್ರೀಚನ್ನಬಸವ ಶಿವಯೋಗಿಗಳು ಲಿಂಗಾಂಗ ಸಾಮರಸ್ಯ ಹೊಂದಿದ ಪರ್ವಕಾಲದಲ್ಲಿ ಜಾತ್ರೆಯನ್ನು ನಡೆಸುವುದು ಪರಂಪರೆ. ಪ್ರತಿ ಪುಷ್ಯ ಶುದ್ಧ ಪಂಚಮಿಯಂದು ರಥೋತ್ಸವ ನಡೆಯಲಿದೆ.

ಜಾತ್ರಾ ಮಹೋತ್ಸವದ ಅಂಗವಾಗಿ ಡಿ.10ರಿಂದ 14ರವರೆಗೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಡಿ.10ರಂದು ಬೆಳಗ್ಗೆ ಚನ್ನಬಸವ ಶಿವಯೋಗಿಗಳ ಕರ್ತೃ ಗದ್ದುಗೆಗೆ ಮಹಾ ರುದ್ರಾಭಿಷೇಕ, ಮಧ್ಯಾಹ್ನ ಪಲ್ಲಕ್ಕಿ ಉತ್ಸವ, ಸಂಜೆ ಮಹಾ ರಥೋತ್ಸವ ನಡೆಯಲಿದೆ. ಡಿ.11ರಂದು ರಾಜ್ಯಮಟ್ಟದ ಕುಸ್ತಿಸ್ಪರ್ಧೆ ಏರ್ಪಡಿಸಿದ್ದು, ರಾಜ್ಯ, ಹೊರರಾಜ್ಯದ ಕುಸ್ತಿಪಟುಗಳು ಭಾಗವಹಿಸಲಿದ್ದಾರೆ. ಡಿ.12ರಂದು ಹೈನುಗಾರಿಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಪಶುಗಳ ಪ್ರದರ್ಶನ ಮತ್ತು ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಡಾ. ಚನ್ನವೀರ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಪ್ರತಿದಿನ ಶಿವಾನುಭವ ಚಿಂತನ ಸಮಾರಂಭ ನಡೆಯಲಿದ್ದು, ನಾಡಿನ ವಿವಿಧ ಮಠಾಧೀಶರು, ಸಾಹಿತಿಗಳು, ರಾಜಕೀಯ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಚನ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ :

ಹಾರಕೂಡ ಮಠ

ಹಾರಕೂಡ ಮಠವು ಧಾರ್ಮಿಕ ಪರಂಪರೆಯ ಜೊತೆಗೆ ಸಾಮಾಜಿಕ ಕೊಡುಗೆಗಳ ಮೂಲಕ ಸಮಾಜದಲ್ಲಿ ಅತ್ಯಂತ ಗೌರವದ ಸ್ಥಾನವನ್ನು ಪಡೆದುಕೊಂಡಿದೆ. ಸದ್ಯದ ಪೀಠಾಧಿಪತಿಗಳಾಗಿರುವ ಡಾ.ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಸ್ವತಃ ಓರ್ವ ವಿದ್ವಾಂಸರಾಗಿ, ಸಾಹಿತಿಗಳಾಗಿ ಕಲೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಅಪೂರ್ವ ಕೊಡುಗೆಯನ್ನು ನೀಡಿದ್ದಾರೆ.

ಕಲ್ಯಾಣ ಕರ್ನಾಟಕ ವಚನ ಸಾಹಿತ್ಯದ ತವರು. ಇಂತಹ ವಚನ ಸಾಹಿತ್ಯಕ್ಕೆ ಹಾರಕೂಡ ಮಠದ ಕೊಡುಗೆ ಹೊಸ ದಾಖಲೆಗೆ ನಾಂದಿಯಾಗಿದೆ. ಸರ್ಕಾರ ಪ್ರಕಟಿಸಿರುವ ಪ್ರಕಾರ ಇದುವರೆಗೂ ಸುಮಾರು 22ಸಾವಿರ ವಚನಗಳು ಲಭ್ಯವಾಗಿವೆ. ಇದೇ ಮೊದಲ ಬಾರಿಗೆ ಹಾರಕೂಡ ಮಠವು ಆ 22 ಸಾವಿರ ವಚನಗಳನ್ನು ತತ್ವಾಧಾರಿತವಾಗಿ ವಿಂಗಡಿಸಿ ಪ್ರಕಟಿಸಿದೆ. ಹಿರಿಯ ಭಾಷಾ ವಿಜ್ಞಾನಿ ಡಾ.ಸಂಗಮೇಶ ಸವದತ್ತಿ ಮಠ ಅವರ ಸಂಪಾದಕತ್ವದಲ್ಲಿ ಸುಮಾರು 40ಲಕ್ಷ ರೂಪಾಯಿ ವ್ಯಯಿಸಿ 15 ಸಂಪುಟಗಳನ್ನು ಹೊರತಂದಿದೆ. ಭವಿಷ್ಯದಲ್ಲಿ ವಚನಗಳ ಅಧ್ಯಯನಾಸಕ್ತರಿಗೆ ಇದು ಬಹುದೊಡ್ಡ ಕೊಡುಗೆಯಾಗಲಿದೆ ಎಂಬ ಮಾತು ವಿದ್ವಾಂಸರಿಂದ ಕೇಳಿ ಬರುತ್ತಿದೆ.

ಶ್ರೀಮಠದ ಜಾತ್ರೆ ಹಾಗೂ ಇನ್ನಿತರೆ ವಾರ್ಷಿಕ ಕಾರ್ಯಕ್ರಮಗಳಲ್ಲಿ ಸಾಹಿತ್ಯ, ಸಂಗೀತ, ನಾಟಕ, ಕ್ರೀಡೆ, ಜನಪದ ಹೀಗೆ ಎಲ್ಲ ಕ್ಷೇತ್ರದ ಗಣ್ಯರಿಗೆ ವಿಶೇಷ ಪುರಸ್ಕಾರವನ್ನು ನೀಡುವ ಶ್ರೀಗಳು; "ಶ್ರೀಚನ್ನ ರೇಣುಕ ಬಸವ" ಪ್ರಶಸ್ತಿಯನ್ನು ಸ್ಥಾಪಿಸಿ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ವಿದ್ವಾಂಸರಿಗೆ ನೀಡುತ್ತಿದ್ದಾರೆ. ಒಂದು ಲಕ್ಷ ರೂಪಾಯಿ ನಗದನ್ನು ಒಳಗೊಂಡಿರುವ ಈ ಪ್ರಶಸ್ತಿಯು; ಹೈದ್ರಾಬಾದ್ ಕರ್ನಾಟಕ ಭಾಗದ ಪ್ರತಿಷ್ಠಿತ ಪ್ರಶಸ್ತಿ ಎಂಬ ಹೆಗ್ಗಳಿಕೆ ಹೊಂದಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಾಲಹಳ್ಳಿ ಜಯಶಾಂತಲಿಂಗೇಶ್ವರ ಜಾತ್ರೆ
ವಿಜಯಪುರ ವಿಶ್ವಶಾಂತಿ ಪೀಠದ ವಾರ್ಷಿಕ ಮಹೋತ್ಸವ

ದಿನಾಂಕ : 14–02–2019

ವಿವಿಧ ತತ್ವಗಳನ್ನು ಪ್ರತಿಪಾದಿಸುವ ಎಲ್ಲ ಧರ್ಮಗಳ ಆಶಯ ಲೋಕಕಲ್ಯಾಣ, ಮನುಕುಲದ ಉದ್ಧಾರ ಹಾಗೂ ವಿಶ್ವಶಾಂತಿ. ಈ ಹಿನ್ನೆಲೆಯಲ್ಲಿ ನಮ್ಮೆಲ್ಲ ಮಠ ಪೀಠಗಳು ಜಗತ್ತಿಗೆ ಶಾಂತಿ ಸಂದೇಶವನ್ನು ಪ್ರತಿಪಾದಿಸುತ್ತವೆ. ಅದಕ್ಕೊಂದು ಉತ್ತಮ ಉದಾಹರಣೆ ಜಾಲಹಳ್ಳಿ ಶ್ರೀಜಯಶಾಂತಲಿಂಗೇಶ್ವರ ವಿಶ್ವಶಾಂತಿ ಪೀಠ.

2003 ರಲ್ಲಿ ಸಹಸ್ರಾರು ಭಕ್ತರ ಸದಿಚ್ಛೆಯಂತೆ ಪೂಜ್ಯ ಜಯಶಾಂತೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಸಂಕಲ್ಪದಲ್ಲಿ ಜಗದ್ಗುರು ಪಂಚಪೀಠಾಧೀಶ್ವರರ ಸಾನಿಧ್ಯದಲ್ಲಿ ವಿಜಯಪುರದ ಉಕ್ಕಲಿ ರಸ್ತೆಯಲ್ಲಿರುವ ಜಾಲಹಳ್ಳಿ ಬೃಹನ್ಮಠದ ಶ್ರೀಜಗದಾರಾಧ್ಯ ಜಯಶಾಂತಲಿಂಗೇಶ್ವರ ವಿಶ್ವಶಾಂತಿ ಪೀಠವು ದ್ವಾದಶ ಜ್ಯೋತಿರ್ಲಿಂಗಗಳು, ನವದುರ್ಗೆಯರು ಹಾಗೂ ನವಗ್ರಹಗಳು ಸ್ಥಾಪನೆಗೊಂಡಿರುವ ಪ್ರಸಿದ್ಧ ಧಾರ್ಮಿಕ ತಾಣವಾಗಿದೆ.

ಇಂತಹ ಅಪರೂಪದ ಕ್ಷೇತ್ರದಲ್ಲಿ ಸದ್ಯ ವಾರ್ಷಿಕ ಜಾತ್ರಾ ಮಹೋತ್ಸವದ ಸಂಭ್ರಮ ಮನೆಮಾಡಿದ್ದು, ಪ್ರತಿ ಮಾಘ ಶುದ್ಧ ತ್ರಯೋದಶಿಯಿಂದ ಪೌರ್ಣಿಮೆಯವರೆಗೆ ಮೂರು ದಿನಗಳವರೆಗೆ ಜಾತ್ರ ಮಹೋತ್ಸವ ನಡೆಯಲಿದ್ದು, ವಿವಿಧ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.



ಶ್ರೀ ಜಯಂತೇಶ್ವರ ರಥೋತ್ಸವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಾಲಹಳ್ಳಿ ಬೃಹನ್ಮಠದ ಇತಿಹಾಸ:

ವಿಶ್ವಶಾಂತಿ ಪೀಠದ ಮೂಲಸ್ಥಾನ ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಜಾಲಹಳ್ಳಿ. ಬಹು ಪ್ರಾಚೀನ ಇತಿಹಾಸ ಹೊಂದಿರುವ ಜಯಶಾಂತಲಿಂಗೇಶ್ವರ ಸಂಸ್ಥಾನ ಬೃಹನ್ಮಠವು ಕಾಶಿ ಪೀಠದ ಶಾಖಾ ಮಠವಾಗಿದ್ದು, 6ನೇ ಶತಮಾನಕ್ಕಿಂತಲೂ ಹಿಂದೆ ಕರ್ತೃ ಶ್ರೀಜಯಶಾಂತ ಶಿವಯೋಗಿಗಳಿಂದ ಸ್ಥಾಪಿಸಲ್ಪಟ್ಟಿರುವ ಬಗ್ಗೆ ಶ್ರೀಮಠದ ಇತಿಹಾಸದಿಂದ ತಿಳಿದು ಬರುತ್ತದೆ.

ಶ್ರೀ ಜಯಂತೇಶ್ವರ ಸ್ವಾಮೀಜಿ

ಜಾಲಹಳ್ಳಿ ಬೃಹನ್ಮಠವು ಇಲ್ಲಿಯವರೆಗೆ 35 ಸ್ವಾಮೀಜಿಗಳನ್ನು ಕಂಡಿದೆ. ಅವರಲ್ಲಿ ಹಲವರು ವಿದ್ವಾಂಸರು, ತಪಸ್ವಿಗಳಾಗಿದ್ದು ಧಾರ್ಮಿಕ, ಸಾಮಾಜಿಕ ಮಾರ್ಗದರ್ಶನವನ್ನು ಮಾಡುತ್ತಾ ಸಾಮಾಜಮುಖಿ ಕಾರ್ಯಕ್ರಮಗಳನ್ನು ನೆಡೆಸಿಕೊಂಡು ಬಂದಿರುತ್ತಾರೆ. ಅಂತಹ ಗುರು ಪರಂಪರೆಯ 36ನೇ ಪೀಠಾಧಿಪತಿಗಳಾಗಿರುವ ಶ್ರೀವಿದ್ಯಾಮಾನ್ಯ ಶಿವಾಭಿನವ ಶ್ರೀಜಯಶಾಂತೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಸದ್ಯದ ಅಧಿಪತಿಗಳಾಗಿ ಧಾರ್ಮಿಕ, ಸಾಮಾಜಿಕ ಕಾರ್ಯಗಳ ಜೊತೆಗೆ ಶೈಕ್ಷಣಿಕ ಕ್ರಾಂತಿಗೆ ಮುನ್ನುಡಿ ಬರೆದಿದ್ದಾರೆ.

ಗುರುಕುಲ ಭೂಷಣ, ಶಿವಾಚಾರ್ಯ ರತ್ನ:

ವೀರಶೈವ ಪಂಚಪೀಠಗಳ ಸಾವಿರಾರು ಶಾಖಾ ಮಠಗಳು ದೇಶದ ಉದ್ದಗಲಕ್ಕೂ ಇವೆ. ಅಂತಹ ಶಾಖಾ ಮಠದ ಕೆಲವು ಸ್ವಾಮೀಜಿಗಳು ಸಮಾಜದ ಉನ್ನತಿಗೆ ತಮ್ಮನ್ನು ತಾವು ತೊಡಗಿಸಿಕೊಂಡು ಪೀಠ ಪರಂಪರೆಯ ಘನತೆ ಗೌರವವನ್ನ ಹೆಚ್ಚಿಸಿದ್ದಾರೆ. ಅಂತಹ ಶಿವಾಚಾರ್ಯರಲ್ಲಿ ಪ್ರಮುಖರು ಜಾಲಹಳ್ಳಿ ಬೃಹನ್ಮಠದ ಪ್ರಸ್ತುತ ಪಟ್ಟಾಧ್ಯಕ್ಷರಾಗಿರುವ ಶ್ರೀಜಯಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು.

ಶಿವಾಚಾರ್ಯ ರತ್ನ, ತಪೋಭೂಷಣ, ಗುರುಕುಲ ಭೂಷಣ, ಪಂಚಾಚಾರ್ಯಶ್ರೀ ಸೇರಿದಂತೆ ಹಲವು ಬಿರುದು, ಪ್ರಶಸ್ತಿಗಳನ್ನು ಪಡೆದಿರುವ ಶ್ರೀಗಳ ಜನ್ಮಸ್ಥಳ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಕಲಕೇರಿ ಎಂಬ ಪುಟ್ಟಗ್ರಾಮ. ವೇ.ಮೂ.ಶಾಂತಯ್ಯಸ್ವಾಮಿ

ಶ್ರೀ ಜಯಂತೇಶ್ವರ ವಿಶ್ವಶಾಂತಿ ಪೀಠ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಯಂತೇಶ್ವರ ಮಠ

ಹಾಗು ಶರಣೆ ಚೆನ್ನಮ್ಮನವರ ಪುಣ್ಯಸಂಜಾತರಾಗಿ 1956ರಲ್ಲಿ ಜನಿಸಿದ ಶ್ರೀಗಳ ಪೂರ್ವಾಶ್ರಮದ ಹೆಸರು ವಿದ್ಯಾನಂದ.

ಲೌಕಿಕ ಶಿಕ್ಷಣವನ್ನು ಕಲಕೇರಿ ಮತ್ತು ವಿಜಯಪುರದಲ್ಲಿ ಮುಗಿಸಿ ಮುಂದೆ ವಾರಣಾಸಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ, ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವೇದಾಂತ ಶಾಸ್ತ್ರಿ ಹಾಗು ಆಚಾರ್ಯ ಪದವಿಗಳನ್ನು ಪಡೆದಿದ್ದಾರೆ. ನಂತರ 1984ರಲ್ಲಿ ಕಾಶಿ ಜಗದ್ಗುರು ಶ್ರೀವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ನಿಯುಕ್ತಿಯಂತೆ ಜಾಲಹಳ್ಳಿಯ ಬೃಹನ್ಮಠದ 36ನೇ ಪಟ್ಟಾಧ್ಯಕ್ಷರಾಗುತ್ತಾರೆ.

ಸಮಾಜದ ಎಲ್ಲ ದುಷ್ಟತನವನ್ನು ನಿವಾರಿಸುವ ಶಕ್ತಿ ಶಿಕ್ಷಣಕ್ಕಿದೆ ಎಂಬ ಕಾರಣಕ್ಕೆ ಶ್ರೀಗಳು ರಾಯಚೂರು ಹಾಗು ವಿಜಯಪುರ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಶಾಲಾ ಕಾಲೇಜುಗಳನ್ನು ತೆರೆದಿದ್ದಾರೆ. ನಿರಂತರ ಸಮಾಜದ ಏಳಿಗೆಗಾಗಿ ಅಕ್ಷರ ಕ್ರಾಂತಿ ಮಾಡುತ್ತ ಜನಸಾಮಾನ್ಯರಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸುವುದರ ಜೊತೆಗೆ ಸಮಾಜದ ನೈತಿಕತೆಯನ್ನು ಹೆಚ್ಚಿಸುವಲ್ಲಿ ಶ್ರೀಗಳ ಪಾತ್ರ ಗಮನಾರ್ಹವಾಗಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೌರಿಶಂಕರ ಸ್ವಾಮಿಗಳ ಮಹಾರಥೋತ್ಸವ
ಕಿರಸೂರ ಬಿಲ್ವಾಶ್ರಮದ ಜೋಳದ ನುಚ್ಚಿನ ಜಾತ್ರೆ

ದಿನಾಂಕ : 12-04-2018

ಶ್ರೀಕೃಷ್ಣ ಗೀತೆಯಲ್ಲಿ ಅಪ್ಪಣೆ ಪಡಿಸಿರುವಂತೆ ಸಾಧು ಸಂತರು, ಶರಣ ಸತ್ಪುರುಷರು ಆಗಾಗ ಅವತರಿಸಿ ಸನಾತನ ಭಾರತದ ಧಾರ್ಮಿಕ ತತ್ತ್ವಗಳನ್ನು ಪ್ರಸಾರ ಮತ್ತು ಪ್ರಚಾರಗೈದು ಜಗತ್ಕಲ್ಯಾಣವನ್ನು ಸಾಧಿಸಿದ್ದಾರೆ. ಅಂತಹ ಮಹಾನ್ ವಿಭೂತಿ ಪುರುಷರಲ್ಲಿ ಕಿರಸೂರ ಸುಕ್ಷೇತ್ರದ ಪರಮಪೂಜ್ಯ ಶ್ರೀಗೌರಿಶಂಕರ ಶಿವಾಚಾರ್ಯ ಮಹಾಸ್ವಾಮಿಗಳು ಒಬ್ಬರು.

ಶ್ರೀಶೈಲ ಕ್ಷೇತ್ರದಲ್ಲಿ ಅವತರಿಸಿದ ಶ್ರೀಜಗದ್ಗುರು ಪಂಡಿತಾರಾಧ್ಯರು ಸ್ಥಾಪಿಸಿದ ಶ್ರೀಮದ್ಗಿರಿರಾಜ ಸೂರ್ಯ ಸಿಂಹಾಸನ ಪೀಠದ ಶಾಖಾ ಮಠಗಳು ದೇಶದ ಹಲವು ಭಾಗಗಳಲ್ಲಿವೆ. ಅಂತಹ ಶ್ರೀಶೈಲ ಶಾಖಾ ಮಠಗಳಲ್ಲಿ ಕಿರಸೂರ ಮಠವೂ ಒಂದು. ಬಾಗಲಕೋಟೆ ನಗರಕ್ಕೆ ಹತ್ತಿರದಲ್ಲಿರುವ ಶ್ರೀಕಿರಸೂರ ಮಠಕ್ಕೆ ಮುದೆನೂರು, ಗುಳೇದಗುಡ್ಡ ಹಾಗೂ ವಡವಡಗಿಯಲ್ಲಿ ಶಾಖಾ ಮಠಗಳಿವೆ. ಇಂತಹ ಭವ್ಯ ಪರಂಪರೆಯಲ್ಲಿ ಬಂದ ಗೌರಿಶಂಕರ ಸ್ವಾಮಿಗಳು ಪರಮ ತಪಸ್ವಿಗಳು, ಅನುಷ್ಠಾನ ಮೂರ್ತಿಗಳು, ಭಕ್ತೋದ್ಧಾರಕರು ಹಾಗೂ ಮಹಾನ್ ಪವಾಡ ಪುರುಷರಾಗಿದ್ದರು.

ಲೌಕಿಕ ಸಂಪತ್ತಿನ ಮೇಲೆ ಎಳ್ಳಷ್ಟೂ ಆಸೆ ಇಟ್ಟುಕೊಳ್ಳದ ಸರ್ವಸಂಘ ಪರಿತ್ಯಾಗಿಯು ಮಠವನ್ನು ತೊರೆದು ಊರ ಹೊರಗೆ ಗುಡಿಸಲಿನಲ್ಲಿ ವಾಸಿಸಿ ಜಗತ್ತಿಗೆ ಎಲ್ಲವೂ ನಶ್ವರ ಎಂಬ ಮಹತ್ವವನ್ನು ಸಾರಿದರು. ಬಹಳ ಕಠಿಣವಾದ ಆಚರಣೆಗಳನ್ನು ಮೈಗೂಡಿಸಿಕೊಂಡಿದ್ದ ಪೂಜ್ಯರು ಲೌಕಿಕ ಸಂಪತ್ತನ್ನು ಸಂಗ್ರಹಿಸದಂತೆ ಸಲಹೆ ನೀಡುತ್ತಿದ್ದರು. ಸಂಗ್ರಹ

ಕಿರಸೂರ ಬಿಲ್ವಾಶ್ರಮ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಲು ಮನಸ್ಸು ಮಾಡಿದರೆ ಮತ್ತಷ್ಟು ಸಂಗ್ರಹಿಸುವ ಕೆಟ್ಟ ಬುದ್ಧಿ ಹೆಚ್ಚುತ್ತದೆ ಎಂದು ಹೇಳುತ್ತಿದ್ದ ಪೂಜ್ಯರ ಆಸ್ತಿ ಕೇವಲ ಮಣ್ಣಿನ ಬಿಂದಿಗೆ, ಮಣ್ಣಿನ ತಂಬಿಗೆಯಾಗಿತ್ತು! ಭಕ್ತರು ಯಾರಾದರೂ ಬಂದು ಶ್ರೀಮಠಕ್ಕೆ ಏನನ್ನಾದರೂ ಕೊಡುವುದಕ್ಕೆ ಮುಂದಾದರೆ ಅದನ್ನು ಅಷ್ಟೇ ನಯವಾಗಿ ತಿರಸ್ಕರಿಸಿದ್ದರು. ನಮ್ಮ ಜಪ-ತಪ ಬಿಟ್ಟು ನೀವು ನೀಡುವ ವಸ್ತುಗಳನ್ನು ಕಾಯುವುದೇ ಎಂಬುದು ಅವರ ಪ್ರಶ್ನೆಯಾಗಿತ್ತು.

ಶ್ರೀ ಗೌರೀಶಂಕರ ಸ್ವಾಮೀಜಿ

ಗೌರಿಶಂಕರಸ್ವಾಮಿಗಳ ಪೂರ್ವಾಶ್ರಮ :

ಶ್ರೀಗೌರಿಶಂಕರ ಸ್ವಾಮಿಗಳ ಮೂಲನೆಲೆ ಬೆಳಗಾವಿ ಜಿಲ್ಲೆಯ ರಾಮದುರ್ಗ. ಇಲ್ಲಿನ ಶ್ರೀರೇವಣಸಿದ್ದಯ್ಯ ಮತ್ತು ಗದಿಗೆಮ್ಮ ದಂಪತಿಗಳ ಪುಣ್ಯ ಸಂಜಾತರಾಗಿ ಕ್ರಿ.ಶ.1896 ರಲ್ಲಿ ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ಅಯ್ಯಪ್ಪಸ್ವಾಮಿ. ಬಾಲ್ಯದಲ್ಲೇ ಶಿವಾಚಾರ ಸಂಪನ್ನರಾಗಿದ್ದ ತೇಜೋಮಯ ಬಾಲಕನನ್ನು ಕಿರಸೂರ ಮಠದ ಅಂದಿನ ಪೂಜ್ಯರಾಗಿದ್ದ ಶ್ರೀಮಹಾದೇವಯ್ಯ ಸ್ವಾಮಿಗಳ ಇಚ್ಛೆಯಂತೆ ಇವರ ಪೋಷಕರು ಶ್ರೀಮಠಕ್ಕೆ ನೀಡಿದರು. ನಂತರ ಶ್ರೀಅಯ್ಯಪ್ಪಸ್ವಾಮಿಗಳು ಸೊಲ್ಲಾಪೂರದ ಸಮಾಜೋದ್ಧಾರಕ ವಾರದ ಮಲ್ಲಪ್ಪನವರ ಪಾಠ ಶಾಲೆಯಲ್ಲಿ ಶ್ರೀಜಗದೀಪ ಶಾಸ್ತ್ರಿಗಳ ಶಿಷ್ಯರಾಗಿ ಸಂಸ್ಕೃತವನ್ನು ಅಭ್ಯಾಸ ಮಾಡಿದರು,

ಮಹಾರಾಷ್ಟ್ರ ರಾಜ್ಯದ ನಾಂದೇಡ ಜಿಲ್ಲೆ ಗೋದಾವರಿ ತೀರದಲ್ಲಿರುವ ಸುಂದರ ಚೆಲುವಿನ ಪರಮ "ನಘೀನ ಘಾಟ"ದಲ್ಲಿ ಉಗ್ರ ತಪಸ್ಸನ್ನಾಚರಿಸಿ ಬಂದಿರಲು; ಪೂಜ್ಯರ ತಪಃಶಕ್ತಿಯ ಪ್ರಭಾವ ಕಂಡು ಅನೇಕ ಮಠಗಳು ಆಹ್ವಾನಿಸಿದರೂ ಯಾರ ಕಡೆಯೂ ಮುಖ ಮಾಡದೆ ಕಿರಸೂರಿನ ಮಠಕ್ಕೆ ಧಾವಿಸಿದರು. ನಂತರ ಕಿರಸೂರ ಮಠಕ್ಕೆ ಪೂಜ್ಯರ ಪಟ್ಟಾಭಿಷೇಕವಾಯಿತು.

ಶ್ರೀಶಿವಸಿದ್ಧ ಮಲ್ಲಿಕಾರ್ಜುನ, ಎಂಬ ಅನ್ವರ್ಥಕ ನಾಮವಿದ್ದರೂ "ಶ್ರೀ ಗೌರಿಶಂಕರ ಶಿವಾಚಾರ್ಯ ಸ್ವಾಮಿಗಳು" ಎಂಬ ನಾಮದಿಂದಲೇ ಹೆಚ್ಚು ಪ್ರಸಿದ್ಧರಾದರು. ಪಟ್ಟಾಭಿಷೇಕವಾದ ನಂತರ ಶ್ರೀಗಳು ತಮ್ಮ ಜೀವಿತಾವಧಿಯ ಕೊನೆಯವರೆಗೂ ಭಕ್ತಕೋಟಿಯ ದುಗುಡದುಮ್ಮಾನಗಳನ್ನು ಪರಿಹರಿಸುತ್ತ ಗೌರಿಶಂಕರ ಶಿಖರೋಪಾದಿಯಲ್ಲಿ ಸಮಾಜವನ್ನು ಬೆಳಗಿದರು. ಆಯುರ್ವೇದದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಶ್ರೀಗಳು ಹಲವಾರು ರೋಗಗಳಿಗೆ ಚಿಕಿತ್ಸೆ ನೀಡುತ್ತಿದ್ದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1985ರಲ್ಲಿ ಲಿಂಗೈಕ್ಯರಾದ ಶ್ರೀಗಳು ಭೌತಿಕವಾಗಿ ಜಗತ್ತಿನಿಂದ ಮರೆಯಾದರೂ ಸರ್ವರ ಹೃದಯ ಮಂದಿರದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಇಂದಿಗೂ ಭಕ್ತರು ಶ್ರೀಗಳ ಆಯುರ್ವೇದ ಔಷಧ ಕುರಿತು ಅಭಿಮಾನದಿಂದ ಮಾತನಾಡುತ್ತಾರೆ.

ಗೌರಿಶಂಕರಸ್ವಾಮಿಗಳಿಂದ ಘನವಾದ ಕಿರಸೂರು ಬಿಲ್ವಾಶ್ರಮಕ್ಕೆ ಸದ್ಯ ನೂತನ ಉತ್ತರಾಧಿಕಾರಿಯ ನೇಮಕವಾಗಿದೆ. ಪರಂಪರೆಯಂತೆ ಶ್ರೀಶೈಲ ಜಗದ್ಗುರುಗಳು ವರಕವಿ ಪರ್ವತಶಾಸ್ತ್ರಿಗಳ ವಂಶಸ್ಥರಾದ ವೇದಮೂರ್ತಿ ಮತ್ತು ಗಿರಿಜಾದೇವಿ ದಂಪತಿಗಳ ಪುತ್ರರಾದ "ಪರ್ವತ ದೇವರು" ಅವರನ್ನು ಭಕ್ತರ ಸಮಕ್ಷಮದಲ್ಲಿ ಘೋಷಣೆ ಮಾಡಿದ್ದಾರೆ. ಪರ್ವತದೇವರು ಸದ್ಯ ಶಿವಯೋಗಮಂದಿರದಲ್ಲಿ ಹೆಚ್ಚಿನ ಅಧ್ಯಯನ ಮಾಡುತ್ತಿದ್ದಾರೆ.

ಜೋಳದ ನುಚ್ಚಿನ ಜಾತ್ರೆ:

ಗೌರಿಶಂಕರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಜೋಳದ ನುಚ್ಚಿನ ಪ್ರಸಾದ ವಿಶೇಷವಾಗಿರುತ್ತದೆ. ಈ ಭಾಗದಲ್ಲಿ ಬಡವರ ಬದಾಮಿ ಎಂದೇ ಪ್ರಸಿದ್ಧಿ ಹೊಂದಿರುವ ಬಿಳಿ ಜೋಳದ ನುಚ್ಚಿನ ಪ್ರಸಾದವನ್ನು ಭಕ್ತರು ಸವಿದೇ ಹೋಗುವುದು ವಾಡಿಕೆ. ಭಕ್ತರು ನೀಡುವ ದೇಣಿಗೆ ಹಣದಿಂದ ಜಾತ್ರಾ ಮಹೋತ್ಸವದ ಧಾರ್ಮಿಕ ಕಾರ್ಯಕ್ರಮಗಳು ನಡೆದುಕೊಂಡು ಬರುತ್ತಿವೆ. ಮುತ್ತತ್ತಿ ಹಿರೇಮಠದ ಶ್ರೀಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಇಲ್ಲಿನ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತಿವೆ.

ಇದೇ ಏ.16 ಮತ್ತು 17 ರಂದು ಜಾತ್ರಾ ಮಹೋತ್ಸವವು ಜರುಗಲಿದೆ. ಈಗಾಗಲೇ ಮಾ.31ರ ದವನದ ಹುಣ್ಣಿಮೆಯಿಂದ ಆಧ್ಯಾತ್ಮಿಕ ಪ್ರವಚನ ಆರಂಭಗೊಂಡಿದೆ. ಏ.13 ರಿಂದ 17ರವರೆಗೆ ಪ್ರತಿದಿನ ಸಣ್ಣ ರಥೋತ್ಸವ ಜರುಗಲಿದೆ. ಏ.17ರಂದು ಗೌರಿಶಂಕರಸ್ವಾಮಿಗಳ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಉತ್ಸವ ಮೂರ್ತಿಯ ಮೆರವಣಿಗೆ, ಸುಮಂಗಲೆಯರಿಂದ ಕುಂಭಮೇಳ ಹಾಗೂ ಸಂಜೆ ಮಹಾರಥೋತ್ಸವ ನಡೆಯಲಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ನಾಳ ಜಾತ್ರೆಯ ಉಡಿ ಸಂಭ್ರಮ..!
ಮಹಾಲಕ್ಷ್ಮಿ ಶಕ್ತಿಪೀಠದಲ್ಲಿ ಭಕ್ತರ ಸಮಾಗಮ

ದಿನಾಂಕ : 02-05-2019

ನಮ್ಮ ದೇಶದ ಸಂಸ್ಕೃತಿ, ಸಂಪ್ರದಾಯ, ಆಚರಣೆಗಳು ಉಳಿದಿರುವುದೇ ಮಹಿಳೆಯರಿಂದ. ತತ್ವ-ಸಿದ್ಧಾಂತ, ಶಾಸ್ತ್ರಗಳನ್ನು ಉಪದೇಶಿಸಿದ್ದು ಬಹುತೇಕ ಪುರುಷರೇ ಆದರೂ ಅವುಗಳು ಪಾಲನೆಯಾಗುತ್ತಿರುವುದು ಮಾತ್ರ ಮಹಿಳೆಯರಿಂದ. ಅದರಲ್ಲೂ ಮುತ್ತೈದೆ ಭಾಗ್ಯಕ್ಕಾಗಿ ಮಹಿಳೆಯರು ಬಹಳ ನಿಷ್ಠೆಯಿಂದ ವ್ರತಾಚರಣೆಗಳನ್ನು ಮಾಡುತ್ತಾರೆ. ಅಂತಹ ಮಾತೆಯರಿಗೆ ಉಡಿ ತುಂಬುವ ಬೃಹತ್ ಜಾತ್ರೆ ಉತ್ನಾಳದ ಮಹಾಲಕ್ಷ್ಮಿ ಸನ್ನಿಧಾನದಲ್ಲಿ ನಡೆಯಲಿದೆ.

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನಲ್ಲಿರುವ ಉತ್ನಾಳ ಮಹಾಲಕ್ಷ್ಮಿ ಕ್ಷೇತ್ರದಲ್ಲಿ ಪ್ರತಿವರ್ಷ ವಾರ್ಷಿಕ ಜಾತ್ರೆ ಅತ್ಯಂತ ವಿಜೃಂಭಣೆಯಿಂದ ನಡೆಯಲಿದೆ. ಜಾತ್ರೆಯ ಪ್ರಮುಖ ಭಾಗ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ. ಉಡಿತುಂಬುವುದು ಎಂದರೆ ಮಹಿಳೆಯರ ಪಾಲಿಗೆ ಬಹುದೊಡ್ಡ ಸಂಭ್ರಮ. ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ತವರುಮನೆಯಲ್ಲಿ ಉಡಿತುಂಬುವ ಪದ್ಧತಿ ಇರುತ್ತದೆ. ಆದರೆ ಉತ್ನಾಳ ಮಹಾಲಕ್ಷ್ಮಿಯ ಮಹಾಮನೆಯಲ್ಲಿ ಸುಮಾರು ಐದು ಸಾವಿರಕ್ಕೂ ಹೆಚ್ಚು ಮುತ್ತೈದೆಯರಿಗೆ ಏಕಕಾಲದಲ್ಲಿ ಉಡಿ ತುಂಬಲಾಗುತ್ತದೆ.


ಉತ್ನಾಳ ಮಹಾಲಕ್ಷ್ಮಿ

ಜಾತ್ರೆಯ ಅಂಗವಾಗಿ ಮಹಾಲಕ್ಷ್ಮಿ ದೇವಿಗೆ ಮಾಡುವ ಹರಿದ್ರಾ-ಕುಂಕುಮ ಲೇಪನದ ಪ್ರಸಾದದಿಂದ ಎಲ್ಲ ಮುತ್ತೈದೆಯರಿಗೆ ತಿಲಕವನ್ನಿಟ್ಟು, ಕಂಕಣವನ್ನು ಕಟ್ಟಿ ಹೂವಿನ ತೊಂಡೆಯನ್ನು ತಲೆಗೆ ಶೃಂಗರಿಸಿ ಉಡಿ ತುಂಬಲಾಗುತ್ತದೆ. ಮಹಾಲಕ್ಷ್ಮಿಯ ಸನ್ನಿಧಾನದಲ್ಲಿ ಉಡಿ ತುಂಬುವುದರಿಂದ ಮುತ್ತೈದೆ ಭಾಗ್ಯ ಗಟ್ಟಿ ಆಗುವುದರ ಜೊತೆಗೆ ಮನೆಗೆ ಮಹಾಲಕ್ಷ್ಮಿಯ ಆಗಮನವಾಗುತ್ತದೆ ಎಂಬುದು ಉತ್ತರ ಕರ್ನಾಟಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾಗದ ಬಹುಪಾಲು ಜನರ ನಂಬಿಕೆಯಾಗಿದೆ. ಜನರ ನಂಬಿಕೆಗಳು ನಿಜವಾಗುತ್ತಿರುವುದರ ಪ್ರತೀಕ ಎಂಬಂತೆ ಪ್ರತಿ ವರ್ಷದ ಜಾತ್ರೆಯಲ್ಲಿ ಮುತ್ತೈದೆಯರ ಸಂಖ್ಯೆ ಹೆಚ್ಚುತ್ತಿದೆ.

ಶ್ರೀ ಶಿವಪುತ್ರಯ್ಯ ಸ್ವಾಮಿಗಳು ಹಾಗೂ ಮಾತೋಶ್ರೀ ಶಶಿಕಲಾ ಅಮ್ಮನವರು

ಈ ವರ್ಷ ಇದೇ ಮೇ.10ರಂದು ನಡೆಯುವ ಜಾತ್ರಾ ಮಹೋತ್ಸವದಂದು ಶ್ರೀಮಹಾಲಕ್ಷ್ಮಿ ಶಕ್ತಿಪೀಠದ ಪೂಜ್ಯರಾದ ಶ್ರೀಶಿವಪುತ್ರಯ್ಯ ಸ್ವಾಮಿಗಳು ಹಾಗೂ ಮಾತೋಶ್ರೀ ಶಶಿಕಲಾ ಅಮ್ಮನವರ ಸಮ್ಮುಖದಲ್ಲಿ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮಕ್ಕೆ ಶ್ರೀಮತಿ ಲಲಿತಾ ಸಂಕೇಶ್ವರ ಅವರು ಚಾಲನೆ ನೀಡಲಿದ್ದಾರೆ.

ಮಹಾಲಕ್ಷ್ಮಿ ಶಕ್ತಿಪೀಠದ ಇತಿಹಾಸ :

ಉತ್ತರ ಕರ್ನಾಟಕದ ಎಲ್ಲ ಪ್ರಮುಖ ಗ್ರಾಮಗಳಿಗೊಂದು ಹಿರೇಮಠಗಳು ಸಹಜ. ಸುತ್ತಮುತ್ತಲ ಗ್ರಾಮಗಳ ಧಾರ್ಮಿಕ ಆಚರಣೆ, ಪೂಜೆ-ಪುನಸ್ಕಾರಗಳ ಮೂಲಕ ಪರಂಪರೆಯ ಪ್ರತೀಕವಾಗಿ ಹಿರೇಮಠಗಳು ಕರ್ತವ್ಯ ನಿರ್ವಹಿಸುತ್ತವೆ. ಅಂತೆಯೇ ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲೂಕಿನ ಉತ್ನಾಳ ಹಿರೇಮಠವು ಅಂತಹ ಪರಂಪರೆಯ ಮಠವಾಗಿದೆ. ಆದರೆ ಉತ್ನಾಳ ಹಿರೇಮಠವು ಕೇವಲ ಗ್ರಾಮಗಳಿಗೆ ಸೀಮಿತವಾಗದೇ ರಾಜ್ಯದಾದ್ಯಂತ ಭಕ್ತರನ್ನು ಹೊಂದಿರುವ ಬಹುದೊಡ್ಡ ಧಾರ್ಮಿಕ ಕ್ಷೇತ್ರವಾಗಿದೆ.

ಹಿರೇಮಠ ಪರಂಪರೆಯ ಶ್ರೀಶಿವಪುತ್ರಯ್ಯ ಸ್ವಾಮಿಗಳು ಮಹಾಲಕ್ಷ್ಮಿ ದೇವಿಯ ಉಪಾಸಕರಾಗಿದ್ದು, ಇವರಿಂದ ಹಲವು ಪವಾಡ ಸದೃಶ ಘಟನೆಗಳು ಸಂಭವಿಸುತ್ತಿವೆ. ಪ್ರತಿ ಗುರುವಾರ ಮತ್ತು ಭಾನುವಾರದಂದು ಉತ್ನಾಳ ಮಠದಲ್ಲಿ ಕಿರುಜಾತ್ರೆಯೇ ನಡೆಯುತ್ತದೆ. ಅಂದು ಗದ್ದುಗೆಯ ಮೇಲೆ ಕುಳಿತು ಸ್ವಾಮಿಗಳು ಸಂಕಷ್ಟ ಹೊತ್ತು ಬರುವ ಭಕ್ತರಿಗೆ ಕಂಕಣದಾರವನ್ನು ಕಟ್ಟಿ; ಶುಭ ಸಂಕಲ್ಪವನ್ನು ಮಾಡಿ ಕೆಲ ಪರಿಹಾರಗಳನ್ನು ಸೂಚಿಸುತ್ತಾರೆ. ಹೀಗೆ ದೊರೆತ ಸೂಚನೆಗಳನ್ನು ಅನುಸರಿಸಿದ ಸಾವಿರಾರು ಭಕ್ತರ ಸಮಸ್ಯೆಗಳು ಮಹಾಮಾತೆ ಮಹಾಲಕ್ಷ್ಮಿಯ ಕೃಪೆಯಿಂದ ಪರಿಹಾವಾಗುತ್ತಿವೆ. ಸಂತಾನ, ವಿವಾಹ, ಆರೋಗ್ಯ, ಆಸ್ತಿವಿವಾದ, ವಾಮಾಚಾರ ಹೀಗೆ ಹಲವು ಸಮಸ್ಯೆಗಳು ಇಲ್ಲಿ ಬಗೆಹರಿದಿವೆ.

ಮನುಷ್ಯನ ಭಕ್ತಿ ಮತ್ತು ನಂಬಿಕೆಗಳು ಹೆಚ್ಚಾಗುವುದು ಆತನ ಸಂಕಷ್ಟದ ಸಮಯದಲ್ಲಿ. ಹಾಗೆ ಮಹಾಲಕ್ಷ್ಮಿಯನ್ನು ನಂಬಿ ಬರುವ ಭಕ್ತರಿಗೆ ದೇವಿ ಬರಿಗೈಲಿ ಕಳಿಸುವುದಿಲ್ಲ ಎಂಬ ಬಲವಾದ ಮಾತಿದ್ದು, ಸಾಮಾನ್ಯ ಹಿರೇಮಠವು ಇಂದು ಬೃಹತ್ ಶಕ್ತಿಪೀಠವಾಗಿ ಭಕ್ತರ ಪಾಲಿನ ಭಾಗ್ಯದ ನಿಧಿಯಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಾತ್ರೆಗೆ ಸಜ್ಜಾದ ಉತ್ನಾಳ ಕ್ಷೇತ್ರ :

ವರ್ಷಪೂರ್ತಿ ತಮ್ಮ ಕಷ್ಟಕಾರ್ಪಣ್ಯಗಳ ಪರಿಹಾರಕ್ಕಾಗಿ ಶ್ರೀಕ್ಷೇತ್ರಕ್ಕೆ ಬರುವ ಭಕ್ತಸಮೂಹ ವರ್ಷಕ್ಕೊಮ್ಮೆ ತಮ್ಮ ಸಂಕಷ್ಟ ನಿವಾರಿಸಿದ ದೇವಿಯ ಅರ್ಚನೆಗಾಗಿ ಬರುತ್ತಾರೆ. ಪ್ರತಿ ವೈಶಾಖಮಾಸದ ಷಷ್ಠಿಯಂದು ದೇವಿ ಜಾತ್ರೆ ನಡೆಯಲಿದ್ದು, ಜಾತ್ರೆಗೆ ಮುನ್ನಾ 10 ದಿನಗಳ ಕಾಲ ವಿವಿಧ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಉತ್ನಾಳ ಜಾತ್ರೆ

ಪುರಾಣ ಪ್ರವಚನ ಮತ್ತು ವಿಶೇಷವಾಗಿ ಈ ಭಾಗದ ರೈತರ ಅನುಕೂಲಕ್ಕಾಗಿ ವಿಜಯಪುರದ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ "ಕೃಷಿ ಮೇಳ" ಮತ್ತು "ಕೃಷಿ ವಸ್ತುಪ್ರದರ್ಶನ"ವನ್ನು ಹಮ್ಮಿಕೊಳ್ಳಲಾಗಿದೆ. ಜೊತೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಹಾಲಕ್ಷ್ಮಿ ದೇವಿಯ ಪಲ್ಲಕ್ಕಿ ಮತ್ತು ಆನೆಯ ಮೇಲೆ ಅಂಬಾರಿ ಉತ್ಸವ ನಂತರ ಶ್ರೀಶೈಲ ಜಗದ್ಗುರುಗಳ ದಿವ್ಯಸಾನಿಧ್ಯ, ಮಳಲಿಮಠದ ಡಾ.ಗುರುನಾಗಭೂಷಣ ಶಿವಾಚಾರ್ಯ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಧರ್ಮಸಭೆ ಹಮ್ಮಿಕೊಳ್ಳಲಾಗಿದೆ.

ಶ್ರೀಮಠದ ದೊಡ್ಡಶಕ್ತಿ ದಾಸೋಹ. ಮಾತೋಶ್ರೀ ಶಶಿಕಲಾ ಅಮ್ಮನವರ ಸಂಕಲ್ಪದಂತೆ ಜಾತ್ರೆಯಲ್ಲಿ ಮಹಾ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ.

ಸಾಮೂಹಿಕ ವಿವಾಹ ಮತ್ತು ಕೃಷಿಮೇಳದ ಮಾಹಿತಿಗಾಗಿ ಸಂಗಮೇಶ ಹಿರೇಮಠ 9008350700, ಮಹಾಂತೇಶ ಹಿರೇಮಠ 9972691234 ಈ ಸಂಖ್ಯೆಗಳನ್ನು ಸಂಪರ್ಕಿಸಬಹುದು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೌನಕ್ರಾಂತಿಗೆ ಮುನ್ನುಡಿ ಮುತ್ತತ್ತಿ ಹಿರೇಮಠ

ಶ್ರೀಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ರಜತ ಮಹೋತ್ಸವ

ದಿನಾಂಕ : 07-12-2017

ಕರ್ನಾಟಕದ ಧಾರ್ಮಿಕ ಪರಂಪರೆಯ ಶ್ರೀಮಂತಿಕೆಗೆ ಕಾರಣ ಇಲ್ಲಿನ ಮಠಗಳು. ದೇಶದ ದಾರ್ಮಿಕ ಇತಿಹಾಸದಲ್ಲೇ ಅತಿ ಹೆಚ್ಚು ಸಂತ ಮಹಾಂತರನ್ನು ನೀಡಿದ ಕೀರ್ತಿ ಕರ್ನಾಟಕಕ್ಕಿದೆ. ಆಚಾರ್ಯ ಪರಂಪರೆ, ಶರಣ ಪರಂಪರೆ, ದಾಸ ಪರಂಪರೆಗಳು ವಿಶಿಷ್ಟವಾದ ಸಾಹಿತ್ಯದ ಮೂಲಕ ನಾಡಿನ ಅಧ್ಯಾತ್ಮ ಅಭಿರುಚಿಯನ್ನು ಹೆಚ್ಚಿಸಿವೆ. ಇಂತಹ ಧರ್ಮ ಪರಂಪೆಯನ್ನು ಮುನ್ನಡೆಸುತ್ತಿರುವ ಮಠಗಳಲ್ಲಿ; ಮೌನವಾಗಿ ತನ್ನ ಕ್ರಾಂತಿಯನ್ನು ಮಾಡುತ್ತಿದೆ ಮುತ್ತತ್ತಿ ಹಿರೇಮಠ.

ಘಟಪ್ರಭ ಮತ್ತು ಕೃಷ್ಣ ನದಿಗಳ ಸಂಗಮ ಸ್ಥಾನದಲ್ಲಿರುವ ಮುತ್ತತ್ತಿ ಹಿರೇಮಠವು ಕಳೆದ ಎರಡು ಶತಮಾನಗಳಿಗಿಂತಲೂ ಹೆಚ್ಚು ಕಾಲದಿಂದ ಇಲ್ಲಿನ ಜನರ ಅಧ್ಯಾತ್ಮ ಹಸಿವನ್ನು ಇಂಗಿಸುತ್ತಿದೆ. ಜಾತಿ, ಮತ, ಪಂಥವೆನ್ನದೆ ಸರ್ವರ ಗೌರವಾಧರಗಳಿಗೆ ಪಾತ್ರವಾಗಿದೆ. ಈ ಮಠದ ಗುರುಪರಂಪರೆಯಲ್ಲಿ ನಾಲ್ಕು ಜನ ತಪಸ್ವಿಗಳು ಆಗಿ ಹೋಗಿದ್ದಾರೆ. ಎಲ್ಲ ಲಿಂಗೈಕ್ಯ ಶ್ರೀಗಳು ತಮ್ಮ ತಮ್ಮ ಕಾಲದಲ್ಲಿ ವಿಶೇಷ ತಪೋನುಷ್ಠಾನ ಕೈಗೊಂಡು, ಧಾರ್ಮಿಕ ಕ್ರಾಂತಿಯನ್ನು ಮಾಡಿದ ಇತಿಹಾಸವಿದೆ. ಸಂದರ್ಭ ಬಂದಾಗ ತಮ್ಮಲ್ಲಿನ ಅಂತಃಶಕ್ತಿಯನ್ನು ಪ್ರಕಟಗೊಳಿಸಿ ಬಹಿರಂಗ ಜಗತ್ತನ್ನು ದಿಗ್ಭ್ರಮೆ ಗೊಳಿಸಿದ್ದಾರೆ.



ಶ್ರೀ ಶಿವಯೋಗೀಶ್ವರರ ಗದ್ದುಗೆ

ಮಠದ ಕರ್ತೃಗಳಾದ ಶ್ರೀಶಿವಯೋಗೀಶ್ವರರು ಒಮ್ಮೆ ವಿಜಯಪುರದ ಹಾಸಪೀರ್ ದರ್ಗಾದ ಬಳಿ ಕುಳಿತು ಶಿವಯೋಗದಲ್ಲಿ ಮಗ್ನರಾಗಿರುತ್ತಾರೆ. ಆಗ ಅಲ್ಲಿಗೆ ಬಂದ ದರ್ಗಾದ ಮುಲ್ಲಾ; ಇದು ಮಸೀದಿ ಸ್ಥಳವಿದೆ ಇಲ್ಲಿ ಪೂಜೆ ಮಾಡಬಾರದೆಂದು ತಾಕೀತು ಮಾಡುತ್ತಾನೆ. ಆಗ ಶಿವಯೋಗೀಶ್ವರರು ಮಸೀದಿಯಲ್ಲಿ ಮಹಾದೇವನ ಲಿಂಗವನ್ನು ಪ್ರತ್ಯಕ್ಷ ಮಾಡಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಗುರುಲಿಂಗ
ಶಿವಾಚಾರ್ಯ ಸ್ವಾಮೀಜಿ

ತೋರಿಸುತ್ತಾರೆ. ಆಗ ಮುಲ್ಲಾ ತನ್ನ ತಪ್ಪಿನ ಅರಿವಾಗಿ ಶರಣಾಗುತ್ತಾನೆ.

ಹೀಗೆ ಶ್ರೀಶಿವಯೋಗೀಶ್ವರರಿಂದ ಆರಂಭವಾದ ಮುತ್ತತ್ತಿ ಹಿರೇಮಠವು ಶ್ರೀಶೈಲ ಪೀಠದ ಶಾಖಾಮಠವಾಗಿದ್ದು, ಅವರ ನಂತರ ಬಂದ ಎಲ್ಲ ಪೂಜ್ಯರು ಸಹ ತಪಸ್ವಿಗಳಾಗಿ ಈ ಭಾಗದ ಭಕ್ತರ ಧರ್ಮದಾಹವನ್ನು ತಣಿಸಿದ್ದಾರೆ. ಶ್ರೀಮಹಾಂತಸ್ವಾಮಿಗಳು ತುಂಬಿ ಹರಿಯುವ ಕೃಷ್ಣೆ-ಘಟಪ್ರಭೆ ನದಿಯ ಮೇಲೆ ಕಂಬಳಿಯನ್ನು ಹಾಸಿಕೊಂಡು ದಡವನ್ನು ಸೇರುತ್ತಿದ್ದರು. ನಂತರ ಪೀಠವನ್ನೇರಿದ ಶ್ರೀಬಸಯ್ಯ ಸ್ವಾಮಿಗಳು ಸಹ ಪವಾಡ ಪುರುಷರಾಗಿದ್ದು, ಕಾಲಿಗೆ ಸರ್ಪವನ್ನು ಸುತ್ತಿಕೊಂಡು ಓಡಾಡುತ್ತಿದ್ದರು.

ಸಾಮರಸ್ಯ ಮತ್ತು ಸೌಹಾರ್ಧತೆಗೆ ನಿರಂತರ ಸೇವೆ ಗೈದ ಶ್ರೀಮಠದ ನಾಲ್ಕನೇ ಸ್ವಾಮೀಜಿ ಶ್ರೀಮಹಾಂತ ಶಿವಯೋಗಿಗಳು ಕಾಶಿ ಪಂಡಿತರು, ಆಯುರ್ವೇದ ತಜ್ಞರು ಹಾಗೂ ವಾಕ್ ಸಿದ್ಧಿಪುರುಷರಾಗಿದ್ದರು. ಬರದ ನಾಡು ಬಯಲು ಸೀಮೆಯಲ್ಲಿ ಹಲವಾರು ಬಾರಿ ಅನುಷ್ಠಾನ ಕೈಗೊಂಡು ಮಳೆ ತರಿಸಿದ್ದು, ಇಸ್ಲಾಂ ಬಂಧುಗಳ ಉರೂಸ್ ಹಬ್ಬದಲ್ಲಿ ಉರಿಯುವ ಬೆಂಕಿಯಲ್ಲಿ ಬೆಣ್ಣೆ ಮತ್ತು ಹೂವನ್ನು ಹಾಕಿ ಹೊರ ತೆಗೆದಿದ್ದರು. ಅವರ ತಪಃಸಿದ್ಧಿಯನ್ನು ಕಣ್ಣಾರೆ ಕಂಡ ಹಿರಿಯರು ಇಂದಿಗೂ ನೆನೆದು ಗೌರವ ಸಲ್ಲಿಸುತ್ತಾರೆ. ಶ್ರೀ ಮಹಾಂತ ಶಿವಯೋಗಿಗಳ ಕರಕಮಲ ಸಂಜಾತರಾದ ಶ್ರೀಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀಮಠದ ಅಧ್ಯಕ್ಷ ಸ್ಥಾನವನ್ನಲಂಕರಿಸಿ 25 ವಸಂತಗಳು ಪೂರೈಸಿದ್ದು, ಸದ್ಯ ಶ್ರೀಮಠದಲ್ಲೀಗ ಪಟ್ಟಾಧಿಕಾರದ ರಜತಮಹೋತ್ಸವ ಸಂಭ್ರಮ.

ಶ್ರೀಗಳು ನಡೆದು ಬಂದ ದಾರಿ:

ವೇ.ಮೂ. ಈರಸಂಗಯ್ಯ ಮತ್ತು ಶರಣೆ ಬಸಮ್ಮನವರ ಪುಣ್ಯಸಂಜಾತರಾಗಿ 21-8-1964ರಲ್ಲಿ ಜನಿಸಿದ ಪೂಜ್ಯರ ಪೂರ್ವಾಶ್ರಮದ ಹೆಸರು ಶಿವಲಿಂಗಯ್ಯ. ಹಿಂದೂ ರಕ್ಷಾಬಂಧನದ ನೂಲ ಹುಣ್ಣಿಮೆಯಂದು ಜನಿಸಿದ ಶ್ರೀಗಳು ಸದಾ ಸಹೋದರತೆಯನ್ನು ಪ್ರತಿಪಾದಿಸುತ್ತ ಗ್ರಾಮೀಣ ಭಾಗದಲ್ಲಿದ್ದುಕೊಂಡು ಸರ್ವಜನಾಂಗದ ಗೌರವಗಳನ್ನು ಗಳಿಸಿಕೊಂಡಿದ್ದಾರೆ.

ಮುತ್ತತ್ತಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿ ನಂತರ ಆಗಮ, ವೇದ, ಸಂಸ್ಕೃತಾಭ್ಯಾಸಕ್ಕಾಗಿ ಪ್ರಸಿದ್ಧ ಶ್ರೀಶಿವಯೋಗ ಮಂದಿರದಲ್ಲಿ ಸೇರ್ಪಡೆಯಾಗಿ ಅಲ್ಲಿಂದ ಪಧವಿ ಶಿಕ್ಷಣಕ್ಕಾಗಿ ಹುಬ್ಬಳ್ಳಿಯ ಮೂರು ಸಾವಿರ ಮಠದ ಆಶ್ರಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಡೆಯುತ್ತಾರೆ. ಮುಂದೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಮಹಂತರ ಮಠಕ್ಕೆ ಬಂದು ಉನ್ನತ ಅಧ್ಯಯನವನ್ನು ಪೂರೈಸಿ ಮುತ್ತತ್ತಿ ಹಿರೇಮಠದಲ್ಲಿ ತಮ್ಮ ಧರ್ಮ ಕಾರ್ಯವನ್ನು ಮುಂದುವರೆಸಿದ್ದಾರೆ.

ಮುತ್ತತ್ತಿ ಮಠ

ಲಿಂಗೈಕ್ಯ ಮಹಾಂತ ಶಿವಯೋಗಿಗಳ ಆಶೀರ್ವಾದ ಮತ್ತು ಸದ್ಭಕ್ತರ ಆಶಯದಂತೆ 1992ರಲ್ಲಿ ಮುತ್ತತ್ತಿ ಹಿರೇಮಠದ ಅಧಿಕಾರ ವಹಿಸಿಕೊಂಡ ಪೂಜ್ಯರು ಕಳೆದ 25 ವರ್ಷಗಳಿಂದ ನಿರಂತರವಾಗಿ ಧರ್ಮ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದಾರೆ. ಲೋಕ ಕಲ್ಯಾಣಾರ್ಥವಾಗಿ 5 ಬಾರಿ 75 ದಿನಗಳ ಕಠೋರ ತಪೋನುಷ್ಠಾನವನ್ನು ಕೈಗೊಂಡಿದ್ದಾರೆ. ಮೂಲ ಮುತ್ತತ್ತಿ ಹಿರೇಮಠ ಹಾಗೂ ಕುಮಟಗಿ ಶಾಖಾ ಮಠಗಳೆರಡನ್ನು ಸಮಾಜಮುಖಿಯಾಗಿ ಅಭಿವೃದ್ಧಿ ಪಡಿಸಿದ್ದಾರೆ.

ರಜತ ಮಹೋತ್ಸವ ಕಾರ್ಯಕ್ರಮ:

ಶಿವಾಚಾರ ಸಂಪನ್ನರು, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕರಾದ ಶ್ರೀಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ಪಟ್ಟಾಧಿಕಾರದ ರಜತ ಮಹೋತ್ಸವವನ್ನು ಸಮಸ್ತ ಸದ್ಭಕ್ತರು ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಈಗಾಗಲೇ ಡಿ.1ರಿಂದ ಶ್ರೀಮಠದಲ್ಲಿ "ಶ್ರೀಶೈಲ ಮಹಾತ್ಮೆ" ಪುರಾಣ ಪ್ರವಚನ ಆರಂಭಗೊಂಡಿದ್ದು, ಡಿ.10,11ರಂದು ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕರ್ತೃಗದ್ದುಗೆಗೆ ರುದ್ರಾಭಿಷೇಕ, ಜಂಗಮ ವಟುಗಳಿಗೆ ಅಯ್ಯಾಚಾರ ದೀಕ್ಷೆ ಹಾಗೂ ಹಾಗೂ ಮುತ್ತೈದೆಯರಿಗೆ ಉಡಿತುಂಬವ ಕಾರ್ಯಕ್ರಮ ನಡೆಯಲಿದೆ. ರಜತ ಮಹೋತ್ಸವ ಸವಿನೆನಪಿಗೆ 25 ಸ್ವಾಮಿಗಳ ಮಂಟಪ ಪೂಜೆ ಹಮ್ಮಿಕೊಳ್ಳಲಾಗಿದೆ. ನಂತರ ಸರ್ವಧರ್ಮ ಸಾಮೂಹಿಕ ವಿವಾಹ ಮತ್ತು ಧರ್ಮ ಸಮಾರಂಭ ನಡೆಯಲಿದೆ. ಅದೇ ದಿನ ಸಂಜೆ ಶ್ರೀಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ತುಲಾಭಾರ ಮತ್ತು ಅಡ್ಡಪಲ್ಲಕ್ಕಿ ಉತ್ಸವ ಹಮ್ಮಿಕೊಳ್ಳಲಾಗಿದೆ. ನಾಡಿನ ಹಲವಾರು ಮಠಾಧೀಶರು, ರಾಜಕೀಯ ಮುಖಂಡರು, ಸಾಹಿತಿಗಳು ಸಾವಿರಾರು ಸದ್ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಗಾನೂರು ಶರಣರ ಪವಾಡ : ಬೆಳೆಯುತ್ತಿರುವ ಮಲ್ಲಯ್ಯನ ಲಿಂಗ

ದಿನಾಂಕ : 07–02–2019

ನಾವೆಷ್ಟೇ ಆವಿಷ್ಕಾರಗಳನ್ನು ಮಾಡಿ ವಿಜ್ಞಾನದಲ್ಲಿ ಮುಂದುವರೆದಿದ್ದರೂ ಸೃಷ್ಟಿಯ ರಹಸ್ಯ ನಮ್ಮ ಊಹೆಗೆ ನಿಲುಕುವುದಿಲ್ಲ. ಅತಿಮಾನುಷ ಶಕ್ತಿಯೊಂದು ಸೃಷ್ಟಿಯಲ್ಲಿ ಒಂದಿಲ್ಲೊಂದು ಚೋದ್ಯವನ್ನು ಮಾಡುತ್ತಲೇ ಇರುತ್ತದೆ. ಅಂತಹದ್ದೊಂದು ಪವಾಡಕ್ಕೆ ಸಾಕ್ಷಿ ಬಳಗಾನೂರಿನ ಚಿಕ್ಕೇನುಕೊಪ್ಪ ಶರಣರ ಕ್ಷೇತ್ರದಲ್ಲಿರುವ ಶ್ರೀಶೈಲ ಮಲ್ಲಯ್ಯನ ಗುಂಡು!

ಸಾಮಾನ್ಯರ ಕಣ್ಣಿಗೆ ಸಹಜವಾಗಿ ಕಾಣುವ ಶಿಲೆ ಕೇವಲ ಕಲ್ಲಲ್ಲಾ ಸಾಕ್ಷಾತ್ ಮಲ್ಲಿಕಾರ್ಜುನ ಸ್ವಾಮಿಯ ಪ್ರತಿರೂಪ. ಗದಗ ಜಿಲ್ಲೆಯ ಬಳಗಾನೂರು ಪುಟ್ಟ ಗ್ರಾಮವಾಗಿದ್ದರೂ ಚಿಕ್ಕೇನುಕೊಪ್ಪದ ಶ್ರೀಚನ್ನವೀರ ಶರಣರಿಂದ ಇಂದು ಬಹುದೊಡ್ಡ ದಾರ್ಮಿಕ ಕ್ಷೇತ್ರವಾಗಿದೆ.

ಶರಣರು ತಮ್ಮ ಜೀವಿತಾವಧಿಯಲ್ಲಿ ಸಾಕಷ್ಟು ಪವಾಡಗಳನ್ನು ಮಾಡಿದ್ದಾರೆ. ಆದರೆ ಅವರು ಲಿಂಗೈಕ್ಯವಾದ ನಂತರವೂ ನಡೆಯುತ್ತಿರುವ ಪವಾಡ ಅವರು ಶ್ರೀಶೈಲದಿಂದ ತರಿಸಿದ ಮಲ್ಲಯ್ಯನ ಗುಂಡು ದಿನೇ ದಿನೇ ಬೆಳೆಯುತ್ತಿರುವುದು. ಮಾತ್ರವಲ್ಲ ಭಕ್ತರ ಬೇಡಿಕೆಗಳನ್ನು ಈಡೇರಿಸುವ ಶಕ್ತಿ ಆ ಮಲ್ಲಯ್ಯನ ಗುಂಡಿಗೆ ಇದೆ ಎಂಬುದಕ್ಕೆ ಇಲ್ಲಿ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ.

ಬಳಗಾನೂರು ಮಲ್ಲಯ್ಯನ ಗುಂಡು

ಭಕ್ತರು ಯಾವುದೇ ತಮ್ಮ ಬೇಡಿಕೆಗಳನ್ನು ಸ್ಮರಿಸಿಕೊಂಡು ಶರಣರ ಗದ್ದುಗೆಗೆ ಸಾಷ್ಟಾಂಗ ಹಾಕಿ ಈ ಕಲ್ಲಿನ ಗುಂಡನ್ನು ಎತ್ತುತ್ತಾರೆ. ತಮ್ಮ ಬೇಡಿಕೆ ಈಡೇರುವುದಾದರೆ ಆ ಗುಂಡು ಲಘುವಾಗಿಯೂ, ಆ ಕೆಲಸ ಆಗುವುದಿಲ್ಲವಾದರೆ ಭಾರವಾಗಿಯೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೂಗುತ್ತದೆ. ಈ ಸೂಚನೆ ನೂರಕ್ಕೆ ನೂರು ಸತ್ಯವಾಗುತ್ತದೆ ಎಂಬುದು ಇಲ್ಲಿ ಫಲವನ್ನು ಕಂಡ ಭಕ್ತರ ಮಾತು.

ಬಳಗಾನೂರು ಶರಣರ ಗದ್ದುಗೆ

ಶ್ರೀಚನ್ನವೀರ ಶರಣರು ತಮ್ಮ ಭಕ್ತರೊಬ್ಬರನ್ನು ಶ್ರೀಶೈಲಕ್ಕೆ ಕಳುಹಿಸಿ ಅಲ್ಲಿಂದ ಒಂದು ಚಿಕ್ಕ ಕಲ್ಲನ್ನು ತರುವಂತೆ ಸೂಚಿಸುತ್ತಾರೆ. ಗುರುವಿನ ಅಪ್ಪಣೆಯಂತೆ ಭಕ್ತ ಶ್ರೀಶೈಲಕ್ಕೆ ಹೋಗಿ ಕಲ್ಲುಗುಂಡನ್ನು ತೆಗೆದುಕೊಂಡು ಬರುವಾಗ ದಾರಿ ಮಧ್ಯೆ ತಮ್ಮ ಸಂಬಂಧಿಕರ ಮನೆಯಲ್ಲಿ ತಂಗುತ್ತಾರೆ. ಆಗ ಅದೇ ಕಲ್ಲುಗುಂಡಿನಲ್ಲಿ ಶರಣರು ದರ್ಶನವನ್ನು ನೀಡಿ ಆತನ ಕೆಲಸವನ್ನು ನೆನಪಿಸುತ್ತಾರೆ. ಕೂಡಲೇ ಎಚ್ಚೆತ್ತ ಭಕ್ತ ಕಲ್ಲುಗುಂಡನ್ನು ಭಕ್ತಿಭಾವದಿಂದ ಬಳಗಾನೂರಿಗೆ ತಂದು ಶರಣರಿಗೆ ನೀಡುತ್ತಾನೆ. ಆಗ ಶ್ರೀಗಳು ಇದು ಮಲ್ಲಯ್ಯನ ಲಿಂಗ; ಶ್ರೀಶೈಲಕ್ಕೆ ಹೋಗಲು ಸಾಧ್ಯವಾಗದವರಿಗೆ ಮಲ್ಲಿಕಾರ್ಜುನ ಸ್ವಾಮಿ ಇಲ್ಲಿಯೇ ದರ್ಶನ ನೀಡುತ್ತಾನೆ. ಭಕ್ತರ ಬೇಡಿಕೆಗಳನ್ನು ಈಡೇರಿಸುತ್ತಾನೆ. ಇಂದಿನಿಂದ ಈ ಲಿಂಗ ಬೆಳೆಯುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ಸಾಕ್ಷಿ ಎಂಬಂತೆ ಒಬ್ಬ ಮನುಷ್ಯನ ಎರಡೂ ಕೈ ಸೇರಿಸಿದರೆ ನಿಲುಕುತ್ತಿದ್ದ ಲಿಂಗ ಇಂದು ಇಬ್ಬರು ಸೇರಿ ಎತ್ತುವಷ್ಟು ದೊಡ್ಡದಾಗಿ ಬೆಳೆದಿದೆ.

ಬಳಗಾನೂರು ಶರಣರ ಪರಂಪರೆ :

ಕೊಪ್ಪಳ ಜಿಲ್ಲೆಯಲ್ಲಿರುವ ಚಿಕ್ಕೇನುಕೊಪ್ಪ ಹಿರೇಮಠವು ಶ್ರೀಚನ್ನವೀರ ಶರಣರ ಮೂಲಸ್ಥಾನ. ಸುಮಾರು 500 ವರ್ಷಗಳ ಇತಿಹಾಸ ಹೊಂದಿರುವ ಚಿಕ್ಕೇನುಕೊಪ್ಪ ವೀರಶೈವ ಪರಂಪರೆಯ ಮಠವಾಗಿದ್ದು, ಸಮನ್ವಯವೇ ಈ ಮಠದ ತತ್ವ. ಇಂತಹ ಪರಂಪರೆಯ 9ನೇ ಗುರುಗಳಾಗಿ ಪಟ್ಟಾಧಿಕಾರ ಹೊಂದಿದ ಶ್ರೀಚನ್ನವೀರ ಮಹಾಸ್ವಾಮಿಗಳಿಗೆ ಉಜ್ಜಯಿನಿ ಪೀಠದ ಲಿಂಗೈಕ್ಯ ಜಗದ್ಗುರು ಸಿದ್ಧಲಿಂಗ ಭಗವತ್ಪಾದರಿಂದ ಲಿಂಗದೀಕ್ಷೆ ಹಾಗೂ ಕೊಪ್ಪಳ ಗವಿಮಠದ ಶಾಂತವೀರ ಸ್ವಾಮಿಗಳಿಂದ ಗುರುಪಟ್ಟಾಧಿಕಾರ ದೀಕ್ಷೆಯಾಗುತ್ತದೆ.

ಶ್ರೀ ಶಿವಶಾಂತವೀರ ಸ್ವಾಮಿಗಳು

ತ್ರಿಕಾಲ ಜ್ಞಾನಿಗಳಾಗಿದ್ದ ಶ್ರೀಗಳುನ್ನು ಪವಾಡ ಪುರುಷರೆಂದೇ ಜನ ನಂಬಿದ್ದಾರೆ. ಅವರು ಮಾಡಿದ ಪವಾಡಗಳನ್ನು ಪ್ರತ್ಯಕ್ಷ ಕಂಡವರಿದ್ದಾರೆ. ತಮ್ಮ ನೆಚ್ಚಿನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಗಾನೂರು ಮಠ

ಅಂಬಾಸಿಡರ್ ಕಾರಿನ ಇಂಧನ ಖಾಲಿಯಾದಾಗ ಕಾರಿನಲ್ಲಿದ್ದ ನೀರನ್ನೇ ಸುರಿದು ಕಾರನ್ನು 25ಕಿ.ಮೀ. ದೂರ ಓಡುವಂತೆ ಮಾಡಿ ದೊಡ್ಡ ಪವಾಡವನ್ನೇ ಸೃಷ್ಟಿಸುತ್ತಾರೆ.

ಸಂಚಾರ ಮಾಡುತ್ತ ಇಂದಿನ ಬಳಗಾನೂರಿಗೆ ಬಂದ ಶರಣರು ಇಲ್ಲಿ ಮಠವನ್ನು ನಿರ್ಮಾಣ ಮಾಡಲು ಸಂಕಲ್ಪಿಸುತ್ತಾರೆ. ಶ್ರೀಗಳ ಸಂಕಲ್ಪಕ್ಕೆ ಶ್ರೀಮಠದ ಪರಮಭಕ್ತರಾದ ಗೂಳರೆಡ್ಡಿ ಮನೆತನದವರು ತಮ್ಮ ಜಮೀನನ್ನು ದಾನವಾಗಿ ನೀಡುತ್ತಾರೆ. ನಂತರ ಇಲ್ಲಿ ಮಠವನ್ನು ನಿರ್ಮಾಣ ಮಾಡಿ; ಇದು ಮುಂದೆ ದೊಡ್ಡ ಕ್ಷೇತ್ರವಾಗುತ್ತದೆ ಎಂದು ಹೇಳುತ್ತಾರೆ. ಅಂತೆಯೇ ಇಂದು ಬಳಗಾನೂರು ಬಹುದೊಡ್ಡ ಧಾರ್ಮಿಕ ಕ್ಷೇತ್ರವಾಗಿದ್ದು ಲಕ್ಷಾಂತರ ಭಕ್ತರ ಭಕ್ತಿಕೇಂದ್ರವಾಗಿದೆ.

ಸದ್ಯ ಚಿಕ್ಕೇನುಕೊಪ್ಪ ಗುರುಪರಂಪರೆಯ 10ನೇ ಸ್ವಾಮಿಗಳಾಗಿರುವ ಶ್ರೀಶಿವಶಾಂತವೀರ ಸ್ವಾಮಿಗಳು ಬಳಗಾನೂರು ಕ್ಷೇತ್ರವನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಸಮಗ್ರವಾಗಿ ಅಭಿವೃದ್ಧಿಗೊಳಿಸಿದ್ದಾರೆ. ಗ್ರಾಮೀಣ ಪ್ರದೇಶವೊಂದರಲ್ಲಿ ಐಟಿಐ ಸೇರಿದಂತೆ 500 ಬಡ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ ನಿಲಯ ನಿರ್ಮಿಸಿದ್ದಾರೆ.

ರಥಸಪ್ತಮಿಯಂದು ಶರಣರ ರಥೋತ್ಸವ:

ಶ್ರೀಚನ್ನವೀರ ಶರಣರು 1995ರಲ್ಲಿ ಲಿಂಗೈಕ್ಯರಾದರು. ಅವರ ಸಮಾಧಿಯನ್ನು ಬಳಗಾನೂರಿನಲ್ಲಿ ನಿರ್ಮಿಸಲಾಗಿದ್ದು, ಶ್ರೀಗಳು ಲಿಂಗೈಕ್ಯರಾದ ಮಾಘ ಶುದ್ಧ ರಥಸಪ್ತಮಿಯಂದು ಬೃಹತ್ ರಥೋತ್ಸವವನ್ನು ಆಚರಿಸಲಾಗುತ್ತೆ. ಮಹಾತ್ಮರ ಜೀವನ ದರ್ಶನ ಪ್ರವಚನ, ಕರ್ತೃಗದ್ದುಗೆಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಮತ್ತು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ನಂತರ ಧಾರ್ಮಿಕ ಚಿಂತನಗೋಷ್ಠಿ,101 ಜೊತೆ ಸಾಮೂಹಿಕ ವಿವಾಹ, ಸುಮಂಗಲೆಯರಿಗೆ ಉಡಿತುಂಬುವುದು ಹಾಗೂ ಅದೇ ದಿನ ಸಂಜೆ ಮಹಾ ರಥೋತ್ಸವ ನಡೆಯಲಿದೆ. ಕೊನೆಯದಾಗಿ ಸಾಂಪ್ರಾದಾಯಿಕ ಕಡುಬಿನ ಕಾಳಗ ಹಾಗೂ ಶರಣರ ಬೆಳ್ಳಿಮೂರ್ತಿ ಉತ್ಸವ ನಡೆಯಲಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೌನತಪಸ್ವಿ ರುದ್ರಮುನಿ ಸ್ವಾಮಿಗಳ ಶತಮಾನೋತ್ಸವ ಬಿಲ್ವಾಶ್ರಮ ನೂತನ ಮಠ ಲೋಕಾರ್ಪಣೆ, ವಿಜಯವಾಣಿ ಅಂಕಣದ ಪುಸ್ತಕ ಬಿಡುಗಡೆ

ದಿನಾಂಕ : 16–05–2019

ಮಾತು ಬೆಳ್ಳಿ, ಮೌನ ಬಂಗಾರ ಎಂಬ ನಾಣ್ಣುಡಿಯಂತೆ; ದೇವರನ್ನ ಅರ್ಚಿಸುವುದಕ್ಕೆ ಮಂತ್ರ, ಶ್ಲೋಕ, ಪ್ರಾರ್ಥನೆ, ಗಾಯನ ಹೀಗೆ ಸಾಕಷ್ಟು ವಿಧಾನಗಳಿದ್ದರೂ ಅಂತಿಮವಾಗಿ ನಮ್ಮ ಹರಕೆಯನ್ನು ಸಲ್ಲಿಸುವದಕ್ಕೆ ಮೌನಕ್ಕೆ ಶರಣಾಗಲೇಬೇಕು. ಅಂತಹ ಮೌನ ತಪಸ್ಸಿನಿಂದ ಅಧ್ಯಾತ್ಮದ ಅನುಭೂತಿಯನ್ನು ಸಾಧಿಸಿದ ಮಹಾನ್ ಶಿವಯೋಗಿ ಶ್ರೀರುದ್ರಮುನಿ ಶಿವಾಚಾರ್ಯ ಸ್ವಾಮಿಗಳು.

ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ತಾಲೂಕಿನ ಬಿಲ್‌ಕೆರೂರು ಶ್ರೀಬಿಲ್ವಾಶ್ರಮ ಹಿರೇಮಠದ ಪಟ್ಟಾಧ್ಯಕ್ಷರಾಗಿದ್ದ ಶ್ರೀ.ಷ.ಬ್ರ.ರುದ್ರಮುನಿ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಮೌನತಪಸ್ವಿಗಳಾಗಿ ಈ ಭಾಗದ ಭಕ್ತರ ಪಾಲಿಗೆ ನಡೆದಾಡುವ ದೇವರಾಗಿ ಪ್ರಸಿದ್ಧರಾಗಿದ್ದರು. ಉಜ್ಜಯಿನಿ ಪೀಠದ ಶಾಖಾ ಪುತ್ರವರ್ಗ ಪರಂಪರೆಗೆ ಸೇರಿದ್ದ ಬಿಲ್ಕೆರೂರು ಹಿರೇಮಠದಲ್ಲಿ 1909ರಲ್ಲಿ ಜನಿಸಿದ ಶ್ರೀಗಳು; ಚಿಕ್ಕ ವಯಸ್ಸಿನಲ್ಲೇ ಅಧ್ಯಾತ್ಮ ಪರಿಸರದಲ್ಲಿ ಬೆಳೆದವರು.


ಬಿಲ್‌ಕೆರೂರು ರುದ್ರಮುನಿ ಸ್ವಾಮೀಜಿ

ಉಜ್ಜಯಿನಿ ಲಿಂಗೈಕ್ಯ ಜಗದ್ಗುರು, ವಿಭೂತಿ ಪುರುಷ ಶ್ರೀಸಿದ್ಧಲಿಂಗ ಭಗವತ್ಪಾದರ ಕೃಪಾಶೀರ್ವಾದಕ್ಕೆ ಒಳಗಾಗಿದ್ದ ರುದ್ರಮುನಿ ಸ್ವಾಮಿಗಳು ದಿನಕಳೆದಂತೆ ಅಧ್ಯಾತ್ಮದ ಬಗ್ಗೆ ಹೆಚ್ಚಿನ ಆಸಕ್ತಿಹೊಂದಿದರು. ಕೇವಲ 10ನೇ ವಯಸ್ಸಿನಲ್ಲಿ ಶ್ರೀಮಠದ ಪಟ್ಟಾಧ್ಯಕ್ಷರಾಗಿ ನೇಮಕಗೊಂಡ ನಂತರ ಗ್ರಾಮದ ನಡುವೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಸಿದ್ಧಲಿಂಗ ಶಿವಾಚಾರ್ಯರು

ಇದ್ದ ಮಠವನ್ನು ತೊರೆದು ಊರ ಹೊರಗಿನ ಅಡವಿಯಲ್ಲಿ ಕುಳಿತು ನಿರಂತರ ಅನುಷ್ಠಾನ ಗೈಯುತ್ತಾರೆ.

ಸುಮಾರು 12 ವರ್ಷಗಳ ಕಾಲ ಪೂರ್ಣ ಮೌನತಪಸ್ಸನ್ನಾಚರಿಸಿದ ಶ್ರೀಗಳು ಧಾರ್ಮಿಕವಾಗಿ ಶಕ್ತಿ ಸಂಪಾದಿಸಿಕೊಂಡರು. ನಂತರ ಶ್ರೀಗಳು ತಪಸ್ಸು ಆಚರಿಸಿದ ಸ್ಥಳ ಪ್ರಸಿದ್ಧವಾಯಿತು. ಮುಂದೆ ನಡೆದದ್ದೆಲ್ಲವೂ ಬಹುದೊಡ್ಡ ಇತಿಹಾಸ. ಲೌಕಿಕ ಪ್ರಪಂಚದ ಯಾವುದೇ ವಿಷಯಗಳಿಗೂ ಅಂಟಿಕೊಂಡಿರದ ಶ್ರೀಗಳು ಭಕ್ತರಿಂದ ಬಂದ ಕಾಣಿಕೆಯ ಹಣವನ್ನು ಭಕ್ತರ ಅನುಕೂಲಕ್ಕಾಗಿ ವಿನಿಯೋಗಿಸಿದ್ದಾರೆ. ಇಂದು ಬಿಲ್ಕೆರೂರು ಹಿರೇಮಠವು ಶೈಕ್ಷಣಿಕ ಸಾಧನೆಯಲ್ಲಿ ಉನ್ನತ ಸ್ಥಾನವನ್ನು ಹೊಂದಿರುವುದರ ಹಿಂದಿನ ಪ್ರೇರಕ ಶಕ್ತಿ ಶ್ರೀರುದ್ರಮುನಿ ಸ್ವಾಮಿಗಳು. ಸುಮಾರು 6ದಶಕಗಳ ಕಾಲ ಶ್ರೀಮಠದ ಸಾರಥ್ಯವನ್ನು ವಹಿಸಿದ್ದ ಶ್ರೀಗಳು 1982ರಲ್ಲಿ ಲಿಂಗೈಕ್ಯರಾದರು.

ಶತಮಾನೋತ್ಸವ ಸಮಾರಂಭ :

ಬಿಲ್ಕೆರೂರಿನ ಬಿಲ್ವಾಶ್ರಮ ಹಿರೇಮಠದ ಶ್ರೀರುದ್ರಮುನಿಸ್ವಾಮಿಗಳ ಶತಮಾನೋತ್ಸವ ಸಮಾರಂಭವನ್ನು ಭಕ್ತರು ಅದ್ದೂರಿಯಾಗಿ ಹಮ್ಮಿಕೊಂಡಿದ್ದಾರೆ. ಶ್ರೀಗಳು ಜನಿಸಿ110 ವರ್ಷಗಳಾಗಿದ್ದು, ಅವರ ನೂತನ ಗದ್ದುಗೆ ನಿರ್ಮಾಣಗೊಂಡ ನಂತರವೇ ಶತಮಾನೋತ್ಸವ ಆಚರಿಸಬೇಕೆಂಬ ಸಂಕಲ್ಪ ಮಾಡಿದ್ದ ಪ್ರಸ್ತುತ ಪಟ್ಟಾಧ್ಯಕ್ಷರಾದ ಶ್ರೀಷ.ಬ್ರ.ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈಗಾಗಲೇ ಮೇ.15ರಂದು ಶತಮಾನೋತ್ಸವಕ್ಕೆ ಚಾಲನೆ ದೊರೆತಿದ್ದು, ಮೇ.17ರವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಮೇ.16ರಂದು ರುದ್ರಮುನಿ ಸ್ವಾಮಿಗಳ ಗದ್ದುಗೆ ಒಳಗೊಂಡಿರುವ ನೂತನ ಮಠದ ಲೋಕಾರ್ಪಣೆ ಹಾಗೂ ಪಂಚಪೀಠದ ಶ್ರೀರಂಭಾಪುರಿ, ಶ್ರೀಉಜ್ಜಯಿನಿ, ಶ್ರೀಶೈಲ, ಶ್ರೀಕಾಶೀ ಜಗದ್ಗುರುಗಳ ಅಡ್ಡಪಲ್ಲಕ್ಕಿಯೊಂದಿಗೆ ಪುರಪ್ರವೇಶ ಮತ್ತು ಸಂಜೆ ಬೃಹತ್ ಭಾವೈಕ್ಯತಾ ಧರ್ಮ ಸಮಾವೇಶ ಏರ್ಪಡಿಸಲಾಗಿದೆ. ಮೇ.17ರಂದು ಶತಮಾನೋತ್ಸವ ಸಮಾರಂಭ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದೆ.

ಕಾರಣಾಗಮ ಅಮೃತಬಿಂದು ಬಿಡುಗಡೆ:

ವಿಜಯವಾಣಿ ದಿನಪತ್ರಿಕೆಯು ಓದುಗರ ಕೋರಿಕೆಗಳಿಗನುಗುಣವಾಗಿ ಸದಾ ಹೊಸ ಪ್ರಯೋಗಗಳನ್ನು ಮಾಡುತ್ತಿರುವುದು ಸರ್ವವೇದ್ಯ. ಈ ಹಿನ್ನೆಲೆಯಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಶೈಲ ಜಗದ್ಗುರುಗಳು ಶಿವಾಗಮಗಳ ಶ್ಲೋಕಗಳಿಗೆ ವ್ಯಾಖ್ಯಾನವನ್ನು ಬರೆಯುತ್ತಿದ್ದಾರೆ. ಅಮೃತ ಬಿಂದು ಎಂಬ ಅಂಕಣದಲ್ಲಿ ನಿತ್ಯ ಪ್ರಕಟವಾಗುವ ವ್ಯಾಖ್ಯಾನ ಸಹಿತ ಶ್ಲೋಕಗಳನ್ನು "ಕಾರಣಾಗಮ ಅಮೃತ ಬಿಂದು" ಎಂಬ ಹೆಸರಿನಲ್ಲೇ ಪುಸ್ತಕ ರೂಪದಲ್ಲಿ ಹೊರತರಲಾಗುತ್ತಿದೆ.

ಜ್ಞಾನ ಪ್ರಸಾರದ ಈ ಅಮೂಲ್ಯ ಕೆಲಸಕ್ಕೆ ಕೈ ಜೋಡಿಸಿರುವ ಬಿಲ್ಕೆರೂರ ಬಿಲ್ವಾಶ್ರಮ ಹಿರೇಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಅಮೃತ ಬಿಂದು ಪುಸ್ತಕದ ಪ್ರಕಟಣೆಯ ಸೇವೆಯನ್ನು ವಹಿಸಿಕೊಂಡಿದ್ದಾರೆ.

ಬಿಲ್‌ಕೆರೂರು ಮಠದ ನೂತನ ಕಟ್ಟಡ

ಶ್ರೀಶೈಲ ಮಲ್ಲಿಕಾರ್ಜುನ ಸಮಾಜೋತ್ಥಾನ ಫೌಂಡೇಶನ್ ಪ್ರಕಾಶನದಲ್ಲಿ ಹೊರ ಬರುತ್ತಿರುವ ಈ ಪುಸ್ತಕವು ಮೇ.16ರಂದು ಬಿಲ್ಕೆರೂರು ಮಠದಲ್ಲಿ ನಡೆಯುವ ಸಮಾರಂಭದಲ್ಲಿ ಬಿಡುಗಡೆಗೊಳ್ಳಲಿದೆ.

ಕಾಮಿಕಾದಿ ವಾತುಲಾಂತದವರೆಗಿನ 28 ಆಗಮಗಳಲ್ಲಿ ಒಂದಾದ ಕಾರಣಾಗಮದ 194 ಆಯ್ದ ಶ್ಲೋಕ ಮತ್ತು ವ್ಯಾಖ್ಯಾನವು ಈ ಪುಸ್ತಕದಲ್ಲಿವೆ. ಶಿವ ಪಾರ್ವತಿಯರ ಸಂವಾದ ರೂಪದಂತಿರುವ ಕಾರಣಾಗಮವು ಶಿವ ಜೀವರ ಸಾಮರಸ್ಯರೂಪವಾದ ಅಮೃತತತ್ವವನ್ನು ಪಡೆಯುವ ಉತ್ಕೃಷ್ಟ ಮಾರ್ಗವನ್ನೇ ಬೋಧಿಸಿರುವುದರಿಂದ ಇಲ್ಲಿನ ಶ್ಲೋಕಗಳು ಅಮೃತದ ಹನಿಗಳೇ ಆಗಿದ್ದು, ಕೃತಿಯ ಹೆಸರು ಸಾರ್ಥಕವಾಗಿದೆ. ದಿನಪತ್ರಿಕೆಯಲ್ಲಿ ವ್ಯಾಖ್ಯಾನವು ಸ್ಥಳಾವಕಾಶಕ್ಕನುಗುಣವಾಗಿ ಕಡಿತಗೊಂಡು ಪ್ರಕಟಗೊಂಡಿದ್ದರೆ; ಪುಸ್ತಕದಲ್ಲಿ ಮಾತ್ರ ಸಂಪೂರ್ಣ ವಿವರಗಳೊಂದಿಗೆ ಪ್ರಕಟಣೆಗೊಂಡಿವೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಜ್ಜನರು ಮಾಡುವ ಅಜ್ಜನ ಜಾತ್ರೆ
ಗೌಡನಭಾವಿ ಕಟ್ಟೆಬಸವೇಶ್ವರ ರಜತಮಹೋತ್ಸವ

ದೇವರನ್ನು ಪೂಜಿಸಿ ದೇವರಾಗಬೇಕು ಎಂಬುದು ಅದ್ಯಾತ್ಮದ ಅವ್ಯಕ್ತ ಗುರಿ. ಗುರುವನ್ನು ಪೂಜಿಸಿ ಗುರುವಾಗುವುದು ಭಾರತೀಯ ಪರಂಪರೆ. ಅಂತೆಯೇ ಗೌಡನಭಾವಿ ಕಟ್ಟೆಬಸವೇಶ್ವರ ದೇವಾಲಯವು ಗುರುಮುಟ್ಟಿ ಗುರುವಾದ ದೊಡ್ಡ ಕ್ಷೇತ್ರ. ಗೌಡನಭಾವಿ ಕಟ್ಟೆಬಸವೇಶ್ವರ ಕ್ಷೇತ್ರದಲ್ಲಿ ಸದ್ಯ ರಜತ ಮಹೋತ್ಸವದ ಸಂಭ್ರಮ ಮನೆಮಾಡಿದೆ.

ಉತ್ತರ ಕರ್ನಾಟಕದ ಕೇಂದ್ರಸ್ಥಾನವಾದ ರಾಯಚೂರು ಜಿಲ್ಲೆಯಲ್ಲಿ ತಮ್ಮ ಅಮೋಘ ತಪಸಿದ್ಧಿಯಿಂದ; ನಡೆದಾಡುವ ದೇವರೆಂದೆ ಪ್ರಸಿದ್ಧಿಯಾಗಿದ್ದ ಮೌನಯೋಗಿ ಶ್ರೀಬಸವಲಿಂಗ ಶಿವಯೋಗಿಗಳು ಎಲ್ಲೆಡೆ ಸಂಚರಿಸಿ ನೂರಾರು ಮಠ-ಮಂದಿರಗಳನ್ನು ಸ್ಥಾಪಿಸಿದ್ದಾರೆ. ಹಾಗೆ ಬಸವಲಿಂಗ ತಾತನವರು ಸ್ಥಾಪಿಸಿರುವ ಕಟ್ಟೆಬಸವೇಶ್ವರ ದೇವಾಲಯಗಳಲ್ಲೊಂದು ಗೌಡನಭಾವಿ ಕ್ಷೇತ್ರ.

ಗೌಡನಭಾವಿ ಕಟ್ಟೆಬಸವೇಶ್ವರ ಗದ್ದುಗೆ

ಗೌಡನಭಾವಿ ಕ್ಷೇತ್ರದಲ್ಲಿರುವ ಕಟ್ಟೆ ಬಸವೇಶ್ವರ ದೇವಾಲಯದಲ್ಲಿ ಪ್ರತಿವರ್ಷ ಅದ್ದೂರಿಯಾದ ಜಾತ್ರಾಮಹೋತ್ಸವ ನಡೆಯುತ್ತದೆ. 1978ರಲ್ಲಿ ಅಕ್ಷಯ ತೃತೀಯದ ಪರ್ವ ಕಾಲದಲ್ಲಿ ಬಸವ ಜಯಂತಿಯಂದು ಮಹಾತಪಸ್ವಿಗಳ ಅಮೃತ ಹಸ್ತದಿಂದ ಸ್ಥಾಪನೆಗೊಂಡ ಕಟ್ಟೆಬಸವೇಶ್ವರ ದೇವಾಲಯದಲ್ಲಿ ಶ್ರೀಗಳು ಲಿಂಗೈಕ್ಯರಾದ ನಂತರ ವಾರ್ಷಿಕ ಜಾತ್ರೆಯನ್ನು ಆರಂಭಿಸಲಾಗಿದೆ. 25ನೇ ಜಾತ್ರಾ ಮಹೋತ್ಸವದ ಅಂಗವಾಗಿ ರಜತ ಮಹೋತ್ಸವ ಮತ್ತು ಲಕ್ಷ ದೀಪೋತ್ಸವವನ್ನು ವಿಶೇಷವಾಗಿ ಹಮ್ಮಿಕೊಳ್ಳಲಾಗಿದ್ದು, ಈ ಬಾರಿ ಜಾತ್ರೆಯ ಸಂಭ್ರಮ ಇಮ್ಮಡಿಯಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೌಡನಭಾವಿ ನಾಗಪ್ಪ ತಾತ

ಅಸ್ಪಷ್ಟ ಮಾತುಗಳಿಂದ ಜಗತ್ತಿನ ಆಗು ಹೋಗುಗಗಳ ಬಗ್ಗೆ ಭವಿಷ್ಯ ನುಡಿಯುತ್ತಿದ್ದ ಮೌನತಪಸ್ವಿ ಬಸವಲಿಂಗ ತಾತನವರು ಭಕ್ತರ ಒತ್ತಾಸೆಯಂತೆ ಗೌಡನಭಾವಿಗೆ ಬಂದು ಕೆಲ ಕಾಲ ಉಳಿದು ಇಲ್ಲಿ ಅನುಷ್ಠಾನಾದಿ ಪೂಜೆಗಳನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಹಲವು ಭಕ್ತರ ಕಷ್ಟ ಕೋಟಲೆಗಳನ್ನು ಕಳೆದು ಬದುಕಿನಲ್ಲಿ ಹೊಸ ಹರ್ಷವನ್ನು ನೀಡುತ್ತಾರೆ. ಬೇರೆ ಬೇರೆ ಪ್ರದೇಶಕ್ಕೆ ಹೋದಾಗ ಬಸವಣ್ಣನ ಮೂರ್ತಿಯನ್ನು ಸ್ಥಾಪಿಸುವುದು ತಾತನವರ ಪದ್ಧತಿ. ಅಂತೆಯೇ ಗೌಡನಭಾವಿಯಲ್ಲೂ ಕಟ್ಟೆಬಸವೇಶ್ವರ ಸ್ವಾಮಿಯನ್ನು ಪ್ರತಿಷ್ಠಾಪಿಸಿ ಶಿವಾನುಭವ ಸೇರಿದಂತೆ ಇತರೆ ಧಾರ್ಮಿಕ ಚಟುವಟಿಕೆಗಳನ್ನು ಆರಂಭಿಸುತ್ತಾರೆ. ಸುತ್ತಮುತ್ತಲ ಜಿಲ್ಲೆಗಳಲ್ಲಿ ಬಸವಲಿಂಗ ಸ್ವಾಮಿಗಳು ಸ್ಥಾಪಿಸಿದ ನೂರಾರು ಕಟ್ಟೆಬಸವೇಶ್ವರ ದೇವಾಲಯಗಳು ಇಂದಿಗೂ ಪವಿತ್ರ ಕ್ಷೇತ್ರಗಳಾಗಿ ಪೂಜೆಗೊಳ್ಳುತ್ತಿವೆ.

ತ್ರಿಕಾಲ ಜ್ಞಾನಿಗಳಾಗಿದ್ದ ಬಸವಲಿಂಗ ಸ್ವಾಮಿಗಳು ಯಾವ ಸ್ಥಳದಲ್ಲಿ ದೇವಾಲಯಗಳನ್ನು ಕಟ್ಟಬೇಕು, ಎಲ್ಲಿ ಕಟ್ಟಿದರೆ ಅದೊಂದು ಪುಣ್ಯಕ್ಷೇತ್ರವಾಗುತ್ತದೆ ಎಂಬುದನ್ನು ಮೊದಲೇ ಮನಗಂಡು ತಮ್ಮ ವಿಚಿತ್ರ ಉಚ್ಚಾರಣೆಯ ಒಗಟುಗಳ ರೂಪದಲ್ಲಿ ಭವಿಷ್ಯ ನುಡಿಯುತ್ತಿದ್ದರು. ಅವರ ಭವಿಷ್ಯವಾಣಿಗಳು ನೂರಕ್ಕೆ ನೂರು ಸಾಕಾರಗೊಳ್ಳುತ್ತಿದ್ದವು. ಸ್ವಾಮಿಗಳ ದಿವ್ಯದೃಷ್ಟಿಯನ್ನು ಕಂಡು ಭಕ್ತರು ಶರಣಾಗುತ್ತಿದ್ದರು.

ಗುರು ಕರುಣೆಯಿಂದ ಶರಣನಾದ ಬಾಲಕ:

ಬಾಲಯೋಗಿ ಬಸವಲಿಂಗ ತಾತನವರು ಸದಾ ಪಶು, ಪಕ್ಷಿ, ಪ್ರಾಣಿಗಳು ಹಾಗೂ ಬಾಲಕರನ್ನು ಮಾತ್ರ ತಮ್ಮೊಂದಿಗೆ ಬಿಟ್ಟುಕೊಳ್ಳುತ್ತಿದ್ದರು. ಕಟ್ಟೆಬಸವೇಶ್ವರ ಗುಡಿಯ ಬಳಿಯಲ್ಲಿ ತಾತನವರು ಕುಳಿತಿದ್ದಾಗ ಆಟವಾಡಲು ಬಂದ ಬಾಲಕನೋರ್ವನನ್ನು ಸೂಕ್ಷ್ಮವಾಗಿ ಗಮನಿಸಿ ತಮ್ಮ ಬಳಿಗೆ ಕರೆದು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ದಿಟ್ಟಿಸಿ ನೋಡುತ್ತಾರೆ. ಬಾಲಕನಲ್ಲಿದ್ದ ತೇಜಸ್ಸು ಮತ್ತು ಗುರುಸೇವಾ ಗುಣವನ್ನು ಅಂತರ್ದೃಷ್ಟಿಯಿಂದ ಗಮನಿಸಿ ತಮ್ಮ ಸೇವಕನಾಗಿ ಇರಿಸಿಕೊಂಡರು. ಲೀಲಾಪುರುಷನ ಕೃಪಾದೃಷ್ಟಿಗೆ ಒಳಗಾದ ಆ ಬಾಲಕನೇ ಇಂದು ಕಟ್ಟೆ ಬಸವೇಶ್ವರ ಕ್ಷೇತ್ರದ ಉಸ್ತುವಾರಿಯನ್ನು ಹೊತ್ತಿರುವ ಶ್ರೀನಾಗಪ್ಪ ತಾತ.

ಹಾಲುಮತಕ್ಕೆ ಸೇರಿದ ಗೌಡನಭಾವಿಯ ಮಲ್ಲಪ್ಪ ಮತ್ತು ಅಮರಮ್ಮ ದಂಪತಿಗಳ ಪುಣ್ಯಸಂಜಾತರಾಗಿದ್ದ ನಾಗಪ್ಪ ತಾತನವರು ಮಗುವಾಗಿದ್ದಾಗಲೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಂಗಮಮೂರ್ತಿ ಯೊಬ್ಬರಿಂದ ಆಶೀರ್ವಾದ ಪಡೆದಿದ್ದರು. ಗುರುಲಿಂಗಜಂಗಮ ಪ್ರೇಮಿಯಾಗಿದ್ದ ಬಾಲಕನನ್ನು ಶಿಷ್ಯನಾಗಿ ಸ್ವೀಕರಿಸಿ ಆತನಿಗೆ ಲಿಂಗಧೀಕ್ಷೆಯನ್ನು ನೀಡುವ ಮೂಲಕ ಭಕ್ತಿಗೆ ಜಾತಿ ಮತದ ಹಂಗಿಲ್ಲ ಎಂಬುದನ್ನು ಬಸವಲಿಂಗ ತಾತನವರು ಜಗತ್ತಿಗೆ ಸಾರಿ ತೋರಿದ್ದರು.


ಗೌಡನಭಾವಿ ದೇವಸ್ಥಾನ

ಗುರುವಿನ ಅನುಗ್ರಹದಿಂದ ಪ್ರಸಿದ್ಧ ಕ್ಷೇತ್ರವಾಗಿ ಮೆರೆಯುತ್ತಿರುವ ಗೌಡನಭಾವಿ ಕಟ್ಟೆಬಸವೇಶ್ವರ ಕ್ಷೇತ್ರದ ಧಾರ್ಮಿಕ ಉಸ್ತುವಾರಿ ಹೊತ್ತಿರುವ ಶ್ರೀನಾಗಪ್ಪ ತಾತನವರಿಗೆ ಬಸವಲಿಂಗ ಶಿವಯೋಗಿಗಳ ಅಸ್ಪಷ್ಟ ಮಾತುಗಳು ಅರ್ಥವಾಗುತ್ತಿದ್ದವು. ಅವರ ಸಂಜ್ಞೆ ಮತ್ತು ವಿಚಿತ್ರ ಮಾತುಗಳನ್ನು ವಿಶ್ಲೇಷಿಸಿ ಅವರ ಆದೇಶವನ್ನು ಪಾಲಿಸುತ್ತಿದ್ದವರು ಇವರು ಮಾತ್ರ. ತಾತನವರ ಅಂತಿಮ ಕಾಲದಲ್ಲಿ ಅವರ ಬಳಿಯೇ ಇದ್ದು ಸೇವೆ ಮಾಡಿದ ಶ್ರೀನಾಗಪ್ಪ ಶರಣರು 1991ರಲ್ಲಿ ಶ್ರೀಗಳು ಲಿಂಗೈಕ್ಯವಾದ ನಂತರ ಕಟ್ಟೆಬಸವೇಶ್ವರ ದೇವಾಲಯದಲ್ಲಿ ಶ್ರೀಗಳ ಮೂರ್ತಿಯನ್ನು ಪ್ರತಿಷ್ಠಾಪಿಸಿ 1993 ರಿಂದ ಪ್ರತಿವರ್ಷ ಜಾತ್ರೆಯನ್ನು ನಡೆಸಿಕೊಂಡು ಬಂದಿದ್ದಾರೆ.

ರಜತ ಜಾತ್ರಾಮಹೋತ್ಸವ :

ಕಟ್ಟೆಬಸವೇಶ್ವರ ಮಠದ ವಾರ್ಷಿಕ ಜಾತ್ರೆಯು ಪ್ರತಿವರ್ಷ ಪಾಲ್ಗುಣ ಶುದ್ಧ ಏಕಾದಶಿಯಂದು ನಡೆಯುತ್ತಿದೆ. ಅದರಂತೆ ಈ ವರ್ಷ ರಜತ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದೇ ಫೆ.16 ರಿಂದ ಶ್ರೀಬಸವಲಿಂಗ ತಾತನವರ ಲೀಲಾಮೃತ ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗಿದೆ.

ಫೆ.25ರಂದು 108 ಸುಮಂಗಲೆಯರಿಂದ ಕುಂಭೋತ್ಸವದೊಂದಿಗೆ ಬಸವಲಿಂಗ ಶಿವಯೋಗಿಗಳ ಉತ್ಸವ ಮೂರ್ತಿಯ ಉತ್ಸವ ಮತ್ತು ಪುರಾಣಗ್ರಂಥವನ್ನು ಆನೆ ಮೇಲೆ ಅಂಬಾರಿಯುಲ್ಲಿಟ್ಟು ಮೆರವಣಿಗೆ ಮಾಡಲಾಗುವುದು. ಫೆ.26ರಂದು ಫಾಲ್ಗುಣ ಶುದ್ಧ ಏಕಾದಶಿಯಂದು ಬಸವಲಿಂಗೇಶ್ವರ ಮೂರ್ತಿಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ 101 ಜೋಡಿ ಸಾಮೂಹಿಕ ವಿವಾಹ ಮತ್ತು ಸಂಜೆ ಲಕ್ಷ ದೀಪೋತ್ಸವ ನಡೆಯಲಿದೆ. ಉಜ್ಜಯಿನಿ ಜಗದ್ಗುರುಗಳ ಸಾನಿಧ್ಯದಲ್ಲಿ ನಾಡಿನ ಹಲವು ಮಠಾಧೀಶರು, ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತತ್ವಜ್ಞಾನದ ಕಣಜ ಮಡಿವಾಳಪ್ಪ
ಕಡಕೋಳದಲ್ಲಿ ಜಾತ್ರೆ, ರಥೋತ್ಸವ

ದಿನಾಂಕ : 27-12-2018

ತತ್ವಪದ ಸಾಹಿತ್ಯವು ಜನಸಾಮಾನ್ಯರ ನಡುವೆಯೇ ಹುಟ್ಟಿ ಜನಸಾಮಾನ್ಯರ ಮೇಲೆ ಗಾಢ ಪ್ರಭಾವವನ್ನು ಬೀರುವ ವಿಶೇಷ ಸಾಹಿತ್ಯ ಪ್ರಕಾರ. ಶಿಷ್ಟಸಾಹಿತ್ಯಕ್ಕಿಂತ ತೀರ ಭಿನ್ನವಾದ ತತ್ವಪದಗಳು ಜನಪದರನ್ನು ಬಹುಬೇಗ ಮುಟ್ಟುತ್ತವೆ. ಅಂತಹ ತತ್ವಪದಗಳ ಮೂಲಕ ಸಾಹಿತ್ಯ ಮತ್ತು ಅಧ್ಯಾತ್ಮ ಎರಡೂ ಕ್ಷೇತ್ರವನ್ನು ಗಮನಾರ್ಹವಾಗಿ ಸೆಳೆದ ತತ್ವಜ್ಞಾನದ ಕಣಜ ಕಡಕೋಳದ ಮಡಿವಾಳಪ್ಪ.

17ನೇ ಶತಮಾನದಲ್ಲಿ ಜೀವಿಸಿದ್ದ ಕಡಕೋಳ ಮಡಿವಾಳಪ್ಪನವರ ತತ್ವಪದಗಳು ನಿಜಗುಣ ಶಿವಯೋಗಿಗಳ ತತ್ವಪದಗಳನ್ನು ನೆನೆಪಿಸುತ್ತವೆ. ಸಾಮಾನ್ಯ ಜನರ ಬದುಕನ್ನು ತತ್ವಜ್ಞಾನದ ಜರಡಿಯಲ್ಲಿ ಸೋಯಿಸಿದ ಅವರ ತತ್ವಗೀತೆಗಳು ಇಂದಿಗೂ ಪ್ರಸ್ತುತ. ಸಮಾಜದಲ್ಲಿನ ಮೇಲು ಕೀಳು, ಗೊಡ್ಡು ಸಂಪ್ರದಾಯ, ಅರ್ಥಹೀನ ಆಚರಣೆ ಹೀಗೆ ಸಮಾಜೋದ್ಧಾರದ ಆಶಯಗಳನ್ನು ಇಟ್ಟುಕೊಂಡು ತತ್ವಪದಗಳನ್ನು ರಚಿಸಿದ ಅವರು; ವಚನಕಾರರೂ ಹೌದು. ನಿರುಪಮ ನಿರಾಳ ಮಹಾಂತಯೋಗಿ ಅಂಕಿತದಲ್ಲಿ ವಚನಗಳನ್ನೂ ಬರೆದರೆ; ತತ್ವಪದಗಳು ಮಹಾಂತ ಎಂಬ ಅಂಕಿತದಲ್ಲಿ ರಚನೆಗೊಂಡಿವೆ.

ಕಡಕೋಳ ಮಡಿವಾಳೇಶ್ವರ

ಲೋಕಪ್ರಜ್ಞೆಯನ್ನು ಪ್ರಧಾನವಾಗಿಟ್ಟುಕೊಂಡಿದ್ದ ಮಡಿವಾಳಪ್ಪನವರ ಸಾಹಿತ್ಯದಲ್ಲಿ ಶಿವಾಗಮ, ಷಟಸ್ಥಲ, ಅಷ್ಟಾವರಣಗಳನ್ನು ಒಳಗೊಂಡು ನಾಥ-ಸಂತ, ಮಂತ್ರ-ತಂತ್ರ, ಅವಧೂತ-ಆರೂಢ, ಶಾಸ್ತ್ರ-ಪುರಾಣ ಹಾಗೂ ತತ್ವ-ಸಿದ್ಧಾಂತ ಹೀಗೆ ಎಲ್ಲ ಅಂಶಗಳು ಉಲ್ಲೇಖಗೊಂಡಿವೆ. ಸಾಮಾನ್ಯರ ಕಣ್ಣಿಗೆ ಸರಳವಾಗಿ ಕಂಡರೂ; ಮಹಾತ್ಮನಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS


ಕಡಕೋಳ ಮಡಿವಾಳೇಶ್ವರ ರಥ

ಸಮಾಜವನ್ನು ತಿದ್ದುವ ಮಹತ್ವದ ಕೆಲಸ ಮಡಿವಾಳಪ್ಪನವರಿಂದ ಸಾಕಷ್ಟಾಗಿದೆ.

ದೂರದೂರುಗಳಿಂದ ಹಲವು ಜಿಜ್ಞಾಸುಗಳು ಬಂದು ಮಡಿವಾಳಪ್ಪನವರೊಂದಿಗೆ ತಾತ್ವಿಕ ಚರ್ಚೆಯನ್ನು ಮಾಡುತ್ತಾರೆ. ಅವರ ತತ್ವಜ್ಞಾನಕ್ಕೆ ಮರುಳಾಗಿ ಅವರ ಶಿಷ್ಯರಾಗಿದ್ದಾರೆ. ಜಾತಿ, ಮತ, ಪಂಥ ಎನ್ನದೇ ಎಲ್ಲ ಸಮುದಾಯದವರು ಕೂಡಾ ಮಡಿವಾಳಪ್ಪನವರ ಶಿಷ್ಯರಾಗಿದ್ದರು. ಆ ಎಲ್ಲ ಶಿಷ್ಯರು ಕೂಡಾ ತತ್ವಪದಗಳನ್ನು ರಚಿಸಿದ್ದು, ಅವರು ಕೂಡಾ ಸಮಾಜದಲ್ಲಿ ಅಷ್ಟೇ ಪ್ರಸಿದ್ಧಿಯಾಗಿದ್ದಾರೆ. ಸೂಫಿಸಂತನೆಂದೇ ಪ್ರಸಿದ್ಧಿಯಾಗಿದ್ದ ಜಲಾಲ್ ಸಾಬ್ ಕೂಡ ಮಡಿವಾಳಪ್ಪನವರ ಶಿಷ್ಯ ಎಂಬುದು ಗಮನಾರ್ಹ. ಅದೇ ರೀತಿ ಕೃಷ್ಣಪ್ಪ, ಸಿದ್ದಪ್ಪ, ರಾಮಪ್ಪ ಸೇರಿದಂತೆ ನೂರಕ್ಕೂ ಹೆಚ್ಚು ಮಡಿವಾಳಪ್ಪನ ಶಿಷ್ಯರು ತತ್ವಪದ ರಚನೆಕಾರರಾಗಿ ಪ್ರಸಿದ್ಧರಾಗಿದ್ದಾರೆ.

ಮಡಿವಾಳಪ್ಪನ ಪೂರ್ವಾಶ್ರಮ :

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಬಿದನೂರಿನಲ್ಲಿ 1780ರಲ್ಲಿ ಜನಿಸಿದ ಮಡಿವಾಳಪ್ಪನ ತಾಯಿ ಗಂಗಮ್ಮ ಮೂತಲಃ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ನಾಗಠಾಣದವಳು. ಗಂಡನಿಲ್ಲದ ಗಂಗಮ್ಮ ಜೀವನೋಪಾಯಕ್ಕಾಗಿ ಬಿದನೂರಿಗೆ ಬಂದು ವಾಸವಾಗಿರುತ್ತಾಳೆ. ಗರ್ಭದಲ್ಲಿರುವಾಗಲೇ ಚಿಮಣಗೇರಿಯ ಮಹಾಂತಸ್ವಾಮಿಗಳಿಂದ ಲಿಂಗಸಂಸ್ಕಾರ ನೀಡಲಾಗಿರುತ್ತದೆ. ಆದರೆ ತಾಯಿ ವಿಧವೆ ಎಂಬ ಕಾರಣಕ್ಕಾಗಿ ಅಯ್ಯಾಚಾರ ದೀಕ್ಷೆ ಪಡೆಯಲು ಯೋಗ್ಯನಲ್ಲ ಎಂದು ಅಪಮಾನಕ್ಕೆ ಒಳಗಾಗುತ್ತಾನೆ. ನಂತರ ಅರಳಗುಂಡಿಗೆಯಲ್ಲಿ ಶರಣಬಸವೇಶ್ವರರ ಸಮಕ್ಷಮದಲ್ಲಿ ಮರುಳಾರಾಧ್ಯರಿಂದ ದೀಕ್ಷೆ ಪಡೆಯುತ್ತಾನೆ. ಆದರೆ ಅಲ್ಲಿಯೂ ಅಪಮಾನಗಳಾದ ಹಿನ್ನಲೆಯಲ್ಲಿ ಬಿದನೂರಿಗೆ ಮರಳಿ ಬಂದು ಕೆಲಕಾಲ ಇದ್ದು ನಂತರ ದೇಶಸಂಚಾರ ಹೋಗುತ್ತಾರೆ. ಚಿಮಣಗೇರಿ ಗುಡ್ಡದಲ್ಲಿ 12 ವರ್ಷ, ಶ್ರೀಶೈಲ ಪರ್ವತದಲ್ಲಿ 12 ವರ್ಷ ಹೀಗೆ ವಿವಿಧ ಕಡೆಗಳಲ್ಲಿ ತಪೋನುಷ್ಠಾನವನ್ನು ಕೈಗೊಂಡು ವಿವಿಧ ಪ್ರಾಂತ ಪ್ರದೇಶಗಳಲ್ಲಿ ಸಂಚಾರ ಮಾಡುತ್ತಾ ಬಂದು ಕಡಕೋಳದಲ್ಲಿ ಮಠವನ್ನು ಸ್ಥಾಪಿಸಿ ಅಲ್ಲಿಯೇ ಜೀವಂತ ಸಮಾಧಿಯಾಗುತ್ತಾರೆ.

ಶ್ರೀರಂಭಾಪುರಿ ಪೀಠದ ಶಾಖಾಮಠವಾದ ಕಡಕೋಳ ಸುಕ್ಷೇತ್ರವು ಶಿವಲಿಂಗಯ್ಯ ಸ್ವಾಮಿಗಳು, ವೀರೇಶ್ವರ ದೇಶಿಕರಿಂದ ಪರಂಪರೆ ಆರಂಭಗೊಂಡು;

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸದ್ಯದ ಮಠಾಧ್ಯಕ್ಷರಾಗಿರುವ ಶ್ರೀಷ.ಬ್ರ. ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು 1997ರಿಂದ ಶ್ರೀಮಠವನ್ನು ಜಾತ್ಯಾತೀತ ನೆಲೆಗಟ್ಟಿನಲ್ಲಿ ಮುಂದುವರೆಸುತ್ತಿದ್ದಾರೆ.

ಶ್ರೀ ರುದ್ರಮುನಿ ಶಿವಾಚಾರ್ಯರು

ಕಡಕೋಳದ ಖಡಕ್ ಜಾತ್ರೆ:

ಕಡಕೋಳ ಮಡಿವಾಳೇಶ್ವರರು ಜೀವಂತ ಸಮಾಧಿಯಾದ ಮಾರ್ಗಶಿರ ಬಹುಳ ಸಪ್ತಮಿ ಹಾಗೂ ಅಷ್ಟಮಿಯಂದು ಬೃಹತ್ ಜಾತ್ರೆ ನಡೆಯುತ್ತದೆ. ಕಲ್ಯಾಣ ಕರ್ನಾಟಕದ ಖಡಕ್ ಜಾತ್ರೆ ಎಂದೇ ಪ್ರಸಿದ್ಧವಾಗಿರುವ ಕಡಕೋಳ ಜಾತ್ರೆಯು ಇದೇ ಡಿ.28, 29 ರಂದು ನಡೆಯಲಿದೆ.

28 ರಂದು ಪ್ರಸಿದ್ಧ ಖಾಂಡ ಕಾರ್ಯಕ್ರಮವಿದ್ದು, ಮಹಾಪ್ರಸಾದಕ್ಕಾಗಿ ಈಗಾಗಲೇ ಭಕ್ತರು ಲಕ್ಷಕ್ಕೂ ಹೆಚ್ಚಿನ ಖಡಕ್ ರೊಟ್ಟಿಗಳನ್ನು ಸಮರ್ಪಿಸಿದ್ದಾರೆ. ಅದೇ ದಿನ ಸಂಜೆ ಶ್ರೀಶೈಲ ಜಗದ್ಗುರುಗಳ ಸಾನಿಧ್ಯದಲ್ಲಿ ಧರ್ಮಸಭೆ ನಡೆಯಲಿದೆ. ಡಿ.29ರಂದು ಶ್ರೀ.ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಮಡಿವಾಳೇಶ್ವರರ ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಪಲ್ಲಕ್ಕಿ ಮಹೋತ್ಸವ ಹಾಗೂ ಅಂದು ಸಂಜೆ ಭವ್ಯ ರಥೋತ್ಸವ ನಡೆಯಲಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಮರ್ಧನ ಸ್ವಾಮಿಗಳ ವಿಶೇಷ ಜಾತ್ರೆ

ಕರಿಭಂಟನಾಳ ಶ್ರೀ ಗಂಗಾಧರ ಸ್ವಾಮಿಗಳ ವಾರ್ಷಿಕ ಉತ್ಸವ

ದಿನಾಂಕ : 08-02-2018

ನಾಡಿನ ಧಾರ್ಮಿಕ ಪರಂಪರೆಯಲ್ಲೇ ಅತ್ಯಂತ ವಿಶಿಷ್ಟ ಸ್ಥಾನದಲ್ಲಿ ನಿಲ್ಲುವ ಬಸವಜನ್ಮ ಭೂಮಿಯಲ್ಲಿ ಹಲವು ಶರಣರು, ಸಂತರು, ಶಿವಯೋಗಿಗಳು ಪ್ರಸಿದ್ಧರಾಗಿ ಹೋಗಿದ್ದಾರೆ. ಅಂತಹ ಶಿವಸ್ವರೂಪಿಗಳ ಹೆಸರಿನಲ್ಲೇ ವಾರ್ಷಿಕ ಜಾತ್ರೆಗಳು ಅವರ ಸಾಮಾಜಿಕ, ಧಾರ್ಮಿಕ ಮತ್ತು ಐತಿಹಾಸಿಕ ಕಾರ್ಯಗಳನ್ನು ನೆನಪಿಸುತ್ತವೆ. ಈ ಹಿನ್ನಲೆಯಲ್ಲಿ ವಿಷಮ ವಿಷಮರ್ಧನ ಸ್ವಾಮಿಗಳೆಂದೇ ಪ್ರಸಿದ್ಧರಾಗಿದ್ದ ಶ್ರೀಗಂಗಾಧರೇಶ್ವರ ಸ್ವಾಮಿಗಳ ಜಾತ್ರೆಯು ಪ್ರಮುಖವಾಗಿದೆ.

ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲೂಕಿನ ಕರಿಭಂಟನಾಳದ ಮಹಾತಪಸ್ವಿ ಶ್ರೀಗಂಗಾಧರ ಸ್ವಾಮಿಗಳ ಶಕ್ತಿಗೆ ಬ್ರಿಟೀಷ ಸರ್ಕಾರವೇ ನಿದ್ದೆಗೆಟ್ಟಿದ್ದು ಮಾತ್ರ ಐತಿಹಾಸಿಕ ಸತ್ಯ. ಶ್ರೀಗಂಗಾಧರ ಸ್ವಾಮಿಗಳನ್ನ ಭಕ್ತರು ವಿಷಮ ವಿಷಮರ್ಧನರೆಂದು ಸಂಬೋಧಿಸುತ್ತಾರೆ. ಕಷ್ಟ ಮತ್ತು ವಿಷವನ್ನು ನಾಶಗೊಳಿಸುವ ಸಾಮರ್ಥ್ಯವುಳ್ಳವರು ಎಂದು ಅದರರ್ಥ. ನಾಗರ ಪಂಚಮಿಯಂದೇ ಜನಿಸಿದ್ದ ಪೂಜ್ಯರು ಉರಗ ಮಂತ್ರ ಸಿದ್ಧಿಸಿಕೊಂಡಿದ್ದರು.



ವಿಷಮರ್ದನ ಶ್ರೀ ಗಂಗಾಧರ ಸ್ವಾಮೀಜಿ

ಈ ಭಾಗದಲ್ಲಿ ಮನುಷ್ಯರಿಗಾಗಲೀ ಅಥವಾ ಜಾನುವಾರುಗಳಿಗಾಗಲಿ ಸರ್ಪ ಇತ್ಯಾದಿ ವಿಷಜಂತುಗಳು ಕಚ್ಚಿದಾಗ ತಮ್ಮ ದಿವ್ಯ ಮಂತ್ರಶಕ್ತಿಯಿಂದ ಅವರನ್ನು ಬದುಕಿಸುತ್ತಿದ್ದರು! ತಮ್ಮ ಕೊನೆಯ ಕಾಲದಲ್ಲಿ ವಂಶಸ್ಥರಿಗೆ ಆ ಮಂತ್ರವನ್ನು ಉಪದೇಶ ಮಾಡಿ ಹೋಗಿದ್ದು, ಇಂದಿಗೂ ಪೂಜ್ಯರ ಕ್ರಿಯಾಶಕ್ತಿ ಇಲ್ಲಿ ಕೆಲಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡುತ್ತಿದೆ. ಶ್ರೀಗಳು ಅನುಷ್ಠಾನ ಶಕ್ತಿಯಿಂದ ಪವಿತ್ರಗೊಳಿಸಿರುವ ಮಂತ್ರಭಾವಿಯ ನೀರಿನಿಂದ ತೀರ್ಥಸ್ನಾನ ಮಾಡಿಸಿ, ಗದ್ದುಗೆಯನ್ನು ಪ್ರದಕ್ಷಿಣೆ ಹಾಕಿಸುವ ಮೂಲಕ ಇಂದಿಗೂ ಆ ಪರಂಪರೆಯನ್ನು ಮುನ್ನಡೆಸಲಾಗುತ್ತಿದೆ.

ಕರಿಭಂಟನಾಳ ಹಿರೇಮಠ

ಶ್ರೀ ಗಂಗಾಧರ ಸ್ವಾಮಿಗಳು ಅಧ್ಯಾತ್ಮಿಕವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿಯೂ ದೊಡ್ಡ ಶಕ್ತಿಯಾಗಿದ್ದರು. ಆಂಗ್ಲರಿಂದ ಭಾರತೀಯ ಧಾರ್ಮಿಕ ವ್ಯವಸ್ಥೆಗೆ ಬೀಳುತ್ತಿದ್ದ ಪೆಟ್ಟನ್ನು ಗಮನಿಸಿ ಬ್ರಿಟೀಷರ ವಿರುದ್ಧ ಬಹಿರಂಗವಾಗಿ ಸಮರ ಸಾರಿದ್ದರು. ಪೂಜ್ಯರಿಂದ ಪ್ರೇರಿತರಾದ ಸಾವಿರಾರು ಯುವಕರು ವಿವಿಧ ಸೈನ್ಯಗಳಲ್ಲಿ ಸೇರಿ ಹೋರಾಟ ಮಾಡಿದ್ದರು. ಬ್ರಿಟೀಷ್ ಅಧಿಕಾರಿಗಳ ನಿರಂತರ ಕಿರುಕುಳ ಮತ್ತು ಜೈಲು ಶಿಕ್ಷೆಯನ್ನು ಅನುಭವಿಸಿದರು. ಸ್ವತಂತ್ರ್ಯ ಹೋರಾಟದ ಅವರ ಹೆಜ್ಜೆ ಗುರುತುಗಳು ಇತಿಹಾಸದ ಪುಟಗಳಲ್ಲಿ ಶೋಭಿಸುತ್ತಿವೆ.

ಸಂಘಟನಾ ಶಕ್ತಿ ಶ್ರೀ ಶಿವಕುಮಾರಸ್ವಾಮಿಗಳು :

ಕರಿಭಂಟನಾಳ ಹಿರೇಮಠವು ಶ್ರೀಶೈಲ ಸೂರ್ಯಸಿಂಹಾಸನ ಶಾಖಾ ಮಠವಾಗಿದ್ದು, ವಂಶಪರಂಪರೆಯಂತೆ ಇಲ್ಲಿ ಧರ್ಮ ಕಾರ್ಯಗಳು ಮುನ್ನಡೆಯುತ್ತಿವೆ. ಶ್ರೀಮಠದ ಈಗಿನ ಧರ್ಮಾಧಿಕಾರಿಗಳಾಗಿರುವ ಶ್ರೀಶಿವಕುಮಾರ ಸ್ವಾಮಿಗಳು ಬಸವನಾಡಿನ ಬಹುದೊಡ್ಡ ಸಂಘಟನಾ ಶಕ್ತಿಯಾಗಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹಲವು ಯಶಸ್ವಿ ಕಾರ್ಯಕ್ರಮಗಳನ್ನು ನಡೆಸಿರುವ ಪೂಜ್ಯರು ಸದಾ ಧರ್ಮ ಮತ್ತು ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ ಜೀವನಾದರ್ಶಗಳನ್ನು ಸಮಾಜಕ್ಕೆ ತಲುಪಿಸುವುದಕ್ಕಾಗಿ ಶ್ರೀಶೈಲ ಪೀಠವು 2016ರಲ್ಲಿ ಕೂಡಲಸಂಗಮದಲ್ಲಿ ನಡೆಸಿದ ರಾಷ್ಟ್ರೀಯ ವಿಚಾರ ಸಂಕಿರಣದ ಅಭೂತಪೂರ್ವ ಯಶಸ್ಸಿನ ರೂವಾರಿಗಳು ಶ್ರೀ ಶಿವಕುಮಾರ ಸ್ವಾಮಿಗಳು.

ಶ್ರೀ ಶಿವಕುಮಾರ ಸ್ವಾಮೀಜಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರ್ಯಕ್ರಮಕ್ಕೆ ಮೂರು ತಿಂಗಳು ಮುನ್ನ ಶ್ರೀಶೈಲ ಕ್ಷೇತ್ರದಿಂದ ಕರ್ನಾಟಕದ 19 ಜಿಲ್ಲೆಗಳಲ್ಲಿ ನಡೆಸಿದ ಹೇಮರಡ್ಡಿ ಮಲ್ಲಮ್ಮನವರ ರಥಯಾತ್ರೆ ಮತ್ತು ಮಹಾಶರಣೆ ಮಲ್ಲಮ್ಮ ಸಾಕ್ಷ್ಯಚಿತ್ರ ಪ್ರದರ್ಶನವು ಬಹುತೇಕ ನಾಡಿನ ಒಂದು ಕೋಟಿ ಜನರನ್ನು ತಲುಪಿದ್ದು ಐತಿಹಾಸಿಕ ದಾಖಲೆ.

ಶ್ರೀಶೈಲ ಜಗದ್ಗುರುಗಳ ಆದೇಶ, ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಮತ್ತು ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪನವರ ಮಾರ್ಗದರ್ಶನದಲ್ಲಿ ಶ್ರೀಮಠದ ಆರ್ಥಿಕ ಸಂಪನ್ಮೂಲವನ್ನು ಬಳಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿದ್ದು ಚರಿತ್ರಾರ್ಹ ಸಂಗತಿ.

ಕರಿಭಂಟನಾಳ ಕ್ಷೇತ್ರದ ಇತಿಹಾಸ:

ಬಸವನಾಡಿನ ಪ್ರಮುಖ ಕ್ಷೇತ್ರಗಳಲ್ಲೊಂದಾದ ಕರಿಭಂಟನಾಳ ಹಿರೇಮಠವು ಧಾರ್ಮಿಕ, ಸಾಮಾಜಿಕ ಹಾಗೂ ಐತಿಹಾಸಿಕ ಘಟನೆಗೆ ಸಾಕ್ಷಿ ಬರೆದ ವಿಶೇಷ ಕ್ಷೇತ್ರ. ಜನರಲ್ಲಿ ಸ್ವಾತಂತ್ರ್ಯದ ಕಿಚ್ಚು ಹತ್ತಿಸಿದ ಶ್ರೀಗಂಗಾಧರ ಶಿವಯೋಗಿಗಳು ಮಹಾ ತಪಸ್ವಿಗಳಾಗಿದ್ದು, ಅಣಿಮಾಧಿ ಅಷ್ಟಾಂಗ ಸಿದ್ಧಿಯೋಗ ಗಳಿಸಿದ್ದರು. ಶ್ರೀಗಳು ಉರಗ ಮಂತ್ರವನ್ನು ಸಿದ್ಧಿಸಿಕೊಂಡು ಯಾರಿಗೇ ಸರ್ಪ ಕಚ್ಚಿದರೂ ತಮ್ಮ ಮಂತ್ರಶಕ್ತಿಯ ಮೂಲಕ ಅವರನ್ನು ರಕ್ಷಿಸುತ್ತಿದ್ದರು. ಇಂದಿಗೂ ಕೂಡಾ ಆ ಪರಂಪರೆ ಇಲ್ಲಿ ಮುಂದುವರೆದಿದೆ.

1857 ಪ್ರಥಮ ಸ್ವತಂತ್ರ್ಯ ಸಂಗ್ರಾಮಕ್ಕೂ ಮುನ್ನ ಬ್ರಿಟೀಷರ ವಿರುದ್ಧದ ಹೋರಾಟಕ್ಕೆ ಭಾರತೀಯರನ್ನು ಸಜ್ಜುಗೊಳಿಸಿದ್ದ ಶ್ರೀಗಳು ಸುರಪುರದ ದೊರೆ ರಾಜಾವೆಂಕಟಪ್ಪ ನಾಯಕನು ಬ್ರಿಟೀಷರ ವಿರುದ್ಧ ಹೋರಾಡಲು ಬೇಕಾದ ಸೈನ್ಯ ಹಾಗೂ ಮಹಾ ಸ್ವತಂತ್ರ ಹೋರಾಟಗಾರ ಕೊಟ್ನಾಳ್ ದೇಶಮುಖರೊಂದಿಗೆ ಬ್ರಿಟೀಷರನ್ನು ಸದೆಬಡಿಯಲು ಬೇಕಾದ ಶಸ್ತ್ರಾಸ್ತ್ರ ಪೂರೈಸಲು ಬಹುದೊಡ್ಡ ಪಾತ್ರವನ್ನು ನಿರ್ವಹಿಸುತ್ತಾರೆ.

ಶ್ರೀಶೈಲ ಸೂರ್ಯಸಿಂಹಾಸನ ಪೀಠದ ಶಾಖಾಮಠವಾಗಿರುವ ಈ ಪರಂಪರೆಯಲ್ಲಿ ಧರ್ಮ, ದೇಶ, ಜೊತೆಗೆ ಭಾಷೆಯ ಬಗ್ಗೆ ಬಹುದೊಡ್ಡ ಕೊಡುಗೆಯನ್ನು ನೀಡಿರುವ ಇತಿಹಾಸವಿದೆ. ಸದ್ಯ ಇರುವ ಪೂಜ್ಯ ಶಿವಕುಮಾರ ಸ್ವಾಮಿಗಳು ಬಹುದೊಡ್ಡ ಸಂಘಟಕರಾಗಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಜಾಗೃತಿಗೆ ನಿರಂತರ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರಣ ಪರಂಪರೆಯ ಕೊಂಡಿ
ಮುಂಡರಗಿ ಜಗದ್ಗುರು ಅನ್ನದಾನೀಶ್ವರ ರಥೋತ್ಸವ

ದಿನಾಂಕ : 25-01-2018

ಚನ್ನಬಸವಣ್ಣನವರನ್ನು ಷಟ್ಸ್ಥಲ ಸಿದ್ಧಾಂತದ ಮೇರುಪರ್ವತ ಎಂದು ಕರೆಯುತ್ತಾರೆ. ಅಂತಹ ಚನ್ನಬಸವಣ್ಣನ ಪರಂಪರೆಯಲ್ಲಿ ಸ್ಥಾಪನೆಗೊಂಡ ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಮಹಾಸಂಸ್ಥಾನವು ಶರಣ ಪರಂಪರೆಯ ಕೊಂಡಿಯಾಗಿ ಕೆಲಸ ನಿರ್ವಹಿಸುತ್ತಿದೆ.

12ನೇ ಶತಮಾನದ ಉಳವಿ ಚನ್ನಬಸವಣ್ಣನವರ ಶಿಷ್ಯರಲ್ಲೋರ್ವರಾಗಿದ್ದ ಶ್ರೀಅನ್ನದಾನೀಶ್ವರ ಮಹಾಸ್ವಾಮಿಗಳು ಬಾಲ್ಯದಲ್ಲೇ ಚನ್ನಬಸವಣ್ಣನವರ ವಿಚಾರಧಾರೆಗಳಿಗೆ ಮನಸೋತು ಅವರಿಂದ ಲಿಂಗದೀಕ್ಷೆಯನ್ನು ಸ್ವೀಕರಿಸಿದ್ದರು. ಚನ್ನಬಸವಣ್ಣನವರು ಲಿಂಗೈಕ್ಯರಾದ ನಂತರ ಮನನೊಂದು ವೈರಾಗ್ಯವನ್ನು ತಾಳುತ್ತಾರೆ. ಹಲವು ಬೆಟ್ಟ, ಗುಡ್ಡ, ಗವಿಯಲ್ಲಿ ಕುಳಿತು ಸುದೀರ್ಘ ಅನುಷ್ಠಾನವನ್ನು ಕೈಗೊಳ್ಳುತ್ತಾರೆ. ಗದಗಜಿಲ್ಲೆಯ ಕಪ್ಪತಗುಡ್ಡದಲ್ಲಿರುವ ಮಲ್ಲಿಕಾರ್ಜುನ ದೇವಾಲಯ, ಪತ್ರೆವನ, ಬುಕ್ಕಸಾಗರ, ಲಿಂಗನಾಯಕ ನಹಳ್ಳಿ, ಮುಂಡರಗಿ ಸಮೀಪದ ಬಾಚಾಣಿಕಿ ಬೆಟ್ಟ ಸೇರಿದಂತೆ ಹಲವು ಕಡೆಗಳಲ್ಲಿ ಅನುಷ್ಠಾನ ಮಾಡುತ್ತಾರೆ. ಅವರು ಅನುಷ್ಠಾನ ಮಾಡಿದ ಸ್ಥಳಗಳೆಲ್ಲವೂ ಇಂದು ಅನ್ನದಾನೀಶ್ವರ ಗವಿ, ಅನ್ನದಾನೀಶ್ವರ ಬೆಟ್ಟ ಇತ್ಯಾದಿ ಹೆಸರಿನಲ್ಲಿ ಪ್ರಸಿದ್ಧಿಯಾಗಿವೆ.


ಮುಂಡರಗಿ ಅನ್ನದಾನೀಶ್ವರ ಸ್ವಾಮಿ ರಥೋತ್ಸವ

ದನ ಕಾಯುವ ಕಲ್ಲಪ್ಪನೆಂಬುವವನು ಅಚಾನಕ್ ಆಗಿ ಊರಗೌಡರಾದ ಶಂಕರಗೌಡರ ಕರುವಿಗೆ ಕಲ್ಲಿನಿಂದ ಹೊಡೆದಾಗ ಕರು ಸತ್ತು ಹೋಗುತ್ತದೆ. ಇದರಿಂದ ಗಾಬರಿಯಾದ ಕಲ್ಲಪ್ಪ ಸ್ವಾಮಿಗಳಲ್ಲಿ ಬೇಡಿಕೊಂಡಾಗ; ತಪಸ್ವಿಗಳಾದ ಅನ್ನದಾನೀಶ್ವರರು ಭಸ್ಮ, ಪ್ರಸಾದವನ್ನು ಹಾಕಿ ಕರುವಿನ ಮೈದಡವಿದಾಗ ಸತ್ತ ಕರು ಮೇಲೇಳುತ್ತದೆ. ವಿಷಯ ತಿಳಿದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಡೋಜ ಡಾ.
ಅನ್ನದಾನೀಶ್ವರ ಸ್ವಾಮಿಗಳು

ಶಂಕರಗೌಡರು ಪೂಜ್ಯರನ್ನು ಗೌರವಿಸಿ ಆ ಗಂಡು ಕರುವನ್ನು ಕಾಣಿಕೆಯಾಗಿ ನೀಡುತ್ತಾನೆ. ಈ ಪವಾಡವನ್ನು ಕಣ್ಣಾರೆ ಕಂಡ ಕಲ್ಲಪ್ಪ ಜೀವನ ಪರ್ಯಂತ ಗುರುಗಳ ಸೇವೆ ಮಾಡುತ್ತಾನೆ.

ಮುಂಡರಗಿ ಪ್ರಾಂತದಲ್ಲಿದ್ದ ಬೇಡ ಜನಾಂಗದವರು ದುಷ್ಟ ಕೆಲಸಗಳಿಂದ ದಾರಿಹೋಕರನ್ನು ಹಿಂಸಿಸುತ್ತಾ ಅನ್ಯಾಯ, ಅನಾಚಾರಗಳನ್ನು ಮಾಡುತ್ತಿರುತ್ತಾರೆ. ಈ ದಾರಿಯಲ್ಲಿ ಅನ್ನದಾನೀಶ್ವರ ಸ್ವಾಮಿಗಳು ಬರುತ್ತಿದ್ದಾಗ ಆಕ್ರಮಣ ಮಾಡಲು ಕೈ ಎತ್ತುತ್ತಾರೆ. ಆದರೆ ಎತ್ತಿದ ಕೈಯನ್ನು ಕೆಳಗೆ ಇಳಿಸಲು ಸಾಧ್ಯವಾಗುವುದಿಲ್ಲ. ತಾವು ಮಾಡುತ್ತಿರುವುದು ತಪ್ಪು ಎಂದು ಬುದ್ದಿ ಹೇಳಿದ ಸ್ವಾಮಿಗಳು ಸತ್ಯಶುದ್ಧ ಕಾಯಕ ಮಾಡಿ, ಹಸಿದವರಿಗೆ ದಾಸೋಹ ಮಾಡಬೇಕೆಂದು ತಿಳಿಹೇಳುತ್ತಾರೆ. ಸ್ವಾಮಿಗಳ ಪ್ರಭಾವದಿಂದ ಬೇಡರು ತಮ್ಮ ಕೆಟ್ಟ ಕೆಲಸಗಳನ್ನು ಬಿಟ್ಟು ಪೂಜ್ಯರಿಗೆ ಶರಣಾಗುತ್ತಾರೆ. ಜೊತೆಗೆ ಮುಂಡರಗಿಯಲ್ಲಿ ಬೇಡ ಜನಾಂಗದವರೇ ಮಠವನ್ನು ಕಟ್ಟಿಕೊಡುತ್ತಾರೆ. ಸ್ವಾಮಿಗಳು ಇಲ್ಲಿ ನೆಲೆನಿಂತು ನಿರಂತರ ಅನ್ನದಾನವನ್ನು ಮಾಡುತ್ತಾರೆ. ಆದ್ದರಿಂದಲೇ ಅನ್ನದಾನೇಶ್ವರ ಮಠ ಎಂದು ಪ್ರಸಿದ್ಧಿಯಾಗುತ್ತದೆ. ಜಗದ್ಗುರು ಅನ್ನದಾನೀಶ್ವರ ಸ್ವಾಮಿಗಳು ಭೌತಿಕವಾಗಿ ಸುಮಾರು 300 ವರ್ಷಗಳ ಕಾಲ ಜೀವಿಸಿದ್ದರು ಎಂಬ ಉಲ್ಲೇಖವಿದ್ದು, ಇಲ್ಲಿಯವರೆಗೆ 10 ಜನ ಪೀಠಾಧಿಪತಿಗಳು ಪೀಠವನ್ನು ಅಲಂಕರಿಸಿದ್ದಾರೆ.

ನಾಡೋಜ ಸಾಹಿತ್ಯದ ಕಣಜ:

ಮುಂಡರಗಿ ಶ್ರೀಅನ್ನದಾನೀಶ್ವರ ಸಂಸ್ಥಾನದ 10ನೇ ಪೀಠಾಧಿಪತಿಯಾದ ಜಗದ್ಗುರು ಶ್ರೀಅನ್ನದಾನೀಶ್ವರ ಮಹಾಸ್ವಾಮಿಗಳು ಶಿಕ್ಷಣ ಕ್ರಾಂತಿಯ ಹರಿಕಾರರು, ಸಾಹಿತ್ಯದ ಪರಮಾರಾಧಕರು. 1942ರಲ್ಲಿ ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಪೀರಾಪುರ ಗ್ರಾಮದ ವೀರಭದ್ರಯ್ಯ, ಬಸಮ್ಮ ದಂಪತಿಗಳ ಪುಣ್ಯಸಂಜಾತರಾಗಿ ಜನಿಸಿದ ಶ್ರೀಗಳ ಹೆಸರು ಮಹಾಲಿಂಗಸ್ವಾಮಿ. ಬಾಲ್ಯದಲ್ಲಿಯೇ ವೈಧಿಕ, ಜ್ಯೋತಿಷ್ಯ ಮತ್ತು ವೈದ್ಯಕೀಯ ಶಾಸ್ತ್ರವನ್ನು ಕೌಟಂಬಿಕ ಪರಿಸರದಲ್ಲಿ ಅಧ್ಯಯನ ಮಾಡಿದ್ದ ಶ್ರೀಗಳು ಶಿವಯೋಗ ಮಂದಿರದಲ್ಲಿ ಮುಂದಿನ ಅಧ್ಯಯನ ಮಾಡುತ್ತಾರೆ. ಕಾವ್ಯತೀರ್ಥ, ಕಾವ್ಯ ಮಾಧ್ಯಮ, ವ್ಯಾಕರಣಾದ್ಯ ಸೇರಿದಂತೆ ಹಲವು ಹಿಂದಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಕನ್ನಡ, ಸಂಸ್ಕೃತ ಮತ್ತು ಹಿಂದಿ ತ್ರಿಭಾಷಾ ಪಂಡಿತರಾಗಿದ್ದಾರೆ.

ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಮುಂಡರಗಿಯ 9ನೇ ಪೀಠಾಧಿಪತಿಗಳು ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿ ಚಂದ್ರಶೇಖರ ದೇಶಿಕರೆಂಬ ಅಭಿನಾಮವನ್ನು ನೀಡಿದ್ದರು. ನಂತರ ಹೆಚ್ಚಿನ ಅಧ್ಯಯನಕ್ಕಾಗಿ ಕಾಶಿಗೆ ತೆರಳಿ ಬನಾರಸ್ ವಿಶ್ವ ವಿದ್ಯಾಲಯದಲ್ಲಿ ಪ್ರವೇಶ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಡೆದು ಹಿಂದಿ ಸಾಹಿತ್ಯ ರತ್ನ, ವೇದಾಂತ ಶಾಸ್ತ್ರಿ ಇತ್ಯಾದಿ ಪ್ರಮುಖ ಪದವಿಗಳನ್ನು ಪಡೆದುಕೊಂಡು 1966ರಲ್ಲಿ ಮುಂಡರಗಿಗೆ ವಾಪಾಸಾದರು. ಹಿರಿಯ ಪೂಜ್ಯರು ಲಿಂಗೈಕ್ಯರಾದ ನಂತರ 1969ರಲ್ಲಿ ಮುಂಡರಗಿಗೆ ಸಂಸ್ಥಾನದ 10ನೇ ಜಗದ್ಗುರುಗಳಾಗಿ ಪೀಠವನ್ನೇರಿದರು.

ಮುಂಡರಗಿ ಮಠ

ತಾವು ಅಧಿಕಾರಕ್ಕೆ ಬಂದ ನಂತರ ಸಾಹಿತ್ಯ, ಶಿಕ್ಷಣ, ಸಮಾಜಸೇವೆಯನ್ನು ತಮ್ಮ ಉಸಿರಾಗಿಸಿ ಕೊಂಡ ಪೂಜ್ಯರು 30ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಉಚಿತ ಪ್ರಸಾದ ನಿಲಯಗಳ ಮೂಲಕ ಅನ್ನದಾನ ಪರಂಪರೆಯನ್ನು ದೊಡ್ಡಮಟ್ಟದಲ್ಲಿ ವಿಸ್ತರಿಸಿದ್ದಾರೆ. ಸ್ವತಃ ಓರ್ವ ವಿದ್ವಾಂಸರಾಗಿರುವ ಪೂಜ್ಯರು ಇಲ್ಲಿಯವರೆಗೆ 110ಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ರಚಿಸಿದ್ದಾರೆ. ಜೊತೆಗೆ ಹಲವು ರಾಜ್ಯಮಟ್ಟದ ವಿಚಾರ ಸಂಕಿರಣಗಳನ್ನು ನಡೆಸಿ ಸಾಹಿತ್ಯ ಮತ್ತು ಸಂಶೋಧನಾ ಲೋಕವನ್ನು ಶ್ರೀಮಂತಗೊಳಿಸಿರುವ ಪೂಜ್ಯರು ಅನ್ನದಾನೀಶ್ವರ ಪ್ರಕಾಶನ ಸಂಸ್ಥೆಯಿಂದ 250ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಶ್ರೀಗಳ ಸಮಗ್ರ ಸಾಹಿತ್ಯವನ್ನು ಆಧರಿಸಿ ಪಿ.ಎಚ್.ಡಿ. ಎಂಫಿಲ್ ಸಂಶೋಧನೆಗಳು ನಡೆದಿವೆ. ಶ್ರೀಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ಸೇವೆಯನ್ನು ಪರಿಗಣಿಸಿ ಕನ್ನಡ ವಿವಿ ನಾಡೋಜ ಗೌರವವನ್ನು ನೀಡಿದೆ.

ಅನ್ನದಾನೀಶ್ವರರ ಮಹಾಯಾತ್ರೆ:

ಇದೇ ಜ.29ರಂದು ಮುಂಡರಗಿಯ ಶ್ರೀಅನ್ನದಾನೀಶ್ವರ ಶಿವಯೋಗಿಗಳ ಮಹಾರಥೋತ್ಸವ ನಡೆಯಲಿದೆ. ವಿಶೇಷವೆಂದರೆ ಒಂದು ವಾರಗಳ ಕಾಲ ನಡೆಯುವ ಈ ಉತ್ಸವಕ್ಕೆ ಯಾತ್ರೆ ಎಂದು ಕರೆಯುತ್ತಾರೆ. ಭಕ್ತರು ಭಕ್ತಿಯಿಂದ ಅಜ್ಜನ ಸೇವೆ ಮಾಡುವ ಈ ಮಹೋತ್ಸವವು ಜಾತ್ರೆಯಾಗದೆ, ಅರಿವಿನ ಯಾತ್ರೆಯಾಗಬೇಕೆಂಬುದು ಪೂಜ್ಯರ ಆಶಯ.

ಹಿಂದೆ ಅನ್ನದಾನೀಶ್ವರ ಮಠದ ರಥೋತ್ಸವವು ವೈಶಾಖ ಶುದ್ಧ ದಶಮಿಯಂದು ನಡೆಯುತ್ತಿತ್ತು. ಆದರೆ 9ನೇ ಪೀಠಾಧಿಪತಿಗಳು 8ನೇ ಪೀಠಾಧಿಪತಿಗಳ ಪುಣ್ಯಸ್ಮರಣಾರ್ಥವಾಗಿ ಮಾಘ ಶುದ್ಧ ತ್ರಯೋದಶಿಯಂದು ರಥೋತ್ಸವ ನಡೆಸಲು ಆರಂಭಿಸಿದ್ದು, ಕಳೆದ 148 ವರ್ಷಗಳಿಂದ ರಥೋತ್ಸವ ನಡೆಯುತ್ತಿದೆ. ರಕ್ತದಾನ ಶಿಬಿರ, ಸಾಮೂಹಿಕ ವಿವಾಹ, ಅಕ್ಕನ ವಚನಗಳ ಪ್ರವಚನ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜನನಕ್ಕೂ ಮುನ್ನ ಉತ್ತರಾಧಿಕಾರ...!
ನಾಲವಾರ ಶ್ರೀಗಳ ಜನ್ಮದಿನೋತ್ಸವ

ದಿನಾಂಕ : 18-10-2018

ಮನುಷ್ಯ ಆಧುನಿಕವಾಗಿ ಎಷ್ಟೆಲ್ಲಾ ಆವಿಷ್ಕಾರಗಳನ್ನು ಕಂಡು ಹಿಡಿದಿದ್ದರೂ; ಜನನ ಮತ್ತು ಮರಣದ ಮಹಾ ರಹಸ್ಯವನ್ನು ಭೇದಿಸುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಮಹಾತ್ಮರೆನಿಸಿಕೊಂಡ ಅದೆಷ್ಟೋ ಪುಣ್ಯಪುರುಷರು ಜನನ ಮರಣದ ರಹಸ್ಯವನ್ನು ಭೇದಿಸಿ ಪವಾಡಗಳನ್ನು ಸೃಷ್ಟಿಸಿದ್ದಾರೆ. ಅಂತಹ ಜನ್ಮರಹಸ್ಯದ ಕುರುಹು ನಾಲವಾರದ ಶ್ರೀಕೋರಿಸಿದ್ದೇಶ್ವರ ಮಹಾಸಂಸ್ಥಾನ ಮಠದ ಶ್ರೀಸಿದ್ಧತೋಟೇಂದ್ರ ಶಿವಾಚಾರ್ಯ ಸ್ವಾಮಿಗಳು.

ಹೈದ್ರಾಬಾದ್ ಕರ್ನಾಟಕ ಭಾಗದ ಪ್ರತಿಷ್ಠಿತ ನಾಲವಾರ ಮಠದ ಎರಡನೇ ತೋಟೇಂದ್ರ ಶಿವಯೋಗಿಗಳು ಮಹಾ ತಪಸ್ವಿಗಳಾಗಿದ್ದರು. ತಮ್ಮ ಪವಾಡಗಳಿಂದ ಭಕ್ತ ಸಂಕುಲದ ಕಷ್ಟಗಳನ್ನು ನೀಗಿದ್ದರು. ಶ್ರೀಮಠದ ಪಟ್ಟಾಧ್ಯಕ್ಷರಾಗಿ ಸುದೀರ್ಘ ಸೇವೆ ಸಲ್ಲಿಸಿದ್ದ ಶ್ರೀಗಳು; "ಮಹಾತ್ಮರು ಲೋಕದಂತೆ ಬಪ್ಪರು" ಎಂಬ ಮಾತಿನಂತೆ ಅಸಮಾನ್ಯ ರೀತಿಯಾಗಿಯೇ ಹುಟ್ಟಿ ಅಸಮಾನ್ಯ ರೀತಿಯಲ್ಲೇ ಇಹಲೋಕ ತ್ಯಜಿಸಿದವರು. ತೋಟೇಂದ್ರ ಶಿವಯೋಗಿಗಳು ತಮ್ಮ ಮರಣ ಮತ್ತು ಮರುಜನನದ ಬಗ್ಗೆ ಹೇಳಿದ್ದ ಭವಿಷ್ಯ ನಿಖರವಾಗಿ ಘಟಿಸುವ ಮೂಲಕ ಕಲಿಗಾಲದಲ್ಲೂ ಕೋರಿಸಿದ್ದನ ಪವಾಡವನ್ನು ತೋರಿದ್ದರು.

ನಾಲವಾರ ಶ್ರೀ ತೋಟೇಂದ್ರ ಶಿವಯೋಗಿಗಳ ಗದ್ದುಗೆ

1963ರಲ್ಲಿ ತೋಟೇಂದ್ರ ಶಿವಯೋಗಿಗಳು ತಾವು ಮುಂಚಿತವಾಗಿ ತಿಳಿಸಿದಂತೆ ಮಹಾನವಮಿಯಂದು ದೇಹ ತ್ಯಜಿಸಿದರು. ಅಲ್ಲಿಂದ ಒಂದು ವರ್ಷದ ನಂತರ 1964ರ ಮಹಾನವಮಿಯಂದು ಈಗಿನ ಶ್ರೀಸಿದ್ಧತೋಟೇಂದ್ರ ಶಿವಾಚಾರ್ಯರ ಜನನವಾಗುತ್ತದೆ. ಅಲ್ಲಿಂದ ಇಲ್ಲಿಯವರೆಗೆ ಪ್ರತಿ ಮಹಾನವಮಿಯಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೋಟೇಂದ್ರ ಶಿವಯೋಗಿಗಳ ಪುಣ್ಯಸ್ಮರಣೆ ಹಾಗೂ ಸಿದ್ದತೋಟೇಂದ್ರ ಶಿವಾಚಾರ್ಯರ ಜನ್ಮದಿನೋತ್ಸವವನ್ನು ಭಕ್ತರು ಭಕ್ತಿ-ಶ್ರದ್ಧೆಯಿಂದ ಆಚರಿಸುತ್ತಾರೆ. ಇದೇ ಅ.18ರಂದು ಅದ್ದೂರಿಯಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಜನ್ಮರಹಸ್ಯದ ಕುರುಹು ಶ್ರೀ ಸಿದ್ದತೋಟೇಂದ್ರ ಶ್ರೀಗಳು!



ಡಾ. ಸಿದ್ಧತೋಟೇಂದ್ರ ಸ್ವಾಮಿಗಳು

ಉತ್ತರಾಧಿಕಾರಿ ಆಯ್ಕೆ ಎಂದರೆ ಗುರು ಪರಂಪರೆಯಲ್ಲಿ ನಡೆಯುವ ಒಂದು ಮಹತ್ವದ ಧಾರ್ಮಿಕ ಪ್ರಕ್ರಿಯೆ. ಸೂಕ್ತ ವಟುವನ್ನು ಶಿಷ್ಯನನ್ನಾಗಿ ಸ್ವೀಕರಿಸುವ ಹಿರಿಯ ಗುರುಗಳು ದೀಕ್ಷೆಯನ್ನು ನೀಡಿ ಮುಂದಿನ ಗುರುಪಟ್ಟವನ್ನು ಕರುಣಿಸುತ್ತಾರೆ. ಆದರೆ ನಾಲವಾರ ಶ್ರೀಕೋರಿಸಿದ್ದೇಶ್ವರ ಸಂಸ್ಥಾನ ಮಠದಲ್ಲಿ ಜನನಕ್ಕಿಂತಲೂ ಪೂರ್ವದಲ್ಲೇ ಉತ್ತರಾಧಿಕಾರಿಯ ನೇಮಕವಾಗಿದ್ದು ಒಂದು ವಿಶೇಷ.

ತೋಟೇಂದ್ರ ಶಿವಯೋಗಿಗಳ ಸಂಕಲ್ಪ ಮತ್ತು ಸಂದೇಶದಂತೆ ನಿಗದಿತ ದಿನದಂದೆ ಜನ್ಮವೆತ್ತಿದ ಶ್ರೀಸಿದ್ದತೋಟೇಂದ್ರ ಶಿವಾಚಾರ್ಯರು ಬಾಲ್ಯದ ವಿದ್ಯಾಭ್ಯಾಸವನ್ನು ಹುಟ್ಟೂರಿನಲ್ಲಿ ಪೂರೈಸಿ, ಕಲಬುರಗಿ ಶರಣಬಸವೇಶ್ವರ ಕಾಲೇಜಿನಲ್ಲಿ ಉನ್ನತ ವಿದ್ಯಭ್ಯಾಸವನ್ನು ಮಾಡಿ ಪೂರ್ವ ನಿರ್ಧಾರದಂತೆ ಕೋರಿಸಿದ್ದೇಶ್ವರ ಪರಂಪರೆಯ ನಾಲ್ಕನೇಯ ಪೀಠಾಧಿಪತಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ಶ್ರೀಗಳ ಸಾಧನೆ ಅಪಾರ. 15ಕ್ಕೂ ಹೆಚ್ಚು ಗ್ರಂಥ ರಚನೆ ಮಾಡಿರುವ ಶ್ರೀಗಳ ಒಟ್ಟಾರೆ ಸೇವೆಯನ್ನು ಪರಿಗಣಿಸಿ ಕಲಬುರಗಿ ವಿವಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಶ್ರೀಗಳ ಬಹುಮುಖ ವ್ಯಕ್ತಿತ್ವದ ಸೆಳೆತಕ್ಕೆ ಲಕ್ಷಾಂತರ ಭಕ್ತರು ಇವರನ್ನು ಅನುಸರಿಸುತ್ತಿದ್ದಾರೆ. ಸದ್ಯ 54 ಸಂವತ್ಸರಗಳನ್ನು ಪೂರೈಸಿರುವ ಶ್ರೀಗಳು ಇದೇ ಅ.18ಕ್ಕೆ 55ನೇ ಸಂವತ್ಸರಕ್ಕೆ ಕಾಲಿಡುತ್ತಿದ್ದಾರೆ. ಈಗಾಗಲೇ ನವರಾತ್ರಿ ಅಂಗವಾಗಿ ಶ್ರೀಮಠದಲ್ಲಿ ಕಳೆದ ಒಂದು ವಾರದಿಂದ ವಿವಿಧ ಧಾರ್ಮಿಕ ಚಟುವಟಿಕೆಗಳು ಆರಂಭವಾಗಿದ್ದು, ಮಹಾನವಮಿಯಂದು (ಇಂದು) ಶ್ರೀಗಳ ಜನ್ಮ ದಿನೋತ್ಸವದ ಅಂಗವಾಗಿ ವಿಶೇಷ ಪೂಜೆ ಮತ್ತು ಕಾರ್ಯಕ್ರಮಗಳು ನಡೆಯಲಿವೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವೈಕ್ಯತೆಯ ಕೊಂಡಿ ಯಂಕಂಚಿ ಹಿರೇಮಠ
ಪಂಚಪೀಠಾಧೀಶರ ಸಾನಿಧ್ಯದಲ್ಲಿ
ಶತಮಾನೋತ್ಸವ, ದ್ವಾದಶ ವರ್ಧಂತಿ

ದಿನಾಂಕ : 13–12–2018

ಹಲವು ಧರ್ಮಗಳ ಸಂಗಮವಾಗಿರುವ ಭಾರತದಲ್ಲಿ ಧರ್ಮ, ಸಂಸ್ಕೃತಿಯ ಮಹಾಶಕ್ತಿಯೇ ಭಾವೈಕ್ಯತೆ. ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆ ಈ ದೇಶ ಜಗತ್ತಿಗೆ ಕೊಟ್ಟ ದೊಡ್ಡ ತತ್ವ. ಈ ಹಿನ್ನಲೆಯಲ್ಲಿ ನಾಡಿನ ಹಲವು ಕ್ಷೇತ್ರಗಳು ಭಾವೈಕ್ಯತೆಯನ್ನು ಮೂಲವಾಗಿಟ್ಟುಕೊಂಡು ಸಮಾಜದಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿವೆ. ಅಂತಹದ್ದೊಂದು ಭಾವೈಕ್ಯತೆಯ ಕೇಂದ್ರ ವಿಜಯಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಯಂಕಂಚಿಯ ಶ್ರೀಕುಂಟೋಜಿ ಹಿರೇಮಠ.

ಆಧುನಿಕತೆ ಎಷ್ಟೆಲ್ಲಾ ಬೆಳೆದಿದ್ದರೂ ಮತಾಂಧ ಘಟನೆಗಳು, ಮೂಢನಂಬಿಕೆಗಳನ್ನು ಇಂದಿಗೂ ಸಂಪೂರ್ಣವಾಗಿ ತೊಡೆದು ಹಾಕಲು ಸಾಧ್ಯವಾಗಿಲ್ಲ. ಆದರೆ ಏಳೆಂಟು ದಶಕಗಳ ಹಿಂದೆಯೇ ಯಂಕಂಚಿಯ ಪರಮಪೂಜ್ಯ ಶ್ರೀರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಭಕ್ತರಲ್ಲಿ ಜಾಗೃತಿ ಮೂಡಿಸಲು ಹಲವು ರಚನಾತ್ಮಕ ಕೆಲಸವನ್ನು ಮಾಡಿ; ಸಾಮಾಜಿಕವಾಗಿ ಜನರಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿದ್ದಾರೆ.

ಯಂಕಂಚಿಯಲ್ಲಿ ಆ ಕಾಲದಲ್ಲಿದ್ದ ಹಲವು ಕ್ರೂರ ಆಚರಣೆಗಳನ್ನು ನಿಲ್ಲಿಸಿ ಜನರಲ್ಲಿ ಪರಸ್ಪರ ಸಾಮರಸ್ಯ, ಸೌಹಾರ್ದತೆಯನ್ನು ಸ್ಥಾಪಿಸಿ, ಭಾವೈಕ್ಯತೆಯನ್ನು ಮೂಡಿಸಿದರು. ಇಂದಿಗೂ ಗ್ರಾಮದಲ್ಲಿರುವ ಪ್ರಸಿದ್ಧ ಧಾವುಲ್ ಮಲ್ಲಿಕ್ ದರ್ಗಾ ಹಾಗೂ ಕುಂಟೋಜಿ ಹಿರೇಮಠಕ್ಕೆ ಧರ್ಮ ಬೇಧವಿಲ್ಲದೇ ಎಲ್ಲ ಧರ್ಮೀಯರು ಭಕ್ತಿ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ. ಇಂತಹದ್ದೊಂದು ಭಾವೈಕ್ಯತೆಗೆ

ಶ್ರೀ ಷ.ಬ್ರ. ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಯಂಕಂಚಿ ಮಠದ ಯಾತ್ರಿನಿವಾಸ

ಮುನ್ನಡಿ ಬರೆದವರು ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು.

ಮನುಷ್ಯನ ಅಜ್ಞಾನದಿಂದ ಅಚಾತುರ್ಯಗಳು ನಡೆಯುತ್ತವೆ, ಮತಾಂಧ ಮನಸ್ಥಿತಿ ನಿರ್ಮಾಣಗೊಳ್ಳುತ್ತದೆ ಎಂಬುದನ್ನು ಮನಗಂಡಿದ್ದ ಪೂಜ್ಯರು; ಭಕ್ತರಿಗೆ ಸಂಸ್ಕಾರವನ್ನು ನೀಡಿ ಅವರನ್ನು ಜ್ಞಾನವಂತರನ್ನಾಗಿ ಮಾಡಲು ಶ್ರಮಿಸಿದರು. ಸಮಾಜದಲ್ಲಿ ಪರಸ್ಪರ ಪ್ರೀತಿ–ವಿಶ್ವಾಸ ಹಾಗೂ ಸಾಮರಸ್ಯದಿಂದ ಬದುಕಲು ಪ್ರೇರಣೆ ನೀಡಿದರು. ಅವರ ಜೀವಿತಾವಧಿಯಲ್ಲಿ ಸುಮಾರು 56 ಪುರಾಣಗಳನ್ನು ಹಳ್ಳಿ ಹಳ್ಳಿಗಳಿಗೆ ಹೋಗಿ ಪ್ರವಚನ ಮಾಡುವ ಮೂಲಕ ಹಲವಾರು ಕುಗ್ರಾಮಗಳನ್ನು ಸುಗ್ರಾಮಗಳನ್ನಾಗಿ ಪರಿವರ್ತಿಸಿದರು. ತಮ್ಮ ಜನಾನುರಾಗಿ ಧರ್ಮೋಪದೇಶದ ಮೂಲಕ ಭಕ್ತರ ಮನಸ್ಸನ್ನು ಗೆದ್ದು ಅವರನ್ನು ಧರ್ಮವಂತರನ್ನಾಗಿ ಮಾಡಿದರು.

ಶ್ರೀಕುಂಟೋಜಿ ಹಿರೇಮಠದ ಪರಂಪರೆ :

ಮುದ್ದೇಬಿಹಾಳ ತಾಲೂಕಿನ ಕುಂಟೋಜಿ ಹಿರೇಮಠವು ಒಂದೂವರೆ ಶತಮಾನದ ಹಿಂದೆ ಘನಲಿಂಗ ಚಕ್ರವರ್ತಿ ಶ್ರೀಚನ್ನಬಸವ ಶಿವಾಚಾರ್ಯರಿಂದ ಸ್ಥಾಪನೆಗೊಂಡ ಮಠ. ಮಹಾನ್ ತಪಸ್ವಿಗಳಾಗಿದ್ದ ಶ್ರೀಗಳು ಭವಿಷ್ಯದಲ್ಲಿ ಕುಂಟೋಜಿ ಹಿರೇಮಠದ ಪರಂಪರೆ ಕೃಷ್ಣೆಯಿಂದ ಭೀಮೆಯ ವರೆಗೆ ಹರಿಯಲಿದೆ ಎಂಬ ಭವಿಷ್ಯವನ್ನು ನುಡಿದಿದ್ದರು. ಅದರಂತೆ ಇಂದು ಎರಡೂ ನದಿಯ ಪರ್ಯಂತರ ಮಠದ ಪರಂಪರೆಯ ಪಸರಿಸಿದೆ.

ಶ್ರೀಗಳ ತಮೋಶಕ್ತಿಗೆ ಆ ಕಾಲದ ಹಲವು ಮಹಾತ್ಮರು ಶರಣಾಗಿದ್ದರು. ಇತಿಹಾಸದಲ್ಲಿ ಬರುವ ಪ್ರಸಿದ್ಧ ನಾಲತವಾಡದ ಶ್ರೀವೀರೇಶ್ವರ ಶರಣರು ನಾಲತವಾಡದಿಂದ ಲೋಕಸಂಚಾರವನ್ನು ಆರಂಭಿಸಿದ ಕೂಡಲೇ ಕುಂಟೋಜಿಮಠಕ್ಕೆ ಬಂದು ಶ್ರೀಗಳಿಂದ ತೀರ್ಥಪ್ರಸಾದವನ್ನು ಸ್ವೀಕಾರ ಮಾಡಿ ಇಲ್ಲಿಂದ ಸೊಲ್ಲಾಪುರಕ್ಕೆ ಪ್ರಯಾಣ ಮಾಡಿ ಮುಂದೆ ದೊಡ್ಡ ಅಧ್ಯಾತ್ಮ ಸಾಧಕರಾಗಿ ಜನಪ್ರಿಯರಾಗಿದ್ದಾರೆ. ಬ್ರಾಹ್ಮಣ ಸಮುದಾಯದಲ್ಲಿ ಜನಿಸಿದ್ದ ಭೀಮಾಶಂಕರನೆಂಬ ಸಾಧಕ ಶ್ರೀಗಳ ಶಕ್ತಿಗೆ ಶರಣಾಗಿ ಲಿಂಗದೀಕ್ಷೆಯನ್ನು ಸ್ವೀಕರಿಸಿ ಮಂಗಳೂರಿನಲ್ಲಿ ಮಠವನ್ನು ಸ್ಥಾಪಿಸಿ ತಮ್ಮ ಅದ್ಯಾತ್ಮ ಸಾಧನೆ ಮಾಡಿದ್ದಾರೆ.

ಇದೇ ಪರಂಪರೆಯಲ್ಲಿ ಬಂದ ಶ್ರೀರುದ್ರಮುನಿ ಶಿವಾಚಾರ್ಯ ಸ್ವಾಮಿಗಳು 1918ರಲ್ಲಿ ಶರಣ ದಂಪತಿಗಳಾದ ಶಿವಗಂಗಮ್ಮ ಮತ್ತು ಮರಿದೇವರ ಏಕೈಕ ಪುತ್ರನಾಗಿ ಜನಿಸಿ; ಅದ್ಯಾತ್ಮದಲ್ಲಿ ಆಸಕ್ತಿಯನ್ನು ಇರಿಸಿಕೊಂಡು ಈ ಪರಂಪರೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂದುವರೆಸುತ್ತಾರೆ. ನಂತರ ಸದ್ಭಕ್ತರ ಕೋರಿಕೆಯ ಮೇರೆಗೆ ಕುಂಟೋಜಿಯಿಂದ ಸಿಂಧಗಿ ತಾಲೂಕಿನ ಯಂಕಂಚಿಗೆ ಆಗಮಿಸಿ ಮಠವನ್ನು ಸ್ಥಾಪಿಸಿ, ಕೊನೆಗೆ ಇಲ್ಲಿಯೇ ಐಕ್ಯರಾಗುತ್ತಾರೆ.

ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು

ಶ್ರೀ ರುದ್ರಮುನಿ ಸ್ವಾಮಿಗಳ ತರುವಾಯ ಸುಮಾರು 3 ದಶಕಗಳ ಕಾಲ ಖಾಲಿಯಿದ್ದ ಶ್ರೀಮಠಕ್ಕೆ; ಭಕ್ತರೆಲ್ಲರೂ ಸೇರಿ ಶ್ರೀಗಳ ವಂಶಸ್ಥರೇ ಆದ ಶ್ರೀಅಭಿನವ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳನ್ನು ನೇಮಕ ಮಾಡುತ್ತಾರೆ. ಕಳೆದ 12 ವರ್ಷಗಳಿಂದ ಕುಂಟೋಜಿ ಪರಂಪರೆಯ ಯಂಕಂಚಿ ಮಠದ ಅಭಿವೃದ್ಧಿಯ ಜೊತೆಗೆ ಇತರೆ ಶಾಖಾ ಮಠಗಳ ಉಸ್ತುವಾರಿಯನ್ನು ವಹಿಸಿಕೊಂಡು ಅಭಿವೃದ್ಧಿ ಪಡಿಸುತ್ತಿದ್ದಾರೆ.

ಶತಮಾನೋತ್ಸವ, ವರ್ಧಂತಿ ಮಹೋತ್ಸವ:

ಶ್ರೀರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಶತಮಾನೋತ್ಸವ ಹಾಗೂ ಶ್ರೀಅಭಿನವ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಪಟ್ಟಾಧಿಕಾರದ ದ್ವಾದಶ ವರ್ಧಂತಿ ಮಹೋತ್ಸವದ ಅಂಗವಾಗಿ ಯಂಕಂಚಿ ಮಠದಲ್ಲಿ ಡಿ.11 ರಿಂದ ಆರಂಭವಾಗಿ ಡಿ.15 ರವರೆಗೆ ವಿವಿಧ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ನೂತನವಾಗಿ ನಿರ್ಮಾಣಗೊಂಡಿರುವ ಶ್ರೀರುದ್ರಮುನೀಶ್ವರ ಕಲ್ಯಾಣ ಮಂಟಪ, ಶ್ರೀರುದ್ರಮುನೀಶ್ವರ ಯಾತ್ರಿನಿವಾಸ ಲೋಕಾರ್ಪಣೆ ಹಾಗೂ ಅಯ್ಯಾಚಾರ ಶಿವಧೀಕ್ಷೆ, ಸರ್ವಧರ್ಮದ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡಿ.14ರಂದು ಪ್ರಸ್ತುತ ಶ್ರೀಗಳ ದ್ವಾದಶ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ಅಂಗವಾಗಿ ಮಂಗಳಸ್ನಾನ ಹಾಗೂ ಬೃಹತ್ ಧರ್ಮ ಸಭೆ ಹಮ್ಮಿಕೊಳ್ಳಲಾಗಿದೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ತ್ರೀಕುಲ ರತ್ನ ಮಹಾಶರಣೆ ಮಲ್ಲಮ್ಮ
ಮೇ 10 ರಾಜ್ಯಾದ್ಯಂತ ಮಲ್ಲಮ್ಮ ಜಯಂತ್ಯೋತ್ಸವ

ದಿನಾಂಕ : 09-06-2019

ಹಿಂದೊಂದು ಕಾಲಕ್ಕೆ 20-30 ಜನ ಸದಸ್ಯರು ಒಂದೇ ಕುಟುಂಬದಲ್ಲಿದ್ದು, ಭಾರತದ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಅನುಸರಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಕೌಟಂಬಿಕ ವ್ಯವಸ್ಥೆ ಛಿದ್ರಗೊಳ್ಳುವ ಮೂಲಕ ಅವಿಭಕ್ತ ಕುಟುಂಬದ ಪರಿಕಲ್ಪನೆ ಕಣ್ಮರೆಯಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣ ಮಹಿಳೆಯರು ಸಹಬಾಳ್ವೆ ಮತ್ತು ತಾಳ್ಮೆ ಕಳೆದುಕೊಳ್ಳುತ್ತಿರುವುದೇ ಆಗಿದೆ. ಇದಕ್ಕೆ ಅಪವಾದವೆಂಬಂತೆ ಸ್ತ್ರೀಕುಲದ ಅನರ್ಘ್ಯರತ್ನದಂತೆ ಮಿನುಗುತ್ತಿರುವ ಹೆಸರು ಮಹಾಶಿವಶರಣೆ ಹೇಮರೆಡ್ಡಿ ಮಲ್ಲಮ್ಮ.

ನೆರೆಯ ಆಂಧ್ರಪ್ರದೇಶದ ಧಾರ್ಮಿಕ ಇತಿಹಾಸದಲ್ಲಿ ಹೇಮರೆಡ್ಡಿ ಮಲ್ಲಮ್ಮನವರ ಹೆಸರು ಬಹು ಪ್ರಸಿದ್ಧಿ. ಭೂಕೈಲಾಸವೆಂದೇ ಪ್ರಸಿದ್ಧಿಯಾಗಿರುವ ಭಾರತದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಶ್ರೀಶೈಲ ಕ್ಷೇತ್ರ ಮಲ್ಲಮ್ಮನವರ ಕರ್ಮಭೂಮಿ. ಇಂದಿನ ದಿನಮಾನಗಳಲ್ಲಿ ಹೆಣ್ಣುಮಕ್ಕಳಿಗೆ ತಾಳ್ಮೆ-ಸಹನೆಯೇ ಇರುವುದಿಲ್ಲ ಎಂಬ ಅಪವಾದವಿದೆ. ಆ ಕಾರಣಕ್ಕಾಗಿಯೇ ಕೌಟಂಬಿಕ ಮತ್ತು ಸಾಮಾಜಿಕ ವ್ಯವಸ್ಥೆ ಹಾಳಾಗುತ್ತಿವೆ ಎಂಬ ವಿಶ್ಲೇಷಣೆ ಇದೆ. ಆದರೆ ಹೇಮರೆಡ್ಡಿ ಮಲ್ಲಮ್ಮನ ಇತಿಹಾಸವನ್ನು ನೋಡಿದರೆ ಇಡೀ ಸ್ತ್ರೀ ಸಮೂಹವೇ ಅಚ್ಚರಿಪಡುವಂತಿದೆ.



ಮಹಾಶರಣೆ ಮಲ್ಲಮ್ಮ

ಧಾರ್ಮಿಕ ಸಾಧನೆಯಲ್ಲಿ, ಸಾಮಾಜಿಕ ಚಿಂತನೆಯಲ್ಲಿ, ಆದರ್ಶದ ಬದುಕಿನಲ್ಲಿ ಮಲ್ಲಮ್ಮನ ಚರಿತ್ರೆ ಪವಿತ್ರವಾದ ಸ್ಥಾನವನ್ನು ಪಡೆದುಕೊಂಡಿದೆ.

ಹೇಮರಡ್ಡಿ ಮಲ್ಲಮ್ಮನ ಜೀವನಾದರ್ಶಗಳನ್ನು ಸಮಾಜಕ್ಕೆ ತಲುಪಿಸುವುದಕ್ಕಾಗಿ ಹಲವು ಪುರಾಣ, ಪುಸ್ತಕ, ನಾಟಕ, ಸಿನಿಮಾಗಳು ಪ್ರಕಟಗೊಂಡಿವೆ. ಕಳೆದೆರಡು ವರ್ಷದಿಂದ ಕರ್ನಾಟಕ ಸರ್ಕಾರವೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಧಿಕೃತವಾಗಿ ಮೇ 10 ರಂದು ಹೇಮರೆಡ್ಡಿ ಮಲ್ಲಮ್ಮನವರ ಜಯಂತಿಯನ್ನು ಆಚರಿಸುತ್ತಿದೆ.

ಮಹಾಶರಣೆ ಮಲ್ಲಮ್ಮನ ಮೂರ್ತಿ

ಆಧ್ಯಾತ್ಮ ಸಾಧಕಿ ಮಲ್ಲಮ್ಮ:

ಆಂಧ್ರಪ್ರದೇಶದ ಶ್ರೀಶೈಲ ಪ್ರದೇಶವನ್ನಾಳಿದ ಕೊಂಡವೀಡು ರಾಜವಂಶದ ಸೊಸೆಯಾದ ಮಲ್ಲಮ್ಮ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯ ಮಾನಸಪುತ್ರಿ. ಶಿವಶರಣೆ ಅಕ್ಕಮಹಾದೇವಿಯು ಮಲ್ಲಿಕಾರ್ಜುನ ಸ್ವಾಮಿಯನ್ನು ತನ್ನ ಪತಿ ಎಂದು ಭಾವಿಸಿದರೆ; ಮಲ್ಲಮ್ಮ ಮಲ್ಲಿಕಾರ್ಜುನಸ್ವಾಮಿಯನ್ನು ತನ್ನ ತಂದೆ ಎಂದು ನಂಬಿ ಆಧ್ಯಾತ್ಮ ಸಾಧನೆ ಮಾಡಿದವಳು. ಸಾಮಾನ್ಯರೂ ಕೂಡಾ ಆತ್ಮೋನ್ನತಿಯ ಹಾದಿಯಲ್ಲಿ ಉತ್ತುಂಗಕ್ಕೇರಲು ಸಾಧ್ಯ ಎಂಬುದನ್ನು ತೋರಿದ ಮಹಾನ್ ಸಾಧಕಿ ಮಲ್ಲಮ್ಮ.

ಕೌಟಂಬಿಕವಾಗಿ ಬಂದ ಯಾವುದೇ ಸಮಸ್ಯೆಗಳಿಗೂ ಜಗ್ಗದೇ, ಮಲ್ಲಿಕಾರ್ಜುನ ಸ್ವಾಮಿಯನ್ನು ನಂಬಿ ಕಾಯಕದಲ್ಲಿ ಮಗ್ನಳಾದ ಮಲ್ಲಮ್ಮ ತನ್ನ ಕಾಯಕದ ಮೂಲಕವೇ ಮಲ್ಲಿಕಾರ್ಜುನ ಸ್ವಾಮಿಯ ಸಾಕ್ಷಾತ್ಕಾರ ಪಡೆಯುತ್ತಾಳೆ. ಶ್ರೀಶೈಲ ಸೂರ್ಯಸಿಂಹಾಸನ ಪೀಠದ ಅಂದಿನ ಜಗದ್ಗುರು ಚಂದ್ರಗುಂಡ ಶಿವಾಚಾರ್ಯ ಸ್ವಾಮಿಗಳಿಂದ ಮಾರ್ಗದರ್ಶನ ಪಡೆದು, ಶ್ರೀಜಗದ್ಗುರು ಕರಿಬಸವೇಂದ್ರ ಶಿವಾಚಾರ್ಯರ ಸದುಪದೇಶದಿಂದ ಪ್ರೇರಿತಳಾಗಿ ಸಾಧನೆಯ ಶಿಖರವನ್ನೇರುತ್ತಾಳೆ.

ಲೌಕಿಕ ತುಮುಲಗಳಿಗೆ ಅಂಟಿಕೊಂಡಿದ್ದ ಮೈದುನ ವೇಮನನಿಗೆ ಉಪದೇಶ ಮಾಡಿ ಆಧ್ಯಾತ್ಮದ ಹಾದಿಯನ್ನು ತೋರಿಸಿದ ಮಲ್ಲಮ್ಮ ಯೋಗಿ ವೇಮನನ ಪಾಲಿನ ಗುರುವಾಗಿದ್ದಾಳೆ. ತೆಲುಗು ಸಾಹಿತ್ಯದಲ್ಲಿ ಬಹುದೊಡ್ಡ ಸಾಧನೆ ಮಾಡಿರುವ ಯೋಗಿ ವೇಮನನ ಆಧ್ಯಾತ್ಮಿಕ ಚಿಂತನೆಗೆ ಪ್ರೇರಣೆಯೇ ಹೇಮರೆಡ್ಡಿ ಮಲ್ಲಮ್ಮ ಎಂಬುದು ಗಮನಾರ್ಹ ಅಂಶ.

ವೀರಶೈವಾಚಾರ ನಿಷ್ಠಳಾಗಿದ್ದ ಮಲ್ಲಮ್ಮ ಅಂತರಂಗದಲ್ಲಿ ಲಿಂಗಾಂಗ ಸಾಮರಸ್ಯದ ಬದುಕನ್ನು ಅಳವಡಿಸಿಕೊಂಡಿದ್ದ ಶರಣೆ. ಆಕೆಯ ಇಷ್ಟಲಿಂಗಪೂಜೆಯ ನಿಷ್ಠೆಗೆ ಸಾಕ್ಷಿಯಾಗಿ ಪ್ರಾಚೀನ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಗರ್ಭಗುಡಿಯ ಪ್ರಾಂಗಣದಲ್ಲಿ ಇಷ್ಟಲಿಂಗೋಪಾಸನೆ ಭಂಗಿಯಲ್ಲಿರುವ ಶಿಲಾಮೂರ್ತಿ ಪೂರಕವಾಗಿದೆ. ಜೊತೆಗೆ ಕಾಯಕದಿಂದಲೇ ಮುಕ್ತಿ ಎಂಬ ಶರಣ ಸಿದ್ಧಾಂತದಂತೆ ಕೃಷಿಕಾಯಕದಲ್ಲಿ ತೊಡಗಿಸಿಕೊಂಡು ಸಾಂಸಾರಿಕ ಬದುಕನ್ನೂ ಜಯಿಸುತ್ತಾಳೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೆಡ್ಡಿ ಸಮುದಾಯದ ಆರಾಧ್ಯ ದೇವಿ:

ಆಂಧ್ರ, ತೆಲಂಗಾಣ, ಮಹಾರಾಷ್ಟ ಮತ್ತು ಕರ್ನಾಟಕದಲ್ಲಿ ಹೆಚ್ಚಾಗಿರುವ ರೆಡ್ಡಿ ಸಮುದಾಯದ ಆರಾಧ್ಯ ದೇವಿ ಹೇಮರೆಡ್ಡಿ ಮಲ್ಲಮ್ಮ. ಯೋಗಿ ವೇಮನನ್ನು ಆರಾಧಿಸುವ ವೈಷ್ಣವ ರೆಡ್ಡಿಗಳೇ ಇರಲಿ, ಇಷ್ಟಲಿಂಗವನ್ನು ಪೂಜಿಸುವ ಶಿವಭಕ್ತ ರೆಡ್ಡಿಗಳೇ ಇರಲಿ ಮಲ್ಲಮ್ಮನನ್ನು ಭಕ್ತಿಯಿಂದ ಆರಾಧಿಸುತ್ತಾರೆ.

ಮಹಾಶರಣೆ ಮಲ್ಲಮ್ಮನ ದೇವಸ್ಥಾನ

ದ್ಯಾಮಪುರದ ಚನ್ನಕವಿ ವಿರಚಿತ ಮಲ್ಲಮ್ಮ ಪುರಾಣದಲ್ಲಿ ಉಲ್ಲೇಖಗೊಂಡಿರುವಂತೆ ಮಲ್ಲಮ್ಮನ ಭಕ್ತಿಗೆ ಮೆಚ್ಚಿ ಸಾಕ್ಷಾತ್ ಮಲ್ಲಿಕಾರ್ಜುನ ಸ್ವಾಮಿಯೇ ಪ್ರತ್ಯಕ್ಷನಾದಾಗ; ರೆಡ್ಡಿ ಕುಲಕ್ಕೆ ಎಂದೆಂದೂ ಬಡತನ ಬಾರದಿರಲಿ ಎಂಬ ವರವನ್ನು ಕೇಳುತ್ತಾಳೆ. ಆ ಕಾರಣಕ್ಕಾಗಿಯೇ ರೆಡ್ಡಿ ಸಮುದಾಯ ಸಿರಿವಂತರಾಗಿ ಉಳಿದಿದ್ದಾರೆಂಬ ಪ್ರತೀತಿ ಇದೆ.

ಹೇಮರೆಡ್ಡಿ ಮಲ್ಲಮ್ಮನ ಕಾರ್ಯಕ್ಷೇತ್ರದಲ್ಲಿ ಮಲ್ಲಮ್ಮನ ಕುರುಹಾಗಿ "ಮಲ್ಲಮ್ಮನ ಕಣ್ಣೀರು" ಎಂಬ ಪ್ರದೇಶವಿದೆ. ಕರ್ನಾಟಕ ರೆಡ್ಡಿ ಸಮಾಜವು ಶ್ರೀಶೈಲದ ಲಿಂಗೈಕ್ಯ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಭಗವತ್ಪಾದರ ಮಾರ್ಗದರ್ಶನದಲ್ಲಿ ಸುಂದರ ದೇವಾಲಯವನ್ನು ನಿರ್ಮಾಣ ಮಾಡಿ ದೇವಸ್ತಾನದ ಆಡಳಿತ ಮಂಡಳಿಯವರಿಗೆ ಒಪ್ಪಿಸಿದೆ. ನಿವೃತ್ತ ಡಿಎಸ್ಪಿ ವೈ.ಬಿ. ಆಲೂರ್ ಮತ್ತಿತರ ಹಿರಿಯರ ಶ್ರಮದಿಂದ ನಿರ್ಮಾಣಗೊಂಡ ದೇವಾಲಯಕ್ಕೆ ನಿತ್ಯ ಸಾವಿರಾರು ಭಕ್ತರು ಭೇಟಿ ನೀಡಿ ದರ್ಶನ ಪಡೆಯುತ್ತಾರೆ.

ಪ್ರಸ್ತುತ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಭಗವತ್ಪಾದರು; ಶ್ರೀಪೀಠದ ವತಿಯಿಂದ ನಡೆಸಿದ ಸಾಧ್ವಿ ಶಿರೋಮಣಿ ಹೇಮರೆಡ್ಡಿ ಮಲ್ಲಮ್ಮ ರಥಯಾತ್ರೆ ಹಾಗೂ ಹೇಮರೆಡ್ಡಿ ಮಲ್ಲಮ್ಮ ಜೀವನ ಮತ್ತು ಸಾಧನೆ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವು ರಾಷ್ಟ್ರಮಟ್ಟದಲ್ಲಿ ಬಹುದೊಡ್ಡ ಸುದ್ದಿಯಾಯಿತು. ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪ ಹಾಗೂ ಜಸ್ಟೀಸ್ ಶಿವರಾಜ್ ಪಾಟೀಲ್ ನೇತೃತ್ವದಲ್ಲಿ ನಡೆದ ಸಮಾವೇಶದ ನಿರ್ಣಯದಂತೆ ಸರ್ಕಾರವು ಕಲಬುರಗಿ ವಿಶ್ವವಿದ್ಯಾಲಯದಲ್ಲಿ ಹೇಮರೆಡ್ಡಿ ಮಲ್ಲಮ್ಮ ಅಧ್ಯಯನ ಪೀಠ ಹಾಗೂ ಸರ್ಕಾರದಿಂದ ಪ್ರತಿವರ್ಷ ಜಯಂತಿ ಆಚರಣೆಗೆ ಆದೇಶ ಮಾಡಿತು.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಮುಟ್ಟಿ ಗುರುವಾದ ಬೃಂಗೀಶ್ವರ ಸ್ವಾಮಿಗಳು

ಇಂಗಳೇಶ್ವರ ಮಠದಲ್ಲಿ ಪಟ್ಟಾಧಿಕಾರ ರಜತ ಮಹೋತ್ಸವ

ದಿನಾಂಕ : 06–06–2019

ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಮಿನುಗುತ್ತಿರುವ ಮಹಾತ್ಮರುಗಳೆಲ್ಲರ ಚರಿತ್ರೆಯನ್ನು ಒಮ್ಮೆ ಕಣ್ಣಾಡಿಸಿದಾಗ; ಆತ್ಮಸಾಕ್ಷಾತ್ಕಾರಕ್ಕಾಗಿ ಮಹಾ ತಪಸ್ಸು ಮಾಡಿದ ಬಹುದೊಡ್ಡ ಪಟ್ಟಿಯೇ ದೊರೆಯುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಲೌಕಿಕ ಅಧ್ಯಯನಕ್ಕೆ ಕೊಡುವಷ್ಟು ಮಹತ್ವವನ್ನು ಅಧ್ಯಾತ್ಮಿಕ ಅನುಷ್ಠಾನಕ್ಕೆ ನೀಡುತ್ತಿಲ್ಲ ಎಂಬ ಕೊರಗಿದೆ. ಈ ಮಾತಿಗೆ ಅಪವಾದ ಇಂಗಳೇಶ್ವರ ಹಿರೇಮಠದ ಶ್ರೀ.ಷ.ಬ್ರ.ಬೃಂಗೀಶ್ವರಲಿಂಗ ಶಿವಾಚಾರ್ಯ ಸ್ವಾಮಿಗಳು.

ಉತ್ತಮ ಶಿಷ್ಯ ಮಾತ್ರ ಅತ್ಯುತ್ತಮ ಗುರುವಾಗಲು ಸಾಧ್ಯ ಎಂಬ ಮಾತಿನಂತೆ ಶ್ರೀಬೃಂಗೀಶ್ವರಲಿಂಗ ಶಿವಾಚಾರ್ಯ ಸ್ವಾಮಿಗಳು ಬಾಲ್ಯದಲ್ಲಿಯೇ ಮಹಾತಪಸ್ವಿ ಶ್ರೀಶಿವಬಸವ ಶಿವಾಚಾರ್ಯ ಸ್ವಾಮಿಗಳ ಪರಮಶಿಷ್ಯರಾಗಿ ಅವರ ಸೇವೆ ಮಾಡಿದ್ದಾರೆ. ನಂತರ ಪೂಜ್ಯರ ಹಾದಿಯಲ್ಲಿ ಮುಂದುವರೆದ ಬೃಂಗೀಶ್ವರ ಸ್ವಾಮಿಗಳು ಆಯ್ಕೆ ಮಾಡಿಕೊಂಡಿದ್ದು ಅನುಷ್ಠಾನ, ತಪಸ್ಸು, ಅಧ್ಯಾತ್ಮ ಸಾಧನೆ.

ಗುರು ಮುಟ್ಟಿ ಗುರುವಾದೆ ಎಂಬ ಅನುಭವ ವಾಣಿಯಂತೆ; ಓರ್ವ ಮಹಾತಪಸ್ವಿಗಳನ್ನು ನಿಷ್ಕಾಮ ಭಕ್ತಿಯಿಂದ ಸೇವೆಗೈದ ಸಾಮಾನ್ಯ ಬಾಲಕ ತಾನೂ ಗುರುವಾಗಿ ಈ ಭಾಗದ ಭಕ್ತರಿಗೆ ಮಾರ್ಗದರ್ಶನ ಮಾಡುತ್ತಿರುವ ಶ್ರೀಗಳು ತಮ್ಮ ಅನುಷ್ಠಾನ ಮತ್ತು ಮಂತ್ರಸಿದ್ಧಿಯ ಮಹಿಮೆಯಿಂದ ಅಂತರ್ಜಲವನ್ನು ಪತ್ತೆಹಚ್ಚುವ ಶಕ್ತಿ ಸಂಪಾದಿಸಿಕೊಂಡಿದ್ದಾರೆ. ಪೂಜ್ಯರಲ್ಲಿನ ಈ ಅಪೂರ್ವ ಶಕ್ತಿ ಬರದನಾಡಿನ ರೈತರ ಬಾಳಲ್ಲಿ ಹೊಸ ಉತ್ಸಾಹ ತುಂಬಿದೆ.

ಶ್ರೀ ಸಂಗನಬಸವ ಸ್ವಾಮಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವಾಮಿಗಳನ್ನು ಕೇವಲ ಲಾಂಚನದಿಂದ ಗುರುತಿಸುವಂತಾಗದೇ; ತಮ್ಮಲ್ಲಿನ ಅಪೂರ್ವ ಶಕ್ತಿಯಿಂದ ಸಮಾಜದ ಗೌರವಕ್ಕೆ ಪಾತ್ರರಾಗ ಬೇಕೆಂಬ ಹೊಸ ವ್ಯಾಖ್ಯಾನವನ್ನು ಶ್ರೀಬೃಂಗೀಶ್ವರ ಸ್ವಾಮಿಗಳಿಂದ ತಿಳಿದುಕೊಳ್ಳಬಹುದು.

ತಪಸ್ವಿ ಗುರುಪರಂಪರೆ:

ಇಂಗಳೇಶ್ವರ ಶ್ರೀಜಗದ್ಗುರು ರೇವಣ ಸಿದ್ದೇಶ್ವರರು ತಪಸ್ಸು ಮಾಡಿದ ಪವಿತ್ರ ಭೂಮಿ. ಈ ಪವಿತ್ರ ಪರಿಸರದಲ್ಲಿರುವ ಶ್ರೀ ಇಂಗಳೇಶ್ವರ ಹಿರೇಮಠವು ಶ್ರೀಜಗದ್ಗುರು ರಂಭಾಪುರಿ ಪೀಠದ ಶಾಖಾ ಮಠವಾಗಿದ್ದು, ಈ ಗುರುಪಂಪರೆಯಲ್ಲಿ ಯಾರೂ ಮರೆಯಲಾಗದ ಹೆಸರು ಶ್ರೀಶಿವಬಸವ ಶಿವಾಚಾರ್ಯ ಸ್ವಾಮಿಗಳು. ಮನಗೂಳಿ ಪಟ್ಟೀಕಂಥಿ ಹಿರೇಮಠದ ಪರಂಪರೆಯಲ್ಲಿ ಶ್ರೀಸಂಗನಬಸವ ಶಿವಾಚಾರ್ಯ ಸ್ವಾಮಿಗಳೆಂದು ನಾಮಾಂಕಿತ ರಾಗಿದ್ದ ಪೂಜ್ಯರು ಬಸವನಾಡಿನ ಬಹುದೊಡ್ಡ ಅನುಷ್ಠಾನ ಮೂರ್ತಿಯಾಗಿದ್ದರು. ಪೂಜ್ಯರು 2001ರಲ್ಲಿ ಲಿಂಗೈಕ್ಯರಾಗುವ ಸಂದರ್ಭದಲ್ಲಿ ತಮ್ಮ ಸಂಪೂರ್ಣ ತಪಸ್ಸಿನ ಶಕ್ತಿಯನ್ನು ಉತ್ತರಾಧಿಕಾರಿ ಗಳಾದ ಶ್ರೀಬೃಂಗೀಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಧಾರೆಯೆರೆದಿದ್ದಾರೆ.



ಶ್ರೀ ಭೃಂಗೀಶ್ವರ ಶಿವಾಚಾರ್ಯ ಸ್ವಾಮೀಜಿ

ತಮ್ಮ ಹಿರಿಯ ಪೂಜ್ಯರಂತೆ ತಪೋನುಷ್ಠಾನಕ್ಕೆ ಪ್ರಥಮ ಆದ್ಯತೆಯನ್ನು ನೀಡಿದ ಶ್ರೀಗಳು ಮೊಟ್ಟ ಮೊದಲ ಬಾರಿಗೆ ರೇವಣಸಿದ್ದೇಶ್ವರ ಬೆಟ್ಟದಲ್ಲಿ 48 ದಿನಗಳ ಕಾಲ ಅನುಷ್ಠಾನವನ್ನು ಮಾಡುತ್ತಾರೆ. ನಂತರ ತಮ್ಮ ಗುರುಗಳ ತಪೋಭೂಮಿಯಾದ ಮಲಘಾಣದಲ್ಲಿ 63 ದಿನಗಳ ಅನುಷ್ಠಾನ ಹಾಗೂ ಕೊಟ್ಟೂರಿನ ಚಾನುಕೋಟಿ ಮಠದಲ್ಲಿ 108 ದಿನಗಳ ಅನುಷ್ಠಾನ ಮಾಡುತ್ತಾರೆ. ವಿಭೂತಿಪುರ ಮಠದ ಶಾಖಾ ವಡವಡಗಿ ಬೃಹನ್ಮಠದ ಪಟ್ಟಾಧ್ಯಕ್ಷರೂ ಆಗಿರುವ ಪೂಜ್ಯರು ಅಲ್ಲಿ 151 ದಿನಗಳ ಸುದೀರ್ಘ ತಪೋನುಷ್ಠಾನವನ್ನು ಮಾಡಿ ಸಪ್ತಕೋಟಿ ಮಂತ್ರಗಳಲ್ಲೇ ಶ್ರೇಷ್ಠವಾದ ಶಿವಪಂಚಾಕ್ಷರಿ ಮಂತ್ರಸಿದ್ಧಿಯನ್ನು ಪಡೆದುಕೊಂಡು ಭಕರ ಲೌಕಿಕ ಸಂಕಷ್ಟ ಪರಿಹರಿಸುತ್ತಿದ್ದಾರೆ.

ಪಟ್ಟಾಧಿಕಾರ ರಜತ ಮಹೋತ್ಸವ:

1974ರಲ್ಲಿ ವೇ.ಮೂ.ಶರಣಯ್ಯ ಮತ್ತು ಶರಣೆ ದಾನಮ್ಮ ಇವರ ಸುಪುತ್ರರಾಗಿ ಜನಿಸಿದ ಶ್ರೀಗಳು ಇಂಗಳೇಶ್ವರ, ಹೊನವಾಡ ಮತ್ತು ಮನಗೂಳಿಯಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂಗಳೇಶ್ವರ ಹಿರೇಮಠ

ವಿದ್ಯಾಭ್ಯಾಸವನ್ನು ಪೂರೈಸಿ ಶ್ರೀಸಂಗನಬಸವ ಸ್ವಾಮಿಗಳ ಸದಿಚ್ಛೆಯಂತೆ 1994ರಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ಸಾನಿಧ್ಯದಲ್ಲಿ ಇಂಗಳೇಶ್ವರ ಮಠಕ್ಕೆ ಪಟ್ಟಾಭಿಷೇಕ ಗೊಂಡಿದ್ದಾರೆ. ಇಲ್ಲಿಗೆ 25 ಸಂವತ್ಸರಗಳು ಪೂರೈಸಿದ್ದು, ಸದ್ಯ ಪಟ್ಟಾಧಿಕಾರದ ರಜತಮಹೋತ್ಸವವನ್ನು ಸದ್ಭಕ್ತರು ವಿಜೃಂಭಣೆಯಿಂದ ಹಮ್ಮಿಕೊಂಡಿದ್ದಾರೆ.

ಈಗಾಗಲೇ ಆರಂಭಗೊಂಡಿರುವ ವಿವಿಧ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜೂ.8ರವರೆಗೆ ನಡೆಯಲಿವೆ. ಜೂ.6ರಂದು (ಇಂದು) ತಪೋಭೂಷಣ ಶ್ರೀಶಿವಬಸವ ಶಿವಾಚಾರ್ಯ ಸ್ವಾಮಿಗಳ ನೂತನ ಅಮೃತಶಿಲಾ ಮೂರ್ತಿಯ ಪ್ರತಿಷ್ಠಾಪನೆ ನಡೆಯಲಿದೆ. ಜೂ.7ರಂದು ಸಾಮೂಹಿಕ ಶಿವದೀಕ್ಷಾ, ಅಯ್ಯಾಚಾರ ನಡೆಯಲಿದೆ.

ಜೂ. 8 ರಂದು ಶ್ರೀಬೃಂಗೀಶ್ವರಲಿಂಗ ಶಿವಾಚಾರ್ಯ ಸ್ವಾಮಿಗಳ ಗುರುಪಟ್ಟಾಧಿಕಾರ ರಜತ ಮಹೋತ್ಸವವು ಶ್ರೀರಂಭಾಪುರಿ ಜಗದ್ಗುರುಗಳ ದಿವ್ಯ ಸಾನಿಧ್ಯದಲ್ಲಿ ಜರುಗಲಿದೆ. ಇದೇ ವೇಳೆ ಸದ್ಭಕ್ತರು ತಮ್ಮ ಭಕ್ತಿ ಕಾಣಿಕೆಯಾಗಿ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ನೂತನ ಶಿಲಾಮಠದ ಲೋಕಾರ್ಪಣೆ ನಡೆಯಲಿದೆ. ಬೆಂಗಳೂರು ವಿಭೂತಿಪುರ ಮಠದ ಪಟ್ಟಾಧ್ಯಕ್ಷರಾದ ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನಾಡಿನ ವಿವಿಧ ಮಠಾಧೀಶರು, ರಾಜಕೀಯ ಗಣ್ಯರು ಪಾಲ್ಗೊಳ್ಳಲಿದ್ದಾರೆ.

* * *

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂದೊಂದು ಕಾಲಕ್ಕೆ ಪತ್ರಿಕೋದ್ಯಮವೆಂದರೆ ಕೇವಲ ಸುದ್ದಿಯನ್ನು ನೀಡುವುದಷ್ಟೇ ಎಂಬ ಮನಸ್ಥಿತಿ ಇತ್ತು. ಆದರೆ ಈಗ ಪತ್ರಿಕೋದ್ಯಮದ ಮೂಲಕ ರಾಷ್ಟ್ರಭಕ್ತಿ, ದೇಶಪ್ರೇಮ, ನಾಡು-ನುಡಿ, ಧರ್ಮ-ಸಂಸ್ಕೃತಿಯ ಪ್ರಚಾರವನ್ನೂ ಮಾಡಲು ಸಾಧ್ಯ ಎಂಬ ಬದಲಾವಣೆ ಉಂಟಾಗಿದೆ. ಓದುಗರನ್ನು ಸಾತ್ವಿಕ ಮಾರ್ಗದತ್ತ ಕೊಂಡೊಯ್ಯಲು ಸಹಕಾರಿಯಾಗಿ ಮೊಟ್ಟ ಮೊದಲ ಬಾರಿಗೆ ವಿಆರ್‌ಎಲ್ ಮೀಡಿಯಾವು ಧಾರ್ಮಿಕ ವಿಷಯಗಳಿಗಾಗಿಯೇ ಪುರವಣಿಯನ್ನು ಆರಂಭಿಸಿದಾಗ; ಪ್ರೋತ್ಸಾಹಿಸಿದವರಿಗಿಂತ ಗೇಲಿ ಮಾಡಿದವರೇ ಹೆಚ್ಚು. ಆದರೂ ನಮ್ಮ ಉದ್ದೇಶ ಸ್ಪಷ್ಟವಾಗಿದ್ದಿದ್ದರಿಂದ ಯಾವುದೇ ಹಿಂಜರಿಕೆಯಿಲ್ಲದೇ ಹೆಜ್ಜೆ ಮುಂದಿಟ್ಟೆವು. ಅದರ ಪರಿಣಾಮವಾಗಿ ಇಂದು ಕನ್ನಡ ಪತ್ರಿಕೋದ್ಯಮದಲ್ಲಿ ಧಾರ್ಮಿಕ ವಿಷಯಗಳ ಪ್ರಕಟಣೆಯಲ್ಲಿ ದೊಡ್ಡ ಸ್ಪರ್ಧೆ ಏರ್ಪಟ್ಟಿದೆ.

ವಿಜಯವಾಣಿ ಪತ್ರಿಕೆ ಅತಿ ಕಡಿಮೆ ಅವಧಿಯಲ್ಲಿ ರಾಜ್ಯದ ನಂ.1 ದಿನಪತ್ರಿಕೆಯಾಗಿ ಜನರ ಆಶೀರ್ವಾದ ಪಡೆಯುವಲ್ಲಿ ನಮ್ಮ ನಿಲುವು-ಒಲವುಗಳು ಪ್ರಮುಖ ಪಾತ್ರ ವಹಿಸಿವೆ. ಪ್ರತಿ ಗುರುವಾರ ಪ್ರಕಟವಾಗುವ ಸಂಸ್ಕೃತಿ ಪುರವಣಿಯು ಜನರಲ್ಲಿ ಧರ್ಮ ಶ್ರದ್ಧೆಯನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿದ್ದು, ಅದರಲ್ಲಿ ಪ್ರಕಟವಾಗುವ ಸೋಜಗ ಅಂಕಣವು ಹೆಚ್ಚಿನ ಓದುಗರನ್ನು ಸೆಳೆದಿದೆ. ಈ ಅಂಕಣವನ್ನು ಬರೆಯುತ್ತಿರುವ ನಮ್ಮ ಸಂಸ್ಥೆಯ ಉತ್ಸಾಹಿ ಪತ್ರಕರ್ತ ಪ್ರಶಾಂತ ರಿಪ್ಪನ್‌ಪೇಟೆ ಬಹುಮುಖ ಪ್ರತಿಭೆಯ ವ್ಯಕ್ತಿ. ದಿಗ್ವಿಜಯ ನ್ಯೂಸ್‌ನಲ್ಲಿ ಕಾರ್ಯಕ್ರಮ ನಿರ್ಮಾಪಕರಾಗಿ ಟಿವಿಯಲ್ಲೂ ವಿಶಿಷ್ಟ ಕಾರ್ಯಕ್ರಮಗಳ ಮೂಲಕ ನಾಡಿನ ವೀಕ್ಷಕರ ಗಮನ ಸೆಳೆದಿದ್ದಾರೆ. ಜೊತೆಗೆ ಪತ್ರಿಕೆಯಲ್ಲೂ ಸಾಂದರ್ಭಿಕ ಲೇಖನಗಳ ಮೂಲಕ ನಾಡಿನ ಮೂಲೆ ಮೂಲೆಗಳಲ್ಲಿರುವ ಕ್ಷೇತ್ರಗಳನ್ನು ಜನತೆಗೆ ಪರಿಚಯಿಸುತ್ತಿದ್ದಾರೆ.

ಪ್ರಶಾಂತ ರಿಪ್ಪನ್‌ಪೇಟೆಯವರು ತಾವು ಬರೆದ ಲೇಖನಗಳನ್ನು ಸಂಪಾದಿಸಿ ಈಗಾಗಲೇ ಸೋಜಗ ಎಂಬ ಹೆಸರಿನ ಗ್ರಂಥವನ್ನು ಹೊರತಂದಿದ್ದು, ಇದೀಗ "ಸೋಜಗ ಭಾಗ-2" ನ್ನು ಹೊರತರುತ್ತಿರುವುದು ಸಂತಸದ ವಿಷಯ. ಅವರ ಅಕ್ಷರ ಸೇವೆ ಹೀಗೆಯೇ ಮುಂದುವರೆಯಲಿ ಎಂದು ಹಾರೈಸುತ್ತೇನೆ. ವಿಜಯವಾಣಿ ಮತ್ತು ದಿಗ್ವಿಜಯ ಟಿವಿಯ ಉತ್ತಮ ಕಾರ್ಯಗಳಿಗೆ ಆಶೀರ್ವಾದವನ್ನಿತ್ತು ಬೆಂಬಲಿಸುತ್ತಿರುವ ಶ್ರೀಶೈಲ ಜಗದ್ಗುರುಗಳು ತಮ್ಮ ಪೀಠದಿಂದ ಈ ಕೃತಿ ಪ್ರಕಟಿಸುತ್ತಿರುವುದು ನಮ್ಮ ಸೌಭಾಗ್ಯವೆಂದು ಭಾವಿಸುತ್ತೇನೆ. ಜಗದ್ಗುರುಗಳಿಗೆ ಅನಂತ ಪ್ರಣಾಮಗಳು.

ಡಾ. ವಿಜಯ ಸಂಕೇಶ್ವರ

ಚೇರಮನ್, ವಿಆರ್‌ಎಲ್ ಸಮೂಹ ಸಂಸ್ಥೆ, ಹುಬ್ಬಳ್ಳಿ.

CC0. In Public Domain. Jangamwadi Math Collection, Varanasi